ಹಂಗಾಮ

ಜೂನ್ ೨೦೧೧
ರೂ. ೨೦

ಲಾಡೆನ್ ಸತ್ತ! ಭಯೋತ್ಪಾದನೆ ಸಾಯಲಿಲ್ಲ!!

ಸಂವಾದ

ಮಾಸ ಪತ್ರಿಕೆ

ಸಂಪುಟ ೯ ಸಂಚಿಕೆ ೮

ಜೂನ್ ೨೦೧೧

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಡಾ॥ ಕೆ. ಪುಟ್ಟಸ್ವಾಮಿ

ಡಾ॥ ಡಿ. ಡೊಮಿನಿಕ್

ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು–೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091

✆ Editorial: 9448048306
✆ Circulation: 9945264687
080-23480278,
e-mail : **samvaada@hotmail.com**
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೦೩
❑ ಸಂಪಾದಕರೊಂದಿಗೆ ಸಂವಾದ:
○ ಕು.ಸ ಮಧುಸೂದನ್ ೦೪
○ ಡಾ. ಕಿರಣ್ ಎಂ ಗಾಜನೂರು ೦೫
○ ರಘೋತ್ತಮ ಹೊ.ಬ ೦೬
○ ಸರಸ್ವತಿ ಕೆ.ಬಿ ೦೮
❑ ಮಣ್ಣು ಸೇರಿದ ಹೆಣ್ಣು ಭ್ರೂಣಗಳಿಗೆ ಶ್ರದ್ಧಾಂಜಲಿ
○ ಶಾರದಾ ಗೋಪಾಲ ೦೯
❑ ಉಪ್ಪಿನ ರುಚಿಯನ್ನು ತೂಗಲು ಸಾಧ್ಯವೇ?
○ ಎಸ್. ನಟರಾಜ ಬೂದಾಳು ೧೦
❑ ಹೊಸ ಪುಸ್ತಕ ೧೨





❑ ಅಣು ವಿದ್ಯುತ್ ಸ್ಥಾವರಗಳು ಎಷ್ಟು ಸುರಕ್ಷಿತ?
○ ಕಾರ್ಲ್ ಗ್ರಾಸ್‌ಮನ್ (ಅನು: ಸುರೇಶ್ ಭಟ್) ೧೪
❑ ಕನ್ನಡ ವಿಚಾರ ಸಾಹಿತ್ಯ : ಒಂದು ಹಿನ್ನೋಟ
○ ರಾಮಯ್ಯ ೧೬
❑ ಲಾಡೆನ್ ಸತ್ತ! ಭಯೋತ್ಪಾದನೆ ಸಾಯಲಿಲ್ಲ!!
○ ನಾ ದಿವಾಕರ ೨೦
❑ ಸ್ತ್ರೀ ಸಂವೇದನೆ ಎಂಬ ಅವ್ಯಕ್ತ ಚರಿತ್ರೆ
○ ಡಾ. ಎನ್. ಜಗದೀಶ್ ಕೊಪ್ಪ ೨೪
❑ ಕಥೆ: ಚಂಚಲೆ ಚಕೋರಿ
○ ಫ್ರೆಂಚ್ ಮೂಲ: ಆಲ್ಬರ್ಟ್ ಕಮೂ ಕನ್ನಡಕ್ಕೆ: ಕೇಶವ ಮಳಗಿ [illegible]
❑ ಕಾಲಮಾನ–೧೫
○ ಡಾ. ಮುಜಾಫ್ಫರ್ ಅಸ್ಸಾದಿ ೩೬

❑ ಹಾಗೆ ನೋಡಿದರೆ –೬
○ ಡಾ. ಬಂಜಗೆರೆ ಜಯಪ್ರಕಾಶ ೪೦
❑ ಹೊಸ ಪಕ್ಷಿ ರಾಗ...೧೦
○ ಜ್ಯೋತಿ ಗುರುಪ್ರಸಾದ್ ೪೪
❑ ದಲಿತ್ ಡೈರಿ
○ ಚಂದ್ರಭಾನ್ ಪ್ರಸಾದ್/ ಎಸ್. ಮರಿಸ್ವಾಮಿ ೪೬
❑ ಬುದ್ಧಾಯಣ
○ ಸಿ. ಎಚ್ ರಾಜಶೇಖರ್ ೫೦

ಕವನಗಳು : ❑ ಚರಿತ್ರೆ–ಪುರಾಣ ೧೩ ❑ ಬುದ್ಧಂ ಶರಣಂ ಗಚ್ಛಾಮಿ ೧೯

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಪಕ್ಷಗಳ ನಡೆ ಪಾರದರ್ಶಕವಾಗಿರಲಿ

ಪ್ರಿಯ ಸಂಪಾದಕರೇ,

ಇತ್ತೀಚಿನ ದಿನಗಳಲ್ಲಿ ಎಲ್ಲ ರಾಜಕೀಯ ಪಕ್ಷಗಳ ನಾಯಕರುಗಳು ವೇದಿಕೆಗಳ ಮೇಲೆ ಭ್ರಷ್ಟಾಚಾರದ ವಿರುದ್ಧ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸುತ್ತಲೇ ಇದ್ದಾರೆ. ಭ್ರಷ್ಟಾಚಾರವನ್ನು ತೊಲಗಿಸಬೇಕೆನ್ನುವ ರಾಷ್ಟ್ರೀಯ ಮತ್ತು ಪ್ರಾದೇಶಿಕ ಪಕ್ಷಗಳ ಮಾತಿನ ಹಿಂದಿನ ಬದ್ಧತೆಯನ್ನು ಅನುಮಾನದಿಂದ ನೋಡುವಂತಾಗಿದೆ.

ದೇಶದಲ್ಲಿ ಪರಸ್ಪರ ಭ್ರಷ್ಟಾಚಾರದ ಆರೋಪಗಳನ್ನು ಮಾಡಿಕೊಂಡು ಧಾರಾವಾಹಿಯ ರೀತಿಯಲ್ಲಿ ಜನರಿಗೆ ಮನರಂಜನೆ ನೀಡುವ ಈ ನಾಯಕರುಗಳು ಮೊದಲು ತಮ್ಮ ಮನೆಗಳನ್ನು ಅಂದರೆ, ತಾವು ಪ್ರತಿನಿಧಿಸುವ ಅಥವಾ ತಾವು ನೇತೃತ್ವ ವಹಿಸಿರುವ ರಾಜಕೀಯ ಪಕ್ಷಗಳನ್ನು ಶುದ್ಧಗೊಳಿಸಿ ಕೊಳ್ಳಲಿ. ಚುನಾವಣೆಗಳಲ್ಲಿ ಚುನಾವಣಾ ಆಯೋಗದನಿಗದಿತ ಖರ್ಚು ವೆಚ್ಚಕ್ಕಿಂತ ಹೆಚ್ಚಿನ ಹಣವನ್ನು ಎಲ್ಲ ರಾಜಕೀಯ ಪಕ್ಷದವರು ತಮ್ಮ ಅಭ್ಯರ್ಥಿಗಳ ಮೂಲಕ ತಮ್ಮ ಪ್ರಚಾರದ ವೈಖರಿಯ ಮೂಲಕ ಮಾಡುತ್ತಲೇ ಇದ್ದಾರೆ.

ಚುನಾವಣೆಯ ಸಂದರ್ಭದಲ್ಲಿ ರಾಜಕೀಯ ಪಕ್ಷಗಳಿಗೆ ವಂತಿಕೆಯನ್ನು ನೀಡುವ ಜನರುಗಳು ಬಹಳಷ್ಟು ಮಂದಿ ವೈಯಕ್ತಿಕ ಹಿತಾಸಕ್ತಿಯನ್ನು ಹೊಂದಿದವರೇ ಆಗಿರುತ್ತಾರೆ. ರಾಜಕೀಯ ಪಕ್ಷಗಳು ತಮ್ಮ ದೈನಂದಿನ ಚಟುವಟಿಕೆಗಳಿಂದ ಹಿಡಿದು ತಾವು ನಡೆಸುವ ಪ್ರತಿಭಟನಾ ಸಭೆ, ಬೃಹತ್ ರ್‍ಯಾಲಿ, ಪ್ರಚಾರ ಸಭೆಗಳಿಗೆ ಅಪಾರ ಪ್ರಮಾಣದಲ್ಲಿ ಹಣವನ್ನು ಪೋಲು ಮಾಡುತ್ತಾರೆ. ಜಾಹೀರಾತಿಗಂತೂ ಇವರು ಮಾಡುವ ಖರ್ಚಿನ ಲೆಕ್ಕ ಎಲ್ಲರನ್ನೂ ಬೆಚ್ಚಿಬೀಳಿಸುತ್ತದೆ. ಇದರಲ್ಲಿ ಯಾವ ರಾಜಕೀಯ ಪಕ್ಷವೂ ಹೊರತಲ್ಲ. ಕೊಡುವವರು ಗತಿ ಇಲ್ಲದಿ ದ್ದರೆ ಅಂತಹ ರಾಜಕೀಯ ಪಕ್ಷದವರು ಮಾತ್ರ ಖರ್ಚು ಮಾಡಲು ಹಣವಿಲ್ಲದೆ, ಜನರ ಗಮನವನ್ನು ಸೆಳೆಯದೇ ಮೂಲೆ ಸೇರಿರುತ್ತಾರೆ.



ಪತ್ರಗಳು

ಈ ಹಿನ್ನಲೆಯಲ್ಲಿ ಜನ ಲೋಕಪಾಲ್ ಮಸೂದೆ ಸಿದ್ಧಪಡಿಸುವ ಸಂದರ್ಭದಲ್ಲಿ ಎಲ್ಲ ರಾಜಕೀಯ ಪಕ್ಷಗಳನ್ನು ಸಹ ಅವರ ಹಣಕಾಸಿನ ವ್ಯವಹಾರಗಳು, ಚುನಾವಣಾ ವೆಚ್ಚಗಳು, ಪಕ್ಷಗಳಿಗೆ ವಂತಿಕೆ ನೀಡುವವರ ವಿವರ, ಎಲ್ಲವನ್ನೂ ಸಾರ್ವಜನಿಕರಿಗೆ ಬಹಿರಂಗಗೊಳಿಸುವ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಲು ಬೇಕಾದಂತಹ ಕಾನೂನನ್ನು ಇದರಲ್ಲಿ ಅಳವಡಿಸಬೇಕು. ಇದೇ ರೀತಿಯಲ್ಲಿ ಚುನಾವಣೆಯ ಸುಧಾರಣೆಯ ಬಗ್ಗೆ ಮಾತನಾಡುತ್ತ, ಚುನಾವಣೆಯ ಪದ್ಧತಿಯೇ ಭ್ರಷ್ಟಾಚಾರಕ್ಕೆ ಮೂಲಕಾರಣ ಎಂದು ಚಪ್ಪಾಳೆಗಾಗಿ ಮಾತುಗಳನ್ನಾಡುವ ರಾಜಕೀಯ ಪಕ್ಷಗಳು ಚುನಾವಣೆಯ ಸಂದರ್ಭದಲ್ಲಿ ಮತದಾರರನ್ನು ಸೋಮಾರಿಗಳನ್ನಾಗಿಸುವ ಸಲುವಾಗಿ ದೂರದೃಷ್ಟಿತ್ವವಿಲ್ಲದ ಭ್ರಷ್ಟಾಚಾರಕ್ಕೆ ಅನುವು ಮಾಡಿಕೊಡುವ ವ್ಯವಸ್ಥೆಯನ್ನು ಹಾಳುಗೆಡವುವ ಪ್ರಚಾರದ ಚುನಾವಣಾ ಪ್ರಣಾಳಿಕೆಗಳನ್ನು ಘೋಷಿಸದಂತೆ ಸುಧಾರಣೆಯಾಗಬೇಕು.

ಟಿವಿ ಕೊಡುತ್ತೇವೆ, ಸೋಫಾ ಕೊಡುತ್ತೇವೆ, ಮಂಚ ಕೊಡುತ್ತೇವೆ, ರೇಡಿಯೋ ಕೊಡುತ್ತೇವೆ, ಫ್ರಿಜ್, ಗ್ರೈಂಡರ್ ಮುಂತಾದ ವಸ್ತುಗಳನ್ನು ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸುವುದನ್ನು ತಡೆ ಹಿಡಿಯಬೇಕು. ಚುನಾವಣಾ ಪ್ರಣಾಳಿಕೆಗಳು ನೀರಾವರಿ, ಶಿಕ್ಷಣ, ಆರೋಗ್ಯ, ಮೂಲಭೂತ ಸೌಕರ್ಯ ಸೌಲಭ್ಯಗಳು ದೂರದೃಷ್ಟಿತ್ವದ ಅಭಿವೃದ್ಧಿ ಪೂರಕ ಯೋಜನೆಗಳಿಗೆ ಮಾತ್ರ ಸೀಮಿತವಾಗಿರಬೇಕು. ಅದೇ ರೀತಿಯಲ್ಲಿ ದೇಶದ ಜನಸಂಖ್ಯೆ 120 ಕೋಟಿ ದಾಟಿರುವುದು ದೇಶದ ಪ್ರಗತಿ ದೃಷ್ಟಿಯಿಂದ ಆತಂಕದ ಸಂಗತಿಯಾಗಿದೆ.

ಕೆಲವೇ ಕೆಲವು ಕೋಟಿಗಳಿದ್ದಾಗಲೂ ಇದ್ದಂತಹ ಪ್ರಕೃತಿ ಸಂಪತ್ತು, ನೀರಾವರಿ ಸೌಲಭ್ಯಗಳು, ಕೃಷಿ ಭೂಮಿ 100 ಕೋಟಿಯನ್ನು ಮೀರಿದಾಗ ಜನರಿಗೆ ಅವಶ್ಯಕತೆಗಳನ್ನು ಪೂರೈಸುವುದು ಯಾರಿಂದಲೂ ಸಾಧ್ಯವಿಲ್ಲ. ಈ ಹಿನ್ನಲೆಯಲ್ಲಿಯೂ ಎಲ್ಲ ರಾಷ್ಟ್ರೀಯ ಮತ್ತು ಪ್ರಾದೇಶಿಕ ಪಕ್ಷಗಳು ಜನಸಂಖ್ಯೆಯ ಅಭಿವೃದ್ಧಿಯ ನಿಯಂತ್ರಣಕ್ಕೆ ಒತ್ತು ನೀಡುವಂತಹ ಸಮಾನವಾದಂತಹ ಘೋಷಣೆಯನ್ನು ಮಾಡಬೇಕಾಗುತ್ತದೆ. ರಾಜಕೀಯ ಪಕ್ಷಗಳು ತಾವು ಶುದ್ಧಿಯಾಗದೇ, ಇದರ ನಾಯಕರುಗಳ ಆಲೋಚನಾ ಕ್ರಮಗಳು ಸ್ಪಷ್ಟವಾಗದೇ ಭ್ರಷ್ಟಾಚಾರವಾಗಲೀ, ದೇಶದ ಅವ್ಯವಸ್ಥೆಯಾಗಲೀ ಹೊ.ಗಲಾಡಿಸಲು ಸಾಧ್ಯವಿಲ್ಲ.

ಕೆ.ಎಸ್. ನಾಗರಾಜ್,
ಬೆಂಗಳೂರು

ಸಂಘರ್ಷಗಳಿಗೆ ಪ್ರಗತಿಪರರ ಬೆನ್ನು!

ಪ್ರಿಯ ಸಂಪಾದಕರೇ,

ಪ್ರಚಲಿತ ವಿದ್ಯಮಾನಗಳನ್ನು ಎಚ್ಚರದಿಂದ ಗಮನಿಸಿ ಪ್ರತಿಕ್ರಿಯಿಸುವ 'ಸಂವಾದ'ಕ್ಕೆ ಕನ್ನಡ ಪತ್ರಿಕಾ ಲೋಕದಲ್ಲಿ ವಿಶಿಷ್ಟ ಸ್ಥಾನವಿದೆ. ಇದರಲ್ಲಿ ಒಡಮೂಡುವ ಲೇಖನಗಳು ಚಿಂತನೆಗೆ ಹಚ್ಚುತ್ತವೆ.

ಮೇ 2011ರ ಸಂಚಿಕೆಯಲ್ಲಿ ಪ್ರಕಟವಾದ ಎನ್.ಕೆ. ಮೋಹನ್‌ರಾಂರವರ '...ಒಂದು ಚಳವಳಿಯ ಶ್ರದ್ಧಾಂಜಲಿ' ಲೇಖನ ಐದು ದಶಕಗಳ ಕರ್ನಾಟಕದ ಹೋರಾಟಗಳ ಚಿತ್ರಣವನ್ನು ಕಣ್ಣಿಗೆ ಕಟ್ಟಿದಂತೆ ವ್ಯಾಖ್ಯಾನಿಸಿದ್ದು ಆತ್ಮಾವಲೋಕನಕ್ಕೆ ಎಡೆಮಾಡಿಕೊಟ್ಟಿದೆ. ಎಲ್ಲಾ ಸ್ಥರದ ಸೋಗಲಾಡಿ ಹೋರಾಟಗಾರರಿಗೆ ಚಾಟಿ ಏಟು ನೀಡಿರುವ ಲೇಖಕರು ಸಮಾಜವಾದಿಗಳನ್ನೇ ಕೇಂದ್ರವಾಗಿರಿಸಿಕೊಂಡು ಸ್ವಲ್ಪ ಹೆಚ್ಚಾಗಿಯೇ ಲೇವಡಿ ಮಾಡಿದ್ದಾರೆ ಎನಿಸಿದರೂ (ಫಲಾನುಭವಿಗಳ ತಪ್ಪೇ ಹೊರತು ಸಮಾಜವಾದದ ವೈಫಲ್ಯವಲ್ಲ) ಜಾಡಿಸಿದ್ದರಲ್ಲಿ ಸತ್ಯಾಂಶವಿದೆ. ಇವರ ಆರೋಪದಲ್ಲಿ ಉತ್ಪ್ರೇಕ್ಷೆಯಾಗಲಿ, ಸಿನಿಕತನವಾಗಲಿ ಎಲ್ಲೂ ಇಣುಕಿಲ್ಲ!

ಶಿವಮೊಗ್ಗ ಪರಿಸರ ಕೋಮುವಾದಿಗಳು–ಸಮಾಜವಾದಿಗಳು; ಈ ಎರಡೂ ಫಸಲನ್ನು ಸಂವೃದ್ಧವಾಗಿ ನೀಡಿದ ಫಲವತ್ತಾದ ಭೂಮಿ. ಇಲ್ಲಿಂದ ಈ ಲೇಖನಕ್ಕೆ ಉಗ್ರ ಪ್ರತಿಕ್ರಿಯೆ ಬಂದರೂ ಬರಬಹುದು.

ಯಾವುದೇ ಚಳವಳಿ ದೀರ್ಘಕಾಲ ತನ್ನ ಪ್ರಖರತೆ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಕಾರಣ ಹಲವು. ಮೋಹನ್‌ರಾಂ ಇದನ್ನು ಬಲ್ಲರು. ಕೆಲವರು ಪ್ರಶಸ್ತಿ ಹಿಂದೆ ಓಡ್ತಾರೆ. ಕೆಲವರನ್ನು ಪ್ರಶಸ್ತಿ ಹುಡುಕಿ ಬರುತ್ತೆ. (ಲೇಖನದ ಮೊದಲ ಸಾಲಿನಲ್ಲಿ ಉಲ್ಲೇಖಗೊಂಡವರು) ಅದಕ್ಕೆ ಅರ್ಹರಿರುವಾಗ ತೆಗೆದುಕೊಳ್ಳಲಿ ಬಿಡಿ ಸಾರ್. ಒಟ್ಟಿನಲ್ಲಿ ಇದೊಂದು 70ರ ದಶಕದ ಚಳವಳಿಗಳ ಸಫಲತೆ–ವಿಫಲತೆಗಳ ಹಿನ್ನೋಟದ ಅತ್ಯುತ್ತಮ ಬರಹ. ಇಲ್ಲಿನ ವಿವರಗಳನ್ನು ವಿಸ್ತರಿಸಿ, ಇಲ್ಲಿ ದಾಖಲಾಗದ ಮತ್ತಷ್ಟು ವಿವರಗಳನ್ನು ಸೇರಿಸಿ ಸಣ್ಣದೊಂದು ಪುಸ್ತಕ ಮಾಡಿಕೊಡಿ ಸಾರ್. ನಮ್ಮಂತಹವರಿಗೆ ತುಂಬಾ ಉಪಯುಕ್ತವಾಗುತ್ತೆ.

ಕಳೆದ ಕೆಲ ತಿಂಗಳ ಹಿಂದೆ ಸಮಾಜವಾದ–ಎಡಪಂಥೀಯ ನಿಲುವುಗಳ ಕುರಿತು ನಾಗಭೂಷಣರಿಗೂ–ತರಿಕೆರೆಯವರಿಗೂ ಸಣ್ಣ ಸಾಂಸ್ಕೃತಿಕ ಸಂಘರ್ಷ ಇದೆ ಪತ್ರಿಕೆಯಲ್ಲಿ ನಡೆದಿತ್ತು. ಈ ಕುರಿತು ಇನ್ನಿತರರ ಪ್ರತಿಕ್ರಿಯೆಗಾಗಿ ನಾವು ರೋಮಾಂಚಿತರಾಗಿ ಕಾಯುತ್ತಿದ್ದೆವು. ನಮ್ಮ ನಿರೀಕ್ಷೆ ಹುಸಿಯಾಯಿತು. ಸಂಘರ್ಷದ ನಂತರದ ಸಂಚಿಕೆಗಳಲ್ಲಿ ಇವರಿಬ್ಬರ ಲೇಖನಗಳೂ ಕಾಣಲಿಲ್ಲ. ಕಾರಣ? ಬಹುತೇಕ ಪ್ರಗತಿಪರರು ಸಂಘರ್ಷಗಳಿಂದ ವಿಮುಖರಾದಂತೆ ಕಾಣುತ್ತಿದೆ.

ಕೆ. ಸತ್ಯನಾರಾಯಣ,
ಕೃಷ್ಣಾಪುರ

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ

ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ
ರೂ.೨೦೦/- ರೂ.೫೦೦/- ರೂ.೮೦೦/-

ಸಂಘ–ಸಂಸ್ಥೆಗಳು/ಉದ್ಯಮಿಗಳಿಗೆ
ರೂ.೨೫೦/- ರೂ.೬೦೦/- ರೂ.೧೦೦೦

ವಿಶೇಷ ಹಿತೈಷಿ ಚಂದದಾರರಿಗೆ
ರೂ.೫೦೦/- ರೂ.೧೫೦೦/- ರೂ.೨೫೦೦/-

ಆಜೀವ ಚಂದಾ ರೂ.೫,೦೦೦,
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ.

ಉಳಿದಿರುವ ಮಧ್ಯಮ ಮಾರ್ಗ...

ಸಂಪಾದಕರೊಡನೆ ಸಂವಾದ

ಕು. ಸ. ಮಧುಸೂದನ್

ಪ್ರಿಯ ಸಂಪಾದಕರೇ,

ಅಧಿಕಾರ ರಾಜಕಾರಣದ ಬಾಗಿಲುಗಳು ಬಹುತೇಕ ಮುಚ್ಚಿದಾಗ ಮತ್ತು ಕಾಂಗ್ರೆಸ್ ಬಿ.ಜೆ.ಪಿ ಪಕ್ಷಗಳ ಜೊತೆ ಗುರುತಿಸಿಕೊಳ್ಳುವಲ್ಲಿ ಯಾವುದೇ ಲಾಭವಿಲ್ಲವೆಂದು ಗೊತ್ತಾದಾಗ ನಮ್ಮ ಕೆಲವು ರಾಷ್ಟ್ರೀಯ ನಾಯಕರುಗಳಿಗೆ ನೆನಪಾಗುವುದು: ಅಷ್ಟೇನೂ ಹಳೆಯದಲ್ಲದ ಆದರೆ ಪ್ರಯೋಗಿಸಿ ವಿಫಲವಾದ 'ತೃತೀಯರಂಗ' ಎಂಬ ಆಯುಧ!

ಇಂತಹ ನಾಯಕರಲ್ಲಿ ಮಾಜಿ ಪ್ರಧಾನಿಗಳಾದ ಶ್ರೀಮಾನ್ ದೇವೇಗೌಡರು, ಉತ್ತರ ಭಾರತದ ಹಿಂದುಳಿದ ವರ್ಗಗಳ ಹರಿಕಾರರೆಂದು ಹಿಂದೊಮ್ಮೆ ಹೆಸರು ಮಾಡಿದ್ದ ಮುಲಾಯಂ ಮತ್ತು ಲಲ್ಲೂಪ್ರಸಾದರೆಂಬ ಯಾದವದ್ವಯರು, ಎಡಪಕ್ಷಗಳ ನಾಯಕರು ಪ್ರಮುಖರಾಗಿದ್ದಾರೆ. ಅಧಿಕಾರವಿದ್ದಾಗ ನೆನಪಾಗದ 'ತೃತೀಯ ರಂಗ' ಅಧಿಕಾರಹೀನರಾದೊಡನೆ ನೆನಪಾಗುವುದು ಈ ನಾಡಿನ ರಾಜಕಾರಣದ ದುರಂತವಾಗಿದೆ.

ಯಾರೆಷ್ಟೇ ಅಲ್ಲಗಳೆದರೂ ಇಂಡಿಯಾದ ಸಮಕಾಲೀನ ರಾಜಕಾರಣದಲ್ಲಿವತ್ತು ಕಾಂಗ್ರೆಸ್ ಮತ್ತು ಬಿ.ಜೆ.ಪಿಗಳು ಎರಡು ಬಲಿಷ್ಠ ಶಕ್ತಿಗಳಾಗಿವೆ, ಮಾತ್ರವಲ್ಲ ರಾಷ್ಟ್ರವ್ಯಾಪಿಯಾಗಿ ಬೆಳೆದು ನಿಂತಿವೆ. ಸೂಕ್ಷ್ಮವಾಗಿ ಅವಲೋಕಿಸಿ ನೋಡಿದರೆ ಈ ಎರಡೂ ಪಕ್ಷಗಳ ನಡುವೆ ಅಂತಹ ವ್ಯತ್ಯಾಸವೇನಿಲ್ಲ. ಇವತ್ತಿನ ದಿನಗಳಲ್ಲಿ ಹೆಚ್ಚು ಚರ್ಚಿತವಾಗುತ್ತಿರುವ ಎರಡು ಪ್ರಮುಖ ತಾತ್ವಿಕ ವಿಚಾರಗಳೆಂದರೆ: ಮುಕ್ತ ಆರ್ಥಿಕ ನೀತಿ ಮತ್ತು ಕೋಮುವಾದ.

ಮೊದಲಿಗೆ ಆರ್ಥಿಕ ನೀತಿಯ ಬಗ್ಗೆ ನೋಡೋಣ ಈ ವಿಚಾರದಲ್ಲಿ ಎರಡೂ ಪಕ್ಷಗಳ ವಿಚಾರಧಾರೆಯಲ್ಲಿ ಯಾವುದೇ ವ್ಯಾತ್ಯಾಸವಿಲ್ಲ. ಯಾಕೆಂದರೆ ತೊಂಭತ್ತರ ದಶಕದಲ್ಲಿ ಅಂದಿನ ಅರ್ಥ ಸಚಿವರಾಗಿದ್ದ ಮತ್ತು ಇವತ್ತು ಪ್ರಧಾನ ಮಂತ್ರಿಗಳಾಗಿರುವ ಶ್ರೀ ಮನಮೋಹನ ಸಿಂಗ್ ರವರು ಪ್ರಾರಂಭಿಸಿದ ಉದಾರ ಆರ್ಥಿಕ ನೀತಿಯನ್ನು ತದನಂತರ ಅಧೀಕಾರಕ್ಕೆ ಬಂದ ಬಿ.ಜೆ.ಪಿ ನೇತೃತ್ವದ ಎನ್.ಡಿ.ಎ ಸರ್ಕಾರ ಯಾವ ಮುಜುಗರವೂ ಇಲ್ಲದೇ ಮುಂದುವರೆಸಿತು.

ಅದೇ ರೀತಿ ಮತೀಯ ರಾಷ್ಟ್ರೀಯತೆ ಈ ವಿಷಯದಲ್ಲಿ ಬಿಜೆಪಿ ಯಾವುದೇ ಮುಖವಾಡವನ್ನೂ ಹಾಕಿಕೊಳ್ಳದೆ, ಹಿಂದೂತ್ವವನ್ನು ತನ್ನ ರಾಜಕೀಯ ಹಿತಾಸಕ್ತಿಗೆ ಬಳಸಿಕೊಳ್ಳುತ್ತಿದ್ದರೆ. ಕಾಂಗ್ರೆಸ್ ಅವಕಾಶವಾದಿಯಂತೆ ತನಗೆ ಬೇಕಾದಾಗ ಅಲ್ಪಸಂಖ್ಯಾತರನ್ನು ಓಲೈಸುತ್ತ ಅವರನ್ನು ಓಟ್ ಬ್ಯಾಂಕ್ ಆಗಿ ಬಳಸುತ್ತಿದೆ. ಬಿಜೆಪಿ. ಹಿಂದೂ ಧರ್ಮವನ್ನು ತನ್ನ ರಾಜಕೀಯಕ್ಕೆ ಬಳಸಿಕೊಂಡಂತೆ, ಕಾಂಗ್ರೆಸ್ ಆಯಾ ಪ್ರದೇಶಗಳಿಗನುಗುಣವಾಗಿ ಆ ಕ್ಷಣದ ಅಗತ್ಯಕ್ಕನುಗುಣವಾಗಿ ಬಿಡಿಬಿಡಿಯಾಗಿ ಜಾತಿ-ಧರ್ಮಗಳನ್ನು ತನ್ನ ರಾಜಕಾರಣಕ್ಕೆ ಬಳಸಿಕೊಳ್ಳುತ್ತಿದೆ.

ಹೀಗೆ ಇವತ್ತು ಭಾರತದ ರಾಜಕಾರಣದಲ್ಲಿ ನಿರ್ಣಾಯಕವಾಗಿರುವ ಎರಡು ವಿಚಾರಗಳ ಬಗ್ಗೆ ಯಾವುದೇ ತಾತ್ವಿಕ ಭಿನ್ನಾಭಿಪ್ರಾಯಗಳಲ್ಲದಂತೆ ಕಾಣುತ್ತಿರುವ ಕಾಂಗ್ರೆಸ್ ಮತ್ತು ಬಿ.ಜೆ.ಪಿಗಳಿಗೆ ಪರ್ಯಾಯವಾಗಿ ನಿಲ್ಲಬಲ್ಲ ತೃತೀಯ ಶಕ್ತಿಯೊಂದರ ಅಗತ್ಯ ಕೇವಲ, ಮೊದಲು ನಾನು ಹೇಳಿದ ರಾಜಕಾರಣಿಗಳಿಗೆ ಮಾತ್ರವಲ್ಲ, ಭಾರತದ ಜನರಿಗೂ ಇದೆ.

ಆದರೆ ಈ ಎರಡೂ ಶಕ್ತಿಗಳನ್ನು ಸಮರ್ಥವಾಗಿ ಎದುರಿಸಬಲ್ಲ ಮೂರನೇ ಶಕ್ತಿಯನ್ನು ರೂಪಿಸುವುದು ಹೇಗೆ ಮತ್ತು ಈಗಿರುವ ಇತರೇ ರಾಜಕೀಯ ಪಕ್ಷಗಳು ಯಾವ ರೀತಿಯಲ್ಲಿ ತೃತೀಯ ಶಕ್ತಿಯಾಗಿ ಹೊರಹೊಮ್ಮಬಲ್ಲವು ಎಂಬುದು ನನ್ನ ಪ್ರಶ್ನೆಯಾಗಿದೆ. ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ನಮ್ಮ ನಡುವಿರುವ ರಾಜಕೀಯ ಪಕ್ಷಗಳನ್ನು, ಅವುಗಳ ಕಾರ್ಯವೈಖರಿಯನ್ನು ವಿಶ್ಲೇಷಿಸಿ ನೋಡಬೇಕಾಗುತ್ತದೆ.

ಮೊದಲಿಗೆ ನಮ್ಮ ದಕ್ಷಿಣ ಭಾರತದ ಪಕ್ಷಗಳನ್ನೇ ನೋಡೋಣ. ತಮಿಳುನಾಡಿನ ಎರಡು ದ್ರಾವಿಡ ಪಕ್ಷಗಳಿಗಿರುವ ಏಕೈಕ ಗುರಿಯೆಂದರೆ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಸರಕಾರದ ಮೇಲೆ ಹಿಡಿತ ಸಾಧಿಸಿ, ತನ್ನ ಮತ್ತು ರಾಜ್ಯದ ಹಿತ ಕಾಪಾಡಿಕೊಳ್ಳುವುದಾಗಿದೆ. ಅದೂ ಅಲ್ಲದೆ ಈ ಪಕ್ಷಗಳೂ ಸಹ ಸಮಯಕ್ಕೆ ತಕ್ಕಂತೆ ಕಾಂಗ್ರೆಸ್ ಮತ್ತು ಬಿ.ಜೆ.ಪಿಗಳೊಂದಿಗೆ ಕಣ್ಣಾಮುಚ್ಚಾಲೆಯಾಟ ಆಡುತ್ತಲೇ ಬಂದಿವೆ. ಇನ್ನು ಆಂಧ್ರದ ಚಂದ್ರಬಾಬು ನಾಯ್ಡು ನೇತೃತ್ವದ ತೆಲುಗು ದೇಶಂ ಈಗಾಗಲೇ ಬಿ.ಜೆ.ಪಿಯೊಂದಿಗೆ ಮಧುಚಂದ್ರ ಮುಗಿಸಿದ ಪಕ್ಷವಾಗಿದೆ. ಕರ್ನಾಟಕದಲ್ಲಿ ಜೆ.ಡಿ.ಎಸ್ ಪಕ್ಷದ ನಡೆಯೇನು ವಿಭಿನ್ನವಾಗಿಲ್ಲ. ಅದೂ ಸಹ ಕಾಂಗ್ರೆಸ್ ಮತ್ತು ಬಿ.ಜೆ.ಪಿಗಳೆರಡರ ಜೊತೆಯೂ ಸಂಸಾರ ನಡೆಸಿ, ಇದೀಗ ಡೈವೋರ್ಸ್ ತೆಗೆದುಕೊಂಡು ನಿಂತಿದೆ.

ಉಳಿದಂತೆ ಒರಿಸ್ಸಾದ ಬಿಜು ಜನತಾದಳ, ಬಿಹಾರದ ಜೆಡಿಯು, ಮಹಾರಾಷ್ಟ್ರದ ಶಿವಸೇನೆ ಮುಂತಾದವು ಈಗಾಗಲೇ ಎನ್.ಡಿ.ಎ ತೆಕ್ಕೆಗೆ ಸೇರಿಹೋಗಿವೆ. ಅದೇ ರೀತಿ ಮಹಾರಾಷ್ಟ್ರದ ಎನ್.ಸಿ.ಸಿ ಪಶ್ಚಿಮ ಬಂಗಾಳದ ತೃಣಮೂಲ ಕಾಂಗ್ರೆಸ್ ಪಕ್ಷಗಳು ಕಾಂಗ್ರೆಸ್ ನೇತೃತ್ವದ ಯು.ಪಿ.ಎ ಸರಕಾರದ ಫಲಾನುಭವಿ ಪಾಲುದಾರರಾಗಿವೆ.

ಉತ್ತರ ಪ್ರದೇಶದಲ್ಲಿನ ಬಹುಜನ ಸಮಾಜ ಪಕ್ಷ ಈಗಾಗಲೇ ಬಿ.ಜೆ.ಪಿ.ಯ ಜೊತೆ ಒಂದು ಸುತ್ತಿನ ಮೈತ್ರಿ ಮುಗಿಸಿ ಬಂದಿದೆ ಬಿ.ಎಸ್.ಪಿ.ಯ ನಾಯಕಿ ಮಾಯಾವತಿಯ ವೈಯಕ್ತಿಕ ಹಿತಾಸ್ತಕಿಯ ಮೇಲೆ ಆ ಪಕ್ಷದ ನೀತಿ ನಿಂತಿರುವುದರಿಂದ, ಆದೊಂದು ತೃತೀಯ ಶಕ್ತಿಯಾಗುವುದು ಅನುಮಾನಾಸ್ಪದ.

ಮಲಾಯಂರು ಕಾಂಗ್ರೆಸ್‌ನ ಪರವಾಗಿ ಸದ್ಯಕ್ಕಂತೂ ನಿಂತಿದ್ದು, ಬಿಹಾರದ ಲಾಲೂ ಪ್ರಸಾದರು ದಿಕ್ಕೆಟ್ಟ ಸ್ಥಿತಿಯಲ್ಲಿದ್ದಾರೆ. ಇವೆಲ್ಲಕ್ಕಿಂತ ಮುಖ್ಯವಾಗಿ ಜ್ಯೋತಿ ಬಸುರವರ ನಾಯಕತ್ವ ಇರುವವರೆಗೂ ಬಲಾಢ್ಯವಾಗಿ, ತೃತೀಯ ಶಕ್ತಿಯನ್ನು ಸೃಷ್ಟಿಸಿ, ಮುನ್ನಡೆಸಬಲ್ಲ ಶಕ್ತಿಬದ್ಧ ಎಡ ಪಕ್ಷಗಳಿಂದು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ತೀವ್ರ ಹೋರಾಟ ನಡೆಸುತ್ತಿವೆ. ಅದೂ ಅಲ್ಲದೆ ಅವು ತಮ್ಮ ರಾಜ್ಯಗಳ ಹೊರಗಡೆ ಯಾವುದೇ ಪ್ರಭಾವವನ್ನು ಸಹ ಹೊಂದಿಲ್ಲ.

ಇನ್ನುಳಿದಂತೆ ಅಸ್ತಿತ್ವದಲ್ಲಿರುವ ಸಣ್ಣ ಪುಟ್ಟ ಪ್ರಾದೇಶಿಕ ಪಕ್ಷಗಳು ವ್ಯಕ್ತಿ ಕೇಂದ್ರಿತ-ಕುಟುಂಬ ಕೇಂದ್ರಿತವಾಗಿವೆ. ಹೀಗೆ ಸದ್ಯ ಅಸ್ತಿತ್ವದಲ್ಲಿರುವ ನಮ್ಮ ಎಲ್ಲ ಪಕ್ಷಗಳೂ ಸ್ಪಷ್ಟ ರಾಜಕೀಯ ನೀತಿಯಾಗಲಿ, ಆರ್ಥಿಕ ನೀತಿಯಾಗಲಿ ಇರದ ಗುಂಪುಗಳಾಗಿರುವಾಗ, ಇಂತಹವುಗಳಿಂದ ಒಂದು ಪ್ರಬಲ ತೃತೀಯ ಶಕ್ತಿಯನ್ನು ನಾವು ಹೇಗೆ ಸೃಷ್ಟಿಸಬಹುದು?

ಅಕಸ್ಮಾತ್ ನಾನು ಮೇಲೆ ಉಲ್ಲೇಖಿಸಿದ ಬಹುತೇಕ ಪಕ್ಷಗಳನ್ನು ಒಗ್ಗೂಡಿಸಿ ತೃತೀಯ ಶಕ್ತಿಯೊಂದನ್ನು ರೂಪಿಸಿದಲ್ಲಿ ಅದರಿಂದಾಗುವ ಅನುಕೂಲಗಳಿಗಿಂತ, ಅನಾನುಕೂಲಗಳೇ ಹೆಚ್ಚು. ಯಾಕೆಂದರೆ ಪ್ರಾದೇಶಿಕ ಪಕ್ಷಗಳ ನಾಯಕರ ಸಂಕುಚಿತ ಮನೋಬಾವನೆ, ಸ್ವ-ಹಿತಾಸಕ್ತಿಗಳ ಕಾರ್ಯವೈಖರಿ, ಯಾವುದೆ ಸಮಸ್ಯೆಯನ್ನೂ ರಾಷ್ಟ್ರೀಯ ದೃಷ್ಟಿಕೋನದಿಂದ ನೋಡದ ಇಂತಹ ಸಣ್ಣತನಗಳು ಈ ದೇಶದ ಫೆಧರಲ್ ವ್ಯವಸ್ಥೆಯನ್ನು ನುಚ್ಚು ನೂರು ಮಾಡಬಲ್ಲವು.

ಆದ್ದರಿಂದ 'ತೃತೀಯ ಶಕ್ತಿ' ಎಂಬ ಅನಾಹುತವೊಂದನ್ನು ನಾವೇ ಸೃಷ್ಟಿಸಿ ಇಡೀ ದೇಶವನ್ನು ಗೊಂದಲದಲ್ಲಿ, ಅರಾಜಕತೆಯಲ್ಲಿ ಮುಳುಗಿಸುವುದಕ್ಕಿಂತ ಈಗಿರುವ ಎರಡು ರಾಷ್ಟ್ರೀಯ ಪಕ್ಷಗಳನ್ನು ಉತ್ತಮ ರಾಜಾಕಾರಣ ಮಾಡುವಂತೆ ಅವುಗಳ ಮೇಲೆ ಒತ್ತಡ ಹೇರುವ ಕೆಲಸವನ್ನು ನಾವು ಮಾಡಬೇಕಿದೆ.

ಅದಕ್ಕಿರುವ ಮಾರ್ಗವೆಂದರೆ, ಕಾಂಗ್ರೆಸ್ ಪಕ್ಷ ಇನ್ನಷ್ಟು ಪ್ರಜಾಸತ್ತಾತ್ಮಕವಾಗಿ, ಸಾಮಾಜಿಕ ನ್ಯಾಯದ ತನ್ನ ಹಳೆಯ ನೀತಿಯನ್ನು ಅನುಸರಿಸುವುದಾಗಿದೆ. ಅದೇ ರೀತಿ. ಬಿ.ಜೆ.ಪಿ ಕೋಮುವಾದದ ಭ್ರಾಂತಿಯಿಂದ ಹೊರ ಬಂದು, ಸ್ಪಷ್ಟವಾದ ಆರ್ಥಿಕ ನೀತಿಯೊಂದನ್ನು ಅಳವಡಿಸಿಕೊಂಡು ರಾಜಕಾರಣ ಮಾಡಬೇಕಿದೆ. ಈ ನಿಟ್ಟಿನಲ್ಲಿ ಆ ಪಕ್ಷಗಳ ಒಳಗಿರುವ ಪ್ರಾಮಾಣಿಕ ನಾಯಕರು-ಕಾರ್ಯಕರ್ತರು ಕಾರ್ಯಪ್ರವೃತ್ತರಾಗಬೇಕಾಗಿದೆ. ಸದ್ಯಕ್ಕೆ ನಮಗಿರುವ ಸುವರ್ಣ-ಮದ್ಯಮ ಮಾರ್ಗ ಇದೊಂದೇ ಆಗಿದೆ. □

ಸಂಪಾದಕರೊಡನೆ ಸಂವಾದ

ಹಜಾರೆ ಮತ್ತು ಭ್ರಷ್ಟ ಮುಕ್ತ ಭಾರತ...!

ಡಾ. ಕಿರಣ್.ಎಂ ಗಾಜನೂರು

ಪ್ರಿಯ ಸಂಪಾದಕರೇ,

ಶ್ರೀಮಾನ್ ಗಾಂಧಿಯವರ ಒಂದು ಅಭಿಪ್ರಾಯ ಆಸಕ್ತಿದಾಯಕವಾಗಿದೆ. ಅದೆಂದರೆ "ಯಾರೂ ಸಹ ತಮ್ಮ ಅನುಭವದಿಂದಾಚೆಗೆ ಏನನ್ನೂ ವಾದಿಸಲು ಸಾಧ್ಯವಿಲ್ಲ" ಎಂಬುದು. ಆದರೆ ಇಂದು ಆಧನಿಕತೆ, ನಗರೀಕರಣ, ಮತ್ತು ಬಂಡವಾಳಶಾಹಿ ಪ್ರೇರಿತ ಮಾರುಕಟ್ಟೆಯ ಪ್ರಭಾವದಿಂದ ಬಹುತೇಕರು ತಮ್ಮ ಅನುಭವದಿಂದ ಹೊರಗೆ ನಿಂತು ವಾದಿಸಲು ಪ್ರಾರಂಭಿಸಿದ್ದಾರೆ.

ನಾನು ಚಿಕ್ಕವನಿದ್ದಾಗ ನನ್ನ ಹಳ್ಳಿಯ ಯಾವ ಮನೆಗೂ ಕಾಂಪೌಂಡ್‌ಗಳು ಇರುತ್ತಿರಲಿಲ್ಲ. ಬದಲಾಗಿ ಕೆಲವು ಮನೆಗಳಿಗೆ ಕಟ್ಟಿಗೆಯ ಬೇಲಿಗಳು ಇರುತ್ತಿದ್ದವು. ಮತ್ತು ಆ ಬೆಲಿಗಳು ಮನೆಯ ಅಕ್ಕ ಪಕ್ಕದ ಜಾಗದಲ್ಲಿ ಬೆಳೆದುಕೊಳ್ಳುತ್ತಿದ್ದ ತರಕಾರಿ, ಹೂವಿನ ಗಿಡಗಳನ್ನು ದನಕರುಗಳಿಂದ ಕಾಪಾಡುವ ಉದ್ದೇಶದಿಂದಲೇ ನಿರ್ಮಿತವಾಗಿರುತ್ತಿದ್ದವು. ಒಟ್ಟಿನಲ್ಲಿ ಆ ಬೇಲಿ ನಿರ್ಮಿಸುವ ಮಾನವನ ಉದ್ದೇಶ ಮನೆಗೆ ಪ್ರಾಣಿಗಳು ಬರದಿರಲಿ ಎಂಬುದಾಗಿತ್ತು.

ಇಂದು ನಾನು ಬದುಕುತ್ತಿರುವ ಅದೇ ಹಳ್ಳಿಯ ಅನೇಕ ಮನೆಗಳಿಗೆ ಕಾಂಪೌಂಡ್‌ಗಳು ಬಂದಿವೆ. ಅಲ್ಲದೆ ಇಂದು ತಯಾರಾಗುತ್ತಿರುವ ಮನೆಯ ಯಾವುದೇ ನಕ್ಷೆಗಳು ಕಾಂಪೌಂಡ್ ಹೊರತಾಗಿ ರೂಪಿತವಾಗುತ್ತಿಲ್ಲ. ಮತ್ತು ಇಂದಿನ ಕಾಂಪೌಂಡ್‌ಗಳ ಮೂಲ ಉದ್ದೇಶ ಜನರನ್ನೇ ತಮ್ಮ ಮನೆಯಿಂದ ಹೊರಗಿಡುವುದಾಗಿದೆ. ಒಂದು ವೇಳೆ ನಾವು ಕಟ್ಟಿದ ಆಳೆತ್ತರದ ಇಟ್ಟಿಗೆಯ ಗೋಡೆಯನ್ನು ದಾಟಿ ಜನರು ಬಂದುಬಿಟ್ಟಾರು ಅಂತ ಭಯಂಕರವಾಗಿ ರುವ ನಾಯಿಗಳನ್ನು ಸಾಕುತ್ತಿದ್ದೇವೆ.

ಇದು ಬದಲಾಗುತ್ತಿರುವ ಭಾರತದ ನಾಗರೀಕನ ಮನಸ್ಥಿತಿಗೆ ಒಂದು ಉದಾಹರಣೆ ಅಷ್ಟೆ. ಇಂದು ಬಂಡವಾಳಶಾಹಿ ಮಾರುಕಟ್ಟೆ ಸಂಸ್ಕೃತಿ ಭಾರತದ ಮಧ್ಯಮ ವರ್ಗವನ್ನು ವ್ಯಕ್ತಿ ಸ್ವಾತಂತ್ರದ ಹೆಸರಿನಲ್ಲಿ ಸಮಾಜದ ಜೀವಾಳವಾದ ಸಮುದಾಯಿಕ ಬದುಕಿನಿಂದ ದೂರ ಮಾಡುತ್ತಾ ತಮ್ಮ ಅನುಭವದಿಂದಾಚೆಗೆ ಯೋಚಿಸುವಂತೆ ಪ್ರೇರೇಪಿಸುತ್ತಿದೆ.

ಹೀಗೆ ಮಾರುಕಟ್ಟೆ ನಿರ್ದೇಶಿತ ವ್ಯಕ್ತಿಸ್ವಾತಂತ್ರ ಎಂಬ ಭ್ರಮೆಯ ಬಾವಿಯಲ್ಲಿ ಬದುಕುವ ತಯಾರಿಯಲ್ಲಿದ್ದ ಭಾರತದ ನಾಗರೀಕನ ಮನೆ ಮನಗಳಿಗೆ ಇತ್ತೀಚೆಗೆ ಕಿಶನ್ ಬಾಬುರಾವ್ ಹಜಾರೆ ಎಂಬ ಗಾಂಧಿವಾದಿ ಒಂದು ಸಣ್ಣ ಅಲುಗಾಟವನ್ನು ತಂದಿದ್ದಾರೆ. ಕೆಲವರು ಭ್ರಷ್ಟಾಚಾರದ ವಿರುದ್ಧದ ಅಣ್ಣಾ ಅವರ ಈ ಹೋರಾಟವನ್ನು ಪ್ರಜಾಪ್ರಭುತ್ವಕ್ಕೆ ಸಂದ ಜಯ ಎಂದರೆ, ಕೆಲವು ಯುವ ಉತ್ಸಾಹಿ ಯುವಕರ ಗುಂಪು ಈ ಹೋರಾಟವನ್ನು ಎರಡನೇ ಸ್ವಾತಂತ್ರ್ಯ ಸಂಗ್ರಾಮ ಎಂದು ಕರೆದಿದ್ದಾರೆ. ಹಾಗಾದರೆ ಬಹಳಷ್ಟು ಜನ ಹೇಳುವಂತೆ ಈ ಹೋರಾಟ ಪ್ರಜಾಪ್ರಭುತ್ವಕ್ಕೆ ಸಂದ ಜಯವೇ? ಅಥವ ಭಾರತದ ಪ್ರಜೆಗಳಲ್ಲಿ ಕಳೆದ 50-60 ವರ್ಷಗಳಿಂದ ಅನಿವಾರ್ಯ ಕಾರಣಗಳಿಗಾಗಿ ಮಡುವುಗಟ್ಟಿ ಉಳಿದು ಬಂದಿದ್ದ ಅಂತರೀಕ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಕಿಡಿ ಇರಬಹುದೇ? ಎಂದು ಪ್ರಶ್ನಿಸಿದರೆ, ಸಿಗುವ ಉತ್ತರ ಖಂಡಿತ ಇಲ್ಲ. ಈ ಹೋರಾಟ ಬಂಡವಾಳಶಾಹಿ ಮಾರುಕಟ್ಟೆ ಪ್ರಾಯೋಜಿತ ಮಾಧ್ಯಮಗಳನ್ನೆ ಮಾಹಿತಿಯ ಆಕರವನ್ನಾಗಿಸಿಕೊಂಡ ಭಾರತದ ಮಧ್ಯಮ ವರ್ಗದ ಧಿಡೀರ್ ಅಥವ ತತ್‌ಕ್ಷಣದ ಪ್ರತಿಕ್ರಿಯೇ ಅಷ್ಟೇ ಎಂಬುದು.

ಹಾಗಾದರೆ ಅಣ್ಣಾ ಅವರೂ ಈ ಮಾರುಕಟ್ಟೆ ಸಂಸ್ಕೃತಿಯ ಬಲಿಪಶುವೇ? ಎಂದು ಯೋಚಿಸಿದರೆ ಖಂಡಿತ ಅಲ್ಲ ಒಂದು ಅರ್ಥದಲ್ಲಿ ಅವರು ಗಾಂಧಿವಾದಿ. ಏಕೆಂದರೆ ಅವರು ತಮ್ಮ ಹೋರಾಟಕ್ಕೆ ಗಾಂಧಿಯವರ ಅಹಿಂಸಾತ್ಮಕ ಸತ್ಯಾಗ್ರಹದ ಮಾರ್ಗ ಅನುಸರಿಸಿದ್ದಾರೆ ಮತ್ತು ಅದರಿಂದ ಒಂದು ಹಂತದವರೆಗೆ ಯಶಸ್ಸನ್ನು ಕಂಡಿದ್ದಾರೆ. ಆದರೆ ನಿಜವಾಗಿಯು ಯೋಜಿತ ಜನ ಲೋಕಪಾಲ್ ಮಸೂದೆ ದೇಶದಲ್ಲಿನ ಭ್ರಷ್ಟತೆಯನ್ನು ಕಡಿಮೆ ಮಾಡುವಲ್ಲಿ ಗಣನೀಯ ಪ್ರಮಾಣದಲ್ಲಿ ಪ್ರಭಾವ ಬಿರುತ್ತದೆಯೇ ಎಂದು ನೋಡಿದರೆ ನಮಗೆ ನಿರಾಶೆಯಾಗುವುದು ಖಂಡಿತ. ಏಕೆಂದರೆ ಇಂದು ನಾವು ಪಾಲಿಸುತ್ತಿರುವ ಆಧುನಿಕ ನಾಗರೀಕತೆಯಲ್ಲಿ ಹಕ್ಕುಗಳನ್ನು ಪಡೆಯುವಾಗ ಯಾವುದೇ ಮೂಲದಿಂದಲಾದರೂ ಸರಿ ಅವುಗಳನ್ನು ಪಡೆಯುವುದು ಮುಖ್ಯವಾಗುತ್ತದೆ.

ಈ ಹಕ್ಕುಗಳ ಜೊತೆಗೆ ಬಾಧ್ಯತೆಗಳೂ ಇರುತ್ತವೆ ಅನ್ನುವುದನ್ನು ಆಧುನಿಕ ಸಮಾಜ ಗುರುತಿಸುವುದಿಲ್ಲ. ಅಂದರೆ ಭ್ರಷ್ಟಚಾರ ರಹಿತ ಸಮಾಜ ನಿರ್ಮಾಣದ ಹಕ್ಕನ್ನು ಮಂಡಿಸುತ್ತಿರುವ ನಾಗರೀಕನಿಗೆ ಆ ಮಾದರಿಯ ಸಮಾಜ ನಿರ್ಮಾಣದಲ್ಲಿ ವ್ಯಕ್ತಿಯ ಬಾಧ್ಯತೆಗಳೇನು ಎಂಬುದರ ಕುರಿತು ಯೋಚನೆ ಅರಿವು ಇರುವುದಿಲ್ಲ. ಇದು ವ್ಯಕ್ತಿಯ ಸಮಸ್ಯೆಯಲ್ಲ ಸ್ವಾತಂತ್ರ್ಯ ನಂತರದ ಭಾರತದಲ್ಲಿ ನಾವು ಕಟ್ಟಿ-ಬೆಳೆಸಿಕೊಂಡು ಬಂದಿರುವ ವ್ಯವಸ್ಥೆಯ ಸಮಸ್ಯೆ. ನಾವು ದೇಶದ ಭ್ರಷ್ಟತೆ ಎಂಬುದು ವ್ಯಕ್ತಿಯಿಂದ ದೂರ ಇರುವ ಒಂದು ವಿದ್ಯಮಾನ ಎಂಬಂತೆ ನೋಡುತ್ತಿರುತ್ತೇವೆ. (ಮಾಧ್ಯಮಗಳು ಅದನ್ನು ಹಾಗೆ ಬಿಂಬಿಸುತ್ತವೆ. ಹಾಗಾಗಿಯೇ ಭ್ರಷ್ಟತೆಯ ವಿರುದ್ಧ ಟಿವಿಯಲ್ಲಿ ಬರುವ ಕಾರ್ಯಕ್ರಮ ನೋಡುವ ಸರ್ಕಾರಿ ಅಧಿಕಾರಿ ರೋಮಾಂಚಿತನಾಗಿ ಮಾತನಾಡುತ್ತಾನೆ. ಆದರೆ ಬೆಳಿಗ್ಗೆ ಕಛೇರಿಯಲ್ಲಿ ಯಾವುದೋ ಕಾರಣಕ್ಕೆ ಪಡೆದ ಲಂಚ ಮರೆತಿರುತ್ತಾನೆ) ಭ್ರಷ್ಟತೆಯ ವಿರುದ್ಧ ಹೋರಾಡುವ ನಮ್ಮ ಮನಸ್ಥಿತಿ ಹೇಗಿರುತ್ತದೆಂದರೆ ಹತ್ತಾರು ಜನ ಸೇರಿರುವ ಒಂದು ಜಾಗದಲ್ಲಿ ಒಬ್ಬ 18 ವರ್ಷದ ಕಿಸೆಕಳ್ಳ ಸಿಕ್ಕಿಬಿಟ್ಟರೆ ಅಲ್ಲಿರುವ ಅಷ್ಟೂ ಜನ ತಾವು ಇದುವರೆಗೂ ಜೀವನದಲ್ಲಿ ಮಾಡಿರುವ ಎಲ್ಲಾ ತಪ್ಪುಗಳನ್ನು ಮರೆತು ನಾಯಕರಂತೆ ಆ ಕಳ್ಳನ ಮೇಲೆ ಎರಗುತ್ತಾರಲ್ಲ ಹಾಗಿರುತ್ತದೆ. ಅದೇ ಮನಸ್ಥಿತಿಯಲ್ಲಿ ಇಂದು ಹಲವರು ಇದ್ದಾರೆ. ಅವರು ಈ ದೇಶದ ಭ್ರಷ್ಟತೆಯ ವಿರುದ್ಧ ಮಾತನಾಡುತ್ತಾ ಆಡುತ್ತಾ, ಇದುವರೆಗು ಈ ದೇಶದ ಭ್ರಷ್ಟತೆಯ ಭಾಗವಾಗಿ ಉಳಿದುಬಂದಿದ್ದ ತಮ್ಮ ಇರುವಿಕೆಯನ್ನೆ ಮರೆತು ಬಿಡುತ್ತಾರೆ. ಅವರ ಕಣ್ಣಿಗೆ ಯೋಚನೆಗೆ ಅಣ್ಣಾ ಹಜಾರೆ ತಕ್ಷಣದ ನಾಯಕರಂತೆ, ಭ್ರಷ್ಟರು ಜನರ ಗುಂಪಿನ ಮಧ್ಯ ಸಿಕ್ಕ ಕಳ್ಳರಂತೆ ಭಾಸವಾಗುತ್ತದೆ.

ಅದು ಅಲ್ಲದೆ ಗಾಂಧೀಜಿಯ ಪ್ರಕಾರ ಸತ್ಯಾಗ್ರಹದ ಪರಿಕಲ್ಪನೆಗೂ ಗ್ರಾಮಸ್ವರಾಜ್ಯಕ್ಕೂ ನೇರವಾದ ಸಂಬಂಧ ಇದೆ. ಒಬ್ಬ ಸತ್ಯಾಗ್ರಹಿ ಸುತ್ತಮುತ್ತಲಿನ ಸಮಾಜಕ್ಕೆ ಮಾದರಿಯಾಗಿ ಬದುಕಬೇಕಾಗುತ್ತದೆ ಮತ್ತು ಅದು ಸಣ್ಣ ಗ್ರಾಮದಲ್ಲಿಯೇ ಸಾಧ್ಯ ಹೊರತು ಈ ದೊಡ್ಡ ನಗರಗಳಲ್ಲಿ ಯಾರೂ ಸತ್ಯಾಗ್ರಹಿ ಆಗುವುದಕ್ಕೆ ಸಾಧ್ಯ ಇಲ್ಲ. ಯಾಕೆಂದರೆ ನಗರಗಳಲ್ಲಿ ಯಾರೂ ಯಾರಿಗೂ ಒಳ್ಳೆಯ ಉದಾಹರಣೆ ಆಗುವುದಿಲ್ಲ. ಯಾರು ಯಾರನ್ನೂ ಅನುಸರಿಸುವುದಿಲ್ಲ. ಹಿಗಿದ್ದಾಗಿಯು ಇಂದು ಭ್ರಷ್ಟತೆಯ ವಿರುದ್ಧದ ಹೋರಾಟ ನವ ದೇಹಲಿಯ ಜಂತರ್ ಮಂತರ್‌ನಿಂದ ಪ್ರಾರಂಭವಾಗಿದೆ. ಜೋತೆಯಲ್ಲಿಯೇ ರಾಜಕಾರಣಿಗಳು ಮತ್ತು ಹೋರಾಟಗಾರರ ನಡುವೆ ಕೆಸರೆರಚಾಟವು ಸಾಗಿದೆ. ನಾವು ಮುಂದಿನ ಬೆಳವಣಿಗೆಗಳನ್ನು ಕಾದು ನೋಡಬೇಕಷ್ಟೇ. □

ಭ್ರಷ್ಟತೆಯ ವಿರುದ್ಧ ಹೋರಾಡುವ ನಮ್ಮ ಮನಸ್ಥಿತಿ ಹೇಗಿರುತ್ತದೆಂದರೆ ಹತ್ತಾರು ಜನ ಸೇರಿರುವ ಒಂದು ಜಾಗದಲ್ಲಿ ಒಬ್ಬ 18 ವರ್ಷದ ಕಿಸೆಕಳ್ಳ ಸಿಕ್ಕಿಬಿಟ್ಟರೆ ಅಲ್ಲಿರುವ ಅಷ್ಟೂ ಜನ ತಾವು ಇದುವರೆಗೂ ಜೀವನದಲ್ಲಿ ಮಾಡಿರುವ ಎಲ್ಲಾ ತಪ್ಪುಗಳನ್ನು ಮರೆತು ನಾಯಕರಂತೆ ಆ ಕಳ್ಳನ ಮೇಲೆ ಎರಗುತ್ತಾರಲ್ಲ ಹಾಗಿರುತ್ತದೆ. ಅದೇ ಮನಸ್ಥಿತಿಯಲ್ಲಿ ಇಂದು ಹಲವರು ಇದ್ದಾರೆ. ಅವರು ಈ ದೇಶದ ಭ್ರಷ್ಟತೆಯ ವಿರುದ್ಧ ಮಾತನಾಡುತ್ತಾ ಆಡುತ್ತಾ, ಇದುವರೆಗು ಈ ದೇಶದ ಭ್ರಷ್ಟತೆಯ ಭಾಗವಾಗಿ ಉಳಿದುಬಂದಿದ್ದ ತಮ್ಮ ಇರುವಿಕೆಯನ್ನೆ ಮರೆತು ಬಿಡುತ್ತಾರೆ.

ಅಂಬೇಡ್ಕರ್: ಬುದ್ಧನನ್ನು ಮತ್ತೆ ತಂದ ಬೋಧಿಸತ್ವ

ಸಂಪಾದಕರೊಡನೆ ಸಂವಾದ

ರಘೋತ್ತಮ ಹೊ.ಬ

ಪ್ರಿಯ ಸಂಪಾದಕರೇ,

ಬುದ್ಧ, ಬಹುಶಃ ಜಗತ್ತಿನಲ್ಲಿಯೇ ಶ್ರೇಷ್ಠ ಜ್ಞಾನಿ ಎಂದರೆ ಆತನೇ ಇರಬೇಕು. ಎಲ್ಲಾ ತತ್ವಜ್ಞಾನಿಗಳು ದೇವರ ಸುತ್ತ ಗಿರಕಿ ಹೊಡೆದರೆ ಬುದ್ಧ ದೇವರ ಬಗ್ಗೆ ಚಕಾರವೆತ್ತದೆ ಮಾನವನ ಸಮಸ್ಯೆಗಳಿಗೆಲ್ಲ ಆತನ ಮನಸ್ಸೇ ಮೂಲವೆಂದು, ಮನಸ್ಸನ್ನು ಹಿಡಿದಿಟ್ಟುಕೊಳ್ಳುವುದೇ ನಿಜವಾದ ಧರ್ಮವೆಂದು ಪ್ರತಿಪಾದಿಸಿದ ಅಪ್ಪಟ ಜ್ಞಾನಿ. ಅದಕ್ಕೇ ಇರಬೇಕು ಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಒಂದೆಡೆ" ಈ ಜಗತ್ತಿನಲ್ಲಿ ಯಾವುದಾದರೊಂದು ಧರ್ಮ ವಿಜ್ಞಾನದ ಅಗತ್ಯತೆಗಳನ್ನು ಪೂರೈಸುತ್ತದೆ ಎನ್ನುವುದಾದರೆ ಅದು ಬುದ್ಧ ಧರ್ಮ" ಎಂದಿರುವುದು. ಇಂತಹ ವೈಜ್ಞಾನಿಕ ತಳಹದಿಯ ಮನೋವೈಜ್ಞಾನಿಕ ಸಿದ್ಧಾಂತದ ಬುದ್ಧನ ತತ್ವ 2500ವರ್ಷಗಳ ಹಿಂದೆ ಧರ್ಮವಾಗಿ ಮೈದಳೆದದ್ದು ನಿಜಕ್ಕೂ ಆಶ್ಚರ್ಯ ಮತ್ತು wonder of the world ಎನ್ನಬಹುದು. ಆದರೆ ಅಂತಹ ಆಶ್ಚರ್ಯ ಮತ್ತು ಅದ್ಭುತ ತಾನು ಹುಟ್ಟಿದ ನೆಲದಲ್ಲಿ ಇದ್ದಕ್ಕಿದ್ದಂತೆ ಮರೆ ಯಾದದ್ದು? ಬಹುಶಃ ಭಾರತೀಯರ ಪಾಲಿಗೆ ಒದಗಿದ ದೊಡ್ಡ ದುರಂತ ಅದು.

ಆದರೆ ಅದನ್ನು ದುರಂತವೆಂದು ಮತ್ತು ಅಂತಹ ದುರಂತದಿಂದ ಯಾರಿಗೂ ಪ್ರಯೋಜನವಿಲ್ಲವೆಂದು ವ್ಯಕ್ತಿಯೊಬ್ಬರು, ಕ್ಷಮಿಸಿ ಶಕ್ತಿಯೊಂದು ಹಾಗೆ ಕುಳಿತ್ತಿದ್ದರೆ? ಅದರ ಪುನರುತ್ಥಾನಕ್ಕಾಗಿ ಶ್ರಮಿಸದೇ ಇದ್ದಿದ್ದರೆ? ಬಹುಶಃ ನಾವು ಅದರ ಬಗ್ಗೆ ಬರೆಯುವ, ಅದರ ಬಗ್ಗೆ ತಿಳಿದುಕೊಳ್ಳುವ ಸಣ್ಣ ಅವಕಾಶವೂ ನಮಗೆ ಸಿಗುತ್ತಿರಲಿಲ್ಲವೋ ಏನೋ? ಆದರೆ ಶ್ರೇಷ್ಠ ಬದುಕು ಸತ್ತುಹೋಗಬಾರದು ಹಾಗೆಯೇ ಈಗ ಜಾರಿಯಲ್ಲಿರುವ ಕನಿಷ್ಠಕ್ಕೆ ಪ್ರತ್ಯುತ್ತರವಾದ ಶ್ರೇಷ್ಠವಾದ ಆ ಬುದ್ಧ ತತ್ವ ನಶಿಸಿಹೋಗಬಾರದು ಎಂದು ಬುದ್ಧನನ್ನು ಮತ್ತೆ ಭಾರತಕ್ಕೆ ತಂದ ವ್ಯಕ್ತಿ ಅರ್ಥಾತ್ ಶಕ್ತಿ, ಸರಳವಾಗಿ ಹೇಳುವುದಾದರೆ ಬೋಧಿಸತ್ವ ಬೇರಾರೂ ಅಲ್ಲ. ಬಾಬಾಸಾಹೇಬ್ ಅಂಬೇಡ್ಕರ್. ನಿನಗೆ ನೀನೇ ಬೆಳಕು ಎಂದವನನ್ನು ಬೆಳಕಿಗೆ ತಂದ ಬುದ್ಧ ಸಾಹೇಬ!

ಹಾಗಿದ್ದರೆ ಬಾಬಾಸಾಹೇಬರೇಕೆ? ಬುದ್ಧನನ್ನು ಬೆಳಕಿಗೆ ತಂದರು? ಸುಮ್ಮನೆ ಹಿಂದೂ ಧರ್ಮವನ್ನು ಬೈದು, ಅದರ ಕೊಳಕು ಜಾತಿ ವ್ಯವಸ್ಥೆಯನ್ನು ಟೀಕಿಸಿ ಸುಮ್ಮನಿರಬಹುದಿತ್ತಲ್ಲ? ಉತ್ತರ ಸ್ಪಷ್ಟ, ಸಾಧಾರಣ ನಾಯಕರು ಮಾತ್ರ ಹಾಗೆ ಇರುತ್ತಾರೆ. ಅವರು ಬರೀ ಸಮಸ್ಯೆಗಳನ್ನು ಕೆದಕಿ ಅದರ ಪರಿಸ್ಥಿತಿಯ ಲಾಭವನ್ನಷ್ಟೆ ಬಯಸಿ ತಾವು ಒಂದು ಪದವಿಯನ್ನೊ ಅಧಿಕಾರವನ್ನೊ ಪಡೆದು ಸುಮ್ಮನಾಗುತ್ತಾರೆ. ಆದರೆ ಅಂಬೇಡ್ಕರ್? ಸಮಚಿತ್ತದ ದೂರದರ್ಶಿ ವ್ಯಕ್ತಿತ್ವದ ನಾಯಕ. ತಾನು ಏನು ಮಾಡುತ್ತಿದ್ದೇನೆ ಅದರ ಪರಿಣಾಮ ಏನಾಗಬಹುದು ಎಂಬುದನ್ನು ಸುಮಾರು 10000 ವರ್ಷಗಳ ಮುಂದಕ್ಕೆ ಯೋಚಿಸಿದ ಅಸಾಧಾರಣ ನಾಯಕ. ಬಹುಶಃ ಅಂತ ಹವರು ಯುಗಕ್ಕೆ ಒಬ್ಬರು ಇಬ್ಬರು ಜನಿಸಬಹುದಷ್ಟೆ. ಯಾಕೆಂದರೆ ಅಂಬೇಡ್ಕರ್ ಬರೀ ಸಮಸ್ಯೆಗಳನ್ನಷ್ಟೆ ಕೆದಕಲಿಲ್ಲ. ಬದಲಿಗೆ ಅವುಗಳಿಗೆ ಸೂಕ್ತ ಪರಿಹಾರವನ್ನು ಸಹ ತೆರೆದಿಟ್ಟುಹೋದರು. ಹಿಂದೂ ಧರ್ಮದ ಅಂತಹ ಸಮಸ್ಯೆಗೆ ಪರಿಹಾರವಾಗಿ ಅವರು ತೆರೆದದ್ದೆ ಬುದ್ಧ ಮತ್ತು ಆತನ ಧರ್ಮದ ಹೆಬ್ಬಾಗಿಲು.

> **ಬಾಬಾಸಾಹೇಬರೇಕೆ ಬುದ್ಧನನ್ನು ಬೆಳಕಿಗೆ ತಂದರು? ಸುಮ್ಮನೆ ಹಿಂದೂಧರ್ಮವನ್ನು ಬೈದು, ಅದರ ಕೊಳಕು ಜಾತಿ ವ್ಯವಸ್ಥೆಯನ್ನು ಟೀಕಿಸಿ ಸುಮ್ಮನಿರಬಹುದಿತ್ತಲ್ಲ? ಉತ್ತರ ಸ್ಪಷ್ಟ, ಸಾಧಾರಣ ನಾಯಕರು ಮಾತ್ರ ಹಾಗೆ ಇರುತ್ತಾರೆ. ಅವರು ಬರೀ ಸಮಸ್ಯೆಗಳನ್ನು ಕೆದಕಿ ಅದರ ಪರಿಸ್ಥಿತಿಯ ಲಾಭವನ್ನಷ್ಟೆ ಬಯಸಿ ತಾವು ಒಂದು ಪದವಿಯನ್ನೊ ಅಧಿಕಾರವನ್ನೊ ಪಡೆದು ಸುಮ್ಮನಾಗುತ್ತಾರೆ. ಆದರೆ ಅಂಬೇಡ್ಕರ್? ಸಮಚಿತ್ತದ ದೂರದರ್ಶಿ ವ್ಯಕ್ತಿತ್ವದ ನಾಯಕ. ತಾನು ಏನು ಮಾಡುತ್ತಿದ್ದೇನೆ ಅದರ ಪರಿಣಾಮ ಏನಾಗಬಹುದು ಎಂಬುದನ್ನು ಸುಮಾರು 10000 ವರ್ಷಗಳ ಮುಂದಕ್ಕೆ ಯೋಚಿಸಿದ ಅಸಾಧಾರಣ ನಾಯಕ. ಬಹುಶಃ ಅಂತಹವರು ಯುಗಕ್ಕೆ ಒಬ್ಬರು ಇಬ್ಬರು ಜನಿಸಬಹುದಷ್ಟೆ. ಅಂಬೇಡ್ಕರ್. ನಿನಗೆ ನೀನೆ ಬೆಳಕು ಎಂದವನನ್ನು ಬೆಳಕಿಗೆ ತಂದ ಬುದ್ಧ ಸಾಹೇಬ!**

ಹಾಗಿದ್ದರೆ ಅವರೇನು ಅದನ್ನು ಧಿಡೀರನೇ ತೆರೆದರೇ? ಅಥವಾ ಯಾವುದಾದರೂ ಒತ್ತಡಕ್ಕೆ ಸಿಲುಕಿ ಅದಕ್ಕೆ ಪುನರ್ಜನ್ಮ ನೀಡಿದರೇ? ಬಹುಶಃ ಇದಕ್ಕೆ ಉತ್ತರ ಅಂಬೇಡ್ಕರರ ಬಾಲ್ಯದಲ್ಲಿಯೇ ಸಿಗುತ್ತದೆ. ಅಂಬೇಡ್ಕರರು ಮೆಟ್ರಿಕುಲೇಷನ್ ಪಾಸಾದಾಗ ಅಭಿನಂದನಾರ್ಹವಾಗಿ ಅವರಿಗೆ ಬಂದದ್ದು ಗೌತಮ ಬುದ್ಧನ ಜೀವನ ಚರಿತ್ರೆಯ ಪುಸ್ತಕ. ತಾವೇ ಬರೆದಿದ್ದ ಆ ಪುಸ್ತಕವನ್ನು ಅವರಿಗೆ ನೀಡಿದ್ದು ಖ್ಯಾತ ಮರಾಠಿ ಲೇಖಕ ಮತ್ತು ಚಿಂತಕ ಕೃಷ್ಣ ಅರ್ಜುನ ಕೆಲೂಸ್ಕರ್‌ರವರು. ಇದು ನಡೆದದ್ದು 1907ರಲ್ಲಿ. ಅಂದರೆ ಅಂಬೇಡ್ಕರ್‌ರವರಿಗೆ ಆಗ ಕೇವಲ 16 ವರ್ಷ.

"ಹಿಂದೂ ಎಂಬ ಮರುಭೂಮಿ"ಯಲ್ಲಿ ಸಮಾನತೆ ಎಂಬ ನೀರು ಸಿಗದೆ ತಹತಹಿಸುತ್ತಿದ್ದ ಸಮುದಾಯವೊಂದಕ್ಕೆ ಅಂಬೇಡ್ಕರ್‌ರವರಿಗೆ ಸಿಕ್ಕ ಆ ಬುದ್ಧನ ಜೀವನ ಚರಿತ್ರೆ ಕೃತಿ ಹೇಗೆ ಕಂಡಿರಬೇಕು? ಮರುಭೂಮಿಯುಲ್ಲಿ ಸಿಕ್ಕ ಒಯಸಿಸ್‌ನ ಹಾಗೆ ತಾನೆ? ಅಂಬೇಡ್ಕರ್ ಬುದ್ಧ ಧರ್ಮ ಎಂಬ ಆ ಒಯಸಿಸ್‌ಅನ್ನು ಅಪ್ಪಿಕೊಂಡರು. "ಫಲಭರಿತ ಈ ಭರತ ಭೂಮಿ" "ಮರುಭೂಮಿ" ಆದದ್ದೇಕೆ? ಎಂಬ ನಿಟ್ಟಿನಲಿ ಚಿಂತಿಸುತ್ತಾ ಮುನ್ನುಗ್ಗಿದ್ದರು. ಅಂತಹ ಆ ಮುನ್ನುಗ್ಗುವಿಕೆಯಲ್ಲಿ ಅವರು ಸಿಂಹದಂತೆ ಗರ್ಜಿಸಿದ್ದು 1935ರಲ್ಲಿ ನಾಸಿಕ್‌ನ ಈಯೋಲಾ ಎಂಬಲ್ಲಿ," ನಾನು ಹಿಂದೂವಾಗಿ ಹುಟ್ಟಿರಬಹುದು ಅದು ನನ್ನ ಕೈಲಿರಲಿಲ್ಲ., ಆದರೆ ಹಿಂದೂವಾಗಿ ಖಂಡಿತ ಸಾಯುವುದಿಲ್ಲ" ಎಂದು ಗುಡುಗಿದರು. ಬಹುಶಃ ಅಂಬೇಡ್ಕರರ ಆ ಗುಡುಗು 'ಮರುಭೂಮಿಯ ಜನರಿಗೆ' ದೀಪಾವಳಿ ಪಟಾಕಿ ಸದ್ದಿನ ಹಾಗೆ ಕೇಳಿಸಿರಬೇಕು! ಆದರೆ ಅದು ಪಟಾಕಿಯಲ್ಲ ಹೈಡ್ರೋಜನ್ ಬಾಂಬ್ ಎಂದು ಗೊತ್ತಾದದ್ದು 1956 ಅಕ್ಟೋಬರ್ 14ರಂದು. ಏಕೆಂದರೆ ಅಂದು ಅಂಬೇಡ್ಕರರು ತಮ್ಮ 10 ಲಕ್ಷ ಅನುಯಾಯಿಗಳೊಂದಿಗೆ ನಾಗಪುರದ ದೀಕ್ಷಾಭೂಮಿಯಲ್ಲಿ ಬೌದ್ಧ ಧರ್ಮ ಸ್ವೀಕರಿಸಿದರು. ತನ್ಮೂಲಕ ಬುದ್ಧನ ಧರ್ಮದ ಪುನರುತ್ಥಾನಕ್ಕೆ ನಾಂದಿ ಹಾಡಿದರು.

ಹಾಗಿದ್ದರೆ ಅಂಬೇಡ್ಕರರು ಬೌದ್ಧ ಧರ್ಮವನ್ನು ಸುಮ್ಮನೆ ಸ್ವೀಕರಿಸಿದರೇ? blind ಆಗಿ follow ಮಾಡಿದರೆ? ಖಂಡಿತ ಇಲ್ಲ. ಹಾಗೆ ಹೇಳುವುದಾದರೆ ಬೇರೆಯವರು ಬೇಕಾದರೆ ಹಾಗೆ ಮಾಡಬಹುದಿತ್ತೋ ಏನೋ? ಆದರೆ ಅಪ್ಪಟ ಶ್ರೇಷ್ಠ ಜ್ಞಾನಿ, ಹೋರಾಟಗಾರ ಅಂಬೇಡ್ಕರ್‌ರವರು ಹಾಗೆ ಮಾಡಲಿಲ್ಲ. ಯಾಕೆಂದರೆ ಬೌದ್ಧ ಧರ್ಮವನ್ನು ಸ್ವೀಕರಿಸಬೇಕಾದ ಅವರ ಆ ನಿರ್ಧಾರದಲ್ಲಿ ಮುಖ್ಯವಾಗಿ ಅಡಗಿದ್ದು ದೇಶ ಪ್ರೇಮ, ತನ್ನ ಸಮುದಾಯದ ನೈಜ ಇತಿಹಾಸ ಮತ್ತು ಹಿತಚಿಂತನೆ, ಹಾಗೆ ಬುದ್ಧ ಎಂಬ ಮಹಾನ್ ಸಾಮಾಜಿಕ ವಿಜ್ಞಾನಿಯೆಡೆಗಿನ ಪ್ರೀತಿ.

ಅಂದಹಾಗೆ ಅಂಬೇಡ್ಕರರ ಈ ನಿರ್ಧಾರದಲ್ಲಿ ದೇಶ ಪ್ರೇಮದ ಪಾತ್ರ ಎಂತಹದ್ದು? ಸರಳವಾಗಿ ಹೇಳುವುದಾದರೆ ಅಂಬೇಡ್ಕರರು "ಹಿಂದೂವಾಗಿ ಸಾಯಲಾರೆ" ಎಂದಾಕ್ಷಣ ಮುಸ್ಲೀಮರು, ಕ್ರೈಸ್ತರು ಇತ್ಯಾದಿ ಧರ್ಮಗಳವರು ಅಂಬೇಡ್ಕರರನ್ನು ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳಲು ಮುಂದೆ ಬಂದರು. ಆದರೆ ದೇಶ ಪ್ರೇಮಕ್ಕೆ ಕಟಿಬದ್ಧರಾದ ಅಂಬೇಡ್ಕರ್‌ರವರು ಸೇರುವುದಾದರೆ ನಮ್ಮ ದೇಶದಲ್ಲೇ ಹುಟ್ಟಿ ಬೆಳೆದ ಧರ್ಮವನ್ನಷ್ಟೆ ಸೇರುವುದು ಎಂದು ನಿರ್ಧರಿಸಿ ಬೌದ್ಧ ಧರ್ಮದತ್ತ ಒಲವು ತೋರಿದರು. ತನ್ಮೂಲಕ ದೇಶಪ್ರೇಮ ಎಂದು ಬಡಬಡಿಸುವವರಿಗೆ

ನಿಜವಾದ ದೇಶಪ್ರೇಮದ ಸಣ್ಣ ಪಾಠವನ್ನು ಸಹ ಹೇಳಿ ಕೊಟ್ಟರು.

ಹಾಗೆಯೇ ತನ್ನ ಸಮುದಾಯದ ನೈಜ ಇತಿಹಾಸ? ಹಾಗೆಂದರೆ? ಏಕೆಂದರೆ ಅಂಬೇಡ್ಕರರು ಒಂದೆಡೆ "ಭಾರತದ ಇತಿಹಾಸ ನಿಜವಾಗಿಯೂ ಬೌದ್ಧ ಧರ್ಮಕ್ಕೂ ಬ್ರಾಹ್ಮಣ ಧರ್ಮಕ್ಕೂ ನಡೆದ ನಿರಂತರ ಸಂಘರ್ಷವಲ್ಲದೇ ಬೇರೇನಲ್ಲ" ಎನ್ನುತ್ತಾರೆ. ಈ ನಿಟ್ಟಿನಲ್ಲಿ ಹೇಳುವುದಾದರೆ ಅಂಬೇಡ್ಕರರ ಈ ಬೌದ್ಧ ಧರ್ಮದ ನಡೆಯ ಹಿಂದೆ ನಿಜಕ್ಕೂ ಇದ್ದದ್ದೂ ಅಂತಹ ಆ ಒರಿಜಿನಲ್ ಇತಿಹಾಸವೇ ಹೊರತು ಬೇರೇನಲ್ಲ. ಅಂತಹ ಭವ್ಯ ಇತಿಹಾಸವನ್ನು ಅಂಬೇಡ್ಕರರು ಹೀಗೆ ದಾಖಲಿಸುತ್ತಾರೆ" ಭಾರತದ ಇತಿ ಹಾಸ ಗೊತ್ತಿರುವವರಿಗೆ ತಿಳಿದುಬರುವುದೇನೆಂದರೆ ಈ ದೇಶದಲ್ಲಿ ಬೌದ್ಧ ಧರ್ಮವನ್ನು ಪ್ರಚುರ ಪಡಿಸಿದವರು ನಾಗ ಜನಾಂಗದವರು. ನಾಗ ಜನರು ಆರ್ಯರ ಪ್ರಭಲ ಶತ್ರುಗಳಾಗಿದ್ದರು. ಆರ್ಯರು ಮತ್ತು ನಾಗ ಜನರ ನಡುವೆ ಘೋರ ಯುದ್ಧಗಳು ನಡೆದಿವೆ.

ಆರ್ಯರು ನಾಗ ಜನರನ್ನು ಜೀವಂತ ಸುಟ್ಟಿರುವ ಅನೇಕ ಐತಿಹ್ಯಗಳು ಪುರಾಣದಲ್ಲಿವೆ. ಆದರೆ ಅಗಸ್ತ್ಯ ಮುನಿಯು ಆರ್ಯರು ಮತ್ತು ನಾಗರ ಅಂತಹ ಘೋರ ಕದನದ ನಡುವೆ ಒಬ್ಬ ನಾಗನನ್ನು ರಕ್ಷಿಸಿದರು. ಅವನ ವಾರಸುದಾರರೇ ನಾವು (ಅಂದರೆ ದಲಿತರು). ಆರ್ಯರ ಈ ದಬ್ಬಾಳಿಕೆಯಿಂದ ನೊಂದಿದ್ದ ನಾಗ ಜನರು ಮುಂದೊಂದು ದಿನ ತಮ್ಮನ್ನು ಈ ನೋವಿನಿಂದ ಮೇಲೆತ್ತುವ ನಾಯಕ ನೊಬ್ಬ ಹುಟ್ಟುತ್ತಾನೆಂದು ನಂಬಿದ್ದರು. ಆ ನಾಯಕನೇ ಗೌತಮ ಬುದ್ಧ. ಬುದ್ಧನ ಕಾಲದಲ್ಲಿ ನಾಗ ಜನರು ಅವನ ತತ್ವಗಳನ್ನು ಏಷ್ಯಾಖಂಡದಾಂದ್ಯಂತ ಪ್ರಚುರಪಡಿಸಿದರು. ಅಂತಹ ಶ್ರೇಷ್ಠ ನಾಗ ಜನಾಂಗಕ್ಕೆ ಸೇರಿದವರು ನಾವು" ಎಂದು ಅಂಬೇಡ್ಕರರು ತನ್ನ ಸಮುದಾಯದ ಭವ್ಯ ಇತಿಹಾಸವನ್ನು ಬುದ್ಧನ ಜೊತೆ ಲಿಂಕ್ ಮಾಡುತ್ತಾರೆ. ತನ್ಮೂಲಕ ತಾನೇಕೆ? ಜೊತೆಗೆ ತನ್ನ ಸಮುದಾಯವೇಕೆ ಬೌದ್ಧ ಧರ್ಮ ಸ್ವೀಕರಿಸಬೇಕು? ಎಂದು ಇಡೀ ಜಗತ್ತಿಗೆ ಐತಿಹಾಸಿಕ ಸಾಕ್ಷಿಗಳೊಂದಿಗೆ ಸಾರಿ ಹೇಳುತ್ತಾರೆ.

ಈಗ ಹೇಳಿ ಅಂಬೇಡ್ಕರ್ ಕಾಟಾಚಾರಕ್ಕೆ ಬೌದ್ಧ ಧರ್ಮ ಸ್ವೀಕರಿಸಿದರೇ? ಕಾಟಾಚಾರ? ಅಂಬೇಡ್ಕರರ ಡಿಕ್ಷನರಿಯಲ್ಲಿ ಆ ಪದಕ್ಕೆ ಅರ್ಥವೇ ಇಲ್ಲವೇನೋ? ಯಾಕೆಂದರೆ ತಮ್ಮ ಜೀವನದ ಪ್ರತಿಯೊಂದು ಕ್ಷಣವನ್ನು ಅಂಬೇಡ್ಕರರು ಅಳೆದು ಸುರಿದು ಬದುಕಿದ್ದಾರೆ. ಹೆಜ್ಜೆ ಹೆಜ್ಜೆಗೂ ತಮ್ಮ ಜೀವನವನ್ನು ತ್ಯಾಗಮಾಡಿ ತನ್ನ ಸಮುದಾಯದ ಏಳ್ಗೆಗಾಗಿ ಒಟ್ಟಾರೆ ಮಾನವಪರ ಹಕ್ಕುಗಳಿಗಾಗಿ ದುಡಿದಿದ್ದಾರೆ. ಅಂತಹ ಹುಟ್ಟು ಹೋರಾಟಗಾರ ತನ್ನ ನಿರಂತರ ಹೋರಾಟದ ನಡುವೆಯೂ ಧರ್ಮವೊಂದನ್ನು ಪುನರು ಜ್ಜೀವನಗೊಳಿಸಿದ್ದಿದೆಯಲ್ಲ? ಅದು simply superb! ಹಾಗಂದರೂ ಕೂಡ ತಪ್ಪಾಗುತ್ತದೆ. ಏಕೆಂದರೆ ಅಂಬೇಡ್ಕರರ ಸಾಧನೆಯನ್ನು ವರ್ಣಿಸಲು ಪದಗಳೇ ಸಾಲದು.

ಕಡೆಯದಾಗಿ ಹೇಳುವುದಾದರೆ ಅಂಬೇಡ್ಕರರು ಬೌದ್ಧ ಧರ್ಮದತ್ತ ಆಕರ್ಷಿತರಾದದ್ದು ಬುದ್ಧ ಮತ್ತು ಆತನ ಧರ್ಮದ ಶ್ರೇಷ್ಠತನದಿಂದಾಗಿ. ಇಂತಹ ಶ್ರೇಷ್ಠತನವನ್ನು ಹೀಗಳೆದವರನ್ನು ಕೂಡ ಅವರು ಸುಮ್ಮನೆ ಬಿಟ್ಟಿಲ್ಲ. ಏಕೆಂದರೆ ಮೇ 24, 1956ರಂದು ಬುದ್ಧನ ಅಹಿಂಸಾ ತತ್ವದ ಬಗ್ಗೆ ಟೀಕೆ ಮಾಡಿದ್ದ ವೀರ್ ಸಾವರ್ಕರ್ ಬರಹಗಳಿಗೆ ಉಗ್ರವಾಗಿ ಉತ್ತರಿಸುತ್ತಾ ಅಂಬೇಡ್ಕರ್‌ರವರು "ಹಿಂದೂ ಧರ್ಮ ದೇವರನ್ನು ನಂಬುತ್ತದೆ, ಆದರೆ ಬೌದ್ಧ ಧರ್ಮ ನಂಬುವುದಿಲ್ಲ. ಹಿಂದೂ ಧರ್ಮ ಅತ್ಮವನ್ನು ನಂಬುತ್ತದೆ ಆದರೆ ಬೌದ್ಧ ಧರ್ಮದ ಪ್ರಕಾರ ಆತ್ಮವೆಂಬುದೇ ಇಲ್ಲ! ಹಿಂದೂ ಧರ್ಮ ಚಾತುರ್ವರ್ಣ ಮತ್ತು ಜಾತಿಪದ್ಧತಿಯನ್ನು ನಂಬುತ್ತದೆ ಆದರೆ ಬೌದ್ಧ ಧರ್ಮದಲ್ಲಿ ಚಾತುರ್ವರ್ಣ ಮತ್ತು ಜಾತಿ ಪದ್ಧತಿಗೆ ಅವಕಾಶವೇ ಇಲ್ಲ" ಆದ್ದರಿಂದ ತಾನು ಮತ್ತು ತನ್ನ ಸಮುದಾಯ ಬೌದ್ಧ ಧರ್ಮವನ್ನು ಸ್ವೀಕರಿಸುವುದಾಗಿ ಅಂಬೇಡ್ಕರ್‌ರವರು ಸಾವರ್ಕರ್‌ರಂತಹ ಹಿಂದೂತ್ವವಾದಿಗಳಿಗೆ ಚುಚ್ಚಿ ಹೇಳುತ್ತಾರೆ.

ಹಾಗೆ ಹೇಳುವ ಭರದಲ್ಲಿ ಬೌದ್ಧ ಧರ್ಮವನ್ನು ಸ್ವೀಕರಿಸುವ ತಾನು ಮತ್ತು ತನ್ನವರನ್ನು "ಹಳ್ಳಕ್ಕೆ ಬೀಳುತ್ತಿದ್ದೀರಿ" ಎಂದ ಹಿಂದೂತ್ವವಾದಿಗಳಿಗೆ ಅಷ್ಟೆ ಸ್ಪೀಡಾಗಿ ಉತ್ತರಿಸಿದ ಅಂಬೇಡ್ಕರ್‌ರವರು "ನನ್ನನ್ನು ಟೀಕಿಸುವವರು ನನ್ನನ್ನು ಒಂಟಿಯಾಗಿರಲು ಬಿಡಿ. ನಾನು ಮತ್ತು ನನ್ನ ಜನ ಹಳ್ಳಕ್ಕೆ ಬಿದ್ದರೂ ಪರವಾಗಿಲ್ಲ ಏಕೆಂದರೆ ಹಾಗೆ ಹಳ್ಳಕ್ಕೆ ಬೀಳುವ ಬಿದ್ದು ಏಳುವ ಸ್ವಾತಂತ್ರ್ಯ ನಮಗೆ ಇದ್ದೆ ಇದೆ! ಬೇರೆಯವರು ಅದರ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ." ಮುಂದುವರಿದು ಅವರು," ಹಾಗೆ ಹೇಳುವುದಾದರೆ ನನ್ನ ಜನರು ಕುರಿಗಳಿದ್ದ ಹಾಗೆ. ನಾನು ಅವರನ್ನು ಕಾಯುವ ಕುರುಬ. ಅವರಿಗೆ ನನಗಿಂತ ಶ್ರೇಷ್ಠ ಮಾರ್ಗದರ್ಶಕ ಸಿಗುತ್ತಾನೆಂದು ಖಂಡಿತವಾಗಿಯೂ ನನಗನಿಸುತ್ತಿಲ್ಲ. ಆ ಕಾರಣಕ್ಕಾಗಿ ನನ್ನನ್ನು ಅವರು ಚಾಚೂ ತಪ್ಪದೇ ಪಾಲಿಸುತ್ತಾರೆ. ಹಾಗೆ ಪಾಲಿಸುವುದರ ಮೂಲಕ ಅವರು ಶ್ರೇಷ್ಠ ಜ್ಞಾನವನ್ನು ಕೂಡ ಪಡೆಯುತ್ತಾರೆ" ಎಂದು ಅಂಬೇಡ್ಕರ್‌ರವರು ಹಿಂದೂತ್ವವಾದಿಗಳಿಗೆ ಚುರುಕು ಮುಟ್ಟಿಸುತ್ತಾರೆ.

ಒಂದಂತೂ ನಿಜ ಕ್ರಿ.ಪೂ. 543ರಿಂದ ಕ್ರಿ.ಶ. 1400ರವರೆಗೆ ಈ ಭಾರತದಲ್ಲಿ ರಂಗು ರಂಗಾಗಿ ಮಿನುಗಿದ ಬುದ್ಧ ಧರ್ಮದ ಅವನತಿ ಹೇಗಾಯಿತೋ ಖಂಡಿತ ಗೊತ್ತಿಲ್ಲ. ಅಕಸ್ಮಾತ್ ಗೊತ್ತಿದ್ದರೂ ಅದನ್ನು ಪ್ರಸ್ತುತ ಪಡಿಸುವ ಅಗತ್ಯ ಇಲ್ಲಿ ಖಂಡಿತ ಕಾಣುತ್ತಿಲ್ಲ. ಆದರೆ ಅದಕ್ಕೆ ಜೀವಕ್ಕೆ ಜೀವಕೊಟ್ಟು, ಉಸಿರಿಗೆ ಉಸಿರು ಬೆಸೆದು ಕಾಪಾಡಿದ್ದು? ಪುನರ್ಜನ್ಮ ನೀಡಿದ್ದು? ಅಕ್ಷರಶಃ ನಿಜ ಅದು ಡಾ. ಅಂಬೇಡ್ಕರ್‌ರಲ್ಲದೇ ಬೇರಾರೂ ಅಲ್ಲ. ಸರಳವಾಗಿ ಹೇಳುವುದಾದರೆ ಕನ್ನಡದಲ್ಲಿ ಚಲನ ಚಿತ್ರವೊಂದಿದೆ "ಭೂಮಿಗೆ ಬಂದ ಭಗವಂತ" ಅಂತ. ಆ ಚಿತ್ರದಲ್ಲಿ ಭಗವಂತ ಭೂಮಿಗೆ ಬಂದನೋ? ಏನೋ? ಗೊತ್ತಿಲ್ಲ! ಆದರೆ ಅಂಬೇಡ್ಕರರಂತೂ ಭರತ ಭೂಮಿಗೆ ಬುದ್ಧನನ್ನು ಖಂಡಿತ ವಾಪಸ್ ತಂದರು. ಅವನ ಬೆಳಕಿನ ಹಣತೆಯನ್ನು ಈ ದೇಶವಾಸಿಗಳ ಬೆಚ್ಚನೆಯ ಹೃದಯದಲ್ಲಿ ಮೌನವಾಗಿ ಹಚ್ಚಿದರು. ತನ್ಮೂಲಕ ಬೋಧಿಸತ್ವ ಎಂಬ ತಮ್ಮ ಅನ್ವರ್ಥಕ್ಕೆ ಸಾಕ್ಷಿಯಾಗಿ ನಿಂತರು.

ಯಾರು ಏನೆ ಹೇಳಲಿ ಅಂಬೇಡ್ಕರರು ಅಂದು ಹಚ್ಚಿದ ಹಣತೆ ಇಂದು ದೇಶದ ಕೋಟ್ಯಾಂತರ ದಲಿತರ ಹೃದಯಗಳಲ್ಲಿ ಹಾಗೇ ಉರಿಯುತ್ತಿದೆ. ಎಲ್ಲಿ ಅಂಬೇಡ್ಕರರಿರುತ್ತಾರೋ ಅಲ್ಲಿ ಬುದ್ಧ ಎಂಬಂತಾಗಿದೆ! ಔಪಚಾರಿಕವಾಗಿ ಸ್ವೀಕರಿಸುವುದಷ್ಟೆ ಧರ್ಮವಲ್ಲ ಅನೌಪಚಾರಿಕವಾಗಿ ಹಾಗೆ ಒಪ್ಪಿಕೊಳ್ಳುವದೂ ಕೂಡ ಧರ್ಮವೇ! ಈ ನಿಟ್ಟಿನಲಿ ಅಂಬೇಡ್ಕರರು ಅಂದು ಸ್ಥಾಪಿಸಿದ ಅನೌಪಚಾರಿಕ ಬೌದ್ಧ ಧರ್ಮ ಮತ್ತಷ್ಟು ಬೆಳೆಯಲಿ ಬುದ್ಧ ನಮ್ಮೆಲ್ಲರೆದೆಯಲ್ಲಿ ನೆಲೆಗೊಳ್ಳಲಿ ಎಂಬುದಷ್ಟೆ ಸಧ್ಯದ ಕಳಕಳಿ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ಭ್ರಷ್ಟಾಚಾರ ಮುಕ್ತ ಕ್ರಾಂತಿ : ಮಳೆಯ ಹಬೆಗೆ ಎದ್ದ ಅಣಬೆಗಳು

ಸಂಪಾದಕರೊಡನೆ ಸಂವಾದ

ಸರಸ್ವತಿ ಕೆ. ಬಿ

ಪ್ರಿಯ ಸಂಪಾದಕರೇ,

"ಭ್ರಷ್ಟಗೊಳಿಸುವುದು ಅಧಿಕಾರವಲ್ಲ. ಭೀತಿ. ಅಧಿಕಾರವನ್ನು ಕಳೆದುಕೊಳ್ಳುವ ಭೀತಿ ಅದನ್ನು ಹೊಂದಿದವರನ್ನು ಭ್ರಷ್ಟಗೊಳಿಸಿದರೆ, ಅದರ ಬಾಧೆಯ ಭೀತಿ ಅದಕ್ಕೊಳಪಟ್ಟವರನ್ನು ಭ್ರಷ್ಟಗೊಳಿಸುತ್ತದೆ. ಬಹುತೇಕ ಬರ್ಮೀಯವರಿಗೆ ನಾಲ್ಕು 'ಅ-ಗತಿ', ಅಂದರೆ ನಾಲ್ಕು ಬಗೆಯ ಭ್ರಷ್ಟತೆಗಳ ಬಗ್ಗೆ ಗೊತ್ತು. 'ಚಾಂದಗತಿ'-ಇದು ಮೋಹದಿಂದ ಉಂಟಾಗುವ ಭ್ರಷ್ಟತೆ. ಲಂಚ ಇಲ್ಲವೇ ತುಂಬಾ ಪ್ರೀತಿಸುವವರ ಮೇಲಿನ ಮೋಹದಿಂದ ಸರಿದಾರಿಯನ್ನು ಬಿಟ್ಟು ನಡೆಯುವುದೇ ಈ ಭ್ರಷ್ಟತೆ. 'ದೋಸಗತಿ' ತಮಗಾಗದವರ ಮೇಲೆ ಹಗೆ ಸಾಧಿಸಲು ತಪ್ಪುದಾರಿ ಹಿಡಿಯುವುದು. 'ಲೋಗಗತಿ'-ಅಭ್ಯಾಸದಿಂದ ದಾರಿ ತಪ್ಪುವುದು. ಕೊನೆಯದಾಗಿ 'ಭಯಗತಿ'- ಭಯವು ಎಲ್ಲ ಬಗೆಯ ವಿವೇಚನೆಯನ್ನು ನಾಶ ಮಾಡುತ್ತದೆ. ಇದು ಇತರ ಮೂರು ಭ್ರಷ್ಟತೆಗಳ ಮೂಲ ಎಂದೇ ಹೇಳಬಹುದು."

-ಅಂಗ್ ಸಾನ್ ಸೂಕಿ

ಈ ಭಯ ಮುಕ್ತ ಸ್ಥಿತಿಯು ಬಾಳಿರುವ ಬಾಳಿನ ಬೆಳಕು. ಅಹಿಂಸಾ ಹೋರಾಟಕ್ಕೆ ಈ ಬೆಳಕು ತೋರುವ ಹಾದಿಯಿಂದಲೇ ಚೈತನ್ಯ ದೊರೆಯುವುದು. ನಾವು ಬಾಳುವ ಬದುಕು ಕಟ್ಟಲ್ಪಡುವುದು ಕೇವಲ ಐಶಾರಾಮಿ ಜೀವನದ ಕನಸಿನಿಂದಲ್ಲ. ಪ್ರಜಾಪ್ರಭುತ್ವದ ಬದುಕು ಅವಲಂಬಿಸುವುದು ಪರಸ್ಪರ ಪೂರಕವಾದ ಹೊಂದಾಣಿಕೆಯಿಂದ. ಪ್ರಕೃತಿ ಸಹಜವಾದ ಈ ಹೊಂದಾಣಿಕೆಯು ಬಂಡಾಳಶಾಹಿಯು ವ್ಯವಹರಿಸುವ ರೀತಿಗಿಂತ ಸಂಪೂರ್ಣ ಭಿನ್ನವಾಗಿರುತ್ತದೆ.

ಬಂಡವಾಳಶಾಹಿ ಸಮಾಜವು ಬದುಕನ್ನು ಅಧಿಕಾರ ಕೇಂದ್ರಗಳ ನಿರ್ವಹಣೆಗೆ ಪೂರಕವಾಗುವಂತೆ ವ್ಯವಸ್ಥಿತವಾಗಿ ಯೋಜಿಸುತ್ತವೆ. ಈ ಯೋಜನೆಯಲ್ಲಿ ಲಾಭಪಡೆಯುವವರು ಬಂಡವಾಳಶಾಹಿಗಳು ಮತ್ತು ಅಧಿಕಾರಶಾಹಿಗಳು. ಪ್ರಜೆಗಳು ಹಾಗು ಸಾಮಾಜಿಕ ಪರಿಸರದ ಹೊಂದಾಣಿಕೆ ಅಂದರೆ ನೆಲ, ನೀರು, ಗಾಳಿ, ಸಮಸ್ತ ಜೀವರಾಶಿ ಹಾಗು ಮನುಷ್ಯನ ಹೊಂದಾಣಿಕೆಯು ಉಪೇಕ್ಷಿಸಲ್ಪಡುವುದೂ ಅಲ್ಲದೆ ವ್ಯವಸ್ಥಿಯವಾದ ಶೋಷಣೆಗೂ ಒಳಗಾಗುವುದು. ಪರಿಸರದ ಅಖಂಡ ಐಕ್ಯತೆಯಲ್ಲಿ ಮಾರುವುದು, ಕೊಳ್ಳುವುದು, ಸರಕಾಗುವುದು, ಬಿಕರಿಯಾಗುವುದು ಅಪರಿಚಿತವಾದರೆ, ಬಂಡವಾಳಶಾಹಿ ಸಮಾಜದಲ್ಲಿ ಹಾಗೆ ಬದುಕುವುದೇ ಜೀವನದ ಮಹೋನ್ನತ ಧ್ಯೇಯವಾಗುತ್ತದೆ. ನಮ್ಮ ಮಕ್ಕಳು ಹಣಗಳಿಸುವ/ಲಾಭಗಳಿಸುವ ಸಂಪಾದನೆಗೆ (ಉದಾ: ಇಂಜಿನಿಯರ್, ಡಾಕ್ಟರ್, ಸಾಫ್ಟ್‌ವೇರ್ ಉದ್ಯೋಗಿ ಇತ್ಯಾದಿ) ಬೇಕಾದ ಕೌಶಲ್ಯವನ್ನೇ ಗಳಿಸಬೇಕೆಂಬ ಹಠ ಭಯದ, ಅಭದ್ರತೆಯ ನೆಲೆಯಿಂದ ನಿರ್ಮಾಣವಾದದ್ದು. ಜೀವನ ಸುಬದ್ರವಾಗಿರಲಿ ಎಂದು ಕಂಡ ಕಂಡ ದೇವರುಗಳಿಗೆ ಹರಸಿಕೊಂಡು, ಯಜ್ಞ, ಯಾಗ, ಜ್ಯೋತಿಷ್ಯರ ಭವಿಷ್ಯಗಳು ನೆಮ್ಮದಿ ತರುತ್ತವೆ ಎಂಬ ಭ್ರಮೆಯೂ, ಶಾಪಿಂಗ್‌ಮಾಲ್‌ಗಳಲ್ಲಿ ಹುಚ್ಚು ಹಿಡಿದವರಂತೆ ಖರೀದಿಸುವ ಆವೇಶವೂ ಈ ಭಯದಿಂದಲೇ ಜಾಗ್ರತವಾದದ್ದು ಎನಿಸುತ್ತದೆ.

ನಮ್ಮನ್ನು ರಕ್ಷಿಸುವುದು ಯಾವುದೇ ನಾಯಕ, ದೇವರು ಅಥವಾ ಅಧಿಕಾರವಲ್ಲ ಬದಲಿಗೆ ಸಾಮಾಜಿಕ, ಪ್ರಾಕೃತಿಕ ಪರಿಸರದ ಆರೋಗ್ಯಕರ ಅಸ್ತಿತ್ವಕ್ಕೆ ಬೇಕಾದ ತರ್ಕ ಮತ್ತು ವಿವೇಚನೆ. ಅಂಕಗಳಿಸುವ ಮೇಲಾಟದಲ್ಲಿ ನಮ್ಮ ಯುವಜನಾಂಗ ಸಮರ್ಥವಾಗಿ ಕಲಿಯುತ್ತಿರುವುದು ಹೇಗಾದರೂ ಲಾಭಗಳಿಸಬೇಕೆಂಬುದನ್ನೇ ಹೊರತು ನೆಮ್ಮದಿಯ ಬದುಕಿಗೆ ಬೇಕಾದ ಕೌಶಲ್ಯಗಳನ್ನಲ್ಲ. ಭ್ರಷ್ಟಾಚಾರ ಮುಕ್ತ ಸಮಾಜಕ್ಕೆ ಬೇಕಿರುವುದು ಭಯ ಮುಕ್ತ ಪ್ರಜೆಗಳ ಸೈನ್ಯ. ಇದು Candle light road showಗಳನ್ನು ಮಾಡಿದಷ್ಟು ಸುಲಭವಲ್ಲ. ಮಿಲಿಟರಿ ದೌರ್ಜನ್ಯ ವಿರೋಧಿಸಿ ಐರೋಮ್ ಶರ್ಮಿಳರವರ ಹತ್ತು ವರುಷದ ಉಪವಾಸವಾಗಲೀ, ಕೆರೆ ಉಳಿಸಿ ಚಳವಳಿಗಳಾಗಲೀ, ಅಣ್ಣಾ ಹಜಾರೆ ಅವರ ಹೋರಾಟಕ್ಕಿಂತ ಯಾವುದೇ ರೀತಿ ಕಮ್ಮಿಯಿಲ್ಲ. ಕ್ರಾಂತಿಯ ಮಳೆಯಲ್ಲಿ ಅರಳುವ ಧಿಕ್ಕಾರದ ಧ್ವನಿಯು ವಿಡಂಬನಾ ಸಾಹಿತ್ಯವಾಗಿ, ಕ್ರಾಂತಿಗೀತೆಗಳಾಗಿ, ಪ್ರತಿಭಟನಾ ಆಚರಣೆಗಳಾಗಿ ಭಾರತೀಯ ಸಂಸ್ಕೃತಿಯಲ್ಲಿ ನೆಲೆಗೊಂಡಿವೆ. ಹಣಗಳಿಸುವ ಉದ್ಯೋಗಗಳಂತೆಯೇ, ಪಕ್ಷಿವೀಕ್ಷಣೆಯೂ, ತೋಟಗಾರಿಕೆಯೂ, ಹೈನುಗಾರಿಕೆಯೂ, ಪ್ರಪಂಚ ಪರ್ಯಟನೆಯೂ, ಹಾಡು-ಕುಣಿತ, ಅಥವಾ ಬದುಕಿಗೆ ಪೂರಕವಾದ ಯಾವುದೇ ಸೃಜನಾತ್ಮಕ ಕೌಶಲ್ಯವೂ ನಿರುಪಯುಕ್ತವಲ್ಲ. ಹಣವೊಂದೇ ಜೀವನ ಭದ್ರತೆಯನ್ನು ನಿರ್ಧರಿಸುವ ಅಂಶವಾಗಿ ಉಳಿದಿರುವವರೆಗೂ ನಾವು ಭಯದಿಂದ, ಅಭದ್ರತೆಯಿಂದ, ತನ್ಮೂಲಕ ಭ್ರಷ್ಟಾಚಾರದಿಂದ ಮುಕ್ತವಾಗಲಾರವೆಂದು ಅನಿಸುತ್ತಿದೆ.

ನಮ್ಮ ಮಕ್ಕಳು ಕಲಿಯುವ ಕೌಶಲ್ಯಗಳು ಮಾನವ-ಪರಿಸರ ಹೊಂದಾಣಿಕೆಯನ್ನು ದೃಢಪಡಿಸಿದರೆ ಸಾಕು. ಮತ್ತು ಅಂತಹ ಬದುಕು ತಮ್ಮನ್ನು ಶ್ರೀಮಂತಗೊಳಿಸುತ್ತದೆ ಎಂಬ ನಂಬಿಕೆ ಗಳಿಸಲು ಬೇಕಾದ ಜೀವನ ವಿಧಾನಗಳು, ಚಿಂತನೆಗಳು, ಚರ್ಚೆಗಳು ನೆಡೆಯಬೇಕಿದೆ. ಹಗಾದಾಗ ಮಾತ್ರ ಭ್ರಷ್ಟಾಚಾರ ವಿರೋಧಿ ಪ್ರತಿಭಟನೆಗಳು ಕ್ರಾಂತಿ ಮಳೆಯ ಹಬೆಗೆ ಏಳುವ ಅಣಬೆಗಳಂತಾಗದೆ ಪ್ರಜಾಪ್ರಭುತ್ವಕ್ಕೆ ನೆರಳು ನೀಡುವ ಮರಗಳಂತಾಗಿ ಅಣ್ಣಾ ಹಜಾರೆಯವರ ಹೋರಾಟಕ್ಕೆ ಬಲ ಮೂಡುತ್ತದೆ.

ಇದಕ್ಕೆ ಸತ್ಯ ಹೇಳುವ, ಒಪ್ಪಿಕೊಳ್ಳುವ ಅದರಂತೆ ಬದುಕುವ ಛಲವಷ್ಟೇ ಸಾಕು. ಅಷ್ಟು ಧೈರ್ಯವಂತರೇ ನಾವು? □

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಾಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕರು

ಮಣ್ಣು ಸೇರಿದ ಹೆಣ್ಣು ಭ್ರೂಣಗಳಿಗೆ ಶ್ರದ್ಧಾಂಜಲಿ

ಶಾರದಾ ಗೋಪಾಲ

ಹೆಣ್ಣು ಭ್ರೂಣ ಹತ್ಯೆ ಎಂದ ಕೂಡಲೇ ಸ್ತ್ರೀ ರೋಗ ತಜ್ಞರು ಮತ್ತು ಅಲ್ಟ್ರಾ ಸೋನೋಗ್ರಫರುಗಳನ್ನು ಅಪರಾಧಿಗಳ ಕಟಕಟೆಯಲ್ಲಿ ತಂದು ನಿಲ್ಲಿಸುವುದು ಸಾಮಾನ್ಯ. ತಮ್ಮ ಮೇಲೆ ಆರೋಪ ಬಂದಾಕ್ಷಣ ಅವರೂ ಮೈಯೆಲ್ಲ ಮುಳ್ಳಾಗಿಸಿಕೊಂಡು ಪ್ರತಿರೋಧಕ್ಕೆ ನಿಲ್ಲುತ್ತಾರೆ. ಮೋಟರ್ ಸೈಕಲ್ಲುಗಳ ಮೇಲೆ ಮಶೀನುಗಳನ್ನಿಟ್ಟುಕೊಂಡು ಹಳ್ಳಿ ಹಳ್ಳಿ ತಿರುಗುವ ನಕಲಿ ವೈದ್ಯರತ್ತ ಬೊಟ್ಟು ಮಾಡುತ್ತಾರೆ. 'ಸಮಾಜವನ್ನು ಮೊದಲು ಸುಧಾರಿಸಿ' ಎಂದು ಪ್ರತಿ ಸವಾಲನ್ನೆಸೆಯುತ್ತಾರೆ. ಇದು ಹೆಗಲಿಗೆ ಬಂದ ಜವಾಬ್ದಾರಿಯನ್ನು ಬೇರೆಯವರಿಗೆ ದಾಟಿಸಿದ ಕತೆ. ವಾದ ಪ್ರತಿವಾದಗಳಲ್ಲಿ ಜಗಳ ಮುಂದುವರೆಯುತ್ತದೆ ಹೊರತು ತಮ್ಮನ್ನು ತಾವು ಪ್ರಶ್ನಿಸಿಕೊಳ್ಳುವ ಗೋಜಿಗೆ ಯಾರೂ ಹೋಗುವುದಿಲ್ಲ. ಸಮಸ್ಯೆಯ ವಿಶ್ಲೇಷಣೆಯ ಹತ್ತಿರಕ್ಕೂ ತಲುಪುವುದಿಲ್ಲ.

ಭಾರತದ ಜನಗಣತಿ ಮುಗಿದಿದೆ. ನಿರೀಕ್ಷಿಸಿದ್ದಂತೆಯೇ ಹೆಣ್ಣು ಮಕ್ಕಳ ಸಂಖ್ಯೆ ಮತ್ತೂ ಕುಸಿದಿದೆ. ಲಿಂಗಾನುಪಾತ 927 ಇದ್ದುದು 914 ಕ್ಕಿಳಿದು ಸಮಾಜವು ಅಧಃಪತನದತ್ತ ಸಾಗುತ್ತಿರುವುದರತ್ತ ಮತ್ತೊಮ್ಮೆ ನಮ್ಮ ಗಮನವನ್ನು ಸೆಳೆದಿದೆ. ಬಿಹಾರ, ಗುಜರಾತ, ಜಮ್ಮು ಕಾಶ್ಮೀರ, ನಾಗಾಲ್ಯಾಂಡ್ ಕಡೆಗೆ ನಮ್ಮ ಕರ್ನಾಟಕದಲ್ಲೂ ಸಹ ಹುಟ್ಟುತ್ತಿರುವ ಹೆಣ್ಣು ಶಿಶುಗಳ ಸಂಖ್ಯೆ ಇಳಿಮುಖವಾಗುತ್ತಲೇ ಸಾಗಿದೆ. ಕರ್ನಾಟಕದಲ್ಲಿ 3 ಕೋಟಿ 10 ಲಕ್ಷ, 57 ಸಾವಿರದ 742 ಪುರುಷರು ಇದ್ದರೆ ಹೆಂಗಸರ ಸಂಖ್ಯೆ 3 ಕೋಟಿ, 72 ಸಾವಿರದ 962. ಅಂದರೆ 84 ಸಾವಿರದ 780 ಬಾಲಕಿಯರು ನಮ್ಮೀ ಭೂಮಿಯಲ್ಲಿ ಕಣ್ಣು ಬಿಡಲಿಲ್ಲ. ಅವಕಾಶಗಳು ಸಮಾನವಾಗಿದ್ದಾಗ 1000 ಗಂಡಸರಿಗೆ 1033ರಷ್ಟು ಇರಬೇಕಾದದ್ದು ಹೆಣ್ಣು ಸಂತತಿ. ಎಲ್ಲ ಅಡೆತಡೆಗಳನ್ನು ಬದಿಗೊತ್ತಿ ಜನಿಸುವ ಹಾದಿಯಲ್ಲಿ ಗಂಡಿಗಿಂತ ಹೆಣ್ಣನ್ನು ಹೆಚ್ಚು ಸಮರ್ಥಳನ್ನಾಗಿ ಮಾಡಿಟ್ಟಿರುವುದು ಪ್ರಕೃತಿ. ಅದರಂತೆ ಲೆಕ್ಕ ಹಾಕಿದರೆ 3 ಕೋಟಿ ಹತ್ತು ಲಕ್ಷಕ್ಕೆ 87 ಸಾವಿರದ 552 ಹುಡುಗಿಯರು ಈ ಕರ್ನಾಟಕದಲ್ಲಿ ಹುಟ್ಟಬೇಕಿತ್ತು. ಆ ಎಲ್ಲ ಹೆಣ್ಣು ಭ್ರೂಣಗಳನ್ನು ಹುಟ್ಟಗೊಡದೆ ಮಸಣಕ್ಕಟ್ಟಲಾಗಿದೆ.

ಉಡುಪಿ ಮತ್ತು ದಕ್ಷಿಣ ಕನ್ನಡಗಳಲ್ಲಿ ಮಾತ್ರ ಹೆಣ್ಣುಮಕ್ಕಳ ಸಂಖ್ಯೆ ಜಾಸ್ತಿ ಇರುವುದರಿಂದ ಈ ಪಾಪದ ಹೊರೆಯಿಂದ ಆ ಜಿಲ್ಲೆಗಳು ಮುಕ್ತವಾಗಿವೆ. ಇನ್ನುಳಿದ ಜಿಲ್ಲೆಗಳಲ್ಲಿ ಹೆಣ್ಣನ್ನು ರಕ್ಷಿಸುವ ಎಷ್ಟು ಅವಕಾಶಗಳನ್ನು ಕೈ ಬಿಡಲಾಯಿತೆಂದು ಇಡೀ ಸಮಾಜವೇ ತನ್ನನ್ನು ತಾನು ಕೇಳಿಕೊಳ್ಳಬೇಕಾಗಿದೆ.

ಭಾರತದಲ್ಲಿ ಲಿಂಗಾನುಪಾತ ಕುಸಿಯುತ್ತಿರುವುದನ್ನು ಗಂಭೀರವಾಗಿ ತೆಗೆದುಕೊಂಡು 'ಭ್ರೂಣ ಲಿಂಗ ಪತ್ತೆ ಮತ್ತು ಹೆಣ್ಣು ಭ್ರೂಣ ಹತ್ಯೆ ತಡೆ' (ಪಿ.ಸಿ.ಪಿ.ಎನ್. ಡಿ.ಟಿ.) ಕಾನೂನನ್ನು ಜಾರಿಯಲ್ಲಿ ತರಲಾಯಿತು. ಜಿಲ್ಲಾ ಆರೋಗ್ಯಾಧಿಕಾರಿಗಳ ನೇತೃತ್ವದಲ್ಲಿ ಪ್ರತಿ ಜಿಲ್ಲೆಗೊಂದರಂತೆ ಪಿ.ಸಿ.ಪಿ.ಎನ್.ಡಿ.ಟಿ. ಸಮಿತಿಗಳನ್ನು ನೇಮಿಸಲಾಯಿತು. ಇಂದು ತಜ್ಞ ವೈದ್ಯರು, ಸ್ತ್ರೀ ರೋಗ ತಜ್ಞರು, ವಕೀಲರು ಮತ್ತು ಸಾಮಾಜಿಕ ಕಾರ್ಯಕರ್ತರನ್ನೊಳಗೊಂಡ ಸಮಿತಿಯೊಂದು ಪ್ರತಿ ಜಿಲ್ಲೆಯಲ್ಲೂ ಹೆಣ್ಣು ಭ್ರೂಣ ಹತ್ಯೆ ತಡೆಗಾಗಿ ಇದೆ. ಎರಡು ತಿಂಗಳಿಗೊಮ್ಮೆ ಸಮಿತಿ ಸಭೆ ಸೇರುತ್ತದೆ.

ಹೆಣ್ಣು ಭ್ರೂಣ ಹತ್ಯೆ ಎಂದ ಕೂಡಲೇ ಸ್ತ್ರೀ ರೋಗ ತಜ್ಞರು ಮತ್ತು ಅಲ್ಟ್ರಾ ಸೋನೋಗ್ರಫರುಗಳನ್ನು ಅಪರಾಧಿಗಳ ಕಟಕಟೆಯಲ್ಲಿ ತಂದು ನಿಲ್ಲಿಸುವುದು ಸಾಮಾನ್ಯ. ತಮ್ಮ ಮೇಲೆ ಆರೋಪ ಬಂದಾಕ್ಷಣ ಅವರೂ ಮೈಯೆಲ್ಲ ಮುಳ್ಳಾಗಿಸಿಕೊಂಡು ಪ್ರತಿರೋಧಕ್ಕೆ ನಿಲ್ಲುತ್ತಾರೆ. ಮೋಟರ್ ಸೈಕಲ್ಲುಗಳ ಮೇಲೆ ಮಶೀನುಗಳನ್ನಿಟ್ಟುಕೊಂಡು ಹಳ್ಳಿ ಹಳ್ಳಿ ತಿರುಗುವ ನಕಲಿ ವೈದ್ಯರತ್ತ ಬೊಟ್ಟು ಮಾಡುತ್ತಾರೆ. 'ಸಮಾಜವನ್ನು ಮೊದಲು ಸುಧಾರಿಸಿ' ಎಂದು ಪ್ರತಿ ಸವಾಲನ್ನೆಸೆಯುತ್ತಾರೆ. ಇದು ಹೆಗಲಿಗೆ ಬಂದ ಜವಾಬ್ದಾರಿಯನ್ನು ಬೇರೆಯವರಿಗೆ ದಾಟಿಸಿದ ಕತೆ. ವಾದ ಪ್ರತಿವಾದಗಳಲ್ಲಿ ಜಗಳ ಮುಂದುವರೆಯುತ್ತದೆ ಹೊರತು ತಮ್ಮನ್ನು ತಾವು ಪ್ರಶ್ನಿಸಿಕೊಳ್ಳುವ ಗೋಜಿಗೆ ಯಾರೂ ಹೋಗುವುದಿಲ್ಲ. ಸಮಸ್ಯೆಯ ವಿಶ್ಲೇಷಣೆಯ ಹತ್ತಿರಕ್ಕೂ ತಲುಪುವುದಿಲ್ಲ.

ಹಾಗಾದರೆ ಜವಾಬ್ದಾರಿ ಯಾರದು? ಇಬ್ಬರದ್ದೂ ಎಂಬುದರಲ್ಲಿ ಎರಡು ಮಾತಿಲ್ಲ. ತಮ್ಮ ಪಾಲಿನ ಜವಾಬ್ದಾರಿಯನ್ನು ಯಾರು ನಿಭಾಯಿಸುತ್ತಿದ್ದಾರೆ ಎಂಬುದಷ್ಟೇ ಉತ್ತರ ಸಿಗದ ಪ್ರಶ್ನೆ. ಗರ್ಭಿಣಿಯೊಬ್ಬಳು ಲಿಂಗ ಪರೀಕ್ಷೆಗೆಂದು ಅಲ್ಟ್ರಾ ಸೋನೋಲಾಜಿಸ್ಟ್ ಅಥವಾ ಸ್ತ್ರೀ ರೋಗ ತಜ್ಞರ ಕಡೆಗೆ ಹೋಗದಂತೆ ಯಾವ ಪ್ರಯತ್ನಗಳನ್ನು ಮಾಡಲಾಗುತ್ತಿದೆ? ಕಲಿತವರಿಗೂ, ಕಲಿಯದವರಿಗೂ ಇದೊಂದು ಮಹಾ ಪಾತಕ ಕಾರ್ಯ ಎಂಬುದರ ಅರಿವು ಮೂಡಿಸಲಾಗುತ್ತಿದೆಯೇ? ಈ ಕಾರ್ಯದ ವಿರುದ್ಧ ಕಾನೂನು ಬಂದಿದೆ ಎಂದು, ಕಾನೂನಿನ ಬಗ್ಗೆ ಜನರಿಗೆ ತಿಳುವಳಿಕೆ ಮೂಡಿಸಲಾಗುತ್ತಿದೆಯೇ? ಮಹಿಳೆಯರ ಸ್ಥಾನಮಾನ ಹೆಚ್ಚಿಸುವ ದಿಕ್ಕಿನಲ್ಲಿ ಯಾವುದೇ ಪ್ರಯತ್ನ ಆಗುತ್ತಿದೆಯೇ?

ಸಮರೋಪಾದಿಯಲ್ಲಿ ಕಾರ್ಯಕ್ರಮಗಳನ್ನು ಹಾಕಬೇಕಿತ್ತು, ಕೆಲಸಗಳನ್ನು ಮಾಡಬೇಕಿತ್ತು. ಎಲ್ಲ ವಯಸ್ಸಿನ ಎಲ್ಲ ವರ್ಗದವರಿಗೂ ಮುಟ್ಟುವಂತೆ ಹಾಡು, ಬೀದಿ ನಾಟಕ, ರೇಡಿಯೋ-ಟಿವಿ ಕಾರ್ಯಕ್ರಮಗಳು, ಪ್ರಬಂಧ ಸ್ಪರ್ಧೆಗಳು, ಭಾಷಣ ಸ್ಪರ್ಧೆಗಳು, ಇಂಥ ನೂರೆಂಟು ಸಾಧನಗಳನ್ನು ಬಳಸಿಕೊಂಡು ಮಹಿಳೆಯರ ಸ್ಥಾನಮಾನದ ಬಗ್ಗೂ, ಲಿಂಗ ಸೂಕ್ಷ್ಮತೆಯ ಬಗ್ಗೂ ಮತ್ತು ಈ ಕಾನೂನಿನ ಬಗ್ಗೂ ಇನ್ನಿಲ್ಲದಷ್ಟು ಚರ್ಚೆಗಳಾಗಬೇಕಿತ್ತು. ಹೆಣ್ಣುಮಕ್ಕಳ ಸಂಖ್ಯೆ ಗಣನೀಯವಾಗಿ ಕುಗ್ಗುತ್ತಿರುವುದು, ಅದರಿಂದ ನಾಳಿನ ಸಮಾಜ ಎದುರಿಸಬಹುದಾದ ಸಮಸ್ಯೆಗಳ ಬಗ್ಗೆ ಮಹಿಳಾ ಕಾಲೇಜುಗಳಲ್ಲಷ್ಟೇ ಅಲ್ಲ, ಪುರುಷರ ಕಾಲೇಜುಗಳಲ್ಲೂ, ವೃತ್ತಿಪರ ಕಾಲೇಜುಗಳಲ್ಲೂ ಕೂಡ ಗಂಭೀರ ಚರ್ಚಾ ಗೋಷ್ಠಿಗಳು ನಡೆಯಬೇಕಿತ್ತು.

ಇಂಥಾ ಒಂದು ಕಾನೂನು ಇದೆ ಎಂಬುದು ಇಂದು ನಗರಗಳ ಸುಶಿಕ್ಷಿತ (ಅಕ್ಷರ ಬಲ್ಲಂಥ) ಮಹಿಳೆಯರಿಗೂ ಗೊತ್ತಿಲ್ಲವೆಂದರೆ ಸಾಕಷ್ಟು ಪ್ರಮಾಣದಲ್ಲಿ ಪ್ರಚಾರ ಆಗಿಲ್ಲ ಎಂದೇ ಅರ್ಥ. ಇದು ಖಂಡಿತವಾಗಿ ಪಿ.ಸಿ.ಪಿ.ಎನ್.ಡಿ.ಟಿ. ಸಮಿತಿಗಳ ಸೋಲು. ಮಶೀನಿನಲ್ಲಿ ತೋರಿಸಿದರೆ ಹೊಟ್ಟೆಯೊಳಗಿರುವ ಶಿಶು ಹೆಣ್ಣೋ ಗಂಡೋ ಎಂಬುದು ಗೊತ್ತಾಗುತ್ತದೆ, ಹೆಣ್ಣಾದರೆ ಅದನ್ನು ತೆಗೆಯಲು ಇಂತಿಂಥ ಡಾಕ್ಟರು ಸಹಾಯ ಮಾಡುತ್ತಾರೆ ಎಂಬ ವಿಚಾರ ಗುಪ್ತ ಗಾಮಿನಿಯಾಗಿ ಮನೆ ಮನೆಯನ್ನು ತಲುಪಿದೆ. ಆದರೆ ಇದೊಂದು ಶಿಕ್ಷಾರ್ಹ ಅಪರಾಧ ಎಂಬ ವಿಚಾರ ಎಷ್ಟೆಲ್ಲ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾಗ್ಯೂ ಜನಮನಕ್ಕೆ ತಲುಪಿಸಲು ಸಾಧ್ಯವಾಗುತ್ತಿಲ್ಲವಲ್ಲ? ತಡೆದು ನಿಂತಿರುವ ಅಡ್ಡಗೋಡೆ ಯಾವುದು?

ಜವಾಬ್ದಾರ ಸ್ಥಾನದಲ್ಲಿರುವವರ ಲಿಂಗ ಸೂಕ್ಷ್ಮತೆಯ ಕೊರತೆಯ ಬಗ್ಗೆ ಇಲ್ಲಿ ಪ್ರಸ್ತಾಪಿಸಲೇಬೇಕಾಗುತ್ತದೆ. ಶಿಶುಮರಣ, ತಾಯಿ ಮರಣ ತಡೆಯಲು ಮಾತೆಯರಿಗೆ ನೀಡುವ ಸೌಲಭ್ಯಗಳು ಪ್ರಹಕ ಮಾತು, ಅವಹೇಳನಕಾರಿ ಹೇಳಿಕೆಗಳಿಗೆ ಕಾರಣವಾಗುತ್ತಿವೆ. ಜನನಿಗೆ ನೀಡುವ ತಾಯ್ತನದ ಭತ್ಯೆ ತರಲು ಮೂರ್ನಾಲ್ಕು ವರ್ಷ ಪರದಾಡಿದ ಉದಾಹರಣೆಗಳಿವೆ. ಮಕ್ಕಳು ಹುಟ್ಟಿ ವರ್ಷವಾದರೂ 'ಮಡಿಲು ಕಿಟ್' ಬಂದಿರುವುದಿಲ್ಲ. ಈ ವಿಳಂಬ ಆಗಲು ಸಾವಿರ ಕಾರಣಗಳನ್ನು ಮುಂದಿಡಬಹುದಾದರೂ ಅಧಿಕಾರಿಗಳಲ್ಲಿನ ಲಿಂಗ ಸೂಕ್ಷ್ಮತೆಯ ಕೊರತೆಯೇ ಇದಕ್ಕೆ ಮೂಲಕಾರಣ. ತಾಯಿ ಮರಣ, ಶಿಶುಮರಣ, ಭ್ರೂಣ ಲಿಂಗಪತ್ತೆ ಇವನ್ನು ತಡೆಯಬೇಕು ಎಂದು ಅಧಿಕಾರದಲ್ಲಿ ಇರುವವರಿಗೆ ಎಂದಾದರೂ ನಿಜವಾಗಿ ಅನಿಸಿದ್ದಿದೆಯೇ? ಸಾಮೂಹಿಕ ಮದುವೆಗಳಲ್ಲಿ ಬಾಲ್ಯ ವಿವಾಹಗಳಾಗುವುದು ಖಚಿತ ಎಂದು ಯಾವ ಅಧಿಕಾರಿಗೆ ಗೊತ್ತಿಲ್ಲ? ಆದರೂ ಅಲ್ಲಿ ಬಾಲ್ಯ ವಿವಾಹಗಳಾಗದಂತೆ ಅವರೇಕೆ ತಡೆಯುತ್ತಿಲ್ಲ? ವರದಕ್ಷಿಣೆ ಸಾವಿನ ಕೇಸು ಬಂದಾಗ ಎಷ್ಟು ಪೊಲೀಸ್ ಅಧಿಕಾರಿಗಳು ಆದ್ಯತೆಯ ಮೇಲೆ ಎಫ್.ಐ.ಆರ್ ದಾಖಲಿಸುತ್ತಾರೆ? ಇವೆಲ್ಲವೂ ಹೆಣ್ಣು ಭ್ರೂಣ ಹತ್ಯೆಗೆ ನಿಕಟ ಸಂಬಂಧವಿರುವಂಥವು ಎಂದು ಇವರಿಗೆಲ್ಲ ಅರ್ಥವಾಗುವುದು ಯಾವ ಕಾಲಕ್ಕೆ?

(19ನೇ ಪುಟಕ್ಕೆ)

ಮಿಲಿಂದ ಪ್ರಶ್ನೆ–ಮೂರು ಪ್ರಶ್ನೋತ್ತರಗಳು

ಎಸ್. ನಟರಾಜ ಬೂದಾಳು

'ಮಿಲಿಂದ ಪ್ರಶ್ನೆ' ಕೃತಿಗೆ ಬೌದ್ಧ ದರ್ಶನದ ಸಂದರ್ಭದಲ್ಲಿ ಪ್ರಮುಖ ಸ್ಥಾನವಿದೆ. ಇದು ಬೌದ್ಧ ಕೇಂದ್ರ ತಾತ್ವಿಕತೆಯ ಕಡೆಗೆ ಕೈಮಾಡುವ ಕೃತಿ. ಬೌದ್ಧ ಕೇಂದ್ರ ತಾತ್ವಿಕತೆಯ ಕಡೆಗೆ ನಡೆಯುತ್ತಾ ನಡೆಯುತ್ತಾ ಹೀನಯಾನ–ಮಹಾಯಾನವೆಂಬ ವಿಭಜನೆಗಳು, ನಾಲ್ಕು ಚಿಂತನಾ ಪ್ರಸ್ಥಾನಗಳ ತಾತ್ವಿಕ ಕಿತ್ತಾಟಗಳು – ಇವ್ಯಾವೂ ಉಳಿಯಲಾರವು. ಸರಳವಾಗಿ ಪ್ರಶ್ನೋತ್ತರ ರೂಪದಲ್ಲಿ ಬೌದ್ಧ ದರ್ಶನದ ಪ್ರಮುಖ ನಿಲುವುಗಳನ್ನು ಮಂಡಿಸುವ ಈ ಕೃತಿಯ ಕೆಲವು ಪ್ರಶ್ನೋತ್ತರಗಳನ್ನು ಕನ್ನಡದ ಭಾಷಾಜಾಯಮಾನಕ್ಕೆ ಒಗ್ಗಿಸಿ ನೀಡುವ ಪ್ರಯತ್ನ ಇದು. ಇಲ್ಲಿ ಪ್ರಶ್ನೆ ಕೇಳುವವನು ಮಿಲಿಂದನೆಂಬ ಮಹಾರಾಜ, ಉತ್ತರಿಸುವವನು ನಾಗಸೇನನೆಂಬ ಬೌದ್ಧ ಭಿಕ್ಕು.

ಮರುಜನ್ಮದ ಬಗೆಗೆ ಬೌದ್ಧ ದರ್ಶನದ ನಿಲುವೇನು? ಎಂಬ ಪ್ರಶ್ನೆಯನ್ನು ತಿರು ತಿರುಗಿ ಕೇಳಲಾಗುತ್ತದೆ. ಹೀಗೆ ಕೇಳುವವರಲ್ಲಿ ಸಾಮಾನ್ಯವಾಗಿ ಒಂದು ಪೂರ್ವ ತಿಳುವಳಿಕೆಯಿರು ತ್ತದೆ. ಅದೇನೆಂದರೆ, ಪ್ರತಿಯೊಂದು 'ಜನ್ಮವೂ' ಸ್ವತಂತ್ರವಾದುದು ಮತ್ತು ಇಲ್ಲಿಂದ ಇಲ್ಲಿಯವರೆಗೆ 'ಈ ಜನ್ಮ' ಎಂದು ಗುರುತಿಸಬಹುದೆಂದು ನಂಬಿರುತ್ತಾರೆ. ಬೌದ್ಧ ದರ್ಶನವು ಲೋಕವನ್ನು ನಿರಂತರವಾದ ಪ್ರವಾಹವೆಂದು ವಿವರಿಸಿರುವುದರಿಂದ, ಇಲ್ಲಿನ ಎಲ್ಲ ಜೀವಿಗಳು ಈ ಪ್ರವಾಹದಲ್ಲಿ ರೂಪುಗೊಳ್ಳುವ ಮತ್ತು ವಿಸರ್ಜನೆಗೊಳ್ಳುವ 'ಪ್ರಕ್ರಿಯೆ' ಮಾತ್ರ. ಹಾಗಾಗಿ ಇಲ್ಲಿ ಯಾವ ಜೀವಿಗೂ ಆರಂಭ ಮತ್ತು ಅಂತ್ಯವೆಂದು ಕರೆ ಯಬಹುದಾದ ನಿಶ್ಚಿತ ಘಟನೆಗಳುಳ್ಳ 'ಜೀವಮಾನ'ವೆಂಬುದು ಇಲ್ಲ. ಇನ್ನೂ ಮುಖ್ಯವಾಗಿ ಒಂದು ಜೀವಿಯಲ್ಲಿ ನಿರಂತ ರವಾಗಿ ಮತ್ತು ಸ್ವತಂತ್ರವಾಗಿ ಮುಂದುವರಿ ಯುವ ಸ್ವತಂತ್ರವಾದ ಆತ್ಮವೆಂಬುದು ಇಲ್ಲ. ಎಲ್ಲವೂ ನಿರಂತರ ಏರ್ಪಡುತ್ತಲೇ ಇರುವ ಸಂಬಂಧಗಳು ಮಾತ್ರ. ಹಾಗಾಗಿ ಈ ಸಂಬಂಧದ ಸ್ವರೂಪವನ್ನು ಮಾತ್ರ ವಿವರಿ ಸಲು ಸಾಧ್ಯ. ಈ ಪ್ರಶ್ನೋತ್ತರ ಅದನ್ನು ಖಚಿತಪಡಿಸುತ್ತದೆ.

ಮಿಲಿಂದ: ಭನ್ತೇ ನಾಗಸೇನ, ಹುಟ್ಟುವ ಯಾರೇ ಆಗಲಿ, ಅವನೇ ಆಗಿರುತ್ತಾನೋ ಅಥವಾ ಬೇರೆಯವನೋ?

ನಾಗಸೇನ: "ಅವನೂ ಅಲ್ಲ, ಬೇರೆಯೂ ಅಲ್ಲ, ಮಹಾರಾಜ"

ಮಿಲಿಂದ: ಹಾಗೆಂದರೆ? ಉದಾಹರಣೆಯೊಂದನ್ನು ಕೊಡು.

ನಾಗಸೇನ: ಮಹಾರಾಜ, ನೀನು ಹಿಂದೆ ಮಗುವಾಗಿದ್ದಾಗ ತೆವಳುತ್ತಾ, ತೊದಲುತ್ತಾ, ಬೆನ್ನಡಿಯಾಗಿ ಮಲಗಿದ್ದೆ. ಈಗ ದೊಡ್ಡವನಾಗಿ ಪ್ರಶ್ನೆ ಕೇಳುತ್ತಾ ನಿಂತಿದ್ದೀಯ. ಆ ಮಗು ಮತ್ತು ದೊಡ್ಡವನಾಗಿರುವ ನೀನು ಒಬ್ಬನೆಯೋ ಬೇರೆ ಬೇರೆಯೋ?

ಮಿಲಿಂದ: ಆ ಮಗು ಬೇರೆ ನಾನು ಬೇರೆ ಭನ್ತೇ.

ನಾಗಸೇನ: ಆ ಮಗು ಬೇರೆ ನೀನು ಬೇರೆ ಅನ್ನುವಿಯಾದರೆ, ಆ ಮಗುವಿನ ತಂದೆ ತಾಯಿಗಳು ನಿನ್ನ ತಂದೆ ತಾಯಿಗಳಲ್ಲ, ಆ ಮಗುವಿನ ಗುರು ನಿನ್ನ ಗುರುವಲ್ಲ. ಆಗಿನ ಯಾವ ತಿಳಿವೂ ನಿನ್ನದಲ್ಲ – ಎಂದಾಗುತ್ತದೆ. ಏನು ಮಹಾರಾಜ? ಒಂದು ತಿಂಗಳ ಗರ್ಭದ ತಾಯಿ ಬೇರೆ, ಎರಡು ತಿಂಗಳ ಗರ್ಭದ ತಾಯಿ ಬೇರೆ, ಮೂರು ತಿಂಗಳ ಗರ್ಭದ ತಾಯಿ ಬೇರೆಯೆ? ಚಿಕ್ಕವನ ತಾಯಿ ಬೇರೆ ದೊಡ್ಡವನ ತಾಯಿ ಬೇರೆಯೆ?

ಮಿಲಿಂದ: ಅಲ್ಲ ಭನ್ತೇ, ಆದರೆ ಇದನ್ನು ನೀವು ಹೇಗೆ ವಿವರಿಸುವಿರಿ?

ನಾಗಸೇನ: ಬೇರೆ ಬೇರೆಯೂ ಅಲ್ಲ ಹಾಗೆಯೇ ಒಂದೇ ಅಲ್ಲ. ಈ ದೇಹವೆಂಬ ಪ್ರಕ್ರಿಯೆಯಲ್ಲಿ' ಇವೆಲ್ಲ ಸಂಗ್ರಹವಾಗುತ್ತ, ವಿಸರ್ಜನೆಯಾಗುತ್ತ ಹೋಗುತ್ತಿರುವ ಸಂಬಂಧಗಳು. ಇದೊಂದು ಪ್ರವಾಹ ಮಾತ್ರ. ಇದನ್ನು ಒಂದು ಅಥವಾ ಬೇರೆ ಬೇರೆ ಎಂದು ವಿವರಿಸಲಾಗದು.

ಮಿಲಿಂದ: ಮತ್ತಷ್ಟು ಉದಾಹರಣೆ ಕೊಡು

ನಾಗಸೇನ: ಯಾರಾದರೊಬ್ಬನು ರಾತ್ರಿಯೆಲ್ಲ ಉರಿಯಲಿ ಎಂದು ದೀಪ ವೊಂದನ್ನು ಹತ್ತಿಸಿದರೆ ಮೊದಲ ಜಾವದಲ್ಲಿ ಆ ದೀಪವು ಉಂಟು ಮಾಡಿದ ಜ್ವಾಲೆ, ಮತ್ತು ಎರಡನೆಯ ಜಾವದಲ್ಲಿ ಅದು ಉಂಟುಮಾಡಿದ ಜ್ವಾಲೆ ಒಂದೆಯೋ ಬೇರೆ ಬೇರೆಯೋ?

ಮಿಲಿಂದ: ಒಂದೇ ಭನ್ತೇ.

ನಾಗಸೇನ: ಒಂದೇ ಅಲ್ಲ, ಬೇರೆ ಬೇರೆಯೂ ಅಲ್ಲ. ದೀಪವೆಂಬುದೊಂದು ಪ್ರಕ್ರಿಯೆ. ಎಲ್ಲಿಯವರೆಗೆ ದೀಪ ಉರಿಯಲು ಬೇಕಾದ ಎಲ್ಲವೂ ಕೂಡಿ ಬರುವವೋ ಅಲ್ಲಿಯವರೆಗೆ ಅದು ನಿರಂತರವಾಗಿ ಉರಿಯುತ್ತದೆ. ಭಂಗಗೊಂಡಾಗ ಆರಿ ಹೋಗುತ್ತದೆ. ಹಾಗೆ ಉರಿಯುವಾಗ ಕೂಡಿಕೊಂಡಿರುವ 'ಅಂಶಗಳ' ಧರ್ಮವು (ಗುಣಸ್ವಭಾವಗಳು) ಪ್ರದರ್ಶಿತವಾಗುತ್ತದೆ. ಮನುಷ್ಯ ಜೀವಿಯೂ ಅಷ್ಟೆ. ಅವನು ಉಂಟಾಗಲು ಸೇರಿಕೊಂಡಿರುವ ಅಂಶಗಳ ಗುಣಸ್ವ ಭಾವಗಳು 'ಪರಿಸ್ಥಿತಿ'ಯ ನ್ನಾಧರಿಸಿ ಪ್ರದರ್ಶಿತ ವಾಗುತ್ತವೆ.



ಮಿಲಿಂದ: ನೀನು ಜಾಣ ಭನ್ತೇ. ಅಂದರೆ ಈ ಜೀವ ಪ್ರವಾ ಹದಲ್ಲಿ ಇದುವರೆಗೆ ಸಂಗ್ರಹಗೊಂಡಿರುವ ಅಂಶಗಳ ಪ್ರಭಾವ ಇದ್ದೇ ಇರುತ್ತದೆ ಅಲ್ಲವೆ?

ನಾಗಸೇನ: ನಿಜ. ವೀಣೆಗೆ ಪತ್ರವಿಲ್ಲದಿದ್ದರೆ, ಚರ್ಮ ವಿಲ್ಲದಿದ್ದರೆ, ದ್ರೋಣಿಯಿಲ್ಲದಿದ್ದರೆ, ದಂಡ ವಿಲ್ಲದಿದ್ದರೆ, ಉಪವೀಣೆಯಿಲ್ಲದಿದ್ದರೆ, ತಂತಿಯಿಲ್ಲದಿದ್ದರೆ; ಕಮಾನು ಇಲ್ಲದಿದ್ದರೆ, ಪುರುಷನ ಸಾಮರ್ಥ್ಯ ಪ್ರಯತ್ನಗಳಿಲ್ಲದಿದ್ದರೆ, ಶಬ್ದ ಹುಟ್ಟುವುದೆ? ಹುಟ್ಟಿದ ಶಬ್ದದಲ್ಲಿ ಈ ಎಲ್ಲ ಅಂಶಗಳ "ಧರ್ಮ" (ಗುಣ ಸ್ವಭಾವಗಳು) ವ್ಯಕ್ತವಾ ಗುವುದಿಲ್ಲವೆ? ಇವುಗಳಲ್ಲಿ ಯಾವುದಾದರೂ ಒಂದನ್ನು ವೀಣೆ ಎಂದು ಕರೆಯಲು ಸಾಧ್ಯವಿಲ್ಲ. ಹಾಗೆಯೇ ಇವುಗಳಿಗೆ ಹೊರತಾಗಿ ಇದೆ ಎಂದು ಕೊಂಡಿರುವ ಇನ್ಯಾವುದೋ ಒಂದನ್ನು ವೀಣೆ ಎಂದು ಕರೆಯಲಾಗದು. ಅದನ್ನು ನುಡಿಸುವವ ನನ್ನೂ ಸೇರಿಸಿಕೊಂಡು ಈ ಎಲ್ಲ ಅಂಶಗಳ ಸಂಯೋಗವನ್ನು ವೀಣೆ ಎನ್ನುತ್ತೇವೆ. ಹಾಗಾಗಿ ಭವವಿಲ್ಲದೆ ಜನಿಸುವ ಸಂಸ್ಕಾರಗಳು ಯಾವುವೂ ಇಲ್ಲ. ಈ ಭವದ ಗುಣಸ್ವಭಾವಗಳು ಹಿಂದಿನಿಂದ ಬಂದಿರಲೇ ಬೇಕಲ್ಲವೆ? ಹಾಗೆಯೇ ಇವುಗಳೆಲ್ಲವನ್ನು

ಉಪ್ಪಿನ ರುಚಿಯನ್ನು ತೂಗಲು ಸಾಧ್ಯವೇ?

ಎಲ್ಲಿಯವರೆಗೆ ದೀಪ ಉರಿಯಲು ಬೇಕಾದ ಎಲ್ಲವೂ ಕೂಡಿ ಬರುವವೋ ಅಲ್ಲಿಯವರೆಗೆ ಅದು ನಿರಂತರವಾಗಿ ಉರಿಯುತ್ತದೆ. ಭಂಗಗೊಂಡಾಗ ಆರಿ ಹೋಗುತ್ತದೆ. ಹಾಗೆ ಉರಿಯುವಾಗ ಕೂಡಿಕೊಂಡಿರುವ 'ಅಂಶಗಳ' ಧರ್ಮವು (ಗುಣಸ್ವಭಾವಗಳು) ಪ್ರದರ್ಶಿತವಾಗುತ್ತದೆ. ಮನುಷ್ಯ ಜೀವಿಯೂ ಅಷ್ಟೆ. ಅವನು ಉಂಟಾಗಲು ಸೇರಿಕೊಂಡಿರುವ ಅಂಶಗಳ ಗುಣಸ್ವಭಾವಗಳು 'ಪರಿಸ್ಥಿತಿ'ಯನ್ನಾಧರಿಸಿ ಪ್ರದರ್ಶಿತವಾಗುತ್ತವೆ.

ನಿರ್ವಹಿಸುವ ಸ್ವತಂತ್ರವಾದ ಒಂದನ್ನು ಬೇರೆಯಾಗಿ ಗುರುತಿಸಲು ಬರುವುದಿಲ್ಲ.

ಮಿಲಿಂದ: ಇನ್ನೊಂದು ಉದಾಹರಣೆಯನ್ನು ಕೊಡು.

ನಾಗಸೇನ: ಉಪ್ಪನ್ನು ತಕ್ಕಡಿ ಯಲ್ಲಿ ತೂಗಬಹುದೆ ಮಹಾ ರಾಜ?

ಮಿಲಿಂದ: ತೂಗಲು ಸಾಧ್ಯವಿದೆ ಭನ್ತೇ.

ನಾಗಸೇನ: ಇಲ್ಲ ಮಹಾರಾಜ. ತಕ್ಕಡಿ ಯಲ್ಲಿ ತೂಗಲು ಸಾಧ್ಯವಿರುವುದು ಉಪ್ಪಿನ ಭಾರವನ್ನು ಮಾತ್ರ. ಅದರ ಬಣ್ಣವನ್ನು, ರುಚಿಯನ್ನು ತಕ್ಕಡಿಯಲ್ಲಿ ತೂಗಲು ಸಾಧ್ಯವಿಲ್ಲ.

ಮಿಲಿಂದ: ನೀನು ಜಾಣ ಭನ್ತೇ.

ಮಿಲಿಂದ: ಭನ್ತೇ, ಯಾರ ಪಾಪ ಹೆಚ್ಚು? ತಿಳಿದು ಪಾಪ ಮಾಡುವವನದೊ? ತಿಳಿಯದೆ ಪಾಪ ಮಾಡುವವ ನದೊ?

ನಾಗಸೇನ: ತಿಳಿಯದೆ ಪಾಪ ಮಾಡು ವವನ ಪಾಪ ಹೆಚ್ಚು.

ಮಿಲಿಂದ: ಹಾಗಾದರೆ ತಿಳಿಯದೆ ಪಾಪ ಮಾಡುವವರನ್ನು ನಾವು ಹೆಚ್ಚು ಶಿಕ್ಷಿಸಬೇಕಾಗುತ್ತದೆ.

ನಾಗಸೇನ: ಚೆನ್ನಾಗಿ ಕಾದು ಕೆಂಪಾಗಿರುವ ಕಬ್ಬಿಣದ ಗುಂಡೊಂದನ್ನು ಅದು ಗೊತ್ತಿರುವವನು ಹಿಡಿದರೆ ಹೆಚ್ಚು ಸುಡಿಸಿಕೊಳ್ಳುತ್ತಾನೋ, ಗೊತ್ತಿಲ್ಲದೆ ಹಿಡಿದವನು ಹೆಚ್ಚು ಸುಡಿಸಿಕೊಳ್ಳುತ್ತಾನೋ?

ಮಿಲಿಂದ: ತಿಳಿಯದೆ ಹಿಡಿಯುವವನು ಹೆಚ್ಚು ಸುಡಿಸಿಕೊಳ್ಳುತ್ತಾನೆ ಭನ್ತೇ.

ನಾಗಸೇನ: ಹೌದು. ಹಾಗಾಗಿ ತಿಳಿಯದೆ ಮಾಡುವವನು ಹೆಚ್ಚು ಪಾಪ ಮಾಡಿ ಬಿಡುತ್ತಾನೆ.

ಮಿಲಿಂದ: ನೀನು ಕುಶಲಿ ಭನ್ತೇ. □

ಜಾತಿ ವಿರೋಧಿ ಸಮ್ಮೇಳನ

ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ಇತರ ಕೆಲವು ಸಮಾನ ಮನಸ್ಕ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಇದೇ ಜೂನ್ 19ರ ಭಾನುವಾರ, ಶಿವಮೊಗ್ಗದಲ್ಲಿ ಜಾತಿ ವಿರೋಧಿ ಸಮ್ಮೇಳವೊಂದನ್ನು ಆಯೋಜಿಸುತ್ತಿದೆ. ಇದರ ಅಂಗವಾಗಿ, ಜಾತಿ ವ್ಯವಸ್ಥೆಯ ವಿರುದ್ಧದ ಪ್ರಬಲ ಅಸ್ತ್ರವೆನಿಸಿರುವ ಅಂತರ್ಜಾತಿ ವಿವಾಹವಾದವರ ರಾಜ್ಯಮಟ್ಟದ ಸಮಾವೇಶವೊಂದನ್ನೂ ಏರ್ಪಡಿಸುತ್ತಿದೆ.

ಜಾತಿ ಮತ್ತು ವರ್ಗರಹಿತ ಸಮಾಜದ ನಿರ್ಮಾಣ ನಮ್ಮ ಸಂವಿಧಾನದ ಮೂಲಗುರಿಯಾಗಿದ್ದರೂ, ಇತ್ತೀಚಿನ ವರ್ಷಗಳಲ್ಲಿ ಬಡವ-ಶ್ರೀಮಂತರ ಅಂತರ ಸ್ಫೋಟಕ ಗತಿಯಲ್ಲಿ ಹೆಚ್ಚಿದೆ. ಹೀಗೆ ಅತಿಬಲಿಷ್ಠವಾಗಿರುವ ಈ ಹೊಸ ವರ್ಗವ್ಯವಸ್ಥೆಯು, ತನ್ನ ಜೊತೆಯಲ್ಲಿ ಜಾತಿವ್ಯವಸ್ಥೆಯನ್ನೂ ಹಲವು ರೀತಿಗಳಲ್ಲಿ ಪೋಷಿಸಿ ಅದನ್ನು ಗಟ್ಟಿಗೊಳಿಸುತ್ತಿದೆ. ಈ ಪರಿಸ್ಥಿತಿಯ ದುರ್ಲಾಭ ಪಡೆದ ನಮ್ಮ ರಾಜಕಾರಣಿಗಳು ತಂತಮ್ಮ ಜಾತಿಗಳ ಸಂಘಟನೆ ಮಾಡುತ್ತಾ, ಇವುಗಳ ಅಡಿಯಲ್ಲಿ ತಮ್ಮ ರಾಜಕೀಯ ಅನಾಚಾರ ಮತ್ತು ಭ್ರಷ್ಟಾಚಾರಗಳನ್ನು ಮರೆಮಾಚಿ ಸಮಾನತೆ, ಸಾಮಾಜಿಕ ನ್ಯಾಯ ಇತ್ಯಾದಿ ಪ್ರಜಾಪ್ರಭುತ್ವದ ಘನ ಉದ್ದೇಶಗಳನ್ನೇ ವಿಫಲಗೊಳಿಸುತ್ತಿದ್ದಾರೆ. ಇದರಿಂದಾಗಿ ಸಮಾಜದ ಒಟ್ಟಾರೆ ಹಿತದೃಷ್ಟಿಯೇ ಕಾಣೆಯಾದಂತಾಗಿ, ಜಾತಿ ತಾರತಮ್ಯ ಮತ್ತು ಪ್ರತ್ಯೇಕತೆಗಳು ಹಾಗೂ ಅದಕ್ಕೆ ಜೋಡಣೆಯಾದಂತೆ ಮತೀಯ ಮೌಢ್ಯಾಚರಣೆಗಳು ಹೊಸ ಮಾನ್ಯತೆ ಪಡೆಯುತ್ತಿವೆ. ಬಲಿಷ್ಠರ ಹೊಸ ಸಾಮ್ರಾಜ್ಯವೊಂದು ಸೃಷ್ಟಿಯಾಗಿ ಆಧುನಿಕ ನಾಗರೀಕತೆಯ ಸಮಾಜ ಮತ್ತೆ ಮಧ್ಯಯುಗದ ಕತ್ತಲನ್ನು ಪ್ರವೇಶಿಸುತ್ತಿರುವಂತೆ ತೋರುತ್ತಿದೆ.

ಈ ಆತಂಕಕಾರಿ ಹಿನ್ನೆಲೆಯಲ್ಲಿ ಸಮಾಜ ಮತ್ತು ರಾಷ್ಟ್ರದ ಹಿತದೃಷ್ಟಿಯಿಂದ ಜಾತಿವ್ಯವಸ್ಥೆ ಎಂಬ ಅನೈತಿಕ ಆಚರಣೆಯ ವಿರುದ್ಧ ಪ್ರಜ್ಞಾವಂತರು ಸಂಘಟಿತರಾಗಿ ದನಿ ಎತ್ತಬೇಕಿದೆ. ಹಾಗಾಗಿ ಈ ಜಾತಿ ವಿರೋಧಿ ಸಮ್ಮೇಳನದಲ್ಲಿ ಮತ್ತು ಅಂತರ್ಜಾತಿ ವಿವಾಹಿತರ ಸಮಾವೇಶದಲ್ಲಿ ಪ್ರತಿನಿಧಿಗಳಾಗಿ ಭಾಗವಹಿಸ ಬಯಸುವವರು ತಮ್ಮ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆಗಳನ್ನು ಈ ವಿಳಾಸಕ್ಕೆ ಪತ್ರ ಬರೆದು ತಿಳಿಸಬಹುದಾಗಿದೆ.

ಸಂಚಾಲಕರು, ಅಂತರ್ಜಾತಿ ವಿವಾಹಿತರ ಸಮಾವೇಶ, ಎಚ್.ಐ.ಜಿ.-5, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-577 204

ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಗಳು:

9449816564, 9741701755, 9480141984

ಹೊಸ ಪುಸ್ತಕ

ಗುಲಗುಂಜಿ ಬೆಲೆ: ರೂ. ೩೦/-
ಲೇ: ಅಲ್ಲಮಪ್ರಭು ಬೆಟ್ಟದೂರು

ವಿಷಯ ವೈವಿಧ್ಯತೆ ಮತ್ತು ಸರಳತೆಯಿಂದ ಮುದ ನೀಡುವ ಕಿರುಗವಿತೆಗಳ ಈ ಸಂಕಲನದಲ್ಲಿ ತಮ್ಮ ಕಣ್ಣಿನ ಮುಂದೆ ಹಾದುಹೋಗುವ ಜೀವನದ ಸಮಸ್ತ ಜೀವಂತ ಕ್ಷಣಗಳಿಗೆ ಲೇಖಕರು ವೈಚಾರಿಕತೆಯ ಸ್ಪರ್ಶ ನೀಡಿದ್ದಾರೆ. ರಾಜಕೀಯ, ಸಾಮಾಜಿಕ, ಧಾರ್ಮಿಕ ವ್ಯವಸ್ಥೆಗಳನ್ನು ಕಂಡು ಹರಿತವಾದ ಭಾಷೆಯಲ್ಲಿ ಲೇವಡಿ ಮಾಡಿದ್ದಾರೆ. ಜೀವಪರ, ಪ್ರಗತಿಪರ, ಆದರ್ಶಗಳನ್ನು ತುಂಬಿಕೊಂಡು ಮಿಡಿಯುವ ಮಿನಿಕವಿತೆಗಳು ಕಟುವ್ಯಂಗ್ಯ, ವಿಡಂಬನೆ ಜೊತೆಗೆ ಬಂಡಾಯ ಮನೋಧರ್ಮವನ್ನು ಎತ್ತಿಹಿಡಿದು ಸಮಾಜವನ್ನು ಎಚ್ಚರಗೊಳಿಸುವಲ್ಲಿ ಸಫಲವಾಗಿವೆ.

ಪ್ರ: ಶ್ರೀ ಸಿದ್ಧಲಿಂಗೇಶ್ವರ ಬುಕ್‌ಡಿಪೋ ಮತ್ತು ಪ್ರಕಾಶನ, ಗುಲಬರ್ಗಾ



ಯಾರೂ ನೆಡದ ಮರ
ಲೇ: ಗಣೇಶ ಹೊಸ್ಮನೆ
ಬೆಲೆ: ರೂ. ೪೦/-

ಮಾತು-ಹೇಳಿಕೆಗಳಿಂದ ಮುಕ್ತವಾಗಿ ಅನುಭವಗಳಿಂದ ಹರಳುಗಟ್ಟಿದ ಹೊಸ ತಲೆಮಾರಿನ ಕವಿಯ ಈ ಚೊಚ್ಚಲ ಸಂಕಲನದಲ್ಲಿ ೫೭ ಕವಿತೆಗಳಿದ್ದು ಈಗಾಗಲೇ ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡು ಸಾಹಿತ್ಯಾಸಕ್ತರ ಗಮನ ಸೆಳೆದಿವೆ. ಮೌನ ಒಂದು ಸ್ಥಾಯಿ ದನಿಯಾಗಿ ಸಂಗ್ರಹದ ಎಲ್ಲ ಕವನಗಳ ಜೀವಾತ್ಮದ ಉಸಿರಾಟದಂತಿದೆ. ಆಧ್ಯಾತ್ಮಿಕವಾಗಿ ಅಂತರ್ಗತವಾದ ಮೌನವನ್ನು ಮೌಲ್ಯವನ್ನಾಗಿಸುವಲ್ಲಿ ಹಾಗೂ ನಕ್ಷತ್ರಗಳ ಅಕ್ಷಯ ಬೆಳಕನ್ನು ಅಂಗೈಯಲ್ಲಿ ಹಿಡಿಯುವ ಅದಮ್ಯ ಉತ್ಸಾಹದ ಚಿಲುಮೆಯಂತಿರುವ ಲೇಖಕರ ವಿಸ್ತಾರವಾದ ಅರಿವು ಭರವಸೆ ಮೂಡಿಸುತ್ತದೆ.



ಅರ್ಥವಾಗದ ಲೋಕ
ಲೇ: ಕನ್ನಂಬಾಡಿ ಶಿವಶಂಕರ
ಬೆಲೆ: ರೂ. ೫೦/-

ಈ ಸಂಕಲನದಲ್ಲಿ ಬದುಕಿನ ಅನುಭವಗಳನ್ನು ಸರಳವಾಗಿ ನಿರೂಪಿಸುವ 46 ಕವನಗಳು ಬಾಲ ಮನಸ್ಸಿನ ಸ್ವಚ್ಚತೆಯನ್ನು ಆಶಿಸುವಂಥವು. ಭಾಷೆಯಲ್ಲಿ, ಭಾವನೆಯಲ್ಲಿ ತಳುಕು, ತೊಡಕು ಉಂಟುಮಾಡುವ ಇರಾದೆಯಿರದೆ ಸರಳವಾಗಿ ನಿರೂಪಿತವಾಗಿದ್ದರೂ ಸ್ಪುಟವಾಗಿವೆ. ಸೃಜನಶೀಲವಾಗಿವೆ. ಪ್ರಾಮಾಣಿಕತೆ ಎದ್ದು ಕಾಣುತ್ತದೆ. ವಿವರಗಳು ಧ್ವನಿ ಪೂರ್ಣವಾಗಿವೆ. ಅನುಭವಕ್ಕೆ ಅರ್ಥ ಕಲ್ಪಿಸುವುದಕ್ಕಿಂತ ಅನುಭವಿಸುವುದರಲ್ಲೇ ಸಾರ್ಥಕತೆಯಿದೆ ಎನ್ನುವ ಧೋರಣೆ ಹೊಂದಿದ್ದು ತೆರೆದು ಆಡುವ ಮಾತಿನಂತಿವೆ. ಹಾಗಾಗಿ ಇವು ಓದುಗರನ್ನು ಮುಟ್ಟುತ್ತವೆ.

ಪ್ರಕಾಶನ: ಧಾತ್ರಿ ಪುಸ್ತಕ ಬೆಂಗಳೂರು-೫೬೦೦೭೨

ಮನುಷ್ಯರನ್ನು ಹುಡುಕುತ್ತ
ಲೇ:ಡಾ. ಬಾಬುರಾವ್ ಗಾಯಕವಾಡ
ಅನು: ಡಾ., ವಿಜಯ ಕಾಂಬಳೆ
ಬೆಲೆ: ರೂ.೫೦/-

ಮರಾಠಿ ಭಾಷೆಯ 'ಬಾಜ್' ಕಥಾ ಸಂಕಲನವನ್ನು ಕನ್ನಡೀಕರಿಸಿದ ಹನ್ನೆರಡು ಕತೆಗಳ ಈ ಕೃತಿಯಲ್ಲಿ ಅವಮಾನಿತ ದಲಿತ ಬದುಕಿನ ಚಿತ್ರಣವನ್ನು ಮನ ಕಲಕುವಂತೆ ತೆರೆದಿಡಲಾಗಿದೆ. ಮಹಾರಾಷ್ಟ್ರದ ಶೋಷಿತ ವರ್ಗದ ನೋವು, ನಿರಾಶೆ, ದಮನಿತ ಬದುಕು ಹುಟ್ಟಿಸುವ ಅಸಾಹಾಯಕತೆ, ಮೇಲ್ಜಾತಿಗಳ ಆಕ್ರಮಣ, ಅದರಿಂದುಂಟಾಗುವ ಸಹಜ ಸಿಟ್ಟು, ಬದುಕಿನ ದ್ವಂದ್ವಗಳು ನಮ್ಮನ್ನು ಆಳವಾಗಿ ತಟ್ಟುತ್ತವೆ. ಪುಲೆ, ಅಂಬೇಡ್ಕರ್‌ರ ಚಿಂತನೆ ಚಳವಳಿಗಳ ಪ್ರಭಾವಕ್ಕೊಳಗಾದ ಮರಾಠಿ ದಲಿತ ಬರಹಗಾರರ ಅನುಭವಜನ್ಯ ಬರಹಗಳು ದಟ್ಟ ಪ್ರಭಾವವನ್ನು ಬೀರುವಲ್ಲಿ ಸಫಲವಾಗಿವೆ.

ಈ ಎರಡೂ ಪುಸ್ತಕಗಳ ಪ್ರಕಾಶಕರು: ಲಡಾಯಿ ಪ್ರಕಾಶನ, ಗದಗ



ಕಾಯದ ಕಾರ್ಪಣ್ಯ
ಲೇ: ಕುಸುಮಾ ಶಾನಭಾಗ
ಬೆಲೆ: ರೂ. ೭೫/-

ಲೈಂಗಿಕ ಕಾರ್ಯಕರ್ತೆಯರೊಂದಿಗಿನ ಮುಖಾಮುಖಿ ಘಟನೆಗಳನ್ನು ಮನ ಕಲಕುವಂತೆ ದಾಖಲಿಸಿರುವ ಲೇಖಕಿ ಬೀದಿ ವೇಶ್ಯೆಯರ ಸುತ್ತ ಮುತ್ತಿಕೊಂಡ ಹೃದಯಹೀನ ಕಟುಕರ ಜಾಲದ ಮಸಲತ್ತುಗಳನ್ನು ಹೊರಗೆಡವುದರ ಮೂಲಕ ಅವರ ದಾರುಣ ಬದುಕಿನ ಒಳಸುಳಿಗಳನ್ನು ಸಮರ್ಥವಾಗಿ ತೆರೆದಿಟ್ಟಿದ್ದಾರೆ. ತಮ್ಮ ಮನಸ್ಸಿನ ಮಾರ್ದವತೆ ಕೋಮಲ ಭಾವಗಳನ್ನು ಕೊಂದುಕೊಂಡೇ ಪರಿಸ್ಥಿತಿಯ ಕೈಗೊಂಬೆಯಾಗಿ ಈ ವೃತ್ತಿಗಿಳಿಯುತ್ತಾರೆ ಎಂಬ ಅಂಶ ಚಿಂತಿಸುವಂತೆ ಮಾಡಿದೆ.

ಪ್ರಕಾಶಕರು: ಹೇಮಾಂಶು ಪ್ರಕಾಶನ ಮಂಗಳೂರು-೫೭೫೦೦೬

ನವುಲೂರಮ್ಮನ ಕಥೆ
ಲೇ: ಎಂ. ಜವರಾಜ್
ಬೆಲೆ: ರೂ. ೮೫/-

ಈ ಕಥಾ ಸಂಕಲನದಲ್ಲಿ ಕಾವೇರಿ ನದಿ ದಡದ ನಿಮ್ನ ವರ್ಗಗಳ ಬದುಕಿನ ಪಡಿಪಾಟಲುಗಳು ಮನ ಮುಟ್ಟುವಂತೆ ನಿರೂಪಿತವಾಗಿವೆ. ಒಂದು ಸೀಮಿತ ಪ್ರದೇಶದ ತಳವರ್ಗದ ಬದುಕಿನೊಂದಿಗೆ ಅಲ್ಲಿಯ ನಂಬಿಕೆ, ಆಚರಣೆ, ಹಬ್ಬ, ಜಾತ್ರೆ, ಇತರ ವರ್ಗಗಳೊಂದಿಗಿನ ಒಡನಾಟ-ಅವರ ವಂಚನೆ, ಶೋಷಣೆಗಳನ್ನು ಸಮರ್ಥವಾಗಿ ಕಟ್ಟಿಕೊಡುವಲ್ಲಿ ಲೇಖಕರ ಒಳನೋಟ ವಿಸ್ತಾರವಾದ ಅರಿವಿನಿಂದ ಕೂಡಿದೆ. ತಮ್ಮ ಅನುಭವ ಸಮೃದ್ಧಿಯಿಂದ ಸಾಹಿತ್ಯಾಸಕ್ತರ ಗಮನ ಸೆಳೆಯುವಲ್ಲಿ ಸಫಲವಾಗಿದ್ದಾರೆ.

ಪ್ರ: ಯಡಿಯೂರು ಸಿದ್ಧಲಿಂಗೇಶ್ವರ ಪ್ರಕಾಶನ, ಮೈಸೂರು



ಚರಿತ್ರೆ ಪುರಾಣ

ಚರಿತ್ರೆಗೊಂದು ಪುರಾಣ ಪರಂಪರೆ
ಪುರಾಣಕ್ಕಿಲ್ಲವೆ ಚರಿತ್ರೆ?
ನೀರಿನೊಳಗಿನ ಬಿಂಬ ನೀರಲ್ಲಿ ನಿಜವಲ್ಲ
ಆದರೂ ಹೊರಗೆ ನಿಂತಿದೆಯಲ್ಲ ಕಂಬ!
ನನಗೆ ನೀನು ಪ್ರಮಾಣವಲ್ಲ
ನಿನಗೆ ನಾನು ಪ್ರಮಾಣವಲ್ಲ
ಆದರೇನಂತೆ– ನಾವಿಬ್ಬರೂ ಇದ್ದೇವಲ್ಲ!
ಪ್ರಮಾಣವಾವುದು, ಪರಿವಾಣವಾವುದು
ಪರಿಣಾಮವಾವುದು? ಲೆಕ್ಕ ಹೊಂದುತ್ತಿಲ್ಲ!

ಬೀಜದೊಳಗಿನ ವೃಕ್ಷ ಕಾಣದು,
ಬೀಜ ನಾಶವಾಗದೆ.
ಹಾಲು ತಾನೇ ಮೊಸರಾಗದು,
ಹೆಪ್ಪಿಲ್ಲದೆ.
ಹೆಪ್ಪುಗಟ್ಟಿದ ಹಾಲು
ಒಳಗೆ ಸುತ್ತಿದ ಹುತ್ತ
ಶತಮಾನಗಳಿಂದ ಗೂಢ
ಇಲ್ಲಿ ಎಲ್ಲವೂ ನಿಗೂಢ!

ಹುತ್ತವ ಬಡಿದಲ್ಲದೆ ಹಾವು ಸಾಯದು
ಹೆಪ್ಪು ಕಡೆದಲ್ಲದೆ ಬೆಣ್ಣೆಸಿಗದು.
ಸತ್ತ ಕೋಳಿ ಕೂಗುವುದು
ಕುರುಡ ಕಣ್ಣು ತೆರೆಯುವುದು
ಪವಾಡವಲ್ಲ ಅರಿವಿನ ವಿಸ್ತಾರ!

ಚರಿತ್ರೆಯಾದವರು ಚರಿತ್ರೆ ಬರೆದವರು
ಚರಿತ್ರೆಗಾಗಿಯೇ ಹುಟ್ಟಿ ಸತ್ತವರು
ಸತ್ತರೂ ಚರಿತ್ರೆಯಾಗದವರು
ಇಂದು ಪುರಾಣವಾಗುತ್ತಿದ್ದಾರೆ!

ಅರಿವೇ ಗುರುವೆಂದು
ಗುರುವನ್ನೇ ನಿರಾಕರಿಸಿದ ಅಲ್ಲಮ
ಇಂದು ತಾನೇ ಗುರುವಾಗಿ ನಿಂತಿದ್ದಾನೆ!
ಸ್ಥಾವರಕ್ಕಳಿವುಂಟೆಂದು ಹೇಳಿದ ಬಸವ
ವರ್ತುಲದ ಮೂರ್ತಿಯಾಗಿ ಪೂಜೆಗೊಳ್ಳುತ್ತಿದ್ದಾನೆ.

ಹೀಗೆ
ಚರಿತ್ರೆ ಪುರಾಣವಾಗುತ್ತಲೇ ಇರುತ್ತದೆ
ಪುರಾಣ ವೈಭವೀಕರಣಗೊಳ್ಳುತ್ತಲೇ ಇರುತ್ತದೆ
ನಾವು ಮಾತ್ರ ಚರಿತ್ರೆಯ ವಾರಸುದಾರರೆಂದು
ಪುರಾಣದ ಮೂಲಕ ವಿಜೃಂಭಿಸುತ್ತೇವೆ!
ಹುಟ್ಟಿದ್ದೇವೆಂದು ತಿಳಿದು ಬೆಳೆಯುತ್ತಿದ್ದಾಗಲೇ
ಸತ್ತು ಹೋಗಿರುತ್ತೇವೆ!

ಆಗ
ಚರಿತ್ರೆ–ಪುರಾಣದ
ನಡುವಿನ ಗೆರೆ ಅಳಿದು
ಚರಿತ್ರೆಯೇ ಪುರಾಣವಾಗುತ್ತದೆ!
ಮುಂದೆ ಅದೇ ಶೂನ್ಯವಾಗುತ್ತದೆ,
ಶೂನ್ಯವಾದವಾಗುತ್ತದೆ
ಅದನ್ನೇ ನಾವೀಗ ಸಂಪಾದಿಸಿಕೊಳ್ಳುತ್ತಿದ್ದೇವೆ
ಶೂನ್ಯ ಸಂಪಾದನೆಕಾರರಾಗುತ್ತಿದ್ದೇವೆ!





○ ಡಾ. ಬಸವರಾಜ ಸಬರದ

ಅಣು ವಿದ್ಯುತ್ ಸ್ಥಾವರಗಳು ಎಷ್ಟು ಸುರಕ್ಷಿತ?

ಕಾರ್ಲ್ ಗ್ರಾಸ್‌ಮನ್

(ಅನು: ಸುರೇಶ್ ಭಟ್)

ಇತ್ತೀಚೆಗೆ ಸಂಭವಿಸಿದ ಭೀಕರ ಭೂಕಂಪನಕ್ಕೆ ಜಪಾನ್ ದೇಶವಿಡೀ ತತ್ತರಿಸಿಹೋಗಿದೆ. ಅಪಾರ ಸಂಖ್ಯೆಯ ಸಾವುನೋವುಗಳಾಗಿವೆ ಮತ್ತು ಆಸ್ತಿಪಾಸ್ತಿಗಳಿಗೆ ಹಾನಿಯಾಗಿದೆ. ಆದರೆ ಇವೆಲ್ಲವನ್ನೂ ಮೀರಿಸುವಂತಹ ಮಹಾದುರಂತವೆಂದರೆ ಫುಕುಶಿಮಾ ಅಣು ವಿದ್ಯುತ್ ಸ್ಥಾವರಕ್ಕೆ ಬಂದೊದಗಿರುವ ವಿಪತ್ತು. ಫುಕುಶಿಮಾ ಸ್ಥಾವರ ದಿಂದ ಸೂಸುತ್ತಿರುವ ವಿಕಿರಣವನ್ನು ತಡೆಗಟ್ಟಿ ಅದು ಹೊರಕ್ಕೆ ಸೋರಿ ಹೋಗದಂತೆ ನೋಡಿಕೊಳ್ಳುವ ಯತ್ನಗಳಾಗುತ್ತಿವೆ. ಸ್ವಾಭಾವಿಕವಾಗಿ ಈ ಸಂದರ್ಭದಲ್ಲಿ ಎದ್ದಿರುವ ಪ್ರಶ್ನೆ ಏನೆಂದರೆ ಅಣು ವಿದ್ಯುತ್ ಸ್ಥಾವರಗಳನ್ನು ಸುರಕ್ಷಿತವಾಗಿಸಲು ಸಾಧ್ಯವಿದೆಯೇ? ಉತ್ತರವೇನೆಂದರೆ ಇಲ್ಲ, ಎಂದೆಂದಿಗೂ ಸಾಧ್ಯವಿಲ್ಲ. ಅದೇಕೆಂದು ನೋಡೋಣ.

ಆಡ್ಮಿರಲ್ ರಿಕೋವರ್‌ನ ಮುನ್ನೆಚ್ಚರಿಕೆ

ಇದನ್ನು ಆರಂಭದಲ್ಲೇ ಸ್ಪಷ್ಟವಾಗಿ ತಿಳಿಹೇಳಿದ ವ್ಯಕ್ತಿ ಇನ್ಯಾರೂ ಅಲ್ಲ, ಅಮೆರಿಕಾದ ಅಣುಚಾಲಿತ ನೌಕಾಪಡೆಯ ಪಿತೃವೆಂದೇ ಪರಿಗಣಿಸಲ್ಪಟ್ಟಿರುವ ಆಡ್ಮಿರಲ್ ಹೈಮನ್ ರಿಕೋವರ್. ಆಡ್ಮಿರಲ್ ರಿಕೋವರ್ ಅಮೆರಿಕಾದ ಪ್ರಪ್ರಥಮ ಅಣು ವಿದ್ಯುತ್ ಸ್ಥಾವರದ (ಶಿಪ್ಪಿಂಗ್ ಪೋರ್ಟ್, ಪೆನ್ಸಿಲ್ವಾನಿಯ ರಾಜ್ಯ) ನಿರ್ಮಾಣ ಕಾರ್ಯದ ಮೇಲ್ವಿಚಾರಕನೂ ಆಗಿದ್ದರು. 1982ನೆ ಇಸವಿಯಲ್ಲಿ ನಿವೃತ್ತನಾದ ಆಡ್ಮಿರಲ್ ರಿಕೋವರ್ ಬೈಜಿಕ ಶಕ್ತಿ (nuclear power)ಯಲ್ಲಿ ಅಂತರ್ಗತವಾಗಿರುವ ಮಾರಕತೆಯ ಕಡೆಗೆ ಗಮನ ಸೆಳೆದು "ಬೈಜಿಕ ಶಕ್ತಿಯನ್ನು ಬಹಿಷ್ಕರಿಸಬೇಕು" ಎಂದು ಒತ್ತಾಯಿಸಿದ್ದರು. ಆತ ಅಂದು ಕಾಂಗ್ರೆಸ್‌ನ ಸಮಿತಿಯೊಂದಕ್ಕೆ ನೀಡಿದ್ದ ಹೇಳಿಕೆ ಗಮನಾರ್ಹವಾಗಿದ್ದು ಅದನ್ನಿಂದು ಮತ್ತೊಮ್ಮೆ ನೆನಪಿಸಿಕೊಳ್ಳುವ ಅಗತ್ಯವಿದೆ.

"ಈ ವಿಷಯವನ್ನು ನಾನೀಗ ತಾತ್ವಿಕ ದೃಷ್ಟಿಯಿಂದ ನೋಡುತ್ತಿರುವೆ. ಸುಮಾರು 200 ಕೋಟಿ ವರ್ಷಗಳಷ್ಟು ಹಿಂದಿನ ಕಾಲಕ್ಕೆ ಹೋದರೆ ಆಗಿನ್ನೂ ಭೂಮಿ ರೂಪುಗೊಳ್ಳುತ್ತಿತ್ತು. ಆ ಪ್ರಕ್ರಿಯೆಯ ವೇಳೆ ಸ್ವಾಭಾವಿಕವಾಗಿ ನಡೆಯುತ್ತಿದ್ದ ಅಗಾಧ ವಿಕಿರಣ ಭೂಮಿಯ ತುಂಬಾ ತುಂಬಿತ್ತು. ಅದರ ಪ್ರಮಾಣ ಎಷ್ಟಿತ್ತೆಂದರೆ ಮೀನು ಅಥವಾ ಇನ್ಯಾವುದೇ ಪ್ರಾಣಿಯೂ ಬದುಕುಳಿಯುವುದು ದುಸ್ಸಾಧ್ಯವಿತ್ತು. ಮುಂದಿನ ಸುಮಾರು 180 ಕೋಟಿ ವರ್ಷಗಳ ಅವಧಿಯಲ್ಲಿ ವಿಕಿರಣದ ಮಟ್ಟ ಕಡಿಮೆಯಾಗುತ್ತಾ, ಆಗುತ್ತಾ ಕೊನೆಗೊಮ್ಮೆ ಕೆಲವೊಂದು ಬಗೆಯ ಜೀವಪ್ರಭೇಧಗಳು ಹುಟ್ಟಿ ಬೆಳೆಯಲು ಅನುವು ಮಾಡಿಕೊಡುವಂತಹ ವಾತಾವರಣ ನಿರ್ಮಾಣವಾಯಿತು. ....ಇದೀಗ ಬೈಜಿಕ ಶಕ್ತಿಯನ್ನು ಬಳಕೆ ಮಾಡಲು ಹೊರಡುವುದೆಂದರೆ ಅಂದು ಭೂಮಿಯ ಮೇಲೆ ಜೀವೋತ್ಪತ್ತಿಯಾಗಲೆಂದು ಪ್ರಕೃತಿ ಯಾವುದನ್ನು ನಾಶಪಡಿಸಿತೋ ಅದನ್ನು ನಾವೇ ಸೃಷ್ಟಿಸಿದಂತೆ. ಪ್ರತಿ ಬಾರಿಯೂ ಪರಮಾಣುವನ್ನೊಡೆದು ವಿಕಿರಣವನ್ನು ಉತ್ಪಾದಿಸುವಾಗ ಕರಾಳ ಶಕ್ತಿಯೊಂದು ಬಿಡುಗಡೆಗೊಳ್ಳುತ್ತದೆ. ಹಿಂದೆ ಭೂಮಿಯ ಮೇಲೆ ಜೀವದ ಹುಟ್ಟನ್ನು ತಡೆಗಟ್ಟಿದಂತಹ ಅದೇ ವಿಷಪದಾರ್ಥಗಳು ಮತ್ತೊಮ್ಮೆ ಉತ್ಪನ್ನವಾಗುತ್ತವೆ. ನನ್ನ ಅಭಿಪ್ರಾಯದಲ್ಲಿ ಇದು ಮಾನವ ಕುಲದ ಆತ್ಮ ವಿನಾಶಕ್ಕೆ ಕಾರಣವಾಗಲಿದೆ." ಇಂತಹ ಒಂದು ಮುನ್ನೆಚ್ಚರಿಕೆಯನ್ನು ನೀಡಿದ್ದ ರಿಕೋವರ್ "ಗ್ರೀನ್‌ಪೀಸ್" ಎಂಬ ಪರಿಸರವಾದಿ ಸಂಘಟನೆಯ ಸದಸ್ಯನೇನೂ ಆಗಿರಲಿಲ್ಲ. ಪರಂತು ಬೈಜಿಕ ಶಕ್ತಿಯ ಇತಿಹಾಸದಲ್ಲಿ ಓರ್ವ ಪ್ರಮುಖ ವ್ಯಕ್ತಿಯಾಗಿದ್ದ.

ಅಣು ವಿದ್ಯುತ್ ಸ್ಥಾವರಗಳಲ್ಲಿ ಏನು ನಡೆಯುತ್ತದೆ?

ಅಣು ವಿದ್ಯುತ್ ಸ್ಥಾವರದ ರಿಯಾಕ್ಟರ್‌ನೊಳಗೆ ಪರಮಾಣು ವಿದಳನ ಪ್ರಕ್ರಿಯೆ ನಡೆಯುತ್ತದೆ. ಸರಳವಾಗಿ ಹೇಳುವುದಾದರೆ ಪರಮಾಣುವನ್ನು ಒಡೆಯಲಾಗುತ್ತದೆ. ಹಾಗೆ ಒಡೆದಾಗ ವಿಕಿರಣ ಉತ್ಪನ್ನವಾಗುತ್ತದೆ. ಇಡೀ ಸಮಸ್ಯೆಯ ಮೂಲ ಅಡಗಿರುವುದೇ ಈ ವಿಕಿರಣದಲ್ಲಿ. ರಿಯಾಕ್ಟರ್‌ಗಳಲ್ಲಿ ಬಗೆಬಗೆಯ ವಿನ್ಯಾಸಗಳನ್ನು ಕಾಣಬಹುದು. ಅದು ಜನರಲ್ ಇಲೆಕ್ಟ್ರಿಕ್ ಕಂಪೆನಿ ನಿರ್ಮಿತ ಕುದಿಯುವ ನೀರಿನ ರಿಯಾಕ್ಟರ್ ಆಗಿರಬಹುದು (ಫುಕುಶಿಮಾದಲ್ಲಿರುವುದು ಇದೇ ವಿನ್ಯಾಸದ ರಿಯಾಕ್ಟರ್). ಅಥವಾ ವೆಸ್ಟಿಂಗ್‌ಹೌಸ್ ಕಂಪೆನಿ ನಿರ್ಮಿತ ಒತ್ತಡದಲ್ಲಿರುವ ನೀರಿನ ವಿನ್ಯಾಸ ಇರಬಹುದು. ಅಥವಾ ರಷ್ಯಾ ವಿನ್ಯಾಸದ ಚರ್ನೋಬಿಲ್‌ನಂತಹ ರಿಯಾಕ್ಟರ್ ಆಗಿರಬಹುದು. ಅಥವಾ ಅಮೆರಿಕಾದ ಶಕ್ತಿ ಕಾರ್ಯದರ್ಶಿ ಸ್ಟೀವನ್ ಚೂ ಮಾರಲೆತ್ನಿಸುತ್ತಿರುವ "ನೂತನ, ಸುಧಾರಿತ" ಅಣು ವಿದ್ಯುತ್ ಸ್ಥಾವರಗಳಿರಬಹುದು. ಖುದ್ದು ಓರ್ವ ಅಣು ವಿಜ್ಞಾನಿಯಾಗಿರುವ ಸ್ಟೀವನ್ ಚೂ ಬೈಜಿಕ ತಂತ್ರಜ್ಞಾನಕ್ಕೆ ಎಲ್ಲಾ ಬಗೆಯ ಉತ್ತೇಜನವನ್ನು, ಅದೂ ಬಹಳ ಹುರುಪಿನಿಂದ, ನೀಡುತ್ತಿದ್ದಾರೆ.

ಭೂಗರ್ಭದಿಂದ ಹೊರತೆಗೆಯುವ ಯುರೇನಿಯಂನಲ್ಲಿ ಯುರೇನಿಯಂ-238 ಮತ್ತು ಯುರೇನಿಯಂ-235 ಎಂಬ ಎರಡು ಘಟಕಗಳಿರುತ್ತವೆ. ಅತ್ಯಧಿಕ ಪ್ರಮಾಣದಲ್ಲಿರುವ ಯುರೇನಿಯಂ-238 ವಿದಳನಗೊಳ್ಳುವುದಿಲ್ಲವಾ



ಅಣು ವಿದ್ಯುತ್ ಸ್ಥಾವರದ ರಿಯಾಕ್ಟರ್ ನೊಳಗೆ ಪರಮಾಣು ವಿದಳನ ಪ್ರಕ್ರಿಯೆ ನಡೆಯುತ್ತದೆ. ಸರಳವಾಗಿ ಹೇಳುವುದಾದರೆ ಪರಮಾಣುವನ್ನು ಒಡೆಯಲಾಗುತ್ತದೆ. ಹಾಗೆ ಒಡೆದಾಗ ವಿಕಿರಣ ಉತ್ಪನ್ನ ವಾಗುತ್ತದೆ. ಇಡೀ ಸಮಸ್ಯೆಯ ಮೂಲ ಅಡಗಿರುವುದೇ ಈ ವಿಕಿರಣದಲ್ಲಿ. ರಿಯಾಕ್ಟರ್‌ಗಳಲ್ಲಿ ಬಗೆಬಗೆಯ ವಿನ್ಯಾಸಗಳನ್ನು ಕಾಣಬಹುದು. ಅದು ಜನರಲ್ ಇಲೆಕ್ಟ್ರಿಕ್ ಕಂಪೆನಿ ನಿರ್ಮಿತ ಕುದಿಯುವ ನೀರಿನ ರಿಯಾಕ್ಟರ್ ಆಗಿರಬಹುದು (ಫುಕುಶಿಮಾದಲ್ಲಿರುವುದು ಇದೇ ವಿನ್ಯಾಸದ ರಿಯಾಕ್ಟರ್). ಅಥವಾ ವೆಸ್ಟಿಂಗ್‌ಹೌಸ್ ಕಂಪೆನಿ ನಿರ್ಮಿತ ಒತ್ತಡದಲ್ಲಿರುವ ನೀರಿನ ವಿನ್ಯಾಸ ಇರಬಹುದು.

ದರೆ ಮತ್ತೊಂದು ಘಟಕವಾದ ಯುರೇನಿಯಂ-235 ವಿದಳನವಾಗಬಲ್ಲುದು. ವಿಕಿರಣಶೀಲತೆಯ ಪ್ರಮಾಣ ತುಂಬಾ ಕಮ್ಮಿ ಇರುವಂತಹ ಈ ಯುರೇನಿಯಂ ಅದಿರನ್ನು ಸ್ಥಾವರಗಳಿಗೆ ಸಾಗಿಸಲಾಗುತ್ತದೆ. ನಂತರ ಅಲ್ಲಿ ನಡೆಯುವ ಪ್ರಕ್ರಿಯೆಯಲ್ಲಿ ಅದರ ಮೇಲೆ ನ್ಯೂಟ್ರಾನ್‌ಗಳನ್ನು ಹಾಯಿಸಲಾಗುತ್ತದೆ. ಆಗ ಅದರಲ್ಲಿರುವ ಯುರೇನಿಯಂ-235 ಒಂದು ಅಸ್ಥಿರ, ಅಸುರಕ್ಷಿತ, ವಿಕಿರಣಶೀಲ ವಿಷಧಾತುವಾಗಿ ಪರಿವರ್ತನೆಗೊಳ್ಳುತ್ತದೆ.

ವಿದಳನದ ಉತ್ಪನ್ನಗಳಾದ ಇಂತಹ ವಿಷಧಾತುಗಳ ಸಂಖ್ಯೆ ನೂರಾರು. ಅಷ್ಟೇ ಸಂಖ್ಯೆಯ ಸ್ಥಿರ ಹಾಗೂ ಸುರಕ್ಷಿತ ಧಾತುಗಳೂ ಇವೆ. ಮಾನವ ಶರೀರ ಈ ಜೋಡಿ ಧಾತುಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸಲಾರದು. ಇನ್ನು ವಿದಳನಗೊಳ್ಳದ ಯುರೇನಿಯಂ-238 ನ್ಯೂಟ್ರಾನ್‌ಗಳೊಂದಿಗೆ ಬೆರೆತು ಪ್ಲುಟೋನಿಯಂ-239 ಎನ್ನುವ ಅತ್ಯಂತ ವಿಕಿರಣಶೀಲ ಧಾತುವಾಗಿ ಪರಿವರ್ತನೆ ಹೊಂದುತ್ತದೆ. ಪರಮಾಣು ವಿದಳನದ ಈ ಸಮಗ್ರ ಪ್ರಕ್ರಿಯೆಯ ವೇಳೆ ಉತ್ಪನ್ನವಾಗುವ ಶಾಖದಿಂದ ನೀರನ್ನು ಕುದಿಸಿ, ಉಗಿಯನ್ನು ಉತ್ಪಾದಿಸಿ, ವಿದ್ಯುಜ್ಜನಕ ಯಂತ್ರಗಳನ್ನು ತಿರುಗಿಸಲಾಗುತ್ತದೆ. ಹೀಗಾಗಿ ನೀರನ್ನು ಕುದಿಸಿ ಉಗಿಯನ್ನು ಉತ್ಪಾದಿಸಲು ಕಂಡುಹುಡುಕಿರುವಂಥಾ ವಿವಿಧ ವಿಧಾನಗಳ ಪೈಕಿ ಅತ್ಯಂತ ಅಪಾಯಕಾರಿಯಾದುದೆಂದರೆ ಅಣು ವಿದ್ಯುತ್ ಸ್ಥಾವರವೆ ಆಗಿರುತ್ತದೆ.

ಏನಿದು ತೀವ್ರ ವಿಕಿರಣಶೀಲ "ಪರಮಾಣು ತ್ಯಾಜ್ಯ"?

ಎಲ್ಲಾ ಅಣು ವಿದ್ಯುತ್ ಸ್ಥಾವರಗಳೂ ವಿಕಿರಣವನ್ನು ಹೊರಸೂಸುತ್ತವೆ. ಆ ವಿಕಿರಣದಲ್ಲಿ ಆಲ್ಫಾ ಕಣಗಳು, ಬೀಟಾ ಕಣಗಳು ಮತ್ತು ಗಾಮಾ ಕಿರಣಗಳು ಮಾತ್ರ ವಲ್ಲದೆ ಘುಕುಶಿಮಾದ ಸ್ಥಾವರಗಳಿಂದು ಕಾರುತ್ತಿರುವಂತಹ ಸೀಷಿಯಂ-137, ಅಯೊಡಿನ್-131, ಸ್ಟ್ರಾನ್ಷಿಯಂ-90 ಮುಂತಾದ ವಿಕಿರಣಶೀಲ ವಿಷಧಾತುಗಳು ಕೂಡಾ ಇರುತ್ತವೆ. ಈ ತೀವ್ರ ವಿಕಿರಣಶೀಲ ವಿಷವಸ್ತುಗಳ ಸಂಪರ್ಕದಲ್ಲಿ ಬಂದ ಜೀವರಾಶಿಗಳೆಲ್ಲವೂ ನಾಶಗೊಳ್ಳುತ್ತವೆ. ಹೀಗಾಗಿ ಈ "ಪರಮಾಣು ತ್ಯಾಜ್ಯ"ಗಳೆಲ್ಲವನ್ನೂ, ಅವು ಅಣು ಸ್ಥಾವರಗಳಲ್ಲಿ ಹುಟ್ಟುವ ಕಾಲದಿಂದ ಆರಂಭಿಸಿ ಹೊರಸಾಗಿಸುವ ತನಕ, ಜೀವರಾಶಿಗಳೊಂದಿಗೆ ಸಂಪರ್ಕದಲ್ಲಿ ಬಾರದಂತೆ ಪ್ರತ್ಯೇಕವಾಗಿ ಇರಿಸಬೇಕಾಗುತ್ತದೆ. ಕೆಲವನ್ನು ಸಾವಿರಾರು ವರ್ಷಗಳ ಕಾಲ, ಇನ್ನು ಕೆಲವನ್ನು ಲಕ್ಷಗಟ್ಟಲೆ ವರ್ಷಗಳ ಕಾಲ.

ಐತಿಹಾಸಿಕ ಹಿನ್ನೆಲೆ

ಇಂತಹದೊಂದು ಮಾರಕ ವಿಧಾನದಲ್ಲಿ ವಿದ್ಯುತ್ತನ್ನು ಉತ್ಪಾದಿಸುವ ನಿರ್ಧಾರದ ಹಿಂದೆ ಕೆಲಸ ಮಾಡಿರುವುದು ವಿಜ್ಞಾನವಲ್ಲ, ರಾಜಕೀಯ ಮತ್ತು ಆರ್ಥಿಕ ಕಾರಣಗಳು. ಇದೆಲ್ಲ ಆರಂಭವಾದದ್ದು ದ್ವಿತೀಯ ಮಹಾಯುದ್ಧದ ಸಮಯದಲ್ಲಿ ಕೈಗೊಳ್ಳಲಾದ ಮ್ಯಾನ್‌ಹಟನ್ ಯೋಜನೆಯಿಂದ. ಅಂದು ಗುಟ್ಟಿನಲ್ಲಿ ಅಮೆರಿಕದ ಉದ್ದಗಲಕ್ಕೂ ಸ್ಥಾಪಿಸಲಾದ ಅನೇಕ ಪ್ರಯೋಗಾಲಯಗಳಲ್ಲಿ ವಿಜ್ಞಾನಿಗಳು ಅಣ್ವಸ್ತ್ರಗಳನ್ನು ತಯಾರಿಸಿದರು. 1945ನೆ ಇಸವಿಗಾಗುವಾಗ ಅಣ್ವಸ್ತ್ರಗಳ ಉತ್ಪಾದನೆಗಾಗಿ ಬಿಲಿಯಾಂತರ ಡಾಲರುಗಳನ್ನು ವ್ಯಯಿಸಲಾಯಿತು. ಅಣ್ವಸ್ತ್ರ ಉದ್ಯಮದಲ್ಲಿ ತೊಡಗಿಸಲಾಗಿದ್ದ ಜನರ ಒಟ್ಟು ಸಂಖ್ಯೆ ಸುಮಾರು 6 ಲಕ್ಷದಷ್ಟಿತ್ತು. ಅಂತಿಮವಾಗಿ ಜಪಾನ್‌ನ ಹಿರೋಷಿಮಾ, ನಾಗಾಸಾಕಿಗಳ ಮೇಲೆ ಎರಡು ಬಾಂಬ್‌ಗಳನ್ನು ಎಸೆಯಲಾಯಿತು. ಅಲ್ಲಿಗೆ ಯುದ್ಧ

ಅಣು ವಿದ್ಯುತ್ ಸ್ಥಾವರಗಳೂ ವಿಕಿರಣವನ್ನು ಹೊರಸೂಸುತ್ತವೆ. ಆ ವಿಕಿರಣದಲ್ಲಿ ಆಲ್ಫಾ ಕಣಗಳು, ಬೀಟಾ ಕಣಗಳು ಮತ್ತು ಗಾಮಾ ಕಿರಣಗಳು ಮಾತ್ರವಲ್ಲದೆ ಘುಕುಶಿಮಾದ ಸ್ಥಾವರಗಳಿಂದು ಕಾರುತ್ತಿರುವಂತಹ ಸೀಷಿಯಂ-137, ಅಯೊಡಿನ್-131, ಸ್ಟ್ರಾನ್ಷಿಯಂ-90 ಮುಂತಾದ ವಿಕಿರಣಶೀಲ ವಿಷಧಾತುಗಳು ಕೂಡಾ ಇರುತ್ತವೆ. ಈ ತೀವ್ರ ವಿಕಿರಣಶೀಲ ವಿಷವಸ್ತುಗಳ ಸಂಪರ್ಕದಲ್ಲಿ ಬಂದ ಜೀವರಾಶಿಗಳೆಲ್ಲವೂ ನಾಶಗೊಳ್ಳುತ್ತವೆ. ಹೀಗಾಗಿ ಈ "ಪರಮಾಣು ತ್ಯಾಜ್ಯ"ಗಳೆಲ್ಲವನ್ನೂ, ಅವು ಅಣು ಸ್ಥಾವರಗಳಲ್ಲಿ ಹುಟ್ಟುವ ಕಾಲದಿಂದ ಆರಂಭಿಸಿ ಹೊರಸಾಗಿಸುವ ತನಕ, ಜೀವರಾಶಿಗಳೊಂದಿಗೆ ಸಂಪರ್ಕದಲ್ಲಿ ಬಾರದಂತೆ ಪ್ರತ್ಯೇಕವಾಗಿ ಇರಿಸಬೇಕಾಗುತ್ತದೆ. ಕೆಲವನ್ನು ಸಾವಿರಾರು ವರ್ಷಗಳ ಕಾಲ, ಇನ್ನು ಕೆಲವನ್ನು ಲಕ್ಷಗಟ್ಟಲೆ ವರ್ಷಗಳ ಕಾಲ.

ಕೊನೆಗೊಂಡಿತು. ಬಳಿಕ ಮ್ಯಾನ್‌ಹಟನ್ ಯೋಜನೆಯ ಹೆಸರನ್ನು ಅಣು ಶಕ್ತಿ ಆಯೋಗ ಎಂಬುದಾಗಿ ಬದಲಾಯಿಸಿ ಇನ್ನಷ್ಟು ಅಣ್ವಸ್ತ್ರಗಳನ್ನು ತಯಾರಿಸಲಾಯಿತು.

ಲಾಸ್ ಅಲಾಮೋಸ್ ಎಂಬ ಅಣ್ವಸ್ತ್ರ ಪ್ರಯೋಗಶಾಲೆ ಕುರಿತ "ಸಿಟಿ ಆಫ್ ಫಯರ್" ಎಂಬ ಪುಸ್ತಕದಲ್ಲಿ ಲೇಖಕ ಜೇಮ್ಸ್ ಕುನೆಟ್ಕಾ ಬರೆಯುತ್ತಾರೆ- "ಮಹಾಯುದ್ಧ ನಡೆಯುತ್ತಿರುವವರೆಗೆ ಎಲ್ಲವೂ ತೃಪ್ತಿಕರವಾಗಿತ್ತು... ಆದರೆ ಯುದ್ಧ ಮುಗಿದಾಗ ಸಮಸ್ಯೆಗಳು ಶುರುವಿಟ್ಟುಕೊಂಡವು... ಎಲ್ಲರಿಗೂ ಕೆಲಸ ಕೊಡುವುದು ಕಷ್ಟಕರವಾಗಿ ಪರಿಣಮಿಸಿತು." ಮ್ಯಾನ್‌ಹಟನ್ ಯೋಜನೆಯಲ್ಲಿದ್ದ ಅನೇಕ ಮಂದಿ ವಿಜ್ಞಾನಿಗಳು ಮತ್ತು ಸರಕಾರಿ ಅಧಿಕಾರಿಗಳಿಗೆ ತಮ್ಮ ನೌಕರಿ ಇಲ್ಲಿಗೇ ಅಂತ್ಯಗೊಳ್ಳುವುದು ಬೇಡವಾಗಿತ್ತು. ಅದೇ ರೀತಿ ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದ ವೆಸ್ಟಿಂಗ್ ಹೌಸ್‌ನಂತಹ ಕಾರ್ಪೊರೇಟುಗಳಿಗೂ ತಮ್ಮ ಗುತ್ತಿಗೆ ಮುಂದುವರಿಯುವುದು ಬೇಕಾಗಿತ್ತು. ಈಗಾಗಲೆ ಸ್ಥಾಪಿತವಾಗಿದ್ದ ಅಣ್ವಸ್ತ್ರ ಉದ್ಯಮದ ವ್ಯವಸ್ಥೆಯನ್ನು ಏನಾದರೂ ಮಾಡಿ ಮುಂದುವರಿಸಿಕೊಂಡು ಹೋಗಬೇಕಿತ್ತು. ಅಂತಿಮವಾಗಿ ಪರ್ಯಾಯ ಉಪಯೋಗಗಳನ್ನು ಶೋಧಿಸುವ ಕಾರ್ಯಕ್ಕೆ ಚಾಲನೆ ನೀಡಲಾಯಿತು. ಅಣು ತಂತ್ರಜ್ಞಾನವನ್ನು ಇನ್ನೇನಾದರೂ ಉಪಯೋಗಕ್ಕಾಗಿ ಬಳಸಿಕೊಳ್ಳಬಹುದೇ ಎಂಬ ಬಗ್ಗೆ ಅನೇಕ ಜಿಜ್ಞಾಸೆಗಳು ನಡೆದವು:

* ನೆಲದಲ್ಲಿ ತೂತು ಕೊರೆಯಲು ಡೈನಮೈಟ್‌ಗೆ ಬದಲಿಯಾಗಿ ಉಪಯೋಗಿಸುವುದು
* ಪನಾಮಾ ಭೂಸಂದಿಯಲ್ಲಿ 125 ಅಣ್ವಸ್ತ್ರಗಳನ್ನು ಏಕಕಾಲಕ್ಕೆ ಸ್ಫೋಟಿಸಿ ಅಟ್ಲಾಂಟಿಕ್ ಮತ್ತು ಪೆಸಿಫಿಕ್ ಸಾಗರಗಳನ್ನು ಜೋಡಿಸುವ ಕಾಲುವೆಯೊಂದನ್ನು ನಿರ್ಮಿಸುವುದು
* ಆಹಾರ ಪದಾರ್ಥಗಳ ಮೇಲೆ ಅಣುವಿಕಿರಣವನ್ನು ಹಾಯಿಸಿ ಮೇಲುನೋಟಕ್ಕೆ ವರ್ಷಗಟ್ಟಲೆ ಕೆಡದಂತೆ ಇರಿಸುವುದು
* ಅಣುಶಕ್ತಿ ಚಾಲಿತ ವಿಮಾನಗಳು (ಆದರೆ ಪೈಲೆಟ್‌ಗಳ ಸುರಕ್ಷತೆಗಾಗಿ ಬೇಕಾಗುವ ಸೀಸದ ಪರದೆಗಳ ತೂಕ ವಿಪರೀತವಾಗುವ ಕಾರಣಕ್ಕೆ ಈ ಯೋಜನೆಯನ್ನು ಕೈಬಿಡಲಾಯಿತು!)
* ಕೊನೆಯದಾಗಿ ಹೊಳೆದ ಉಪಾಯವೇ ಬೈಜಿಕ ಕ್ರಿಯೆಯಲ್ಲಿ ಉತ್ಪತ್ತಿಯಾಗುವ ಶಾಖದಿಂದ ನೀರನ್ನು ಕುದಿಸಿ ವಿದ್ಯುತ್ತನ್ನು ಉತ್ಪಾದಿಸುವುದು.

ಕೊನೆಯ ಮಾತು

ವಿಕಿರಣವು ಮಾರಕವಲ್ಲ ಅಥವಾ ಕನಿಷ್ಠ ಅಪಾಯಕಾರಿಯೆಂದು ಬಿಂಬಿಸುತ್ತಾ ಬಂದ ಚೂನಂತಹ ಅಣು ವಿಜ್ಞಾನಿಗಳು ಬೈಜಿಕ ತಂತ್ರಜ್ಞಾನವನ್ನೇ ಮುನ್ನಡೆಸಲು ಯತ್ನಿಸಿದರು. ಪ್ರಸಕ್ತವಾಗಿ ಜಗತ್ತಿನಾದ್ಯಂತದಲ್ಲಿರುವ ಎಲ್ಲಾ 443 ಅಣು ವಿದ್ಯುತ್ ಸ್ಥಾವರಗಳನ್ನೂ ಮುಚ್ಚಬೇಕು ಮಾತ್ರವಲ್ಲ ಆಡ್ಮಿರಲ್ ರಿಕೋವರ್ ಸಾರಿರುವಂತೆ ಪರಮಾಣು ರಿಯಾಕ್ಟರ್‌ಗಳ ಮೇಲೆ ನಿಷೇಧ ಹೇರಬೇಕು. ಸೌರ, ಗಾಳಿ (ಇದು ಅಣು ವಿದ್ಯುತ್ತಿಗಿಂತಲೂ ಅಗ್ಗವಾಗಿದ್ದು ಪ್ರಸ ಕ್ತವಾಗಿ ಅತ್ಯಂತ ವೇಗದಲ್ಲಿ ಬೆಳೆಯುತ್ತಿರುವ ಶಕ್ತಿಮೂಲ), ಭೂಶಾಖ ಮತ್ತಿತರ ಪರ್ಯಾಯ ಶಕ್ತಿ ಮೂಲಗಳು ವಿಶ್ವದ ಅವಶ್ಯಕತೆಯನ್ನು ಪೂರೈಸಬಲ್ಲವೆಂದು ಪ್ರಮುಖ ಸಂಶೋಧನೆಗಳ ಮೂಲಕ ತಿಳಿದು ಬಂದಿದೆ. ಅಣು ವಿದ್ಯುತ್ತಿನಂತೆ ಮಾರಣಾಂತಿಕವಲ್ಲದ ಈ ಸುರಕ್ಷಿತ, ನಿರ್ಮಲ ಮತ್ತು ನವೀಕರಿಸಬಹುದಾದ ಶಕ್ತಿ ಮೂಲಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಬೇಕಿದೆ. □

ನಮ್ಮಂತವನೇ ಒಬ್ಬ

ಕ್ರಾಂತಿಕಾರಿ
ಬರುವುದಿಲ್ಲ
ಆಕಾಶದಿಂದ ಹಾರಿ
ನಮ್ಮ ಹಾಗೇನೆ ಅವನೂ
ಹುಡುಕುತಿದ್ದಾನೆ
ಈ ಕಗ್ಗತ್ತಲ ಕಾಲದಲ್ಲಿ
ಕ್ರಾಂತಿಯ ದಾರಿ
ಕವಿತೆಯೆಂಬ ಬೆಂಕಿ
ಕಡ್ಡಿ ಗೀರಿ!

○ ಕು.ಸ. ಮಧುಸೂದನ್

ಕನ್ನಡ ವಿಚಾರ ಸಾಹಿತ್ಯ : ಒಂದು ಹಿನ್ನೋಟ

ರಾಮಯ್ಯ

ತರ್ಕಬದ್ಧ ಅನುಮಾನ, ಸ್ವತಂತ್ರ ವಿಚಾರಗಳಿಗೆ ಅವಕಾಶವಿರುವ ಬೌದ್ಧಿಕ ಸಾಹಿತ್ಯವನ್ನು 'ವಿಚಾರ ಸಾಹಿತ್ಯ' ಎಂದು ಹೇಳಬಹುದಾಗಿದೆ. ಹಲವಾರು ವಿಷಯಗಳಲ್ಲಿ ಹುಟ್ಟುವ ಶಂಕೆ, ಪ್ರಮೇಯ, ಸಮಸ್ಯೆಗಳ ಬಗೆಹರಿಕೆಗೆ, ವಾದ-ವಿವಾದಕ್ಕೆ ಆಸ್ಪದ ಕೊಡುವ ಹೊಸ ಹೊಸ ತರ್ಕಸರಣಿ, ವಿಚಾರ ಧೋರಣೆಗಳ ಮಸೆತಕ್ಕೆ ಮೀಸಲಾಗಿ ಹುಟ್ಟುವ ಸಾಹಿತ್ಯವೇ ವಿಚಾರಸಾಹಿತ್ಯ. ಸಾಹಿತ್ಯ, ಸಂಸ್ಕೃತಿ, ಸಂಪ್ರದಾಯಗಳ ಚಲನಶೀಲತೆಯನ್ನು ಹೊಸ ಹೊಸ ವೈಚಾರಿಕ ಸೂತ್ರಗಳೊಂದಿಗೆ ವಿವರಿಸುವ, ವಿಶ್ಲೇಷಿಸುವ ಪದ್ಧತಿಯನ್ನು ಕೂಡ ವೈಚಾರಿಕ ಸಾಹಿತ್ಯವೆಂದು ಹೇಳಬಹುದು. ಮನುಷ್ಯನ ಅಸ್ತಿತ್ವವನ್ನು ಹುಡುಕುವ, ಹುಡುಕಾಟಕ್ಕೆ ಅರ್ಥ ಕಂಡುಕೊಳ್ಳುವ ದಿಕ್ಕಿನಲ್ಲಿ ವೈಚಾರಿಕ ಸಾಹಿತ್ಯ ಪ್ರಯತ್ನ ಮಾಡುತ್ತದೆ. ಈ ಸಾಹಿತ್ಯದಲ್ಲಿ ಪ್ರಚೋದನೆಗೆ, ಶೋಧನೆಗೆ ಮತ್ತು ವಿಶ್ಲೇಷಣೆಗೆ ಹಾಗೂ ಪ್ರಶ್ನೆಗೆ ಅಗತ್ಯವಾದ ಒತ್ತು ಇರುತ್ತದೆ. ಎಲ್ಲಾ ಬದಲಾವಣೆಯ ಮೂಲ ವಿಚಾರಕ್ರಾಂತಿ. ಇತಿಹಾಸ, ಭೂಗೋಳ, ಜ್ಯೋತಿಷ್ಯ, ಕೈಗಾರಿಕೆ, ಕಲೆ, ವಿಜ್ಞಾನ, ವೈದ್ಯ, ಕಾಯಿದೆ, ವಾಣಿಜ್ಯ, ಇತ್ಯಾದಿ ಎಲ್ಲಾ ವಿಷಯಗಳ ವಿವೇಚನೆಯನ್ನು ವಿಚಾರ ಸಾಹಿತ್ಯವೆನ್ನಬಹುದಾಗಿದೆ.

"ನಮಗೆ ಪರಿಚಿತವಾಗಿ ಬಂದಿರುವ ತಿಳುವಳಿಕೆಯಲ್ಲಿ ಸಂಶಯ ಕಾಣಿಸತೊಡಗಿದಾಗ, ನಾವು ಹಿರಿಯರಿಂದ ಕಲಿತ ಜ್ಞಾನಕ್ಕೂ, ನಮ್ಮ ಸ್ವಂತ ಲಹರಿಗಳಿಗೂ ಹೊಂದಿಕೆ ಕಾಣಿಸದಾದಾಗ, ನಾವು ಕಲಿತ ಜ್ಞಾನ ದಲ್ಲಿಯೇ ಪರಸ್ಪರ ವೈಷಮ್ಯಗಳು ಕಾಣಿಸಿ ಅದೇ? ಇದೇ? ಎಂಬ ಅಪನಂಬಿಕೆ ಮೂಡಿದಾಗ" ವಿಚಾರ ಸಾಹಿತ್ಯ ಉದಯಿಸುತ್ತದೆ ಎನ್ನುತ್ತಾರೆ ಡಾ. ಶಿವರಾಮಕಾರಂತರು. ಹೊಸ ಸಾಕ್ಷಿಗಳು ಹಳೆಯ ಊಹೆಗಳನ್ನು ಸುಳ್ಳಾಗಿ ಮಾಡಿದಾಗ ವಿಚಾರಕ್ಕೆ ಆಹ್ವಾನ. ಆಗ ಜಾಯಮಾನದಿಂದ ಹಿಡಿದು ಬಂದ ಜಾಡನ್ನು ಬಿಟ್ಟು, ತುಳಿದ ದಾರಿಯಿಂದ ಅಡ್ಡ ಸರಿದು ಹೊಸ ನಿಟ್ಟಿನಲ್ಲಿ ನೋಡಲು ಹಾಗೂ ನಡೆಯಲು ವ್ಯಕ್ತಿ ಹವಣಿಸುತ್ತಾನೆ. ಹಾಗಾಗಿ ಪಾರಂಪರಿಕ ಜ್ಞಾನವನ್ನು ವಿಮರ್ಶೆಯ ಒರೆಗಲ್ಲಿಗೆ ಒಡ್ಡಿದಾಗ ವೈಚಾರಿಕತೆ ಹುಟ್ಟಿಕೊಳ್ಳುತ್ತದೆ. ಇಂತಹ ವೈಚಾರಿಕ ಸಾಧ್ಯತೆಗಳನ್ನು ಒಂದು ಮಾರ್ಗವಾಗಿ ಮಂಡಿಸುವ ವಾದವನ್ನು ವಿಚಾರವಾದವೆನ್ನುತ್ತೇವೆ.

ಚರಿತ್ರೆಯುದ್ದಕ್ಕೂ ಅನಕ್ಷರಸ್ಥರ ಮುಗ್ಧತೆಯನ್ನು ತಮ್ಮ ಮೂಲ ಬಂಡವಾಳವನ್ನಾಗಿ ಮಾಡಿಕೊಂಡು ಜನರ ಬದುಕಿಗೆ ಮಾರ್ಗ ರೂಪಿಸುವವರಂತೆ ತೋರಿ ಬಂದ ಪುರೋಹಿತಶಾಹಿಗಳು ದೇವರು, ಧರ್ಮ ಹಾಗೂ ಭಕ್ತಿಯ ಹೆಸರಿನಲ್ಲಿ ಪ್ರಧಾನ ಶೋಷಕರಾಗಿದ್ದರು. ಧಾರ್ಮಿಕ ಕೃತಿಗಳಲ್ಲಿ ಅಡಕವಾಗಿರುವ ವೈಚಾರಿಕ ಅಂಶಗಳನ್ನು ಓದಿ ಅರ್ಥೈಸಲಾರದ ಜನ ಪುರೋಹಿತಶಾಹಿಗಳ ಹಿಡಿತಕ್ಕೆ ಸಿಕ್ಕಿ ನರಳುವಂತಾಗಿತ್ತು. ಶೋಷಣೆಯು ಮಿತಿ ಮೀರಿ, ಶೋಷಣೆಯನ್ನು ಪ್ರಶ್ನಿಸುವವರಿಗೆ ಧರ್ಮದ್ರೋಹಿಗಳು ಎಂಬ ಹಣೆಪಟ್ಟಿಯನ್ನು ಕಟ್ಟಲಾಗುತ್ತಿತ್ತು. ರೂಢಿಗತ ಸಂಪ್ರದಾಯಗಳಿಂದ ಮುಗ್ಧ ಜನಗನ್ನು ಬಿಡುಗಡೆಗೊಳಿಸಲು ಒಂದು ಕಾಲಕ್ಕೆ ಭಾರತದಲ್ಲಿ ವಿಚಾರವಾದದ ಮುಂಚೂಣಿಯಲ್ಲಿದ್ದ ಚಾರ್ವಾಕರು ಪ್ರಮುಖವಾಗಿ ಪ್ರಯತ್ನಿಸಿದ್ದರು. ವಿಚಾರ ಸಾಹಿತ್ಯವೆಂಬುದು ಪೂರ್ಣ ಪ್ರಮಾಣದಲ್ಲಿ ಆಗ ಇಲ್ಲದೇ ಹೋಗಿದ್ದರೂ ವೇದ ಉಪನಿಷತ್ತುಗಳ ಕಾಲದಿಂದಲೂ ಕೂಡ ಜನರ ಬೌದ್ಧಿಕ ಹಸಿವನ್ನು ನೀಗಿಸುವಂತಹ ಬೌದ್ಧಿಕ ಪ್ರಜ್ಞೆ ಇತ್ತು. ಇದಕ್ಕೆ ಹಿನ್ನೆಲೆಯಾಗಿ ವೇದಗಳ ಪ್ರಾಮಾಣ್ಯವನ್ನು ಪ್ರಶ್ನಿಸಿದ್ದ ಉದ್ದಾಲಕ, ಅರುಣಿ, ಮೈತ್ರೇಯಿಯಂತಹ ಬ್ರಹ್ಮವಾದನಿಯರು ಇದ್ದರೆಂದು ತಿಳಿದು ಬರುತ್ತದೆ.ರೂಢಿಗತ ಮಾರ್ಗವನ್ನು ತಿರಸ್ಕರಿಸಿದ ಬುದ್ಧ ಭಾರತದ ವಿಚಾರವಾದಕ್ಕೆ ಬಲವಾದ ಅಡಿಪಾಯ ಹಾಕಿದ.

ಕನ್ನಡದ ಸಂದರ್ಭದಲ್ಲಿ, 10ನೆಯ ಶತಮಾನದಲ್ಲಿ ವ್ಯಕ್ತಿಯ ಶೀಲಕ್ಕಿಂತ ಕುಲಕ್ಕೆ ಅಗ್ರಸ್ಥಾನ ಇದ್ದುದನ್ನು ಮನಗಂಡಿದ್ದ ಪಂಪ, ಮಹಾ ಭಾರತದ ಪಾತ್ರವಾದ ಕರ್ಣನ ಮೂಲಕ ಜಡ್ಡುಗಟ್ಟಿದ್ದ ಸ್ಥಾವರ ವ್ಯವಸ್ಥೆಯನ್ನು ಪ್ರಶ್ನಿಸುವ ಮೂಲಕ ಮಾನವೀಯ ಪರ ಧೋರಣೆಯನ್ನು ವ್ಯಕ್ತಮಾಡಿದ್ದಾನೆ. ದುರ್ಯೋಧನನು ತನ್ನ ಸೇನಾನಾಯಕರನ್ನಾಗಿ ಭೀಷ್ಮರನ್ನು ಆರಿಸಿ ವೀರಪಟ್ಟವನ್ನು ಕಟ್ಟಿದ ಸಂದರ್ಭದಲ್ಲಿ ಭೀಷ್ಮನ ವಯಸ್ಸನ್ನು ಕುರಿತು ಕರ್ಣ ಟೀಕಿಸುತ್ತಾನೆ. ಇದರಿಂದ ಸಿಡಿಮಿಡಿಗೊಂಡ ಭೀಷ್ಮಪಕ್ಷಪಾತಿ ದ್ರೋಣಾಚಾರ್ಯ ಕುಲದ ಪ್ರಶ್ನೆ ಎತ್ತಿ ಕರ್ಣನನ್ನು ಹಂಗಿಸುತ್ತಾನೆ. ಕರ್ಣ 'ಎಲ್ಲಕ್ಕೂ ಮೊದಲೇ ಕುಲವನ್ನೇ ಏಕೆ ಮುಂದೆ ತರುತ್ತೀರಿ? ನೀವು ಹೇಳುವ ಕುಲ ಶತ್ರುಗಳನ್ನು ಅಟ್ಟಿ ತಿನ್ನುವುದಿಲ್ಲ. ನೀವು ಹೇಳುವ ಕುಲ ಕುಲವಲ್ಲ. ಕುಲ ಎನ್ನುವುದು ಹುಟ್ಟಿನಿಂದ ಬರದೆ ಶೀಲದಿಂದ ಬರುತ್ತದೆ. ನಡೆ-ನುಡಿಗಳ ಮೇಲೆ ಅದು ನಿರ್ಧರಿತವಾಗುತ್ತದೆ. ಛಲ, ಗುಣ, ಅಭಿಮಾನ, ಪರಾಕ್ರಮ ಇವು ಯಾರಲ್ಲಿವೆಯೋ ಅವನೇ ಕುಲೀನ' ಎನ್ನುತ್ತಾನೆ. ಪಂಪನ 'ವಿಕ್ರಮಾರ್ಜುನ ವಿಜಯ' ಕೃತಿಯಲ್ಲಿ ಕುಲದ ಪ್ರಶ್ನೆ ಕುರಿತ ಈ ಮಾತು ಒಂದು ಸಾವಿರ ವರ್ಷಗಳ ನಂತರವೂ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ವಲಯಗಳಲ್ಲಿ 21ನೆಯ ಶತಮಾನದಲ್ಲೂ ಪ್ರತಿಧ್ವನಿತಗೊಳ್ಳುತ್ತಿದೆ.

ಜಾತಿ ಹಾಗೂ ವರ್ಗ ವಿರೋಧಿ ಹೋರಾಟದ ಪ್ರಥಮ ನೆಲೆಗಳನ್ನು ಕಂಡರಿಸುವ ವಚನ ಚಳವಳಿಯು ಮೂಢನಂಬಿಕೆ, ಅಂಧ ಸಂಪ್ರದಾಯಗಳನ್ನು ವಿರೋಧಿಸಿತ್ತು. ರಾಜಾಶ್ರಯವನ್ನು ತಿರಸ್ಕರಿಸಿದ

ಮನುಷ್ಯನ ಅಸ್ತಿತ್ವವನ್ನು ಹುಡುಕುವ, ಹುಡುಕಾಟಕ್ಕೆ ಅರ್ಥ ಕಂಡುಕೊಳ್ಳುವ ದಿಕ್ಕಿನಲ್ಲಿ ವೈಚಾರಿಕ ಸಾಹಿತ್ಯ ಪ್ರಯತ್ನ ಮಾಡುತ್ತದೆ. ಈ ಸಾಹಿತ್ಯದಲ್ಲಿ ಪ್ರಚೋದನೆಗೆ, ಶೋಧನೆಗೆ ಮತ್ತು ವಿಶ್ಲೇಷಣೆಗೆ ಹಾಗೂ ಪ್ರಶ್ನೆಗೆ ಅಗತ್ಯವಾದ ಒತ್ತು ಇರುತ್ತದೆ. ಎಲ್ಲಾ ಬದಲಾವಣೆಯ ಮೂಲ ವಿಚಾರಕ್ರಾಂತಿ. ಇತಿಹಾಸ, ಭೂಗೋಳ, ಜ್ಯೋತಿಷ್ಯ, ಕೈಗಾರಿಕೆ, ಕಲೆ, ವಿಜ್ಞಾನ, ವೈದ್ಯ, ಕಾಯಿದೆ, ವಾಣಿಜ್ಯ, ಇತ್ಯಾದಿ ಎಲ್ಲಾ ವಿಷಯಗಳ ವಿವೇಚನೆಯನ್ನು ವಿಚಾರ ಸಾಹಿತ್ಯವೆನ್ನಬಹುದಾಗಿದೆ.

ವಚನಕಾರರು ಶತಶತಮಾನಗಳಿಂದ ನಡೆದು ಬಂದ ಸ್ಥಾಪಿತ ನಿಲುವುಗಳನ್ನು ತಿರಸ್ಕರಿಸಿ, ಚಲನಶೀಲವಾದ ಜಂಗಮತ್ವವನ್ನು ಸ್ವೀಕರಿಸಿದರು. ಜಾತಿ, ಮತ, ಅಂತಸ್ತುಗಳನ್ನು ಮೀರಿದ ಇವರು ಬ್ರಾಹ್ಮಣ್ಯವನ್ನು ಖಂಡಿಸಿ, ಲಿಂಗಭೇದವನ್ನು ನಿರಾಕರಿಸಿ ಕಾಯಕ – ದಾಸೋಹಗಳಂತಹ ಮೌಲ್ಯಗಳನ್ನು ಸ್ಥಾಪಿಸಿದರು. ಸಂಸ್ಕೃತವನ್ನು ತಿರಸ್ಕರಿಸಿ, ಕನ್ನಡವನ್ನು ಬಳಕೆಗೆ ತಂದು ಸರಳವಾಗಿ ಬೋಧಿಸಿದರು. 'ದೇಹವೇ ದೇಗುಲ' ಎಂಬ ಪರ್ಯಾಯ ಕಲ್ಪನೆಯನ್ನು ಸಾಕಾರಗೊಳಿಸಿ, ವೈದಿಕ ಆಚರಣೆಗಳಲ್ಲಿನ ಸಾಂಸ್ಥಿಕ ಧರ್ಮವನ್ನು ವಿರೋಧಿಸಿದರು.

ಆ ನಂತರ ತಮ್ಮದೇ ಆದ ಪ್ರತಿಭಟನೆಯ ಪರಂಪರೆಯನ್ನು ನಿರ್ಮಿಸಿದ ಮಲೆಮಹದೇಶ್ವರ ಮತ್ತು ಮಂಟೇಸ್ವಾಮಿಯವರಂಥ ಕನ್ನಡದ ಧಾರ್ಮಿಕ ಜನಪದ ಕಾವ್ಯಗಳ ಕಥಾನಾಯಕರು ಮುಖ್ಯರು. ಭಕ್ತಿ ಪಂಥ ಸ್ಥಾಪಿತ ಹಿತಾಸಕ್ತಿಗಳ ಕೈವಶವಾಗಿ ಜಡಸ್ವರೂಪಿಯೂ, ಜನವಿರೋಧಿಯೂ ಆಗಿ ವಚನ ಚಳವಳಿ ಜಂಗಮತ್ವವನ್ನು ಕೇವಲ ಮಾರ್ಜಾಲ ನ್ಯಾಯವನ್ನಾಗಿ ಆಚರಿಸಿಕೊಂಡಾಗ ಅದರ ವಿರುದ್ಧ ನಡೆದ ಕೆಳವರ್ಗದ ಚಳವಳಿಯ ದಾಖಲೆಗಳನ್ನು 'ಮಲೆಯ ಮಾದೇಶ್ವರ' ಮತ್ತು 'ಮಂಟೇಸ್ವಾಮಿ' ಎಂಬ ಎರಡು ಜನಪದ ಮಹಾಕಾವ್ಯಗಳಲ್ಲಿ ಕಾಣಬಹುದಾಗಿದೆ ಎಂದು ಡಾ.ಸಿ.ಎನ್ ರಾಮಚಂದ್ರನ್ ಹೇಳುತ್ತಾರೆ. ವಚನ ಚಳವಳಿಯು ವರ್ಣ ವ್ಯವಸ್ಥೆಯ ಶ್ರೇಣೀಕರಣವನ್ನು ಮುರಿದು ಸಮಾನ ವ್ಯಕ್ತಿತ್ವದ ಆಧಾರದ ಮೇಲೆ ಧಾರ್ಮಿಕ ಪಂಥವೊಂದನ್ನು ನಿರ್ಮಾಣ ಮಾಡುವ ಪ್ರಯತ್ನ ನಡೆಸಿತು.

ವಚನೋತ್ತರದಲ್ಲಿ ಮೇಲ್ಜಾತಿಗಳು ಕೆಳಜಾತಿ ಜನವನ್ನು ಪುನಃ ಜಾತಿ ಭೇದದಿಂದ ನೋಡುವ ತಾತ್ವಿಕ ವಿಪರ್ಯಾಸದ ವಿರುದ್ಧ ಕೆಳಜಾತಿಗಳ ಬಹು ದೊಡ್ಡ ಪ್ರತಿಭಟನೆ ಕಂಡು ಬರುತ್ತದೆ. ಮಲೆ ಮಾದೇಶ್ವರ ಒಬ್ಬ ಸಾಂಸ್ಕೃತಿಕ ನಾಯಕನಾಗಿ ಕಂಡು ಬಂದರೆ, ಮಂಟೇಸ್ವಾಮಿ ಒಬ್ಬ ಆಧ್ಯಾತ್ಮಿಕ ನೇತಾರನಾಗಿ ಕಾಣಿಸಿಕೊಳ್ಳುತ್ತಾನೆ. ಈ ಕಾಡು ಜೀವಗಳು ಬಂಡುಕೋರ, ಆಧ್ಯಾತ್ಮಿಕವಾದಿಗಳಾಗಿದ್ದರು. ಪಟ್ಟಭದ್ರ ಸಂಸ್ಕೃತಿಗೆ ವಿರುದ್ಧವಾದ ಕೆಳವರ್ಗಗಳ ಅಸ್ತಿತ್ವವನ್ನು ಪುನರ್‌ಸ್ಥಾಪಿಸುವ ಪ್ರತಿಸಂಸ್ಕೃತಿಯೊಂದರ ನಿರ್ಮಾಣ ಇವರ ಉದ್ದೇಶವಾಗಿತ್ತು. ಈ ಉದ್ದೇಶದಿಂದಾಗಿಯೇ ಈ ಇಬ್ಬರೂ ಬುಡಕಟ್ಟುಗಳು ಹಾಗೂ ಶೂದ್ರಾತಿಶೂದ್ರರೇ ಅಧಿಕವಾಗಿದ್ದ ಕರ್ನಾಟಕದ ದಕ್ಷಿಣ ತುದಿಯನ್ನೇ ಆರಿಸಿಕೊಂಡರು.

ವಚನ ಸಾಹಿತ್ಯಕ್ಕಿಂತ ಕೊಂಚ ಭಿನ್ನವಾಗಿ ಬರೆದ ಕೀರ್ತನಕಾರರಾದ ದಾಸರು ಅರ್ಥಹೀನವೆನಿಸುವ ನಡವಳಿಕೆಗಳನ್ನು ತೀಕ್ಷ್ಣವಾಗಿ ವಿಮರ್ಶಿಸಿದರು. ಕುಲದ ನೆಲೆಯನ್ನು ಪ್ರಶ್ನಿಸಿದ್ದ ಇವರು ಜಾತಿ ವ್ಯವಸ್ಥೆಯನ್ನು ನಿರಾಕರಿಸಿ ಮಾನವೀಯ ಮೌಲ್ಯಗಳ ಸಾಕಾರಕ್ಕೆ ಯತ್ನಿಸಿದ್ದರು. ಹರಿದಾಸರು ಸಮಾಜದಲ್ಲಿನ ಅಂಕು ಡೊಂಕುಗಳನ್ನು, ವಕ್ರತೆಗಳನ್ನೂ ಖಂಡಿಸಿದ್ದಾರೆ. ಸಾಮಾಜಿಕ, ಧಾರ್ಮಿಕ ಕಂದಾಚಾರಗಳನ್ನು, ಸಮಾಜದ ಮೌಢ್ಯವನ್ನು, ಅರ್ಥವಿಲ್ಲದ, ವ್ಯರ್ಥ ಆಚಾರ–ಆಚರಣೆಗಳನ್ನು, ಡಾಂಭಿಕತನ, ಕಾಪಟ್ಯ, ಜಾತಿಯ ಅಹಂಕಾರ, ಜನರ ನಡತೆಯಲ್ಲಿನ ಅನೈತಿಕತೆ ಇವುಗಳನ್ನು ವಿಡಂಬಿಸಿ ಸಮಾಜದ ಸುಸ್ಥಿರತೆಗೆ ಯತ್ನಿಸಿದರು.

ಹಾಗೆಯೇ ಜಾತಿ, ಪಂಥ, ಮತ, ಸಂಪ್ರದಾಯಗಳ ಕಟ್ಟು ಕಟ್ಟಳೆಗಳಿಲ್ಲದೆ ಸಾಗಿದ ಸರ್ವಜ್ಞ ಜನಸಾಮಾನ್ಯರಲ್ಲಿನ ದೋಷ–ದೌರ್ಬಲ್ಯಗಳನ್ನು ತಿದ್ದುತ್ತಾ, ಅವರ ಮೌಢ್ಯವನ್ನು ನಿವಾರಿಸುತ್ತಾ, ಕುರುಡು ನಂಬಿಕೆಗಳನ್ನು ತನ್ನ ಮೊನಚಾದ ಚಾಟಿ ಏಟಿನಂತಹ ಮಾತುಗಳಿಂದ ಚುಚ್ಚುತ್ತಾ ಅವರಲ್ಲಿ ಎಚ್ಚರವನ್ನು ತಂದು ಸಮಾಜದಲ್ಲಿ ನೀತಿಯನ್ನು ನೆಲೆಗೊಳಿಸುವ ಕಾಯಕದಲ್ಲಿ ತೊಡಗಿ ಸಮಾಜವನ್ನು ಸುಧಾರಿಸುವ ಕೆಲಸವನ್ನು ಮಾಡಿದನು. ಹಿಂದೂ–ಮುಸ್ಲಿಂ ಧರ್ಮಗಳ ಏಕತೆಯ ಕನಸು ಕಂಡ ಸಂತ ಶಿಶುನಾಳ ಶರೀಫರು ಜಾತಿ, ಮತ, ಪಂಥಗಳಿಗೆ ಸೇರಿದ ನಾವೆಲ್ಲಾ ಒಂದು ಎಂಬ ಭಾವನೆಯನ್ನು ಮೂಡಿಸಿ ಭಾವೈಕ್ಯತೆಯನ್ನು ಮೂಡಿಸಿದರು.

> **ಜಾಗತಿಕ ವೈಚಾರಿಕ ಪರಂಪರೆಯಲ್ಲಿ ಎದ್ದು ಕಾಣುವ ಹೆಸರು ಕಾರ್ಲ್‌ಮಾರ್ಕ್ಸ ರದು. ವರ್ಗ ಹೋರಾಟ ಮತ್ತು ಕ್ರಾಂತಿಯ ನಂತರವೇ ಸಾಮಾಜಿಕ, ಆರ್ಥಿಕ ಸಮಾನತೆ ಸ್ಥಾಪಿತವಾಗುತ್ತದೆ ಎಂಬ ಅವರ ವಾದ ಕನ್ನಡ ಲೇಖಕರ ಮೇಲೆ ಪ್ರಭಾವ ಬೀರಿತ್ತು. ಹಿಂದುತ್ವ, ಜಾತಿ ಪದ್ಧತಿ ಮತ್ತು ಮನುಸ್ಮೃತಿ ಬಗೆಗೆ ಭಾರತದ ಆಧುನಿಕ ಸಂದರ್ಭದಲ್ಲಿ ಅತ್ಯಂತ ವಸ್ತುನಿಷ್ಠವಾಗಿ ಚಿಂತನೆ ನಡೆಸಿದ ಡಾ. ಬಿ.ಆರ್. ಅಂಬೇಡ್ಕರ್ ಆಧುನಿಕ ಹಾಗೂ ಮಾನವೀಯ ಮೌಲ್ಯಗಳಿಗೆ ಹಿಂದೂ ಧರ್ಮದ ಅಂತರಂಗದಲ್ಲಿ ಸ್ಥಳವೇ ಇಲ್ಲ ಎಂಬುದನ್ನು ಸೂಕ್ಷವಾಗಿ ವಿಶ್ಲೇಷಿಸಿದರು.**

ವೈಚಾರಿಕ ಸಾಹಿತ್ಯದ ವಿಶ್ವ ಪರಂಪರೆಯನ್ನು ಗಮನಿಸಿದರೆ, ವೈಚಾರಿಕ ಸಮಾಜದ ಹುಟ್ಟಿಗಾಗಿ ತಮ್ಮ ಚಿಂತನೆಗಳ ಮೂಲಕ ಶ್ರಮಿಸಿದ ಸಾಕ್ರೆಟೀಸ್ ನಮಗೆ ಮಾದರಿಯಾಗಿದ್ದಾನೆ. ತಮ್ಮ ವೈಜ್ಞಾನಿಕ ಮನೋಭಾವದ ಮೂಲಕ ವಿಚಾರದ ಬೆಳಕು ಚೆಲ್ಲಿದ ಕೋಪರ್‌ನಿಕಸ್, ಗೆಲಿಲಿಯೋ, ಡಾರ್ವಿನ್‌ರಂತಹ ವಿಜ್ಞಾನಿಗಳು, ಕಾರ್ಲ್ ಮಾರ್ಕ್ಸ್, ಬರ್ಟಂಡ್‌ರಸೆಲ್, ರಾಬರ್ಟ್ ಇಂಗಾರ್‌ಸಾಲ್, ಎಂ, ಎನ್, ರಾಯ್‌ರಂತಹ ವಿಚಾರವಂತರು ತಮ್ಮ ಪ್ರಖರ ವಿಚಾರಗಳಿಂದ ಜನರನ್ನು ತಿದ್ದಿದ್ದಾರೆ.

ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿಯ ಪ್ರಭಾವದಿಂದಾಗಿ ರೂಪುಗೊಂಡ ಲೋಕಗ್ರಹಿಕೆಯ ಕ್ರಮಗಳು ಶಿಕ್ಷಣದಲ್ಲಿಯೂ, ಸಾಹಿತ್ಯ ಲೋಕದಲ್ಲೂ ಪ್ರಭಾವ ಬೀರಿದವು. ಇದರಿಂದಾಗಿ ಲೋಕದ ಅನುಭವವನ್ನು ವೈಚಾರಿಕವಾಗಿ ಗ್ರಹಿಸಲು ಸಾಧ್ಯವಾಯಿತು. ಆಧುನಿಕ ವಿಜ್ಞಾನ, ತಂತ್ರಜ್ಞಾನ, ಅರ್ಥಶಾಸ್ತ್ರ, ಆಲೋಚನಾ ವಿಧಾನಗಳು ಪರಂಪರಾಗತವಾಗಿ ರೂಪುಗೊಂಡಿದ್ದ ಮತ–ಧರ್ಮ, ಆಧ್ಯಾತ್ಮಿಕ ಮತ್ತು ತತ್ವಶಾಸ್ತ್ರಗಳ ಭಾಷೆಗಳನ್ನು ಬಿಟ್ಟು ಮನುಷ್ಯ ಕೇಂದ್ರಿತ ಚಿಂತನೆಗಳ ಕಡೆಗೆ ನಮ್ಮನ್ನು ತಿರುಗುವಂತೆ ಮಾಡಿದವು. ಮಾನವತಾವಾದ, ಉದಾರವಾದಿ ನೆಲೆಗಳು ಕೇಂದ್ರಕ್ಕೆ ಬಂದವು. ಮತ–ಧರ್ಮಗಳು ಸಮಾಜವನ್ನು ವಿಭಾಗಿಸಿವೆ ಎಂಬ ಧೋರಣೆಯು ಹೊಸ ಬಗೆಯ ದೃಷ್ಟಿಕೋನಕ್ಕೆ ಕಾರಣವಾಯಿತು. ಬಾಳುವೆಯೆ ತನಗೆ ಬೆಳಕು ಎಂಬ ಅರಿವನ್ನು ಶಿವರಾಮಕಾರಂತರು ಕನ್ನಡಿಗರಿಗೆ ನೀಡಿದ್ದಾರೆ.

ನಮ್ಮ ಅಳತೆಯನ್ನು ಮೀರಲಾರದ ದೇವರು, ವಿಚಾರ ವಿಪ್ಲವ, ಬಾಳ್ವೆಯ ಬೆಳಕು ಈ ಕೃತಿಗಳಲ್ಲಿ ವೈಚಾರಿಕ ಮನೋಧರ್ಮವೂ, ಜೀವನ ದರ್ಶನವೂ ಮಿಳಿತವಾಗಿ ಹೊಸ ಬಗೆಯ ವೈಚಾರಿಕ ದೃಷ್ಟಿಕೋನವು ಬೆಳೆಯಿತು. ಕನ್ನಡ ವೈಚಾರಿಕ ಸಾಹಿತ್ಯದಲ್ಲಿ ಪ್ರಧಾನವಾಗಿ ಗುರುತಿಸಲ್ಪಡುವ ಕುವೆಂಪು ಅವರು ಸಮಗ್ರ ಸಂಪ್ರದಾಯ ಮೌಢ್ಯಕ್ಕೆ ವಿರುದ್ಧವಾಗಿ ನಿಲ್ಲುವುದರ ಮೂಲಕ ಜನತೆಗೆ ಹೊಸದನಿಯನ್ನು ನೀಡಿದರು. ಅವರ ಚಿಂತನೆಗಳಲ್ಲಿ ವೈಚಾರಿಕ ಸಂವಾದದಲ್ಲಿ, ವೈಜ್ಞಾನಿಕವಾದ, ತಾರ್ಕಿಕವಾದ ತಳಹದಿಯನ್ನು ಗುರುತಿಸಬಹುದಾಗಿದೆ. ತಮ್ಮ 'ವಿಚಾರಕ್ರಾಂತಿಗೆ ಆಹ್ವಾನ' ಪುಸ್ತಕದಲ್ಲಿ ಶತಶತಮಾನಗಳಿಂದ ಬೆಳೆದು ಬಂದಿರುವ ಜಾತಿ, ಮತ, ಆಚಾರ, ಸಂಪ್ರದಾಯಗಳ ಹೆಸರಿನಲ್ಲಿ ನಡೆಯುತ್ತಿರುವ ಮೌಢ್ಯ ಮೂಲವಾದ ಅವೈಜ್ಞಾನಿಕ ಘಟನೆಗಳು ನಮ್ಮ ಪ್ರಗತಿಗೆ ಕಂಟಕಪ್ರಾಯವಾಗಿವೆ. ಇವುಗಳನ್ನು ತೊಡೆದು ಹಾಕಲು ಇಂದಿನ ಯುವ ಸಮುದಾಯವು ವೈಚಾರಿಕ ಕ್ರಾಂತಿಯನ್ನು ಒಂದು ಮನೋಧರ್ಮವನ್ನಾಗಿ ಸ್ವೀಕರಿಸಬೇಕೆಂದು ಕರೆ ನೀಡಿದರು. ಹಾಗೆಯೇ ಮೂರ್ತಿರಾಯರ 'ದೇವರು' ಮಹತ್ವದ ವೈಚಾರಿಕ ಅಂಶಗಳನ್ನು ಶೋಧಿಸುತ್ತದೆ.

ಭಾರತದಲ್ಲಿ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರದ ಸಂದರ್ಭದಲ್ಲಿ ಎಡ ಪಂಥೀಯ ಚಿಂತನೆಯಲ್ಲಿ ಮೂಡಿ ಬಂದ ಪ್ರಗತಿಶೀಲ ಸಾಹಿತ್ಯ ಚಳವಳಿಯಲ್ಲಿ ಬಂದ ಬಸವರಾಜಕಟ್ಟೀಮನಿ ಹಾಗೂ ನಿರಂಜನರು ಪ್ರಗತಿಪರ ನಿಲುವು ಹಾಗೂ ಎಡ ಪಂಥೀಯ ರಾಜಕೀಯ ಚಿಂತನೆಗಳ ಮೂಲಕ ಬಡತನ, ವರ್ಗ, ಜಾತಿ ಸಮಸ್ಯೆ, ವೇಶ್ಯಾ ಸಮಸ್ಯೆ ಮೊದಲಾದ ಸಮಕಾಲೀನ ಸಮಸ್ಯೆಗಳನ್ನು ಚಿತ್ರಿಸುವಾಗ ವರ್ತಮಾನಕ್ಕೆ ಮಹತ್ವ ನೀಡಿದ್ದರು.

ನಮ್ಮ ಸಾಮಾಜಿಕ, ರಾಜಕೀಯ ವ್ಯವಸ್ಥೆಗಳನ್ನು ಮೂಲವಾಗಿಟ್ಟುಕೊಂಡು ಹೊಸ ರೀತಿಯಲ್ಲಿ ಕಾವ್ಯ ರಚಿಸಿ ಒಂದು ಜನಾಂಗದ ಕಣ್ಣು ತೆರೆಸಿದ ಕವಿ ಎಂ. ಗೋಪಾಲಕೃಷ್ಣ ಅಡಿಗ; ಅಸ್ತಿತ್ವವಾದ, ಸಮಾಜವಾದವನ್ನು ಮೇಳವಿಸಿಕೊಂಡ ಸೈದ್ಧಾಂತಿಕ ನಿಲುವಿನ ಅನಂತಮೂರ್ತಿ; ಮನುಷ್ಯನ ನೀಚತನವನ್ನು ಆಳವಾಗಿ ಶೋಧಿಸಿದ ಲಂಕೇಶರು; ಎಲ್ಲ ಮುಖ್ಯ ಘಟನೆಗಳಲ್ಲೂ ಐತಿಹಾಸಿಕ ಕಾರಣಗಳನ್ನು ಹುಡುಕಿ ಸಮಾಜದ ಸ್ಥಿತಿ–ಗತಿ ಅವಲೋಕಿಸುವ ಪ್ರಯೋಗಾತ್ಮಕ ಗುಣ ಹೊಂದಿದ್ದ ತೇಜಸ್ವಿಯವರು ಕನ್ನಡ ವೈಚಾರಿಕತೆಯನ್ನು ಮತ್ತೊಂದು ದಿಕ್ಕಿನೆಡೆಗೆ ಒಯ್ದರು.

ಜಾಗತಿಕ ವೈಚಾರಿಕ ಪರಂಪರೆಯಲ್ಲಿ ಎದ್ದು ಕಾಣುವ ಹೆಸರು ಕಾರ್ಲ್‌ಮಾರ್ಕ್ಸ್‌ರದು. ವರ್ಗ ಹೋರಾಟ ಮತ್ತು ಕ್ರಾಂತಿಯ ನಂತರವೇ ಸಾಮಾಜಿಕ, ಆರ್ಥಿಕ ಸಮಾನತೆ ಸ್ಥಾಪಿತವಾಗುತ್ತದೆ ಎಂಬ ಅವರ ವಾದ ಕನ್ನಡ ಲೇಖಕರ ಮೇಲೆ ಪ್ರಭಾವ ಬೀರಿತ್ತು. ಹಿಂದುತ್ವ, ಜಾತಿ ಪದ್ಧತಿ ಮತ್ತು ಮನುಸ್ಮೃತಿ ಬಗೆಗೆ

ಭಾರತದ ಆಧುನಿಕ ಸಂದರ್ಭದಲ್ಲಿ ಅತ್ಯಂತ ವಸ್ತುನಿಷ್ಠವಾಗಿ ಚಿಂತನೆ ನಡೆಸಿದ ಡಾ. ಬಿ.ಆರ್. ಅಂಬೇ

ಡ್ಕರ್ ಆಧುನಿಕ ಹಾಗೂ ಮಾನವೀಯ ಮೌಲ್ಯಗಳಿಗೆ ಹಿಂದೂ ಧರ್ಮದ ಅಂತರಂಗದಲ್ಲಿ ಸ್ಥಳವೇ ಇಲ್ಲ ಎಂಬುದನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದರು. ಮಾನವ-ಮಾನವನನ್ನು ಕಿತ್ತು ತಿನ್ನುವುದೇ ಹಿಂದೂಧರ್ಮದ ನಿಜವಾದ ಅನುಭವ. ಅಸ್ಪೃಶ್ಯತೆ ಮತ್ತು ಜಾತಿಪದ್ಧತಿಯನ್ನು ತೆಗೆದು ಬಿಟ್ಟರೆ ಹಿಂದೂಧರ್ಮಕ್ಕೆ ಅಸ್ತಿತ್ವವೇ ಇಲ್ಲ ಎಂಬ ಇವರ ವಾದದ ಹಿಂದೆ ಕೋಟ್ಯಾಂತರ ದಲಿತರ ನಿಜ ಜೀವನದ ನೋವಿನ ಹಿನ್ನೆಲೆಯಿತ್ತು. ಹಿಂದೂಧರ್ಮ ಮತ್ತು ಜಾತಿ ವ್ಯವಸ್ಥೆಯ ವಿರುದ್ಧ ಉಗ್ರವಾಗಿ ಹೋರಾಡಿದ ನಾಸ್ತಿಕ ವಾದಿಯಾದ ಪೆರಿಯಾರ್‌ರವರು ಮನುಷ್ಯನ ಪ್ರಗತಿಗೆ ದೇವರು ಮತ್ತು ಧರ್ಮಗಳ ಆಗತ್ಯವೇ ಇಲ್ಲ ಎಂದ 20ನೇಯ ಶತಮಾನದ ಆಧುನಿಕ ನಾಸ್ತಿಕರಲ್ಲಿ ಬಹಳ ಪ್ರಭಾವಶಾಲಿಯಾದವರು.

ಶೂದ್ರರ ಗೂಲಾಮಗಿರಿ, ಬ್ರಾಹ್ಮಣ್ಯದ ಅಪಾಯಗಳು, ಸ್ತ್ರೀಯರ ಕಷ್ಟ-ನಷ್ಟಗಳು, ಮೊದಲಾದವುಗಳನ್ನು ಸದ್ಯದ ರಾಜಕೀಯ ಲಾಭ ನಷ್ಟಗಳನ್ನು ಮೀರಿ ಚರ್ಚಿಸಿದ್ದ ರಾಮಮನೋಹರ ಲೋಹಿಯಾ, ಭಾರತದ ಮತೀ ಯವಾದಕ್ಕೆ ಪೂರ್ವಾಗ್ರಹಗಳು, ಕಂದಾಚಾರಿಗಳು, ಸರ್ಕಾರಗಳು, ಪತ್ರಿಕೆಗಳು ಎಲ್ಲವೂ ಕಾರಣ ಎಂಬುದನ್ನು ಕಂಡುಕೊಂಡಿದ್ದರು. ಇವರು ಅಂಬೇಡ್ಕರರಂತೆ ಭಾರತದ ಜಾತಿ ಪದ್ಧತಿಯನ್ನು, ಲಿಂಗ ತಾರತಮ್ಯವನ್ನು ತಲ ಸ್ಪರ್ಶಿಯಾಗಿ ಆಭ್ಯಾಸ ನಡೆಸಿ ಅವುಗಳ ನಿವಾರಣೆಗೆ ಯತ್ನಿಸಿದ್ದರು. ಕರ್ನಾಟಕದಲ್ಲಿ ಶಾಂತವೇರಿ ಗೋಪಾಲಗೌಡರು ವಿರೋಧ ಪಕ್ಷ ಹೇಗಿರಬೇಕು ಎಂಬ ಹೊಸ ಮಾದರಿಯನ್ನೇ ಕರ್ನಾಟಕಕ್ಕೆ ಕೊಟ್ಟು ಕನ್ನಡ ಸಾಹಿತ್ಯದ ಗ್ರಹಿಕೆಗೆ ಸಮಾಜವಾದಿ ಚಿಂತನೆ ತಂದ ಹೋರಾಟಗಾರರು. ದೇಶಿ ಮತ್ತು ವಿದೇಶಿ ಕೃಷಿನೀತಿಗಳನ್ನು ತುಲನೆ ಮಾಡಿ, ಪ್ರಭುತ್ವದ ಎದುರು ಹೇಗೆ 'ಬಾಗದೆ ಸೆಟೆದು' ನಿಲ್ಲಬೇಕೆಂಬುದನ್ನು ರೈತರಿಗೆ ತೋರಿಸಿಕೊಟ್ಟ ಪ್ರೊ. ಎಂ.ಡಿ.ನಂಜುಂಡಸ್ವಾಮಿಯವರು ರೈತ ಚಳವಳಿಯನ್ನು ಜಾತಿ, ವರ್ಗರಹಿತ ಚಳವಳಿಯನ್ನಾಗಿ ರೂಪಿಸಿ ರೈತ ಹೋರಾಟ ಪ್ರಜ್ಞೆಯನ್ನು ಜಾಗೃತಗೊಳಿಸಿದರು.

ಬಡತನ, ಯುದ್ಧ, ಭಯ, ಹಾಗೂ ಅಸಮಾನತೆಗಳನ್ನು ಹೋಗಲಾಡಿಸಿ ಸಮಸ್ತ ವಿಶ್ವವನ್ನು ಸ್ವತಂತ್ರ, ಸಾರ್ವಭೌಮ, ಸ್ವಾವಲಂಬಿ, ಜಾತ್ಯತೀತ ಪ್ರಜಾಪ್ರಭುತ್ವವಾದಿ ಲಕ್ಷಣಗಳನ್ನೊಳಗೊಂಡ ಸಮಾಜವಾಗಿ ಮಾಡಲು ಬಯಸಿದರು. ಲೋಹಿಯಾರ ಆದರ್ಶಗಳನ್ನು ಪಾಲಿಸಿಕೊಂಡು ಬರುವಲ್ಲಿ ಶ್ರಮಿಸಿದ್ದು ಸಮಾಜವಾದಿ ಯುವಜನ ಸಭಾ. ಈ ಸಭಾದಿಂದ ಬಂದ ರೈತ ಸಂಘದ ಕಾರ್ಯ ಚಟುವಟಿಕೆಗಳ ರೂವಾರಿಯಾದ ಎನ್.ಡಿ ಸುಂದರೇಶ್ ಕುವೆಂಪು ಅವರ ವಿಶ್ವಮಾನವ ಸಂದೇಶಕ್ಕೆ ಮಾರುಹೋಗಿ ತಾನೂ ಸರಳ ವಿವಾಹವಾಗಿ ಮುಂದ ರೈತ ನೇತಾರರಾದರು. ಚಾರ್ವಾಕ ನಿಲುವನ್ನು ಹೊಂದಿದ್ದ ಕೆ. ರಾಮದಾಸ್ ಭಾರತದಲ್ಲಿ ಮೈತುಂಬ ತಾಯಿತ, ದಾರ ಕಟ್ಟಿಕೊಂಡು, ಕುಂಕುಮ ಹಚ್ಚಿಕೊಂಡು, ಹೋಮ, ಹವನ, ಪೂಜೆ ಮಾಡುತ್ತಾ ದೇವಸ್ಥಾನಗಳಿಗೆ ತಿರುಗುತ್ತಿರುವ ಸಂಪ್ರದಾಯವಾದಿಗಳನ್ನು, ರಾಜಕಾರಣಿಗಳನ್ನು ಛೇಡಿಸುತ್ತಿದ್ದರು. ವಿಚಾರವಾದಿ ರಾಮದಾಸ್ ಅಂಬೇಡ್ಕರ್, ಪೆರಿಯಾರ್, ಕುವೆಂಪು ಮತ್ತು ಲಂಕೇಶ್‌ರ ಚಿಂತನೆಗಳಿಂದ ಪ್ರೇರಿತರಾಗಿ ಜಾತಿ ವಿನಾಶ ಸಮ್ಮೇಳನ, ಭಾಷಾ ಚಳವಳಿ, ಬಂಡಾಯ ಚಳವಳಿ ಹಾಗೂ ದಲಿತ ಚಳವಳಿ ಮುಂತಾದ ಪ್ರಗತಿಪರ ಚಳವಳಿಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ವೈಚಾರಿಕ ಪ್ರಜ್ಞೆ ಮತ್ತಷ್ಟು ಜಾಗೃತವಾಗಲು ಸಹಕರಿಸಿದರು.

'ಶೂನ್ಯದಿಂದ ಏನನ್ನೂ ಸೃಷ್ಟಿಸಲು ಸಾಧ್ಯವಿಲ್ಲ' ಎಂಬ ಐನ್‌ಸ್ಟೀನ್ ನುಡಿಗಳಿಂದ ಪ್ರಭಾವಿತರಾಗಿದ್ದ ಶ್ರೀಲಂಕಾದ ಪ್ರಮುಖ ವಿಚಾರವಾದಿ ಕೋವೂರ್ 'ಶೂನ್ಯದಿಂದ ಏನನ್ನಾದರೂ ಸೃಷ್ಟಿಸಬಲ್ಲೆವು' ಎನ್ನುತ್ತಿದ್ದ 'ದೇವಮಾನವ'ರ ವಿರುದ್ಧ ಕನ್ನಡ ನಾಡಿನಲ್ಲೂ ಜನಾಭಿಪ್ರಾಯ ಮೂಡಿಸಿದರು. ಪವಾಡಗಳನ್ನು ಮಾಡುವುದಾದರೆ ಜನಸಮುದಾಯದ ನಡುವೆ ತಾವು ತಿಳಿಸಿದಂತೆ ಮಾಡಬೇಕೆಂದು ಸವಾಲು ಹಾಕಿದರು. ಬಾಬಾಗಳು ಪವಾಡಗಳ ಮೂಲಕ ಜನ ಸಾಮಾನ್ಯರನ್ನು ಮರುಳುಗೊಳಿಸಲು ರೂಢಿಸಿಕೊಂಡ ಮಾರ್ಗವನ್ನು ವಿರೋಧಿಸಿದ ಡಾ. ಎಚ್. ನರಸಿಂಹಯ್ಯನವರು ಬೂದಿ, ಉಂಗುರಗಳ ಬದಲಾಗಿ ಕುಂಬಳಕಾಯಿಯನ್ನು ಸೃಷ್ಟಿಸಿಕೊಡುವಂತೆ ಬಾಬಾಗಳಿಗೆ ಸವಾಲು ಹಾಕಿದರು. ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಿಸಿದ 'ವಿಚಾರ ಸಾಹಿತ್ಯ' ಸಂಕಲನಗಳು, ಅಡಿಗರ ಸಂಪಾದಕತ್ವದಲ್ಲಿ ಹುಟ್ಟಿದ ಸಾಕ್ಷಿ, ಚಂಪಾ-ಗಿರಡ್ಡಿ-ಪಟ್ಟಣಶೆಟ್ಟಿಯವರ ಸಂಪಾದಕತ್ವದಲ್ಲಿ ಹುಟ್ಟಿದ ಸಂಕ್ರಮಣ ಪತ್ರಿಕೆಗಳು ಯುವ ಜನತೆಯಲ್ಲಿ ವೈಚಾರಿಕ ಮನೋಭಾವವನ್ನು ಬೆಳೆಸಿದವು. ಹಾಗೆಯೇ ಶೂದ್ರ, ಅನ್ವೇಷಣೆ, ಲಂಕೇಶ್ ಪತ್ರಿಕೆ, ಹೊಸತು, ಸಂವಾದ ಮುಂತಾದ ಪತ್ರಿಕೆಗಳು ವೈಚಾರಿಕ ಲೇಖನಗಳನ್ನು ಪ್ರಕಟಿಸಿ ವೈಚಾರಿಕತೆ ಬೆಳೆಯಲು ಸಹಕರಿಸಿವೆ. ಸಮಾಜದ ಪರಿವರ್ತನೆಯ ಆಶಯದಿಂದ ಹುಟ್ಟಿಕೊಂಡ ಬಂಡಾಯ ಸಾಹಿತ್ಯ ಸಂಘಟನೆಯು ಸಮಾಜದಲ್ಲಿ ತುಳಿತಕ್ಕೊಳಗಾದವರ, ಶೋಷಿತರ ಪರವಾಗಿ ಮೂಡಿ ಬಂದಿತು. ಕ್ರೂರ ವ್ಯವಸ್ಥೆಯ ವಿರುದ್ಧ, ಯಜಮಾನ ಸಂಸ್ಕೃತಿಯ ಎಲ್ಲಾ ಸಂಚುಗಳ ವಿರುದ್ಧ ಬಂಡೆದ್ದ ಪ್ರಗತಿಪರ ಮನೋಧರ್ಮವೇ ಬಂಡಾಯ ಚಳವಳಿಯ ಮೂಲ ಸತ್ವ. ಈ ಮೂಲ ಸತ್ವವನ್ನುಳ್ಳ ಲೇಖಕರಾಗಿ ಬರಗೂರು ರಾಮಚಂದ್ರಪ್ಪ, ಚಂದ್ರಶೇಖರ ಪಾಟೀಲ, ಚೆನ್ನಣ್ಣ ವಾಲೀಕಾರ ಇತ್ಯಾದಿ ಲೇಖಕರು ಬಂಡಾಯವನ್ನು ಒಂದು ಮೌಲ್ಯವನ್ನಾಗಿ ಸ್ವೀಕರಿಸಿ ಜಾತೀಯತೆಯ ವಿರುದ್ಧ, ಅಸಮಾನತೆಯ ವಿರುದ್ಧ ದನಿಯೆತ್ತಿದ್ದರು.

ವರ್ಗ ಮತ್ತು ಜಾತಿ ರಹಿತವಾದ, ಸಮಾನತೆಯಿಂದ ಕೂಡಿದ ಸಮಾಜ ರಚನೆಯ ಉದ್ದೇಶವನ್ನು ಹೊಂದಿ ದಲಿತ ಸಾಹಿತ್ಯವು ಜನ್ಮ ತಾಳಿತು. ದಲಿತರ ಏಳಿಗೆಗೆ ಶಿಕ್ಷಣ-ಸಂಘಟನೆ-ಹೋರಾಟ-ಅತ್ಯಗತ್ಯವೆಂದು ಪ್ರತಿಪಾದಿಸಿದ ಫುಲೆ, ಅಂಬೇಡ್ಕರ್ ಅಸ್ಪೃಶ್ಯತೆ ಹಾಗೂ ಜಾತಿಯ ಅಸಮಾನತೆಯಿಂದ ತೀವ್ರವಾಗಿ ನೊಂದಿದ್ದ ದಲಿತ ಲೇಖಕರಿಗೆ ಸ್ಪೂರ್ತಿಯಾಗಿ ಕಂಡು ಬಂದರು. 1970ರ ದಶಕದಲ್ಲಿ ಕರ್ನಾಟಕ ರಾಜ್ಯದ ಕಂದಾಯ ಮಂತ್ರಿಗಳಾಗಿದ್ದ ಬಿ. ಬಸವಲಿಂಗಪ್ಪ ಅವರು ಮೈಸೂರಿನ ಸಭೆಯೊಂದರಲ್ಲಿ ಹಿಂದೂ ಧರ್ಮದಲ್ಲಿನ ದಲಿತರ ಶೋಷಣೆ ಮತ್ತು ಆರ್ಥಿಕ ಅಸಮಾನತೆಗಳ ಪ್ರಸ್ತಾಪಿಸಿದ್ದರು. ದಲಿತರು ಮಲ ಹೊರುವ ಅಮಾನುಷ ಪದ್ಧತಿಯನ್ನು ನಿಲ್ಲಿಸಲು ದನಿ ಎತ್ತಿ ವೈಚಾರಿಕತೆಗೆ ಇಂಬು ನೀಡಿದರು. ಇವರು ಪ್ರಾಸಂಗಿಕವಾಗಿ ಕನ್ನಡ ಸಾಹಿತ್ಯವನ್ನು 'ಬೂಸಾ' ಎಂದು ಕರೆದಿದ್ದರ ಹಿನ್ನೆಲೆಯಲ್ಲಿ ನಡೆದ ಸಾಹಿತಿಗಳ ಮತ್ತು ಮೇಲ್ಜಾತಿಯ ಜನರ ಪ್ರತಿಭಟನೆಗೆ ಮಾಧ್ಯಮಗಳೂ ಇಂಬು ಕೊಟ್ಟವು. ಈ ಪ್ರತಿಭಟನಾ ಚಳವಳಿಯು ಎರಡು ಗುಂಪುಗಳಾಗಿ ಪರ-ವಿರೋಧ ಎಂದಾಗಿ ಸಂಘರ್ಷಕ್ಕೆ ದಾರಿ ಮಾಡಿದಾಗ ಇವರು ರಾಜೀನಾಮೆ ನೀಡಬೇಕಾಯಿತು.

ಈ ರಾಜೀನಾಮೆಯು ದಲಿತ ಪ್ರಜ್ಞಾವಂತ ಎರಡನೆಯ ತಲೆಮಾರಿನ ಅಕ್ಷರಸ್ಥ ದಲಿತರನ್ನು ಎಚ್ಚರಿಸಿತು. ಈ ಘಟನೆಯು ಹರಿದು ಹಂಚಿ ಹೋಗಿದ್ದ ದಲಿತರು ಒಂದು ವೇದಿಕೆಯಡಿ ಬಂದು ಸೇರಲು ಸಾಧ್ಯವಾಯಿತು. 1972ರಲ್ಲಿ ಕರ್ನಾಟಕ ದಲಿತ ಕ್ರಿಯಾ ಸಮಿತಿ, 1974ರಲ್ಲಿ ಭದ್ರಾವತಿಯಲ್ಲಿ ಬಿ. ಕೃಷ್ಣಪ್ಪ ನವರ ಮುಖಂಡತ್ವದಲ್ಲಿ ಉದಯವಾದ ಕರ್ನಾಟಕ 'ದಲಿತ ಸಂಘರ್ಷ ಸಮಿತಿ' ಎನಿಸಿಕೊಂಡು ದಲಿತ ಪರವಾದ ದನಿ ಎತ್ತಿತು. ದಲಿತ ಸಾಹಿತ್ಯವು ಸಾಂಸ್ಕೃತಿಕ ಜಾಗೃತಿಯನ್ನುಂಟು ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿತು. ಮಹಾರಾಷ್ಟ್ರದಲ್ಲಿ ದಲಿತ ಚಳವಳಿಯಲ್ಲಿ ಫ್ಯಾಂಥರ್ಸ್ ವಹಿಸಿದ ಪಾತ್ರವನ್ನು ನಮ್ಮಲ್ಲಿ ದಲಿತ ಸಂಘರ್ಷ ಸಮಿತಿ ನಿರ್ವಹಿಸಿತು.

ಅಂಬೇಡ್ಕರರ ಭಾವಚಿತ್ರವೇ ಪ್ರಧಾನವಾದ ಮಾಧ್ಯಮವಾಯಿತು. ಗೋಡೆ ಬರಹಗಳು, ಕರಪತ್ರಗಳು ದಲಿತ ಪ್ರಜ್ಞೆಯ ಚಿಂತನೆಯನ್ನು ರೂಪಿಸಿ ಬೆಳೆಸಿದವು. ಆಂಧ್ರ ಪ್ರದೇಶದ ಗದ್ದರ್‌ರವರ ಸ್ಪೂರ್ತಿಯಿಂದ ಮೂಡಿದ 'ದಲಿತ ಕಲಾ ಮಂಡಳಿ'ಯ ಮೂಲಕ ಪಿಚ್ಚಳ್ಳಿ ಶ್ರೀನಿವಾಸ್, ಜನಾರ್ಧನ್ ಮೊದಲಾದ ಹಾಡುಗಾರರು ದಲಿತರನ್ನು ಹೀನಾಯ ಸ್ಥಿತಿಗೆ ನೂಕಿರುವ ಸಾಮಾಜಿಕ ವ್ಯವಸ್ಥೆ ವಿರುದ್ಧ ಆಕ್ರೋಶವನ್ನು, ಇಂಥ ವ್ಯವಸ್ಥೆಯನ್ನು ನಾಶ

ಅಂಬೇಡ್ಕರರ ಭಾವಚಿತ್ರವೇ ಪ್ರಧಾನವಾದ ಮಾಧ್ಯಮವಾಯಿತು. ಗೋಡೆ ಬರಹಗಳು, ಕರಪತ್ರಗಳು ದಲಿತ ಪ್ರಜ್ಞೆಯ ಚಿಂತನೆಯನ್ನು ರೂಪಿಸಿ ಬೆಳೆಸಿದವು. ಆಂಧ್ರ ಪ್ರದೇಶದ ಗದ್ದರ್‌ರವರ ಸ್ಪೂರ್ತಿಯಿಂದ ಮೂಡಿದ 'ದಲಿತ ಕಲಾ ಮಂಡಳಿ'ಯ ಮೂಲಕ ಪಿಚ್ಚಳ್ಳಿ ಶ್ರೀನಿವಾಸ್, ಜನಾರ್ಧನ್ ಮೊದಲಾದ ಹಾಡುಗಾರರು ದಲಿತರನ್ನು ಹೀನಾಯ ಸ್ಥಿತಿಗೆ ನೂಕಿರುವ ಸಾಮಾಜಿಕ ವ್ಯವಸ್ಥೆ ವಿರುದ್ಧ ಆಕ್ರೋಶವನ್ನು, ಇಂಥ ವ್ಯವಸ್ಥೆಯನ್ನು ನಾಶಗೊಳಿಸಬೇಕೆಂಬ ಬಯಕೆಯನ್ನು ಹಾಡುಗಳ ಮೂಲಕ ಬಿತ್ತಿದರು. ಮಹಾರಾಷ್ಟ್ರದಲ್ಲಿ ದಲಿತ ಚಳವಳಿಯಲ್ಲಿ ಫ್ಯಾಂಥರ್ಸ್ ವಹಿಸಿದ ಪಾತ್ರವನ್ನು ನಮ್ಮಲ್ಲಿ ದಲಿತ ಸಂಘರ್ಷ ಸಮಿತಿ ನಿರ್ವಹಿಸಿತು. ಅಂಬೇಡ್ಕರರ ಭಾವಚಿತ್ರವೇ ಪ್ರಧಾನವಾದ ಮಾಧ್ಯ ಮವಾಯಿತು. ಗೋಡೆ ಬರಹಗಳು, ಕರಪತ್ರಗಳು ದಲಿತ ಪ್ರಜ್ಞೆಯ ಚಿಂತನೆಯನ್ನು ರೂಪಿಸಿ ಬೆಳೆಸಿದವು.

ಗೊಳಿಸಬೇಕೆಂಬ ಬಯಕೆಯನ್ನು ಹಾಡುಗಳ ಮೂಲಕ ಬಿತ್ತಿದರು. ಶೋಷಿತರನ್ನು ಜಾಗೃತಿಗೊಳಿಸಿ ದಲಿತರ ಚರಿತ್ರೆಯನ್ನು ಕಟ್ಟಿಕೊಡುವುದರ ಜೊತೆಗೆ ದೇವನೂರು ಮಹಾದೇವ, ಸಿದ್ಧಲಿಂಗಯ್ಯ ಅವರು ಕನ್ನಡ ಜನತೆಯ ಪ್ರಜ್ಞೆಯನ್ನು ಜಾಗೃತಿಗೊಳಿಸಿದರು.

'ಬಹು ಸಂಸ್ಕೃತಿ ರಕ್ಷಣೆಗೆ ಪಣ ತೊಟ್ಟು ಕಲೆಗಾಗಿ ಕಲೆ ಅಲ್ಲ, ಬದುಕಿಗಾಗಿ ಕಲೆ, ಜನರಿಗಾಗಿ ಕಲೆ' ಎನ್ನುವ ಆಶಯ ಹೊತ್ತು 1975ರಲ್ಲಿ ಹುಟ್ಟಿದ 'ಸಮುದಾಯ' ಚಳವಳಿಯು ತುರ್ತುಪರಿಸ್ಥಿಯ ವಿರುದ್ಧ ಸಿಡಿದ ಪ್ರಜಾಸತ್ತಾತ್ಮಕ ಚಳವಳಿಯ ಭಾಗವಾಗಿ ಹೊಮ್ಮಿದ ಸಾಂಸ್ಕೃತಿಕ ಚಳವಳಿಯ ಮುಂಚೂಣಿಯಲ್ಲಿತ್ತು. ಸದಾ ಸಮಕಾಲೀನ ಸಾಂಸ್ಕೃತಿಕ ಸವಾಲುಗಳಿಗೆ ಸ್ಪಂದಿಸುತ್ತಾ ಜನಮುಖಿ ಸಂಸ್ಕೃತಿ ಗಟ್ಟಿಗೊಳಿಸಲು ಅದು ಇಂದಿಗೂ ಯತ್ನಿಸುತ್ತಿದೆ.

1980ರಿಂದೀಚೆಗೆ ಸ್ತ್ರೀವಾದಿ ಚಳವಳಿಯು ಕನ್ನಡ ಸಾಹಿತ್ಯದಲ್ಲಿ ಹೊಸ ಹೆಜ್ಜೆಗಳನ್ನು ಮೂಡಿಸುತ್ತಿದೆ. ವಿಜಯಾ ದಬ್ಬೆ, ಎಚ್.ಎಸ್. ಶ್ರೀಮತಿ, ಎನ್. ಗಾಯಿತ್ರಿ ಮೊದಲಾದವರು ಸ್ತ್ರೀವಾದವನ್ನು ಅಭಿವ್ಯಕ್ತಿಸುವ ಲೇಖಕಿಯರಾಗಿದ್ದಾರೆ. ಪುರುಷ ಪ್ರಧಾನಿ ವ್ಯವಸ್ಥೆಯ ವಿರುದ್ಧ ಬಂಡೆದ್ದ ಮಹಿಳೆ ದಬ್ಬಾಳಿಕೆ, ಅನ್ಯಾಯ ಮತ್ತು ಅಸಮಾನತೆಯ ವಿರುದ್ಧ ಹೋರಾಟಗಳ ಮೂಲಕ ತಾನೇ ಕೇಳಿಕೊಂಡ ಪ್ರಶ್ನೆಗಳೆಂದರೆ, 'ನಾನು ಯಾರು? ನನ್ನ ವ್ಯಕ್ತಿತ್ವ ಹೇಗಿರಬೇಕು? ಮತ್ತು ಅದನ್ನು ರೂಪಿಸಿಕೊಳ್ಳುವ ಬಗೆ ಹೇಗೆ? ಗೌರವವನ್ನು ಪಡೆಯುವುದು ಹೇಗೆ? ಈ ಪ್ರಶ್ನೆಗಳೇ ಸ್ತ್ರೀವಾದಿ ಆಂದೋಲನವನ್ನು ರೂಪಿಸಿವೆ. ಮಹಿಳೆಯ ಬಿಡುಗಡೆ ಹಾಗೂ ಅವಳ ಸಮಗ್ರ ವ್ಯಕ್ತಿತ್ವ ವಿಕಾಸಕ್ಕೆ ಸೂಕ್ತ ಆವರಣ ನಿರ್ಮಾಣ ಮಾಡಿ ಪರಸ್ಪರ ಪ್ರೀತಿ, ವಿಶ್ವಾಸ, ಸಮಾನತೆಗಳ ಆಧಾರದ ಮೇಲೆ ಸ್ತ್ರೀ–ಪುರುಷರ ಸಂಬಂಧವನ್ನು ರೂಪಿಸುವುದು ಸ್ತ್ರೀವಾದಿ ಸಾಹಿತ್ಯದ ಗುರಿ.

ಕರ್ನಾಟಕದ ಜನತೆಯ ಪ್ರಜ್ಞೆಯನ್ನು ಹಾಗೂ ಕರ್ನಾಟಕದ ಬೌದ್ಧಿಕ ಸಂಸ್ಕೃತಿಯನ್ನು ರೂಪಿಸುತ್ತಾ ಬಂದಿರುವ ಕನ್ನಡ ವಿಚಾರ ಸಾಹಿತ್ಯಕ್ಕೆ ಮೇಲೆ ಹೇಳಿದ ಎಲ್ಲ ಧಾರೆಗಳೂ ಮಹತ್ವದ ಕೊಡುಗೆ ನೀಡಿವೆ. □

ಅಡಿ ಟಿಪ್ಪಣಿ

1. ವಿಚಾರ ಸಾಹಿತ್ಯ: ಡಾ. ಎಚ್.ಟಿ. ಪೋತೆ.
2. ಜನ ಸಂಸ್ಕೃತಿ: ಡಾ. ಸಿದ್ಧಲಿಂಗಯ್ಯ.
3. ಪಿ. ಲಂಕೇಶ್: ಡಾ. ಹಾಲತಿ ಸೋಮಶೇಖರ್.
4. ಪ್ರಾಚೀನ ಭಾರತದಲ್ಲಿ ದಾರ್ಶನಿಕ ಸಂಘರ್ಷ ಮತ್ತು ಅದರ ಸಾಮಾಜಿಕ ಮಹತ್ವ.
5. ಸುವರ್ಣ ವಿಚಾರ ಸಾಹಿತ್ಯ: ಡಾ. ಬಸವರಾಜ 'ಕಲ್ಗುಡಿ.
6. ವಿಚಾರ ಸಾಹಿತ್ಯ: ದೇವರು, ಮೈಸೂರು ವಿ.ವಿ.
7. ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ: ಡಾ. ವಿಠಲರಾವ್ ಗಾಯಕವಾಡ್.
8. ಇಪ್ಪತ್ತನೆಯ ಶತಮಾನದ ಸಾಹಿತ್ಯ ಘಟ್ಟಗಳು: ಡಾ. ಬಸವರಾಜ ಸಾದರ.
9. ಸಂಸ್ಕೃತಿ ಕಥನ: ಸಂ: ಅಗ್ರಹಾರ ಕೃಷ್ಣಮೂರ್ತಿ
10. ಸ್ವಾತಂತ್ರ್ಯೋತ್ತರ ಕನ್ನಡ ವಿಚಾರ ಸಾಹಿತ್ಯ: ಗೌರೀಶ ಕಾಯ್ಕಿಣಿ
11. ನಿತ್ಯ ವರ್ತಮಾನ: ಪ್ರೊ. ಚಂದ್ರಶೇಖರ ಪಾಟೀಲ
12. ಧರೆಗೆ ದೊಡ್ಡವರು: ಸುಭಾಷ್ ಭರಣಿ.
13. ಹೋರಾಟ ಮತ್ತು ಬದುಕು: ಹೊಸ್ನಾಳ್ಳಿ ಚಂದ್ರಶೇಖರ್.
14. ವರ್ಣದಿಂದ ವರ್ಗದ ಕಡೆಗೆ : ಆರ್. ವಿ. ಭಂಡಾರಿ.

ಮಣ್ಣು ಸೇರಿದ ಹೆಣ್ಣು ಭ್ರೂಣಗಳಿಗೆ ಶ್ರದ್ಧಾಂಜಲಿ

(9ನೇ ಪುಟದಿಂದ)

ಮಹಿಳೆಯರ ಸ್ಥಾನಮಾನದ ಬಗ್ಗೆ ಮಾತು ಬಂದಾಗಲೆಲ್ಲ 'ಹೆಣ್ಣು ದೇವತೆಗಳ ಪೂಜೆ, ಉನ್ನತ ಸ್ಥಾನದಲ್ಲಿರುವ ಕೆಲವೇ ಮಹಿಳೆಯರನ್ನು ಉದಾಹರಿಸಿ' ಎಲ್ಲವೂ ಸರಿ ಇದೆ ಎಂದು ಬಿಂಬಿಸಲಾಗುತ್ತಿದೆ. ಬೇಕೆಂದೇ ಮಾಡುವ ವ್ಯಂಗ್ಯವಿದೇನೋ ಎಂಬಷ್ಟರ ಮಟ್ಟಿಗೆ. 'ಎಲ್ಲಾ ಕಾನೂನುಗಳೂ ಅವರ ಪರವಾಗಿಯೆ ಇದೇರೀ, ನಮ್ಮ ಆರೋಗ್ಯ ಕಾರ್ಯಕ್ರಮದ ಹಣದಲ್ಲಿ ಮೂರನೇ ಒಂದು ಪಾಲು ಹೆಂಗಸರಿಗಾಗಿಯೆ ಇದೆ' ಎಂದು ಹಲುಬುತ್ತಿದ್ದರು ಒಬ್ಬ ಆರೋಗ್ಯಾಧಿಕಾರಿಗಳು. ಕಾನೂನು ಮಹಿಳಾಪರ ಇರಬಹುದು.

ಹೆಂಡತಿಯನ್ನು ಹೊಡೆಯುವುದಂತೂ ನಮ್ಮ ಸಮಾಜದ ಸಂಪ್ರದಾಯದ ಭಾಗವೇ ಆಗಿಹೋಗಿದೆ. ಇತ್ತೀಚೆಗೆ ಈ ಲೇಖಕಿಯೆದುರೇ ಒಬ್ಬ ರಾಜಕಾರಣಿಗೆ ಫೋನು ಬಂತು, ಕುಡುಕನೊಬ್ಬ ಹೆಂಡತಿಯನ್ನು ಹೊಡೆಯುತ್ತಿದ್ದಾನೆ, ಬಂದು ಜಗಳ ಬಗೆಹರಿಸಿ ಎಂದು. ಅದಕ್ಕೆ ಆ ರಾಜಕಾರಣಿ, 'ಅಂವ ಹೊಡೀತಾ ಇರೋದು ತನ್ನ ಹೆಂಡತಿಯನ್ನು ಹೊರ್ತು ನಿನ್ನ ಹೆಂಡತಿಯನ್ನಲ್ಲವಲ್ಲ? ಫೋನ್ ಕೆಳಗಿಡ್ರೀ' ಎಂದು ಗಹಗಹಿಸಿ ನಕ್ಕು ಸಂಪರ್ಕ ಕಡಿದರು. ಮಹಿಳೆ ಎಂದರೆ ಗಂಡನ ವಸ್ತು. ಆತ ಅದನ್ನು ಹೇಗೆ ಬೇಕಾದರೂ ಬಳಸಬಹುದು, ಬಿಸಾಕಬಹುದು ಎಂಬ ಮೌಲ್ಯವನ್ನು ಗಟ್ಟಿಯಾಗಿ ಆಚರಿಸಿಕೊಂಡು ಬರುತ್ತಿರುವ ನಮ್ಮ ಸಂಸ್ಕೃತಿಯಲ್ಲಿ ಒಬ್ಬ ತಾಯಿಗೆ ಹೆಣ್ಣು ಹಡೆಯಲು ಧೈರ್ಯ ತುಂಬುವವರಾರು?

ಭ್ರೂಣ ಲಿಂಗ ಪತ್ತೆಗೆಂದು ಅಲ್ಟ್ರಾ ಸೊನೋಗ್ರಫಿ ತಜ್ಞರ/ವೈದ್ಯರ ಕದ ತಟ್ಟುವುದನ್ನು ತಡೆಯುವುದು ಎಷ್ಟು ಮುಖ್ಯವೋ, ಕದ ತಟ್ಟಿದವರು ಕೆಲಸ ಆಗದೆ ಬರಿಗೈಯಲ್ಲಿ ಹಿಂದಿರುಗಿ ಹೋಗುವಂತೆ ಮಾಡಬೇಕಾದ್ದು ಕೂಡ ಅಷ್ಟೇ ಮಹತ್ವದ್ದು. ಮೊದಲನೆಯದು ನಮ್ಮ ಸಮಾಜ ಸ್ತ್ರೀಗೆ ಎಷ್ಟು ಸಮಾನ ಅವಕಾಶಗಳನ್ನು ಕೊಟ್ಟಿದೆ, ಎಷ್ಟು ಲಿಂಗ ಸೂಕ್ಷ್ಮತೆಯನ್ನು ಅಳವಡಿಸಿಕೊಂಡಿದೆ, ಎಷ್ಟು ಸ್ತ್ರೀ ಸ್ನೇಹಿಯಾಗಿದೆ ಎಂಬುದರ ಅಳತೆಗೋಲು. ಎರಡನೆಯದು ಆ ವೈದ್ಯರ ಸಾಮಾಜಿಕ ಜವಾಬ್ದಾರಿಯ ಅಳತೆಗೋಲು. ಹುಟ್ಟಬೇಕಾಗಿದ್ದ ಹೆಣ್ಣು ಶಿಶುಗಳು ಜನ್ಮ ತಾಳಲಿಲ್ಲವೆಂದರೆ ಈ ಇಬ್ಬರದ್ದೂ ಸಮಾನ ಜವಾಬ್ದಾರಿ. ಇಬ್ಬರೂ ತಮ್ಮ ಜವಾಬ್ದಾರಿಯನ್ನು ಇನ್ನೊಬ್ಬರ ಮೇಲೆ ದಾಟಿಸುತ್ತಿರುವುದರ ಪಲಿತಾಂಶ ಇಂದು ನಾವು ನೋಡುತ್ತಿರುವ ಕುಸಿದ ಲಿಂಗಾನುಪಾತ.

ಮೂರನೆಯ ತೊಡಕಿರುವುದು ಸ್ವತಃ ಕಾನೂನಿನಲ್ಲಿ. ಪ್ರಚೋದಿಸುವವರು, ಸ್ವತಃ ಗಂಡ–ಹೆಂಡತಿ, ಮಾಡುವ ವೈದ್ಯ– ಈ ಮೂವರೂ ಶಿಕ್ಷಾರ್ಹ ಅಪರಾಧಿಗಳೆನ್ನುತ್ತದೆ ಕಾನೂನು. ಆದರೆ ಕೋಣೆಯೊಳಗೋ, ಒಂದು ಮನೆಯೊಳಗೂ ಸದ್ದಿಲ್ಲದೆ ನಡೆಯುವ ಈ ಅಪರಾಧದಲ್ಲಿ ದೂರು ಬರಬೇಕಾದದ್ದು ಯಾರಿಂದ? ಬಿದ್ದು ಹೋಗಲಿರುವ ಹೆಣ್ಣು ಭ್ರೂಣದಿಂದಲೆ? ಸಾಕ್ಷಿ ಹೇಳುವವರಾರು? ವರದಕ್ಷಿಣೆಯ ಕಿರುಕುಳ, ಕೌಟುಂಬಿಕ ದೌರ್ಜನ್ಯಗಳು ಅಕ್ಕ ಪಕ್ಕದ ಮನೆಯವರಿಗಾದರೂ ಗೊತ್ತಾಗುತ್ತವೆ. ಆದರೆ ಇದು ಅಕ್ಕ ಪಕ್ಕದ ಯಾರಿಗೂ ಗೊತ್ತೇ ಆಗದಂಥ ಅಪರಾಧ. ಅಪರಾಧಕ್ಕೆ ಸಾಕ್ಷ್ಯವೇ ಸಿಗದಂಥ ಸ್ಥಿತಿ. ಈ ಕಾರಣಕ್ಕಾಗಿಯೇ ಅದೆಷ್ಟೋ ಕೋರ್ಟ್ ಮೆಟ್ಟಿಲೇರಿದ ಪ್ರಕರಣಗಳೂ ಖುಲಾಸೆಯಾಗಿ ಹಿಂದಿರುಗುತ್ತವೆ. ಇಡೀ ದೇಶದಲ್ಲಿ ಲಿಂಗ ಪತ್ತೆ, ಹೆಣ್ಣು ಭ್ರೂಣ ಹತ್ಯೆ ಅಪರಾಧಕ್ಕೆ ಶಿಕ್ಷೆಯಾದದ್ದು ಒಂದೇ ಒಂದು ಕೇಸಿನಲ್ಲಿ. ಹೀಗಿರುವಾಗ ಹೆಣ್ಣು ಭ್ರೂಣದ ಪರವಾಗಿ ಎಂಥ ಸಾಕ್ಷ್ಯಗಳು ಕೋರ್ಟಿನಲ್ಲಿ ನಿಲ್ಲಬೇಕು; ನಿಲ್ಲುತ್ತವೆ? ಎಂಬ ಬಗ್ಗೆ ಇನ್ನೂ ಚರ್ಚೆಗಳಾಗಿ ಕಾನೂನಿಗೆ ಒಂದಷ್ಟು ಹಲ್ಲುಗಳು ಮೂಡಬೇಕು.

ಹೆಣ್ಣು ಭ್ರೂಣ ಹತ್ಯೆಗೆ ಕಾರಣ ವರದಕ್ಷಿಣೆ ಮತ್ತು ಅದಕ್ಕೆ ಮೂಲ ಕಾರಣ ಹೆಣ್ಣು ಎಂಬ ಕೀಳು ಮನೋಭಾವ ಎಂಬುದರಲ್ಲಿ ಎರಡನೆ ಮಾತಿಲ್ಲ. ಆದರೆ ಮಹಿಳೆಯರ ಸ್ಥಾನಮಾನದ ಬಗ್ಗೆ ಮಾತು ಬಾದಾಗಲೆಲ್ಲ 'ಹೆಣ್ಣು ದೇವತೆಗಳ ಪೂಜೆ, ಉನ್ನತ ಸ್ಥಾನದಲ್ಲಿರುವ ಕೆಲವೇ ಮಹಿಳೆಯರನ್ನು ಉದಾಹರಿಸಿ' ಎಲ್ಲವೂ ಸರಿ ಇದೆ ಎಂದು ಬಿಂಬಿಸಲಾಗುತ್ತಿದೆ. ಬೇಕೆಂದೇ ಮಾಡುವ ವ್ಯಂಗ್ಯವಿದೇನೋ ಎಂಬಷ್ಟರ ಮಟ್ಟಿಗೆ. 'ಎಲ್ಲಾ ಕಾನೂನುಗಳೂ ಅವರ ಪರವಾಗಿಯೆ ಇದೇರೀ, ನಮ್ಮ ಆರೋಗ್ಯ ಕಾರ್ಯಕ್ರಮದ ಹಣದಲ್ಲಿ ಮೂರನೇ ಒಂದು ಪಾಲು ಹೆಂಗಸರಿಗಾಗಿಯೆ ಇದೆ' ಎಂದು ಹಲುಬುತ್ತಿದ್ದರು ಒಬ್ಬ ಆರೋಗ್ಯಾಧಿಕಾರಿಗಳು. ಕಾನೂನು ಮಹಿಳಾಪರ ಇರಬಹುದು. ಕೆಲವು ಸ್ಥಿತಿವಂತ, ಅವಕಾಶ ಸಿಕ್ಕಿದ ಮಹಿಳೆಯರು ಉನ್ನತ ಸ್ಥಾನಕ್ಕೇರಿರಲೂಬಹುದು. ಆದರೆ ಇನ್ನೂ ನೆಲಕಚ್ಚಿಕೊಂಡಿರುವ ಕೋಟಿ ಕೋಟಿ ಹೆಣ್ಣುಗಳ ಸ್ಥಿತಿ ಸುಧಾರಿಸಿದೆಯೇ? ಅವರನ್ಯಾರಾದರೂ ಪೂಜೆ ಮಾಡುತ್ತಿದ್ದಾರೆಯೇ? ಗೌರವದಿಂದ ಬದುಕಲು ಅವರಿಗೆ ಸುರಕ್ಷಿತ ವಾತಾವರಣ ಇದೆಯೇ?

'ಖಂಡಿತ ಇಲ್ಲ' ಎಂಬುದು ಒಂದೊಂದು ಮಹಿಳಾಪರ ಕಾರ್ಯಕ್ರಮದಲ್ಲೂ ಮುಖಕ್ಕೆ ರಾಚುವಂತೆ ಎದ್ದು ಕಾಣುತ್ತಿರುತ್ತದೆ. ಅಧಿಕಾರಿಗಳಲ್ಲಿ ಲಿಂಗ ಸೂಕ್ಷ್ಮತೆಯಿಲ್ಲ, ಪೊಲೀಸರಲ್ಲಿ ಲಿಂಗ ಸೂಕ್ಷ್ಮತೆಯಿಲ್ಲ, 'ನನಗಂತೂ ಮೂರು ಹೆಣ್ಣು, ಒಂದೇ ಗಂಡು' ಎಂದು ವೇದಿಕೆಯ ಮೇಲೆ ಘೋಷಿಸುವ ರಾಜಕಾರಣಿಯಲ್ಲಿ ಲಿಂಗ ಸೂಕ್ಷ್ಮತೆಯಿಲ್ಲ. ಈ ಕಾರಣಕ್ಕಾಗಿಯೆ ಪಿ.ಸಿ.ಪಿ.ಎನ್.ಡಿ.ಟಿ. ಸಮಿತಿಗಳು ಸ್ಕ್ಯಾನಿಂಗ್ ಮಶೀನುಗಳಿಗೆ ಪರವಾನಿಗಿ ಕೊಡುವ ಸಮಿತಿಗಳಾಗಿವೆ. ಗಂಭೀರ ಚರ್ಚೆಗಳು ನಡೆಯಬೇಕಿರುವ ಸಮಾವೇಶಗಳು ಉದ್ಘಾಟನೆ–ಸಮಾರೋಪಗಳ ಅದ್ದೂರಿ ಸಮಾರಂಭಗಳಾಗುತ್ತಿವೆ. ಮಹಿಳಾ ದಿನಾಚರಣೆಗಳು, 'ಮಹಿಳೆಯರಿಂದ ಮಹಿಳೆಯರಿಗಾಗಿಯೆ, ಮಹಿಳೆಯರೇ' ನಡೆಸಿಕೊಡುವ ಕಾರ್ಯಕ್ರಮಗಳಾಗಿವೆ. ಅತ್ತ ಘೋಷಣೆಗಳ ಮಧ್ಯೆ, ಸಮಾರಂಭಗಳ ಮಧ್ಯೆ, ಆರೋಪ ಪ್ರತ್ಯಾರೋಪಗಳ ಮಧ್ಯೆ ಹೆಣ್ಣು ಭ್ರೂಣಗಳು ಎಲ್ಲೋ ಬಿದ್ದು ಮಣ್ಣು ಸೇರುತ್ತಲೇ ಇರುತ್ತವೆ. ಲಿಂಗಾನುಪಾತ ಮೇಲೇಳುವುದೆಂತು? □

ಲಾಡೆನ್ ಸತ್ತ ! ಭಯೋತ್ಪಾದನೆ ಸಾಯಲಿಲ್ಲ !!

ನಾ ದಿವಾಕರ

ಶರಿಯತ್ ನಿಯಮಗಳ ಮೂಲಕವೇ ಮುಸ್ಲಿಂ ಸಮುದಾಯವನ್ನು ಸರಿದಾರಿಯಲ್ಲಿ ಕೊಂಡೊಯ್ಯಲು ಸಾಧ್ಯ ಎಂಬ ಬಲವಾದ ನಂಬಿಕೆ ಒಸಾಮಾನನ್ನು ಸಮಾಜವಾದ ಮತ್ತು ಕಮ್ಯುನಿಸಂನ ವಿರೋಧಿಯನ್ನಾಗಿ ರೂಪಿಸಿತ್ತು. ತನ್ನ ಈ ನಂಬಿಕೆಯನ್ನು ಜಿಹಾದ್ ಪರಿಕಲ್ಪನೆಯೊಂದಿಗೆ ಸೇರಿಸಿ ಆಫ್ಘಾನಿಸ್ತಾನದ ಕಣಿವೆಗಳಲ್ಲಿ ತನ್ನ ಜೀವನವನ್ನು ರೂಪಿಸಿಕೊಳ್ಳಲು ಯತ್ನಿಸಿದ ಲಾಡೆನ್‌ಗೆ ಇಸ್ಲಾಂ ಧರ್ಮವನ್ನು ವಿಶ್ವವ್ಯಾಪಿಯಾಗಿ ಹರಡಿ ಮುಸ್ಲಿಂ ಜಗತ್ತನ್ನು ಸೃಷ್ಟಿಸುವ ಕನಸು ಮೂಡಿದ್ದು ಈ ಸಂದರ್ಭದಲ್ಲೇ.

ಒಸಾಮ ಬಿನ್ ಲಾಡೆನ್ ಯುಗದ ಅಂತ್ಯ. ಅಮೆರಿಕದಲ್ಲಿ ವಿಜೃಂಭಣೆ. ಒಬಾಮಾ ಮೊಗದಲ್ಲಿ ದಿಗ್ವಿಜಯದ ನಗೆ. ಭಯೋತ್ಪಾದಕ ಸಂಘಟನೆಗಳಲ್ಲಿ ಆತಂಕ. ಪಾಕಿಸ್ತಾನದಲ್ಲಿ ದಿಗ್ಭ್ರಮೆ. ಅರಬ್ ರಾಷ್ಟ್ರಗಳಲ್ಲಿ ಸಂಚಲನ. ಭಾರತದಲ್ಲಿ ಸಂಭ್ರಮ. ಮಾಧ್ಯಮಗಳಲ್ಲಿ ದಿನವಿಡೀ ಇದೇ ಚರ್ಚೆ. ಒಬ್ಬ ವ್ಯಕ್ತಿ ಇಷ್ಟೆಲ್ಲಾ ಪ್ರಭಾವ ಬೀರುವುದೆಂದರೆ ಸುಮ್ಮನೆಯೇ. ಒಸಾಮ ಬಿನ್ ಮುಹಮ್ಮದ್ ಬಿನ್ ಅವಾದ್ ಬಿನ್ ಲಾಡೆನ್ ಈ ಸಂಚಲನದ ಕಾರಣಕರ್ತ. ಆಫ್ಘಾನಿಸ್ತಾನದ ಬೆಟ್ಟಗುಡ್ಡ ಕಣಿವೆಗಳಿಂದ ಅಮೆರಿಕದ ವೈಟ್‌ಹೌಸ್‌ನವರೆಗೆ, ಮಧ್ಯಪ್ರಾಚ್ಯದ ಮರಳುಗಾಡಿನಿಂದ ಪಾಕಿಸ್ತಾನದ ಪೇಶಾವರ್‌ವರೆಗೆ, ಯೂರೋಪಿನಿಂದ ಭಾರತದವರೆಗೆ ತನ್ನ ಭಯೋತ್ಪಾದನೆಯ ಜಾಲವನ್ನು ಹರಡಿದ್ದ ಈ ವ್ಯಕ್ತಿ ಕನ್ನಡದ ಚಿತ್ರಗೀತೆಗಳನ್ನೂ ಪ್ರವೇಶಿಸಿದ್ದುಂಟು. ಕೆಲವರ ದೃಷ್ಟಿಯಲ್ಲಿ ಲಾಡೆನ್ ಅಮೆರಿಕದ ವಿರುದ್ಧ ಸೆಟೆದು ನಿಂತ ಹೀರೋ ಇನ್ನು ಕೆಲವರಿಗೆ ಇಸ್ಲಾಮಿಕ್ ಜಿಹಾದ್‌ನ ಹರಿಕಾರ. ವಿಶ್ವದ ಬಹುತೇಕ ಪ್ರಭುತ್ವಗಳಿಗೆ ಒಬ್ಬ ಭಯೋತ್ಪಾದಕ. ಇಂತಹ ಒಸಾಮ ಅಮೆರಿಕದ ಗುಂಡೇಟಿಗೆ ಬಲಿಯಾಗಿದ್ದಾನೆ, ಪಾಕಿಸ್ತಾನದ ನೆಲದಲ್ಲಿ.

ಭಾರತದ ಪುರಾಣಗಳಲ್ಲಿ ತನ್ನ ಸೃಷ್ಟಿಕರ್ತನ ಕೃಪೆಯಲ್ಲೇ ಬೆಳೆದು, ಅವನನ್ನೇ ಎದುರು ಹಾಕಿಕೊಂಡು ಅವನಿಂದಲೇ ಹತರಾಗುವ ರಾಕ್ಷಸರ ಕಥನಗಳು ಹೇರಳವಾಗಿ ಬರುತ್ತವೆ. ತನ್ನ ಸೃಷ್ಟಿಯ ಕೂಸನ್ನು ತಾನೇ ಹೊಸಕಿ ಹಾಕುವ ಕಂಸನ ಕಥೆಯೂ ಇಂತಹುದೇ. ಆಧುನಿಕ ಯುಗದ ಕಂಸ ಅಮೆರಿಕಾ ತನ್ನದೇ ಕೂಸನ್ನು ಹೊಸಕಿಹಾಕಿ ವಿಜೃಂಭಿಸುತ್ತಿದೆ. ತನ್ನ ಸಾಮ್ರಾಜ್ಯದಾಹವನ್ನು ನೀಗಿಸಿಕೊಳ್ಳಲು ಅನೇಕ ರೀತಿಯ ಅಸ್ತ್ರಗಳನ್ನು ಸೃಷ್ಟಿಸಿದ ಅಮೆರಿಕದ ಸಮರಾಂಗಣದಲ್ಲಿ ಸೃಷ್ಟಿಯಾದ ಒಸಾಮ ಬಿನ್ ಲಾಡೆನ್ ಏಕಾಏಕಿ ಭಯೋತ್ಪಾದಕನಾಗಲಿಲ್ಲ. ಅಥವಾ ಜಿಹಾದಿ ಪರಿಕಲ್ಪನೆಯಲ್ಲೇ ಬೆಳೆದು ಬಂದವನೂ ಅಲ್ಲ. ಸಾಮ್ರಾಜ್ಯಶಾಹಿಗಳ ರಾಜಕೀಯ ಚದುರಂಗದಲ್ಲಿ ಒಂದು ದಾಳವಾಗಿ ರಂಗ ಪ್ರವೇಶ ಮಾಡಿದ ಲಾಡೆನ್‌ಗೆ ಇಂದು ರಾಜನೇ ಚೆಕ್ ಮೇಟ್ ಹೇಳಿರುವುದು ಇತಿಹಾಸದ ವೈಶಿಷ್ಟ್ಯವೇ.

ಬಾಲ್ಯದ ಜೀವನ

1957ರಲ್ಲಿ ಸೌದಿ ಅರೇಬಿಯಾದಲ್ಲಿ ಮೊಹಮದ್ ಬಿನ್ ಲಾಡೆನ್ ಹತ್ತನೆಯ ಪತ್ನಿಗೆ ಹದಿನೇಳನೆಯ ಮಗನಾಗಿ ಜನಿಸಿದ ಒಸಾಮ ತನ್ನ ಬಾಲ್ಯ ಕಳೆದದ್ದು ತಂದೆಯ ಆಶ್ರಯದಲ್ಲೇ. 1931ರಲ್ಲಿ ದಕ್ಷಿಣ ಯಮನ್ ದೇಶದ ಗ್ರಾಮೀಣ ಪ್ರದೇಶದಿಂದ ಸೌದಿ ಅರೇಬಿಯಾಗೆ ವಲಸೆ ಬಂದು ನೆಲೆಸಿದ್ದ ಒಸಾಮನ ತಂದೆ ಮುಹಮ್ಮದ್ ಬಿನ್ ಲಾಡೆನ್ ಜೆಡ್ಡಾದಲ್ಲಿ ಮೆಕ್ಕಾ ಯಾತ್ರೆಗೆ ಹೋಗುವ ಯಾತ್ರಾರ್ಥಿಗಳ ಲಗೇಜುಗಳನ್ನು ಹೊರುವ ಕೆಲಸ ಮಾಡುತ್ತಿದ್ದರು. ಕೆಲವೇ ವರ್ಷಗಳಲ್ಲಿ ತಮ್ಮದೇ ಆದ ಕಟ್ಟಡ ನಿರ್ಮಾಣ ಕಂಪನಿಯನ್ನು ಆರಂಭಿಸಿದ್ದ ಲಾಡೆನ್ ಅತಿ ಶೀಘ್ರಗತಿಯಲ್ಲಿ ಸೌದಿಯ ಶ್ರೀಮಂತರಲ್ಲಿ ಒಬ್ಬರಾಗಿದ್ದರು. ಒಸಾಮ ಹುಟ್ಟಿದ ಕೂಡಲೇ ತಂದೆ ತಾಯಿಯರು ವಿಚ್ಛೇದನ ಹೊಂದಿದ್ದರಿಂದ ಮರುವಿವಾಹವಾದ ತನ್ನ ತಾಯಿಯ ಹೊಸ ಕುಟುಂಬದಲ್ಲೇ ಲಾಡೆನ್‌ನ ಬಾಲ್ಯ ಕಳೆದಿತ್ತು. 1967ರಲ್ಲಿ ತನ್ನ ತಂದೆಯನ್ನು ಕಳೆದುಕೊಂಡ ಒಸಾಮ ಬಾಲ್ಯದಿಂದಲೂ ವಹಾಬಿ ಇಸ್ಲಾಂ ವಿಚಾರಧಾರೆಯನ್ನೇ ಶ್ರದ್ಧೆಯಿಂದ ಸ್ವೀಕರಿಸಿ ಇಸ್ಲಾಂನ ತತ್ವಗಳನ್ನು ಪರಿಪಾಲಿಸುತ್ತಿದ್ದ. 1968 ರಿಂದ 1976ರವರೆಗೆ ಅಲ್ ತಗರ್ ಮಾಡೆಲ್ ಶಾಲೆಯಲ್ಲಿ ಸೆಕ್ಯುಲಾರ್ ಶಿಕ್ಷಣವನ್ನೇ ಪಡೆದ ಒಸಾಮ ಅಬ್ದುಲ್ ಅಜೀಜ್ ವಿಶ್ವವಿದ್ಯಾಲಯದಲ್ಲಿ ಬ್ಯುಸಿನೆಸ್ ಅಡ್ಮಿನಿಸ್ಟ್ರೇಷನ್ ಪದವಿಯನ್ನೂ ಪಡೆದಿದ್ದ. ಸಿವಿಲ್ ಇಂಜಿನಿಯರಿಂಗ್ ಪದವಿ ಹೊಂದಿದ್ದನೆಂದೂ ಕೆಲವರು ಹೇಳುತ್ತಾರೆ. ತನ್ನ ವ್ಯಾಸಂಗದ ದಿನಗಳಿಂದಲೇ ಧರ್ಮದ ಬಗ್ಗೆ ಅಪಾರ ಆಸಕ್ತಿ ಬೆಳೆಸಿಕೊಂಡಿದ್ದ ಒಸಾಮ ಕವಿತೆಗಳನ್ನು ಬರೆದದ್ದೂ ಉಂಟು. ಖುರಾನ್ ಮತ್ತು ಜಿಹಾದ್ ಪರಿಕಲ್ಪನೆಗಳನ್ನು ವ್ಯಾಖ್ಯಾನಿಸಲು ಯತ್ನಿಸಿದ ಒಸಾಮ ಚಾರಿಟಬಲ್ ಟ್ರಸ್ಟ್ ನಡೆಸುತ್ತಿದ್ದನೆಂದು ಹೇಳಲಾಗುತ್ತದೆ. 1974ರಲ್ಲಿ ವೈವಾಹಿಕ ಜೀವನ ಆರಂಭಿಸಿದ ಒಸಾಮ ಒಟ್ಟು ನಾಲ್ಕು ಪತ್ನಿಯರನ್ನು ಹೊಂದಿದ್ದ 25 ಮಕ್ಕಳ ತಂದೆ.

ಶರಿಯತ್ ನಿಯಮಗಳ ಮೂಲಕವೇ ಮುಸ್ಲಿಂ ಸಮುದಾಯವನ್ನು ಸರಿದಾರಿಯಲ್ಲಿ ಕೊಂಡೊಯ್ಯಲು ಸಾಧ್ಯ ಎಂಬ ಬಲವಾದ ನಂಬಿಕೆ ಒಸಾಮಾನನ್ನು ಸಮಾಜವಾದ ಮತ್ತು ಕಮ್ಯುನಿಸಂನ ವಿರೋಧಿಯನ್ನಾಗಿ ರೂಪಿಸಿತ್ತು. ತನ್ನ ಈ ನಂಬಿಕೆಯನ್ನು ಜಿಹಾದ್ ಪರಿಕಲ್ಪನೆಯೊಂದಿಗೆ ಸೇರಿಸಿ ಆಫ್ಘಾನಿಸ್ತಾನದ ಕಣಿವೆಗಳಲ್ಲಿ ತನ್ನ ಜೀವನವನ್ನು ರೂಪಿಸಿಕೊಳ್ಳಲು ಯತ್ನಿಸಿದ ಲಾಡೆನ್‌ಗೆ ಇಸ್ಲಾಂ ಧರ್ಮವನ್ನು ವಿಶ್ವವ್ಯಾಪಿಯಾಗಿ ಹರಡಿ ಮುಸ್ಲಿಂ ಜಗತ್ತನ್ನು ಸೃಷ್ಟಿಸುವ ಕನಸು ಮೂಡಿದ್ದು ಈ ಸಂದರ್ಭದಲ್ಲೇ. ಮಹಿಳೆಯರು, ಮಕ್ಕಳೂ ಸೇರಿದಂತೆ ನಾಗರಿಕರ

ಲ್ಲರೂ ಜಿಹಾದ್‌ನ ಪ್ರಮುಖ ಗುರಿ ಎಂದು ಭಾವಿಸಿದ್ದ ಲಾಡೆನ್‌ಗೆ ಪರಮ ಶತ್ರುಗಳಾಗಿ ಕಂಡುಬಂದಿದ್ದು ಸೋವಿಯಟ್ ರಷ್ಯಾದ ಕಮ್ಯುನಿಸಂ ಮತ್ತು ಇಸ್ರೇಲಿನ ರಾಜನೀತಿಗಳು. ತನ್ನ ವಹಾಬಿ ನಂಬಿಕೆಗಳಿಗೆ ಬದ್ಧನಾಗಿ ಸಂಗೀತ ಮುಂತಾದ ಕಲೆಗಳನ್ನು ತಿರಸ್ಕರಿಸುತ್ತಿದ್ದ ಲಾಡೆನ್‌ಗೆ ಶಿಯಾ ಮುಸ್ಲಿಮರೂ ಬದ್ಧ ವೈರಿಗಳೇ ಆಗಿದ್ದರು.

ಸಾಮ್ರಾಜ್ಯಶಾಹಿಯ ತೆಕ್ಕೆಯಲ್ಲಿ

1970–80ರ ದಶಕ ಶೀತಲ ಯುದ್ಧದ ಅವಧಿ. ಕಮ್ಯುನಿಸ್ಟ್ ರಾಷ್ಟ್ರ ಸೋವಿಯಟ್ ಯೂನಿಯನ್ ಮತ್ತು ಸಾಮ್ರಾಜ್ಯಶಾಹಿ ರಾಷ್ಟ್ರ ಅಮೆರಿಕಾ ನಡುವಿನ ಸಂಘರ್ಷದಲ್ಲಿ ಬಲಿಯಾದದ್ದು ಹಲವಾರು ಸಣ್ಣ ಪುಟ್ಟ ಸ್ವತಂತ್ರ ರಾಷ್ಟ್ರಗಳು. ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಹೋರಾಡಲು ತನ್ನ ಸೇನಾಬಲದ ಮೂಲಕ ವಿವಿಧ ದೇಶಗಳಲ್ಲಿ ಪ್ರವೇಶಿಸಿದ ಸೋವಿಯಟ್ ರಷ್ಯಾಗೆ ಪ್ರಬಲ ಸಮರ್ಥನೆ ದೊರೆತದ್ದು ಆಫ್ರಿಕಾ-ಅರಬ್ ರಾಷ್ಟ್ರಗಳಲ್ಲಿ ಮತ್ತು ಪ್ರಮುಖವಾಗಿ ಆಫ್ಘಾನಿಸ್ತಾನದಲ್ಲಿ. ಆಫ್ಘಾನಿಸ್ತಾನದಲ್ಲಿ ನೇರವಾಗಿ ಪ್ರವೇಶಿಸಿದ ಸೋವಿಯಟ್ ಸೇನೆ ಅಲ್ಲಿ ಕಮ್ಯುನಿಸ್ಟ್ ಸರ್ಕಾರವನ್ನು ಸ್ಥಾಪಿಸಲಾಗದಿದ್ದರೂ ಅಮೆರಿಕವನ್ನು ವಿರೋಧಿಸುವ ಮತ್ತು ಧರ್ಮಾಧಾರಿತ ಆಳ್ವಿಕೆಯನ್ನು ಪ್ರತಿರೋಧಿಸುವ ಸರ್ಕಾರವನ್ನು ಸ್ಥಾಪಿಸಿತ್ತು. ಇದು ಅಮೆರಿಕಾಗೆ ನುಂಗಲಾರದ ತುತ್ತಾಗಿತ್ತು. ಏಕೆಂದರೆ ಮಧ್ಯಪ್ರಾಚ್ಯದ ತೈಲ ಸಂಪತ್ತನ್ನೇ ತನ್ನ ಸಾಮ್ರಾಜ್ಯಶಾಹಿ ರಾಜಕಾರಣದ ಬುನಾದಿಯನ್ನಾಗಿ ಮಾಡಿಕೊಂಡಿದ್ದ ಅಮೆರಿಕಾಗೆ ಆಫ್ಘಾನಿಸ್ತಾನ ಅತ್ಯಂತ ಪ್ರಮುಖವಾದ ವಾಣಿಜ್ಯ ಮಾರ್ಗವಾಗಿತ್ತು.

ಅಮೆರಿಕದ ಆಳ್ವಿಕರಿಗೆ ಸೋವಿಯಟ್ ಸೇನೆಯನ್ನು ಹಿಮ್ಮೆಟ್ಟಿಸುವ ಉದ್ದೇಶ ಒಂದಾದರೆ, ಆಫ್ಘಾನಿಸ್ತಾನವನ್ನು ಆಕ್ರಮಿಸಿಕೊಂಡು ತನ್ನದೇ ಆದ ಕೈಗೊಂಬೆ ಸರ್ಕಾರವನ್ನು ಸ್ಥಾಪಿಸುವುದು ಮತ್ತೊಂದು ಉದ್ದೇಶ. ಇದೇ ಅವಧಿಯಲ್ಲಿ 1979ರಲ್ಲಿ ಬಿನ್ ಲಾಡೆನ್ ಆಫ್ಘಾನಿಸ್ತಾನವನ್ನು ಪ್ರವೇಶಿಸಿದ್ದು ಅಲ್ಲಿನ ರಾಜಕೀಯ ಚಿತ್ರಣವನ್ನೇ ಬದಲಾಯಿಸಿತ್ತು. 20ರ ಹರೆಯದ ಲಾಡೆನ್‌ನಲ್ಲಿ ದ್ವೇಷದ ಹೊಗೆಯಾಡುತ್ತಿತ್ತು. ಅಮೆರಿಕಾಗೆ ಸೇಡಿನ ಕಿಡಿ ಕಾಡುತ್ತಿತ್ತು. ಈ ಸಂದರ್ಭದಲ್ಲಿ ಅಬ್ದುಲ್ ಅಜಂ ಎಂಬಾತ ಹುಟ್ಟುಹಾಕಿದ ಮುಜಾಹಿದೀನ್ ಸೇನೆಗೆ ಲಾಡೆನ್ ಸೇರ್ಪಡೆಯಾಗಿದ್ದ. ಒಸಾಮಾ ನೇತೃತ್ವದ ಇಸ್ಲಾಮಿಕ್ ಜಿಹಾದ್ ಮುಜಾಹಿದೀನ್ ಸೇನೆ ಸೋವಿಯಟ್ ಆಕ್ರಮಣವನ್ನು ಕೊನೆಗೊಳಿಸಲು ಪಣ ತೊಟ್ಟಿತ್ತು. ಈ ಸಂಘಟನೆಗೆ ಬೇಕಿದ್ದುದು ಹಣಕಾಸಿನ ನೆರವು ಮತ್ತು ಶಸ್ತ್ರಾಸ್ತ್ರಗಳ ಪೂರೈಕೆ. 1979ರಿಂದ 1989ರವರೆಗೆ ಅಮೆರಿಕದ ಅಧ್ಯಕ್ಷರಾಗಿದ್ದ ಜಿಮ್ಮಿ ಕಾರ್ಟರ್ ಮತ್ತು ರೋನಾಲ್ಡ್ ರೇಗನ್ ಈ ಎರಡೂ ಅಗತ್ಯತೆಗಳನ್ನು ಪೂರೈಸಿದ್ದು ಮುಜಾಹಿದೀನ್ ಸಂಘಟನೆಯ ಬಲವರ್ಧನೆಗೆ ಕಾರಣವಾಗಿತ್ತು.

ಆಪರೇಷನ್ ಸೈಕ್ಲೋನ್ ಎಂಬ ಕಾರ್ಯಾಚರಣೆಯ ಮೂಲಕ ಮುಜಾಹಿದೀನ್ ಬಂಡುಕೋರ ಸೇನೆಯನ್ನು ಪ್ರೋತ್ಸಾಹಿಸಿ, ಪೋಷಿಸಿದ ಅಮೆರಿಕದ ಆಳ್ವಿಕರು ಸಿಐಎ ಮೂಲಕ ಮುಜಾಹಿದೀನ್ ಸೇನೆಗೆ ಶಸ್ತ್ರಾಸ್ತ್ರಗಳನ್ನು ಮಾತ್ರವಲ್ಲದೆ ತರಬೇತಿಯನ್ನೂ ಒದಗಿಸಿತ್ತು. ಅದೂ ಪಾಕಿಸ್ತಾನದ ನೆಲದಲ್ಲಿ. ಈ ಸಂದರ್ಭದಲ್ಲಿ ಒಸಾಮ ಬಿನ್ ಲಾಡೆನ್ ಅಮೆರಿಕದ ದೃಷ್ಟಿಯಲ್ಲಿ ಒಬ್ಬ ರಾಷ್ಟ್ರ ಪ್ರೇಮಿಯಾಗಿದ್ದ. ಮುಜಾಹಿದೀನ್‌ಗಳು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. 1984ರಲ್ಲಿ ಅಬ್ದುಲ್ ಅಜಂನೊಡನೆ ಸೇರಿ ಮಕ್ತಾಬ್ ಅಲ್ ಖಿದಾಮತ್ ಎಂಬ ಸಂಘಟನೆಯನ್ನು ಹುಟ್ಟುಹಾಕಿದ ಲಾಡೆನ್ ಆಫ್ಘಾನ್ ಯುದ್ಧದ ಮುಸ್ಲಿಂ ಯೋಧರಿಗೆ ಹಣಕಾಸು, ಶಸ್ತ್ರಾಸ್ತ್ರಗಳನ್ನು ಪೂರೈಸಲಾರಂಭಿಸಿದ್ದ. ಅರಬ್ ರಾಷ್ಟ್ರಗಳ ಸಾವಿರಾರು ಯುವಕರು ಈ ಯುದ್ಧದಲ್ಲಿ ಭಾಗಿಯಾಗಲು ಸಿದ್ಧರಾದರು. ತನ್ನ ಬಳಿಯಿದ್ದ ಅಪಾರ ಆಸ್ತಿಯನ್ನು ಜಿಹಾದ್‌ಗಾಗಿ ಬಳಸಿದ ಒಸಾಮ ಸೋವಿಯಟ್ ಸೇನೆಯನ್ನು ಎದುರಿಸಲು ತನ್ನೆಲ್ಲಾ ಶ್ರಮವನ್ನೂ ವ್ಯಯಿಸಿದ್ದ. ಪರಿಣಾಮ ಆಫ್ಘಾನಿಸ್ತಾನ ಮುಸ್ಲಿಂ ಬಂಡುಕೋರರ ಪ್ರಧಾನ ಕಛೇರಿಯಾಗಿತ್ತು.

ಅಲ್‌ಖೈದಾ ಸ್ಥಾಪನೆ

1988ರಲ್ಲಿ ಮಕ್ತಾಬ್ ಅಲ್ ಖಿದಾಮತ್‌ನಿಂದ ಹೊರಬಂದ ಲಾಡೆನ್ ಮುಜಾಹಿದೀನ್ ಸಂಘಟನೆಯನ್ನು ಒಂದು ಪ್ರಬಲ ಪ್ರತ್ಯೇಕ ಸೇನೆಯನ್ನಾಗಿ ಪರಿವರ್ತಿಸುವ ಯೋಜನೆ ರೂಪಿಸಿದ್ದ. ಒಂದು ಔಪಚಾರಿಕ ಗುಂಪಿನಂತೆ ಸ್ಥಾಪಿತವಾದ ಅಲ್‌ಖೈದಾ ಸಂಘಟನೆಯ ಮೂಲ ಧ್ಯೇಯ ಇಸ್ಲಾಂ ಧರ್ಮವನ್ನು ಎಲ್ಲೆಡೆ ಸ್ಥಾಪಿಸುವುದು ಮಾತ್ರವಾಗಿತ್ತು. 1988ರ ಆಗಸ್ಟ್ 11ರಂದು ಈಜಿಪ್ಟಿನ ಇಸ್ಲಾಮಿಕ್ ಜಿಹಾದ್, ಅಬ್ದುಲ್ಲಾ ಅಜಂ ಮತ್ತು ಲಾಡೆನ್ ಸೇರಿ ಈ ಇಸ್ಲಾಮಿಕ್ ಜಿಹಾದ್ ಗುಂಪನ್ನು ರಚಿಸಿದ್ದರು. ಇದಕ್ಕೆ ಪೂರಕವಾದ ಹಣಕಾಸು ಒದಗಿಸುವುದು ಲಾಡೆನ್‌ನ ಕರ್ತವ್ಯವಾಗಿತ್ತು.

ಸೋವಿಯತ್ ಸೇನೆ ಹಿಂದೆ ಸರಿದ ನಂತರ ವಿಶ್ವದಾದ್ಯಂತ ಜಿಹಾದ್‌ಗಾಗಿ ಶ್ರಮಿಸುವ ಪಣ ತೊಟ್ಟ ಲಾಡೆನ್ 1990ರಲ್ಲಿ ಸೌದಿ ಅರೇಬಿಯಾಗೆ ಹಿಂದಿರುಗಿದ್ದ. ಈ ಸಂದರ್ಭದಲ್ಲಿ ಲಾಡೆಲ್ ಅಮೆರಿಕದ ದೃಷ್ಟಿಯಲ್ಲಿ, ಅರಬ್ ರಾಷ್ಟ್ರಗಳಲ್ಲಿ ಸೋವಿಯತ್ ಪ್ರಾಬಲ್ಯವನ್ನು ಮಣಿಸಿದ ಹೀರೋ ಆಗಿ ಕಂಡುಬಂದಿದ್ದ. ಆದರೆ ಅಮೆರಿಕ ಪೋಷಿಸಿ ಬೆಳೆಸಿದ ಈ ಕೂಸು ಮುಂದೊಂದು ದಿನ ಗುರುವಿಗೇ ತಿರುಮಂತ್ರ ಹೇಳುವುದೆಂದು ಯಾರೂ ನಿರೀಕ್ಷಿಸಿರಲಿಲ್ಲ.

1990ರಲ್ಲಿ ಸದ್ದಾಂ ಹುಸೇನ್ ಆಳ್ವಿಕೆಯ ಇರಾಕ್ ಕುವೈತನ್ನು ಆಕ್ರಮಿಸಿದ್ದು ಸೌದಿ ಅರೇಬಿಯಾವನ್ನು ಸಂಕಷ್ಟಕ್ಕೆ ಸಿಲುಕಿಸಿತ್ತು. ಸೌದಿ ಅರೇಬಿಯಾದ ರಕ್ಷಣೆಗೆ ತನ್ನ ಮುಜಾಹಿದೀನ್ ಸೇನೆಯನ್ನು ಒದಗಿಸಲು ಸಿದ್ಧನಾಗಿದ್ದ ಲಾಡೆನ್ ಮುಸ್ಲಿಂ ರಾಷ್ಟ್ರಗಳು ಅಮೆರಿಕದ ಬೆಂಬಲ ಪಡೆಯುವುದನ್ನು ತೀವ್ರವಾಗಿ ವಿರೋಧಿಸಿದ್ದ. ಆದರೆ ಸೌದಿ ದೊರೆಗಳು ಇದನ್ನು ಮಾನ್ಯ ಮಾಡಲಿಲ್ಲ. ಮೆಕ್ಕಾ ಮದೀನ ಇರುವ ನೆಲದಲ್ಲಿ ವಿದೇಶಿ ಸೇನೆ ನೆಲೆಸುವುದನ್ನು ಪ್ರತಿರೋಧಿಸಿದ ಲಾಡೆನ್‌ಗೆ ಇಡೀ ಪಾಶ್ಚಿಮಾತ್ಯ ರಾಷ್ಟ್ರಗಳೇ ಮುಸ್ಲಿಂ ವಿರೋಧಿಯಾಗಿ ಕಂಡುಬಂದವು.

ಅಮೆರಿಕದ ಕೃಪಾಕಟಾಕ್ಷದಲ್ಲೇ ಬೆಳೆದ ಮುಜಾಹಿದೀನ್ ಈಗ ಅಮೆರಿಕದ ವಿರುದ್ಧ ಸೆಟೆದು ನಿಂತಿತ್ತು. 1990ರಲ್ಲಿ ಎಫ್‌ಬಿಐ ನೇತೃತ್ವದಲ್ಲಿ ಅಲ್‌ಖೈದಾ ಮುಖ್ಯಸ್ಥ ಅಲಿ ಮೊಹಮ್ಮದ್ ಅವರ ಶೋಧನೆ ನಡೆದ ನಂತರವೇ ಈ ಸಂಘಟನೆಯ ಭಯೋತ್ಪಾದಕ ಸ್ವರೂಪ ಬಯಲಾಗಿತ್ತು. ಸೌದಿ ಸರ್ಕಾರದಿಂದ ಬಹಿಷ್ಕಾರಕ್ಕೊಳಗಾದ ಲಾಡೆನ್ ಗಡೀಪಾರಿಗೂ ಗುರಿಯಾಗಿ ಸೂಡಾನ್‌ನಲ್ಲಿ ಬಂದು ನೆಲೆಸಿದ್ದ. ಅಲ್ಲಿ ತನ್ನ ಮುಜಾಹಿದೀನ್ ಸೇನೆಗೆ ಹೊಸ ಆಯಾಮವನ್ನು ನೀಡಿದ ಲಾಡೆನ್ ಈಜಿಪ್ಟ್‌ನ ಇಸ್ಲಾಮಿಕ್ ಜಿಹಾದ್ ಜೊತೆಗೂಡಿ ಅಲ್‌ಖೈದಾ ಸಂಘಟನೆಯನ್ನು ಮತ್ತಷ್ಟು ವಿಸ್ತಾರಗೊಳಿಸಿದ್ದ. ಹೊಸ್ನಿ ಮುಬಾರಕ್ ಮೇಲಿನ ಕೊಲೆ ಪ್ರಕರಣದ ನಂತರ ಲಾಡೆನ್ ಪುನಃ ಆಫ್ಘಾನಿಸ್ತಾನಕ್ಕೆ ಬಂದು ನೆಲೆಸಿದ್ದ.

ಸೋವಿಯತ್ ಸೇನೆಯ ನಿರ್ಗಮನದ ನಂತರ ಕಮ್ಯುನಿಸ್ಟ್ ನಜೀಬುಲ್ಲ ಸರ್ಕಾರ ಪತನಗೊಂಡು ಅರಾಜಕತೆ ಸೃಷ್ಟಿಯಾಗಿತ್ತು. ಅರಬ್ ರಾಷ್ಟ್ರಗಳು ವಿವಿಧ ಬಂಡುಕೋರರಿಗೆ ಬೆಂಬಲ ನೀಡುವ ಮೂಲಕ ಮತ್ತಷ್ಟು ಪ್ರಕ್ಷುಬ್ಧತೆ ಸೃಷ್ಟಿಸಿದ್ದವು. ಹಲವಾರು ಬಂಡುಕೋರ ಗುಂಪುಗಳ ಆಂತರಿಕ ಸಂಘರ್ಷದಲ್ಲಿ ಆಫ್ಘಾನಿಸ್ತಾನ ವಸ್ತುಶಃ ರಣರಂಗವಾಗಿ ಪರಿಣಮಿಸಿತ್ತು. ಈ ಸಂದರ್ಭದಲ್ಲಿ ಅಧಿಕಾರ ವಹಿಸಿಕೊಂಡ ತಾಲಿಬಾನ್ ಆಫ್ಘಾನಿಸ್ತಾನದಲ್ಲಿ ಹತ್ತು ವರ್ಷಗಳ ಕಾಲ ಸರ್ಕಾರವನ್ನು ನಡೆಸಿತ್ತು. ಇಸ್ಲಾಮಿಕ್ ಶರಿಯ ಕಾನೂನನ್ನು ಅಕ್ಷರಶಃ ಪಾಲಿಸಿದ್ದ ಲಾಡೆನ್ ತನ್ನ ಪಶ್ಚಿಮ ವಿರೋಧಿ ನಿಲುವುಗಳಿಗೆ ಪೂರಕವಾಗಿ ಮುಜಾಹಿದೀನ್ ಸೇನೆಯನ್ನು ಇಸ್ಲಾಮಿಕ್ ಜಿಹಾದ್ ಸೇನೆಯನ್ನಾಗಿ ಪರಿವರ್ತಿಸಿದ್ದ. ತಾಲಿಬಾನ್ ಆಳ್ವಿಕೆ ಇಡೀ ಜಗತ್ತಿನ ಪ್ರಜಾಸತ್ತಾತ್ಮಕ ಪ್ರಜ್ಞೆಯನ್ನೇ ಕದಡುವಂತಹ ಅಮಾನವೀಯ ಪದ್ಧತಿಗಳನ್ನು, ನಿಯಮಗಳನ್ನು ಅನುಷ್ಠಾನಗೊಳಿಸಿದ್ದು ಈಗ ಇತಿಹಾಸ. ದಮನಕಾರಿ ಪ್ರಭುತ್ವಕ್ಕೆ ತಾಲಿಬಾನ್ ಪರ್ಯಾಯ ಪದವಾಗಿ ರೂಪುಗೊಳ್ಳುವ ಮಟ್ಟಿಗೆ ಈ ಆಳ್ವಿಕೆಯಲ್ಲಿ ಶೋಷಣೆ ಕಂಡುಬಂದಿತ್ತು.

ಈ ಅವಧಿಯಲ್ಲೇ ಅಮೆರಿಕದ ಮೇಲೆ ದಾಳಿ ಮಾಡಲು ಸಂಚು ಹೂಡಿದ್ದ ಬಿನ್ ಲಾಡೆನ್ ವಿಶ್ವದಾದ್ಯಂತ ಭಯೋತ್ಪಾದಕ ಸಂಘಟನೆಗಳನ್ನು ಹುಟ್ಟುಹಾಕಿದ್ದೂ ಹೌದು. ಲಷ್ಕರ್ ಎ ತೊಯಿಬಾ, ಜೈಷ್ ಎ ಮೊಹಮ್ಮದ್, ಹೂಜಿ ಮುಂತಾದ ಸಂಘಟನೆಗಳು ಭಾರತ, ಪಾಕಿಸ್ತಾನ, ಬಾಂಗ್ಲಾದೇಶಗಳಲ್ಲಿ ಹುಟ್ಟಿಕೊಂಡವು. ಈ ಸಂಘಟನೆಗಳ ಮೂಲ ಧ್ಯೇಯವೇ

ಸದ್ದಾಂ ಹುಸೇನ್ ಆಳ್ವಿಕೆಯ ಇರಾಕ್ ಕುವೈತನ್ನು ಆಕ್ರಮಿಸಿದ್ದು ಸೌದಿಅರೇಬಿಯಾವನ್ನು ಸಂಕಷ್ಟಕ್ಕೆ ಸಿಲುಕಿಸಿತ್ತು. ಸೌದಿ ಅರೇಬಿಯಾದ ರಕ್ಷಣೆಗೆ ತನ್ನ ಮುಜಾಹಿದೀನ್ ಸೇನೆಯನ್ನು ಒದಗಿಸಲು ಸಿದ್ಧನಾಗಿದ್ದ ಲಾಡೆನ್ ಮುಸ್ಲಿಂ ರಾಷ್ಟ್ರಗಳು ಅಮೆರಿಕದ ಬೆಂಬಲ ಪಡೆಯುವುದನ್ನು ತೀವ್ರವಾಗಿ ವಿರೋಧಿಸಿದ್ದ. ಆದರೆ ಸೌದಿ ದೊರೆಗಳು ಇದನ್ನು ಮಾನ್ಯ ಮಾಡಲಿಲ್ಲ. ಮೆಕ್ಕಾ ಮದೀನ ಇರುವ ನೆಲದಲ್ಲಿ ವಿದೇಶಿ ಸೇನೆ ನೆಲೆಸುವುದನ್ನು ಪ್ರತಿರೋಧಿಸಿದ ಲಾಡೆನ್‌ಗೆ ಇಡೀ ಪಾಶ್ಚಿಮಾತ್ಯ ರಾಷ್ಟ್ರಗಳೇ ಮುಸ್ಲಿಂ ವಿರೋಧಿಯಾಗಿ ಕಂಡುಬಂದವು. ಅಮೆರಿಕದ ಕೃಪಾಕಟಾಕ್ಷದಲ್ಲೇ ಬೆಳೆದ ಮುಜಾಹಿದೀನ್ ಈಗ ಅಮೆರಿಕದ ವಿರುದ್ಧ ಸೆಟೆದು ನಿಂತಿತ್ತು.

ಲಾಡೆನ್ ಹತ್ಯೆಯನ್ನು ವೀಕ್ಷಿಸಿ ಸಂಭ್ರಮಿಸುತ್ತಿರುವ ಅಮೇರಿಕಾ ಅಧ್ಯಕ್ಷ ಬರಾಕ್ ಒಬಾಮ, ವಿದೇಶಾಂಗ ಸಚಿವೆ ಹಿಲರಿ ಕ್ಲಿಂಟನ್ ಹಾಗೂ ಭದ್ರತಾ ಸಮಿತಿ ಮುಖ್ಯಸ್ಥರು

ಇಸ್ಲಾಮಿಕ್ ಜಿಹಾದ್ ಮತ್ತು ಮುಸ್ಲಿಂ ವಿಶ್ವದ ಸ್ಥಾಪನೆಯಾಗಿತ್ತು. ಪಶ್ಚಿಮ ಸಂಸ್ಕೃತಿಯನ್ನು ಪ್ರತಿರೋಧಿಸುವುದು ಈ ಹೋರಾಟದ ಒಂದು ಆಯಾಮವಾದರೆ, ಅರಬ್ ರಾಷ್ಟ್ರಗಳನ್ನು ಕೊಳ್ಳೆ ಹೊಡೆಯುತ್ತಿದ್ದ ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿಗಳನ್ನು ನಿರ್ನಾಮ ಮಾಡುವುದು ಜಿಹಾದ್‌ನ ಮತ್ತೊಂದು ಆಯಾಮವಾಗಿತ್ತು. ಇದರ ನೇರ ಪರಿಣಾಮವೇ 2001ರ ವಿಶ್ವ ವಾಣಿಜ್ಯ ಕೇಂದ್ರದ ಮೇಲಿನ ದಾಳಿ. ಈ ದಾಳಿಯ ನಂತರ ಅಮೆರಿಕ ನೇತೃತ್ವದ ನ್ಯಾಟೋ ಪಡೆಗಳು ಆಫ್ಘಾನಿಸ್ತಾನದ ಮೇಲೆ ಆಕ್ರಮಣ ನಡೆಸಿದ್ದು ಬಿನ್ ಲಾಡೆನ್‌ನ ಮೂರು ದಶಕಗಳ ಕರಾಳ ಅಧ್ಯಾಯದ ಅಂತ್ಯಕ್ಕೆ ಸೋಪಾನವಾಗಿತ್ತು. ಈ ಹತ್ತು ವರ್ಷಗಳ ಬೇಟೆಯ ನಂತರ ಇದೀಗ ಲಾಡೆನ್ ಅಮೆರಿಕದ ಗುಂಡೇಟಿಗೆ ಬಲಿಯಾಗಿದ್ದಾನೆ.

ವಿಪರ್ಯಾಸಗಳ ಕಂತೆ

ಮನುಜ ಜೀವಕ್ಕೆ ಕಿಂಚಿತ್ತೂ ಬೆಲೆ ನೀಡದೆ ತನ್ನ ಶತ್ರುಗಳನ್ನು, ಕೆಲವೊಮ್ಮೆ ಮಿತ್ರರನ್ನೂ ನಿರ್ದಾಕ್ಷಿಣ್ಯವಾಗಿ ಕೊಲೆ ಮಾಡುತ್ತಲೇ ತನ್ನ ಜಿಹಾದಿ ಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳುತ್ತಿದ್ದ ಒಸಾಮ ಬಿನ್ ಲಾಡೆನ್ ಅಷ್ಟೇ ದಾರುಣ ಅಂತ್ಯ ಕಂಡಿದ್ದು ಅಚ್ಚರಿಯೇನಲ್ಲ. ಜಾಗತಿಕ ರಾಜಕಾರಣದಲ್ಲಿ ಪರಿವರ್ತನೆಯನ್ನು ತರಲು ಹಿಂಸಾತ್ಮಕ ಹೋರಾಟವೇ ಅಂತಿಮ ಮಾರ್ಗ ಎಂದು ಪ್ರತಿಪಾದಿಸುತ್ತಿದ್ದ ಲಾಡೆನ್‌ಗೆ ತನ್ನ ಹಾದಿಗೆ ಅಡ್ಡ ಬಂದವರನ್ನು ಕೊಲ್ಲುವುದು ಸಹಜವೆನಿಸಿತ್ತು. ವಿಡಂಬನೆ ಎಂದರೆ ಲಾಡೆನ್ ಅನುಸರಿಸಿದ ಮಾರ್ಗಕ್ಕೂ ಲಾಡೆನ್‌ನ ಬೆನ್ನಟ್ಟಿ ಎರಡು ದಶಕಗಳ ಕಾಲ ಅನೇಕ ದೇಶಗಳ ಮೇಲೆ ಆಕ್ರಮಣ ನಡೆಸಿ, ಲಕ್ಷಾಂತರ ಜನರ ಮಾರಣ ಹೋಮ ಮಾಡಿದ ಸಾಮ್ರಾಜ್ಯಶಾಹಿ ಅಮೆರಿಕದ ಮಾರ್ಗಕ್ಕೂ ವ್ಯತ್ಯಾಸವೇನೂ ಇಲ್ಲ. ಒಸಾಮಾನನ್ನು ಬೇಟೆಯಾಡುವ ನೆಪದಲ್ಲಿ ಅಮೆರಿಕದ ದಾಳಿಗೆ ಬಲಿಯಾದ ಅಮಾಯಕರ ಸಂಖ್ಯೆಗೆ ಪಾರವೇ ಇಲ್ಲ. ಲಾಡೆನ್ ಯುಗವನ್ನು ಅಂತ್ಯ ಗೊಳಿಸಿ ವಿಜೃಂಭಿಸುತ್ತಿರುವ ಜಗತ್ತಿನ ಪ್ರಜ್ಞಾವಂತ (!) ಜನತೆ ನ್ಯಾಯಕ್ಕೆ ಜಯ ಸಂದ ಸಂಭ್ರಮದಲ್ಲಿ ಸಾಮ್ರಾಜ್ಯಶಾಹಿಯ ಸಮರಶೀಲತೆಯನ್ನು ಮರೆಮಾಚುವಂತಿಲ್ಲ.

ಲಾಡೆನ್ ಇನ್ನಿಲ್ಲ. ಪರಿಣಾಮ ಭಯೋತ್ಪಾದನೆಯೂ ಇನ್ನಿಲ್ಲವಾಗುವುದೋ ಅಥವಾ ಇನ್ನಷ್ಟು ಗಂಭೀರವಾಗುವುದೋ ಹೇಳಲಾಗದು. ಏಕೆಂದರೆ ಜಗತ್ತಿನ ಭಯೋತ್ಪಾದಕ ಇತಿಹಾಸದಲ್ಲಿ ಲಾಡೆನ್ ಕೇವಲ ಒಂದು ಸಂಕೇತವಷ್ಟೆ. ವಿಶ್ವದಾದ್ಯಂತ ಸಾವಿರಾರು ಲಾಡೆನ್‌ಗಳು ಸೃಷ್ಟಿಯಾಗಿದ್ದಾರೆ. ಇವರೆಲ್ಲರ ಕೇಂದ್ರ ಬಿಂದುವಾಗಿದ್ದುದು ಒಸಾಮ. ಹಾಗಾಗಿ ಒಸಾಮಾನ ಅಂತ್ಯ ಭಯೋತ್ಪಾದನೆಯ ಅಂತ್ಯವಲ್ಲ ಎಂಬ ಸತ್ಯ ಎಲ್ಲರಿಗೂ ಮನವರಿಕೆಯಾಗುತ್ತಿದೆ. ಇದು ಭಯೋತ್ಪಾದನೆಯ ಒಂದು ಆಯಾಮ. ಮಾಧ್ಯಮಗಳಾಗಲೀ, ಪ್ರಜ್ಞಾವಂತ ನಾಗರೀಕರಾಗಲೀ ಗಂಭೀರವಾಗಿ ಪರಿಗಣಿಸದೆ ಇರುವ ಮತ್ತೊಂದು ಆಯಾಮ ಲಾಡೆನ್ ಮತ್ತು ಇಸ್ಲಾಮಿಕ್ ಜಿಹಾದನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಸಾಮ್ರಾಜ್ಯಶಾಹಿ ಅಮೆರಿಕ ಮತ್ತು ಮಿತ್ರ ರಾಷ್ಟ್ರಗಳು ನಡೆಸಿರುವ–ನಡೆಸುತ್ತಿರುವ–ನಡೆಸಲಿರುವ ಮಾರಣಹೋಮ.

ಲಾಡೆನ್ ಬೇಟೆಗೆ ಬಲಿಯಾದ ಇರಾಕ್‌ನ ಅಮಾಯಕ ಜನತೆಯ ಬವಣೆಗೆ ಇಡೀ ನಾಗರಿಕ ವಿಶ್ವವೇ ನಾಚಿಕೆಯಿಂದ ತಲೆ ತಗ್ಗಿಸಬೇಕು. ಅಮೆರಿಕದ ಆಕ್ರಮಣಕ್ಕೆ ಬಲಿಯಾದ ಈ ಜನತೆಗೆ ಲಾಡೆನ್‌ನ ಸಾವು ಸುದ್ದಿಯೇ ಆಗುವುದಿಲ್ಲ. ಏಕೆಂದರೆ ಒಸಾಮಾನ ಶೋಧನೆಯಲ್ಲಿ ಅನೇಕ ಅಮಾಯಕರನ್ನು ಅಪಹರಿಸಿ, ಚಿತ್ರ ಹಿಂಸೆ ನೀಡಲಾಗಿದೆ. ತತ್ಪರಿಣಾಮವಾಗಿ ಲಕ್ಷಾಂತರ ಜನ ಶಾಶ್ವತವಾಗಿ ನಿದ್ರೆಯನ್ನೇ ಕಳೆದುಕೊಂಡಿದ್ದಾರೆ. ಒಂದು ಹಿಂಸಾತ್ಮಕ ಧೋರಣೆಯ ಸಂಘಟನೆಯನ್ನು ನಿಗ್ರಹಿಸಲು ಹಿಂಸೆಯನ್ನೇ ಬಳಸುವ ಧೋರಣೆಯನ್ನು ಬಹುಪಾಲು ಜನ ಸ್ವಾಗತಿಸುತ್ತಿರುವುದೂ ಸಾಮ್ರಾಜ್ಯಶಾಹಿ ಲಕ್ಷಣದ ಸಂಕೇತವಾಗಿದೆ.

9/11ರ ದಾಳಿ ಸಂಭವಿಸಿದ ಕೂಡಲೇ ಅಪರಾಧಿ ಯಾರೆಂದು ಸುಳಿವು ದೊರೆಯುವ ಮುನ್ನವೇ ಅಲ್ ಖೈದಾ ಮತ್ತು ಇರಾಕ್ ನಡುವೆ ಸಂಬಂಧ ಕಲ್ಪಿಸಿ ಇರಾಕ್ ಮೇಲೆ ಆಕ್ರಮಣ ನಡೆಸಿದ ಅಮೆರಿಕ ಕಳೆದ ಹತ್ತು ವರ್ಷಗಳಲ್ಲಿ ಆರು ಲಕ್ಷಕ್ಕೂ ಹೆಚ್ಚು ಜನರನ್ನು ಬಲಿತೆಗೆದುಕೊಂಡಿದೆ. ಲಕ್ಷಾಂತರ ಜನರು ನಿರ್ವಸಿತರಾಗಿದ್ದಾರೆ. ಲಾಡೆನ್ ಬೇಟೆಗೆ ಬಲಿಯಾದ ಇರಾಕ್‌ನ ಅಮಾಯಕ ಜನತೆಯ ಬವಣೆಗೆ ಇಡೀ ನಾಗರಿಕ ವಿಶ್ವವೇ ನಾಚಿಕೆಯಿಂದ ತಲೆ ತಗ್ಗಿಸಬೇಕು. ಅಮೆರಿಕದ ಆಕ್ರಮಣಕ್ಕೆ ಬಲಿಯಾದ ಈ ಜನತೆಗೆ ಲಾಡೆನ್‌ನ ಸಾವು ಸುದ್ದಿಯೇ ಆಗುವುದಿಲ್ಲ. ಏಕೆಂದರೆ ಒಸಾಮಾನ ಶೋಧನೆಯಲ್ಲಿ ಅನೇಕ ಅಮಾಯಕರನ್ನು ಅಪಹರಿಸಿ, ಚಿತ್ರ ಹಿಂಸೆ ನೀಡಲಾಗಿದೆ. ತತ್ಪರಿಣಾಮವಾಗಿ ಲಕ್ಷಾಂತರ ಜನ ಶಾಶ್ವತವಾಗಿ ನಿದ್ರೆಯನ್ನೇ ಕಳೆದುಕೊಂಡಿದ್ದಾರೆ.

ಒಂದು ಹಿಂಸಾತ್ಮಕ ಧೋರಣೆಯ ಸಂಘಟನೆಯನ್ನು ನಿಗ್ರಹಿಸಲು ಹಿಂಸೆಯನ್ನೇ ಬಳಸುವ ಧೋರಣೆಯನ್ನು ಬಹುಪಾಲು ಜನ ಸ್ವಾಗತಿಸುತ್ತಿರುವುದೂ ಸಾಮ್ರಾಜ್ಯಶಾಹಿ ಲಕ್ಷಣದ ಸಂಕೇತವಾಗಿದೆ. ಹಿಂಸೆಗೆ ಪ್ರತಿಹಿಂಸೆಯೇ ಪ್ರತ್ಯುತ್ತರವಾದಾಗ ಸಮಾಜ ಮತ್ತಷ್ಟು ಹಿಂಸಾಮುಖಿಯಾಗುತ್ತದೆ. ಹಿಂಸಾತ್ಮಕ ಧೋರಣೆ ಸಮಸ್ಯೆಯನ್ನು ಪರಿಹರಿಸುವುದಕ್ಕಿಂತಲೂ ಹೆಚ್ಚಾಗಿ ಉಲ್ಬಣಿಸುತ್ತದೆ ಎಂಬ ಸತ್ಯವನ್ನು ವಿಶ್ವ ಸಮುದಾಯ ಗ್ರಹಿಸಬೇಕಿದೆ. ಆದರೆ ಒಸಾಮಾ ಹತ್ಯೆಯ ನಂತರದಲ್ಲಿ ಕಂಡುಬಂದ ಸಂಭ್ರಮವನ್ನು ನೋಡಿದರೆ ಸಂಘರ್ಷಗಳ ಅಂತ್ಯಕ್ಕೆ ಹಿಂಸೆಯೇ ಸಿದ್ಧೌಷಧ ಎಂದು ಆಧುನಿಕ ಸಮಾಜ ಪರಿಭಾವಿಸಿದಂತಿದೆ. ಒಸಾಮ ಮತ್ತು ಸಂಗಡಿಗರು ಸೃಷ್ಟಿಸಿದ ಹಿಂಸೆ ಮತ್ತು ನೋವುಗಳ ವ್ಯೂಹದ ಸಂದರ್ಭವನ್ನು ಗ್ರಹಿಸದೆಯೇ ಲಾಡೆನ್‌ನ ಹತ್ಯೆಯನ್ನು ಸ್ವಾಗತಿಸುವ ಮೂಲಕ ಪ್ರಜ್ಞಾವಂತ ಸಮಾಜ ಅಮೆರಿಕದ ಈ ಕ್ರಮದಿಂದ ಭವಿಷ್ಯದಲ್ಲಿ ಉಂಟಾಗಬಹುದಾದ ಸಮಸ್ಯೆಗಳನ್ನು ಗಮನಿಸುತ್ತಲೇ ಇಲ್ಲ. ಒಬ್ಬ ಲಾಡೆನ್‌ಗಾಗಿ ಎಷ್ಟು ಜೀವಗಳು ಬಲಿಯಾಗಿವೆ ಎಂದು ನೋಡಿದಾಗ ಭಯೋತ್ಪಾದನೆಯ ಮೂಲ ವನ್ನು ಗ್ರಹಿಸದೆ ಭಯೋತ್ಪಾದಕರನ್ನು ಅಂತ್ಯಗೊಳಿಸುವ ವಿಶ್ವ ಪ್ರಭುತ್ವ ನೀತಿಯ ದುಷ್ಪರಿಣಾಮಗಳನ್ನು ಸುಲಭ ವಾಗಿ ಗ್ರಹಿಸಬಹುದು.

ಜಾಗತಿಕ ಮಟ್ಟದಲ್ಲಿ ನ್ಯಾಯ ಪಾಲನೆಗಾಗಿ ಸಾಕಷ್ಟು ಸಂಸ್ಥೆಗಳು, ನಿಯಮಾವಳಿಗಳು ಇದ್ದರೂ ಮತ್ತೊಂದು ದೇಶದಲ್ಲಿ ನುಗ್ಗಿ ಒಬ್ಬ ಅಪರಾಧಿಯನ್ನು ಹತ್ಯೆ ಮಾಡಿ ಆತನ ದೇಹವನ್ನು ಸಮುದ್ರದಲ್ಲಿ ಎಸೆಯುವುದನ್ನು ನ್ಯಾಯಯುತ ಎಂದೇ ಭಾವಿಸುವ ಅಮೆರಿಕದ ನೀತಿಗೆ ಏನು ಹೇಳಬಹುದು? 9/11ರ ದಾಳಿಗೆ ತುತ್ತಾದವರಿಗೆ ಇಂದಿಗೂ ನಿಜವಾದ ಅಪರಾಧಿ ಯಾರೆಂದು ತಿಳಿದಿಲ್ಲ. ಈ ನೊಂದ ಜೀವಿಗಳ ಹಿತಾಸಕ್ತಿಗಳನ್ನು ಬದಿಗಿಟ್ಟು ನೋಡಿದಾಗ ಒಸಾಮಾನನ್ನು ಹತ್ಯೆಮಾಡಲು ಅಮೆರಿಕ ಅನುಸರಿಸಿದ ನೀತಿ ಮಾನವ ಹಕ್ಕುಗಳ ಉಲ್ಲಂಘನೆ ಎಂದು ದಿಟ್ಟತನದಿಂದ ಹೇಳಬಹುದು. ಒಸಾಮಾ ತನ್ನ ವೈರಿಗಳ ಬದುಕುವ ಹಕ್ಕನ್ನೇ ಮನ್ನಿಸುತ್ತಿರಲಿಲ್ಲ. ಒಸಾಮಾನ ಬೇಟೆಯ ನೆಪದಲ್ಲಿ ಅಮೆರಿಕ ಮಾಡಿರುವುದೂ ಅದನ್ನೇ ಅಲ್ಲವೇ? ಒಬ್ಬ ರಾಕ್ಷಸನ ಬೇಟೆಗಾಗಿ ಸ್ವತಃ ರಾಕ್ಷಸೀ ಸ್ವರೂಪ ತಾಳುವುದು ಎಷ್ಟು ಸರಿ.

ಇಸ್ಲಾಮಿಕ್ ಜಿಹಾದ್ ಪರಿಕಲ್ಪನೆಯಲ್ಲಿ ಹಿಂಸಾತ್ಮಕ ಧೋರಣೆಯನ್ನೇ ತನ್ನ ಮೂಲಮಂತ್ರವನ್ನಾಗಿ ಪರಿಗಣಿಸಿದ್ದ ಒಸಾಮ ರಾಕ್ಷಸೀ ಪ್ರವೃತ್ತಿಯ ಸಂಕೇತವಾಗಿ ಇಡೀ ಜಗತ್ತಿಗೆ ಕಂಡಿದ್ದರೆ, ಈ ವಿದ್ಯಮಾನದ ಹಿಂದೆ ಜಾಗತಿಕ ಮಟ್ಟದ ರಾಜಕೀಯ ಬೆಳವಣಿಗೆಗಳು ಮತ್ತು ಸಮಾಜೋ ಆರ್ಥಿಕ ಸನ್ನಿವೇಶಗಳು ಅಷ್ಟೇ ಪ್ರಭಾವ ಬೀರಿರುವುದೂ ಕಂಡಿರಲೇಬೇಕು. ಜಿಹಾದ್ ರಾಜಕಾರಣಕ್ಕೆ ಒಸಾಮ ಅಥವಾ ಅಲ್‌ಖೈದಾ ಮಾತ್ರವೇ ಕಾರಣ ಎಂದು ಬಿಂಬಿಸುವ ಸಾಮ್ರಾಜ್ಯಶಾಹಿ ರಾಜಕಾರಣ ಮತ್ತು ಮಾಧ್ಯಮಗಳು ಸಮಕಾಲೀನ ಜಾಗತಿಕ ಇತಿಹಾಸದ ಒಂದು ಮಗ್ಗುಲನ್ನೇ ಮರೆಮಾಚುತ್ತಿರುವುದು ಸ್ಪಷ್ಟ. ಭಯೋತ್ಪಾದನೆ ಕೇವಲ ಒಬ್ಬ ವ್ಯಕ್ತಿಯ ಸೃಷ್ಟಿ ಎಂದು ಬಿಂಬಿಸಿ ನಂಬಿಸುವ ಮಾಧ್ಯಮಗಳ ಪ್ರಯತ್ನಗಳೇನೇ ಇದ್ದರೂ ಅಮೆರಿಕದ ವಿದೇಶಿ ನೀತಿಗಳು, ತೈಲೋತ್ಪನ್ನದ ಮೇಲಿನ ನಿಯಂತ್ರಣ, ಮಧ್ಯಪ್ರಾಚ್ಯದ ರಾಜಕಾರಣ ಮತ್ತು ಇಸ್ರೇಲ್‌ನ ಕುಹಕ ನೀತಿಗಳು ಜಾಗತಿಕ ಭಯೋತ್ಪಾದನೆಗೆ ನೀಡಿರುವ ಕೊಡುಗೆಯನ್ನು ಅಲ್ಲಗಳೆಯಲಾಗುವುದಿಲ್ಲ. ಈಗ ಲಾಡೆನ್ ಇಲ್ಲವೆಂದ ಮಾತ್ರಕ್ಕೆ ಅಮೆರಿಕದ ಬೇಟೆ ನಿಲ್ಲುವುದೇ ಅಥವಾ ಹಿಂಸಾತ್ಮಕ ರಾಜಕಾರಣ ಕೊನೆಗೊಳ್ಳುವುದೇ ?

ಒಸಾಮಾ ಬೇಟೆಗಾಗಿ ಕಳೆದ ಒಂದು ದಶಕದಲ್ಲಿ ಖರ್ಚುಮಾಡಲಾದ ಹಣವನ್ನು ಅಂತಾರಾಷ್ಟ್ರೀಯ ನ್ಯಾಯಪರಿಪಾಲನೆಗಾಗಿ, ಮಾನವ ಹಕ್ಕುಗಳ ರಕ್ಷಣೆಗಾಗಿ, ಶಾಂತಿ ಸ್ಥಾಪನೆಗಾಗಿ, ಪ್ರಜಾತಂತ್ರದ ಏಳಿಗೆಗಾಗಿ, ಇಸ್ರೇಲ್ ಪಾಲೆಸ್ಟೈನ್ ಸಮಸ್ಯೆಯ ಪರಿಹಾರಕ್ಕಾಗಿ ಖರ್ಚುಮಾಡಿದ್ದಲ್ಲಿ ವಿಶ್ವದಲ್ಲಿ ಭಯೋತ್ಪಾದನೆ ಈ ಮಟ್ಟಕ್ಕೆ ಬೆಳೆಯುತ್ತಲೇ ಇರಲಿಲ್ಲ. ಆದರೆ ನ್ಯೂಯಾರ್ಕಿನ ರಸ್ತೆಗಳಲ್ಲಿ ವಿಜೃಂಭಿಸುತ್ತಿರುವ ಜನತೆಗೆ ಈ ಗಂಭೀರ ಚಿಂತನೆಗಳು ಬೇಕಿಲ್ಲ. ಈ ವಿಜೃಂಭಣೆ ಎಷ್ಟು ಉನ್ಮಾದಕ್ಕೀಡಾಗಿದೆ ಎಂದರೆ ಒಸಾಮಾನೊಡನೆ ಹತರಾದ ಇತರ ಅಮಾಯಕರ ಬಗ್ಗೆ ಕಿಂಚಿತ್ತಾದರೂ ಕಾಳಜಿ ಎಲ್ಲಿಯೂ ವ್ಯಕ್ತವಾಗಿಲ್ಲ. ಅಂದರೆ ಒಸಾಮ ಒಬ್ಬ ನರಹಂತಕ ಅವನೊಂದಿಗೆ ಇರುವವರು ಯಾರೇ ಆದರೂ ಅವರೂ ಹತ್ಯೆಗೊಳಗಾಗಲು ಅರ್ಹರು ಎಂಬ ನೀತಿಯನ್ನು ನಾಗರಿಕ ಸಮಾಜ ಸ್ವೀಕರಿಸಿದಂತಿದೆ. ಒಸಾಮಾ ಬೇಟೆಯಲ್ಲಿ ಹತರಾದ ಲಕ್ಷಾಂತರ ಜನರೂ ಈ ವರ್ಗಕ್ಕೇ ಸೇರಿದವರಾಗಿರುತ್ತಾರೆ. ಅವರಿಗೆ ಶ್ರದ್ಧಾಂಜಲಿ ಅರ್ಪಿಸುವುದಿರಲಿ, ಆ ಅಮೂಲ್ಯ ಅಮಾಯಕ ಜೀವಗಳನ್ನು ನೆನೆಯಲು ಒಂದು ಕ್ಯಾಂಡಲ್ ಹಚ್ಚುವವರೂ ಕಾಣುತ್ತಿಲ್ಲ. ಏಕೆ ಅವರ ಜೀವಕ್ಕೆ ಬೆಲೆ ಇಲ್ಲವೇ? ಅಥವಾ ದುಷ್ಟ ಶಕ್ತಿಗಳ ನಿಗ್ರಹಕ್ಕಾಗಿ ಇವರೆಲ್ಲರೂ ಹರಕೆಯ ಕುರಿಗಳೇ?

ಒಸಾಮಾ ಹತ್ಯೆಯ ಕಾರ್ಯಾಚರಣೆಯಲ್ಲಿ ಅಮೆರಿಕನ್ನರಿಗೆ ಯಾವುದೇ ಹಾನಿಯಾಗಿಲ್ಲ ಎಂದು ಅಧ್ಯಕ್ಷ ಒಬಾಮಾ ಹೇಳಿರುವುದೇ ಅಮೆರಿಕದ ಪಾಶವೀ ಧೋರಣೆಯ ದ್ಯೋತಕವಾಗಿ ಕಾಣುತ್ತದೆ. 9/11ರ ಘಟನೆಯಲ್ಲೂ ಅಮೆರಿಕನ್ನರಿಗೆ ಹಾನಿಯಾಗದೆ ಹೋಗಿದ್ದರೆ ಈ ಬೇಟೆಯ ಅವಶ್ಯಕತೆಯೇ ಇರುತ್ತಿರಲಿಲ್ಲ. ಏಕೆಂದರೆ ಸಾಮ್ರಾಜ್ಯಶಾಹಿಯ ದೃಷ್ಟಿಯಲ್ಲಿ ಅಮೆರಿಕನ್ನರ ಜೀವ ಹೆಚ್ಚು ಅಮೂಲ್ಯವಾದದ್ದು. 6 ಲಕ್ಷ ಅಮಾಯಕ ಅಮೆರಿಕನ್ನರಿಗೆ ಹಾನಿಯಾಗದೆ ಹೋಗಿದ್ದರೆ ಈ ಬೇಟೆಯ ಅವಶ್ಯಕತೆಯೇ ಇರುತ್ತಿರಲಿಲ್ಲ. ಏಕೆಂದರೆ ಸಾಮ್ರಾಜ್ಯಶಾಹಿಯ ದೃಷ್ಟಿಯಲ್ಲಿ ಅಮೆರಿಕನ್ನರ ಜೀವ ಹೆಚ್ಚು ಅಮೂಲ್ಯವಾದದ್ದು. 6 ಲಕ್ಷ ಅಮಾಯಕ ಇರಾಕಿಗಳು ಸಾಯಲಿ, 10 ಲಕ್ಷ ಆಫ್ಘನರು ಸಾಯಲಿ ಒಬ್ಬ ಅಮೆರಿಕನ್ ಸಾಯಬಾರದು. ಇದು ಅಮೆರಿಕದ ನೀತಿ ಸಂಹಿತೆ. ಈ ಸಂಹಿತೆಯ ಅನುಷ್ಠಾನವನ್ನು ಒಸಾಮಾ ಹತ್ಯೆಯ ಹಿನ್ನೆಲೆಯಲ್ಲಿ ಕಾಣಬಹುದು. ಸಾಮ್ರಾಜ್ಯಶಾಹಿಗಳ ದೃಷ್ಟಿಯಲ್ಲಿ ಕೆಲವರು ಸಾವಿಗೇ ಅರ್ಹರು ಇನ್ನು ಕೆಲವರು ಬದುಕಲು ಸಮರ್ಥರು. ಈ ನೀತಿಯನ್ನು ಕ್ಯೂಬಾ, ವಿಯಟ್ನಾಂ, ಪೆರು, ಪನಾಮಗಳಲ್ಲಿ ಕಂಡಿದ್ದೇವೆ. ಈಗ ಮಧ್ಯಪ್ರಾಚ್ಯ ರಾಷ್ಟ್ರಗಳ ಸರದಿ.

> **ಲಾಡೆನ್‌ನ ಸಾವು ಲಾಡೆನ್‌ನ ಅಂತ್ಯವಷ್ಟೇ. ಭಯೋತ್ಪಾದನೆಯ ಅಂತ್ಯವಲ್ಲ. ಅಂತಾರಾಷ್ಟ್ರೀಯ ಭಯೋತ್ಪಾದನೆಯ ಅಂತ್ಯವಾಗಬೇಕಿರುವುದು ವ್ಯಕ್ತಿಗಳ ಸಾವಿನ ಮೂಲಕವಲ್ಲ, ಸೈದ್ಧಾಂತಿಕ ಗೆಲುವಿನ ಮೂಲಕ. ಪಾಪಪ್ರಜ್ಞೆಯೇ ಇಲ್ಲದ ಸಾಮ್ರಾಜ್ಯಶಾಹಿಗಳ ಆಕ್ರಮಣ ಶೀಲತೆ ಮತ್ತು ಅಧಿಪತ್ಯ ರಾಜಕಾರಣದ ಪ್ರವೃತ್ತಿ ಅಂತ್ಯ ಗೊಳ್ಳುವವರೆಗೂ ಭಯೋತ್ಪಾದನೆ ಅಂತ್ಯಗೊಳ್ಳುವುದೂ ಇಲ್ಲ. ಪ್ರಸ್ತುತ ಸನ್ನಿವೇಶದಲ್ಲಿ ಅರಬ್ ರಾಷ್ಟ್ರಗಳಲ್ಲಿ ಸಂಭವಿಸುತ್ತಿರುವ ವಿದ್ಯಮಾನಗಳತ್ತ ಒಮ್ಮೆ ಗಮನಹರಿಸಿದಲ್ಲಿ ಈ ಸತ್ಯ ದರ್ಶನವಾಗುತ್ತದೆ.**

ಒಸಾಮ ಹತ್ಯೆ ಜಾಗತಿಕ ಇತಿಹಾಸದಲ್ಲಿನ ಒಂದು ಕರಾಳ ಅಧ್ಯಾಯದ ಅಂತ್ಯವಾಗಿ ಪರಿಣಮಿಸಿದರೂ ಭಯೋತ್ಪಾದನೆಯ ವಿರುದ್ಧ ನಡೆಯುತ್ತಿರುವ ಸಮರ ಕೊನೆಗೊಳ್ಳುವುದಿಲ್ಲ. ಹಾಗೆಯೇ ಭಯೋತ್ಪಾದನೆಯನ್ನು ನಿರ್ಮೂಲ ಮಾಡುವ ನಿಟ್ಟಿನಲ್ಲಿ ಮಾನವ ಸಮಾಜ ಕಳೆದುಕೊಂಡಿರುವ ಮಾನವೀಯ ಮೌಲ್ಯಗಳೂ ಪುನರುತ್ಥಾನಗೊಳ್ಳುವುದಿಲ್ಲ. ಏಕೆಂದರೆ ಲಾಡೆನ್ ಜೊತೆಗೇ ಹತರಾದ ಮೂವರು ಇತರ ವ್ಯಕ್ತಿಗಳ ಬಗ್ಗೆ ಯಾವುದೇ ಮಾಧ್ಯಮದಲ್ಲಿ ಕಿಂಚಿತ್ತಾದರೂ ವಿಷಾದ ವ್ಯಕ್ತವಾಗಿಲ್ಲ. ಬಹುಶಃ ಲಾಡೆನ್‌ನ ಒಡನಾಡಿಗಳಾದ್ದರಿಂದ ಈ ಅಮಾಯಕರು ಕರುಣೆಗೆ ಅರ್ಹರಲ್ಲವೇನೋ? ಲಾಡೆನ್ ಬೇಟೆಯಲ್ಲಿ ನೊಂದು ಬೆಂದು ಅಂತ್ಯ ಕಂಡ ಇಂತಹ ಅಮಾಯಕ ಜೀವಗಳು ಲೆಕ್ಕವೇ ಇಲ್ಲ. ಭಯೋತ್ಪಾದನೆಯ ಮೂಲೋತ್ಪಾಟನೆಯ ಸಂಗ್ರಾಮದಲ್ಲಿ ಇವರೆಲ್ಲರೂ ಹರಕೆಯ ಕುರಿಗಳಂತೆ. ಒಸಾಮಾನ ಪರಂಪರೆ ಅಂತ್ಯಗೊಳ್ಳಬಹುದು ಆದರೆ ಈ ಹರಕೆಯ ಕುರಿಗಳ ಸಂತತಿ ಮಾತ್ರ ಹೆಚ್ಚಾಗುತ್ತಲೇ ಇರುತ್ತದೆ.

ಭಯೋತ್ಪಾದನೆಯ ಅಂತ್ಯವಲ್ಲ

ಅಮೆರಿಕ ಅಂತ್ಯಗೊಳಿಸಿರುವುದು ಒಬ್ಬ ಲಾಡೆನ್‌ನನ್ನು ಮಾತ್ರ, ಕಳೆದ ಎರಡು ದಶಕಗಳಲ್ಲಿ ಸಾಮ್ರಾಜ್ಯಶಾಹಿಗಳ ಅಧಿಕಾರಲಾಲಸೆಯ ಪ್ರತಿಫಲವಾಗಿ ವಿಶ್ವದಾದ್ಯಂತ ಸಾವಿರ ಲಾಡೆನ್‌ಗಳು ಸೃಷ್ಟಿಯಾಗಿದ್ದಾರೆ. ಪೆಂಟಗನ್‌ನಲ್ಲಿ ತಯಾರಾಗುವ ಶಸ್ತ್ರಾಸ್ತ್ರಗಳನ್ನು ಖರ್ಚು ಮಾಡಲು ಅಗತ್ಯವಾದ ಬಳಕೆದಾರರನ್ನು ಸಾಮ್ರಾಜ್ಯಶಾಹಿ ಸೃಷ್ಟಿಸುತ್ತಲೇ ಇದೆ. ಲಷ್ಕರ್, ಹೂಜಿ, ಜೆಇಎಮ್ ಹೀಗೆ ಹತ್ತು ಹಲವು ಸಂಘಟನೆಗಳು ಬೆಳೆಯುತ್ತಲೇ ಇವೆ. ಈ ಸಂಘಟನೆಗಳ ಹಿಂದಿರುವ ಶಕ್ತಿ ಯಾವುದೇ ಧರ್ಮ ಅಥವಾ ಧರ್ಮಾಧಾರಿತ ನಂಬಿಕೆಗಳಲ್ಲ. ಬದಲಾಗಿ ಸಾಮ್ರಾಜ್ಯಶಾಹಿಗಳ ಬಂಡವಾಳ ಮತ್ತು ಶಸ್ತ್ರಾಸ್ತ್ರ ಉದ್ಯಮ. ಒಬ್ಬ ಲಾಡೆನ್ ಮೃತನಾದದ್ದಕ್ಕೆ ಸಂಭ್ರಮಿಸುತ್ತಿರುವ ಸಂದರ್ಭದಲ್ಲೇ ಸೇಡಿನ ಪ್ರತಿದಾಳಿಯ ಮುನ್ಸೂಚನೆಯನ್ನೂ ನೀಡುತ್ತಿರುವ ಸಾಮ್ರಾಜ್ಯಶಾಹಿಗಳಿಗೆ ತಾವು ನಿರ್ಮಿಸಿದ ಕರ್ಮಭೂಮಿಯಲ್ಲಿ ಪಳಗಿ, ನುರಿತಿರುವ ಸಾವಿರಾರು ಒಸಾಮಾಗಳು ಪುಟಿದೇಳುತ್ತಾರೆ ಎಂಬ ಸತ್ಯದ ಅರಿವು ಇರಲೇ ಬೇಕು.

ಲಾಡೆನ್‌ನ ಸಾವು ಲಾಡೆನ್‌ನ ಅಂತ್ಯವಷ್ಟೇ. ಭಯೋತ್ಪಾದನೆಯ ಅಂತ್ಯವಲ್ಲ. ಅಂತಾರಾಷ್ಟ್ರೀಯ ಭಯೋತ್ಪಾದನೆಯ ಅಂತ್ಯವಾಗಬೇಕಿರುವುದು ವ್ಯಕ್ತಿಗಳ ಸಾವಿನ ಮೂಲಕವಲ್ಲ, ಸೈದ್ಧಾಂತಿಕ ಗೆಲುವಿನ ಮೂಲಕ. ಪಾಪಪ್ರಜ್ಞೆಯೇ ಇಲ್ಲದ ಸಾಮ್ರಾಜ್ಯಶಾಹಿಗಳ ಆಕ್ರಮಣ ಶೀಲತೆ ಮತ್ತು ಅಧಿಪತ್ಯ ರಾಜಕಾರಣದ ಪ್ರವೃತ್ತಿ ಅಂತ್ಯಗೊಳ್ಳುವವರೆಗೂ ಭಯೋತ್ಪಾದನೆ ಅಂತ್ಯಗೊಳ್ಳುವುದೂ ಇಲ್ಲ. ಪ್ರಸ್ತುತ ಸನ್ನಿವೇಶದಲ್ಲಿ ಅರಬ್ ರಾಷ್ಟ್ರಗಳಲ್ಲಿ ಸಂಭವಿಸುತ್ತಿರುವ ವಿದ್ಯಮಾನಗಳತ್ತ ಒಮ್ಮೆ ಗಮನಹರಿಸಿದಲ್ಲಿ ಈ ಸತ್ಯ ದರ್ಶನವಾಗುತ್ತದೆ. ತನ್ನ ಆರ್ಥಿಕತೆಯ ರಕ್ಷಣೆಗಾಗಿ ಪ್ರಜಾತಂತ್ರವನ್ನೇ ಹೊಸಕಿ ಹಾಕಿ ನಿರಂಕುಶ ಪ್ರಭುಗಳನ್ನು, ಸರ್ವಾಧಿಕಾರಿಗಳನ್ನು ಪೋಷಿಸುವ ಸಾಮ್ರಾಜ್ಯಶಾಹಿಗಳು ಈಗ ಅರಬ್ ರಾಷ್ಟ್ರಗಳ ಬೀದಿ ಬೀದಿಗಳಲ್ಲಿ ಕೇಳಿಬರುತ್ತಿರುವ ಪ್ರಜಾಸತ್ತೆಯ ದನಿಗಳನ್ನು ಅಡಗಿಸುವ ಮಾರ್ಗಗಳತ್ತ ನೋಡುತ್ತಿದ್ದಾರೆ. ಲಿಬಿಯಾದತ್ತ ಒಮ್ಮೆ ಕಣ್ಣು ಹಾಯಿಸಿದರೆ ಭಯೋತ್ಪಾದನೆಯ ಗೂಡಾರ್ಥವನ್ನು ಗ್ರಹಿಸಬಹುದು.

ಚಿಕ್ಕ ಪುಟ್ಟ ದೇಶಗಳ ಸಾರ್ವಭೌಮತ್ವವನ್ನೂ ಲೆಕ್ಕಿಸದೆ ತನ್ನ ಮಾನವ ರಹಿತ ವಿಮಾನಗಳನ್ನು ಉಪಯೋಗಿಸಿ ಮನುಜ ಜೀವಗಳನ್ನು ಬಲಿತೆಗೆದುಕೊಳ್ಳುವ ಪಾಶವೀ ಸಾಮ್ರಾಜ್ಯಶಾಹಿಗಳು ಈ ದೇಶಗಳಲ್ಲಿ ಮತ್ತಷ್ಟು ಒಸಾಮಾಗಳನ್ನು ಸೃಷ್ಟಿಸುವುದಂತೂ ಸತ್ಯ. ತೈಲ ಸಂಪತ್ತಿನ ಒಡೆತನಕ್ಕಾಗಿ ಭ್ರಾತೃಘಾತುಕತೆಯನ್ನು ಪೋಷಿಸುತ್ತಾ ವಿವಿಧ ದೇಶಗಳಲ್ಲಿ ಆಂತರಿಕ ಕ್ಷೋಭೆ ಹರಡಲು ಪ್ರೇರಣೆ ನೀಡುತ್ತಿರುವ ನ್ಯಾಟೋ ಎಂಬ ಪಾಶವೀ ಮಿಲಿಟರಿ ಒಕ್ಕೂಟ, ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿದ್ದ ಜಿಹಾದಿ ಶಕ್ತಿಗಳಿಗೆ ಕಾಯಕಲ್ಪ ಒದಗಿಸುತ್ತಿರುವುದು ಸ್ಪಷ್ಟವಾಗುತ್ತಿದೆ. ಅರಬ್ ರಾಷ್ಟ್ರಗಳಲ್ಲಿ ಜಿಹಾದಿಯ ಸುಳಿವೂ ಇಲ್ಲದೆ ಪ್ರಜಾತಂತ್ರಕ್ಕಾಗಿ ಹೋರಾಡುತ್ತಿರುವ ಯುವಜನತೆಯ ಮೇಲೆ ನಡೆಯುತ್ತಿರುವ ಅಮಾನವೀಯ ಆಕ್ರಮಣಗಳು ಮತ್ತಷ್ಟು ಅಲ್‌ಖೈದಾಗಳನ್ನು ಸೃಷ್ಟಿಸಿದರೂ ಅಚ್ಚರಿಯೇನಿಲ್ಲ.. ಇದು ಜಗತ್ತಿನ ಜನತೆ ಎದುರಿಸುತ್ತಿರುವ ಆತಂಕ ಮತ್ತು ಭೀತಿ. ಈ ಭೀತಿಯ ಹಿನ್ನೆಲೆಯಲ್ಲೇ ಲಾಡೆನ್ ಅಂತ್ಯವನ್ನು ವಿಜೃಂಭಣೆಯಿಂದ ಆಚರಿಸುತ್ತಿರುವ ಅಮೆರಿಕಾ ತನ್ನ ಸಾಮ್ರಾಜ್ಯಶಾಹಿ ನೀತಿಗಳ ಪರಿಣಾಮವಾಗಿ ಮತ್ತೊಮ್ಮೆ ಸೃಷ್ಟಿಯಾಗುತ್ತಿರುವ ಒಸಾಮಾಗಳನ್ನು ಗಮನಿಸದೇ ಹೋದಲ್ಲಿ ಲಾಡೆನ್‌ನ ಸಾವು, ಒಂದು ಯುಗದ ಆರಂಭವಾಗುವುದೇ ಹೊರತು ಅಂತ್ಯವಾಗುವುದಿಲ್ಲ. □

ಸ್ತ್ರೀ ಸಂವೇದನೆ ಎಂಬ ಅವ್ಯಕ್ತ ಚರಿತ್ರೆ

ಡಾ. ಎನ್. ಜಗದೀಶ್ ಕೊಪ್ಪ

ಸ್ತ್ರೀ ಕುರಿತಾದ ಚಿಂತನೆ ಇತ್ತೀಚಿನ ದಿನಗಳಲ್ಲಿ ಒಂದು ಜ್ಞಾನ ಶಿಸ್ತುವಿನಂತೆ ಬೆಳೆದು ಬಂದಿದ್ದರೂ ಇವತ್ತಿನ ಜಾಗತೀಕರಣದ ಸಂದರ್ಭದಲ್ಲಿ ಮಹಿಳೆ ತನ್ನ ಲಿಂಗ ಅಸಮಾನತೆಯನ್ನು ಮೀರಿ ತನ್ನೊಳಗಿನ ಸಾಮರ್ಥ್ಯವನ್ನು ಅನಾವರಣಗೊಳಿಸುತ್ತಿರುವಾಗ ಅವಳ ಕುರಿತಂತೆ ನಮ್ಮ ಗ್ರಹಿಕೆಯ ನೆಲೆಗಟ್ಟುಗಳು ಬದಲಾಗಬೇಕಾಗಿದೆ. ಏಕೆಂದರೆ ಜಾಗತೀಕರಣದ ಫಲವಾಗಿ ಸಂಭವಿಸಿದ ಸಾಂಸ್ಕೃತಿಕ ಪಲ್ಲಟಗಳು ತಂದಿಟ್ಟ ಅವಘಡಗಳಿಗೆ ಗುರಿಯಾದದ್ದೇ ಸ್ತ್ರೀ ಸಮುದಾಯ. ಚರಿತ್ರೆಯಲ್ಲಿ ದಾಸಿಯಂತೆ, ಜೀತದಾಳುವಿನಂತೆ ಬದುಕಿದ ಅದೇ ಮಹಿಳೆ ಇಂದಿನ ಆಧುನಿಕ ಸರಕು ಸಂಸ್ಕೃತಿಯ ಯುಗದಲ್ಲಿ ಮಾರಾಟದ ವಸ್ತುವಿನಂತೆ ಬಿಕರಿಯಾಗುತ್ತಿದ್ದಾಳೆ. ಲಿಂಗ ಭೇದದ ನೆಪದಲ್ಲಿ ನಾಲ್ಕು ಗೋಡೆಗಳ ನಡುವೆ ಬದುಕು ಸವೆಸುವಂತಹ ಅನಿವಾರ್ಯತೆ ಈಗಿಲ್ಲವಾದರೂ ಮುಕ್ತ ವಾತಾವರಣದ, ಪುರುಷ ಕೇಂದ್ರಿತ ನಾಗರೀಕ ಸಮಾಜದಲ್ಲಿ ಅನೇಕ ಅಗೋಚರ ಅಡೆ ತಡೆಗಳು ಇಂದಿಗೂ ಆಕೆಯನ್ನು ಬಾಧಿಸುತ್ತಿವೆ.

"ಸ್ತ್ರೀ ಪರ ಚಿಂತನೆ ಎಂಬುದು ಈವರೆಗೆ ಅಕ್ಷರಸ್ಥ ಮಧ್ಯಮ ವರ್ಗದ ಮಹಿಳೆಯರ ಬೌದ್ಧಿಕ ಚರ್ಚೆ" ಎಂಬಷ್ಟಕ್ಕೆ ಸೀಮಿತವಾಗಿದೆ. ಈ ಪರಿಧಿಯನ್ನು ದಾಟಿ ನಮ್ಮ ಚರ್ಚೆಯ ನೆಲೆಗಳನ್ನು ಮಹಿಳಾ ಸಮುದಾಯದ ಎಲ್ಲಾ ಸ್ತರಗಳಿಗೂ ವಿಸ್ತರಿಸುವ ಅಗತ್ಯವಿದೆ. ಅಕ್ಷರದಲ್ಲಿ ಹಿಡಿದಿಡಲಾಗದ ಅನಕ್ಷರಸ್ಥ ಹೆಣ್ಣು ಮಕ್ಕಳ ಮೂಕ ವೇದನೆ, ತಳ ಹಾಗೂ ಬುಡಕಟ್ಟು ಸಮುದಾಯದ ಸ್ತ್ರೀಯರ ಒಡಲಾಳದ ನೋವು ಹೀಗೆ ಅವ್ಯಕ್ತ ಚರಿತ್ರೆಯೊಂದು ಅನಾಮಿಕವಾಗಿ ಉಳಿದುಬಿಟ್ಟಿದೆ.

ಮುಕ್ತ ಮಾರುಕಟ್ಟೆಯ ವ್ಯವಸ್ಥೆ ಜಾರಿಯಲ್ಲಿರುವ ಈ ಯುಗದಲ್ಲಿ ಎಲ್ಲವನ್ನೂ ಹಣದ ಮಾನದಂಡದಿಂದ ಅಳೆಯುತ್ತಿರುವಾಗ ಸ್ತ್ರೀ ಸಮುದಾಯ ಕುರಿತಂತೆ ನಮ್ಮ ಆಲೋಚನೆ ಮತ್ತು ಚರ್ಚೆಯ ನೆಲೆಗಟ್ಟುಗಳು ಮತ್ತಷ್ಟು ಸದೃಢವಾಗಬೇಕಿದೆ. ಇದಕ್ಕಿರುವ ಅಡ್ಡಿ ಆತಂಕವೆಂದರೆ ನಾವು ಬೇಡವೆಂದರೂ ನಮ್ಮನ್ನಾವರಿಸಿಕೊಂಡಿರುವ ಜಾಗತೀಕರಣ ವ್ಯವಸ್ಥೆ.

ಕಳೆದ ಎರಡು ದಶಕಗಳಿಂದ ವಿಶ್ವದಾದ್ಯಂತ ಜಾಗತೀಕರಣ ಕುರಿತಂತೆ ಗಂಭೀರ ಚರ್ಚೆ ನಡೆಯುತ್ತಿದ್ದು ನಾನಾ ರೀತಿಯಲ್ಲಿ ಇದನ್ನು ವ್ಯಾಖ್ಯಾನಿಸಲಾಗುತ್ತಿದೆ. ಕೆಲವೊಮ್ಮೆ ಇದರ ಬಗ್ಗೆ ಮಿಥ್ಯೆಯೇ ಸೃಷ್ಟಿಯಾಗಿದೆ. ಒಟ್ಟಾರೆ ಜಾಗತೀಕರಣವೆಂಬುದು ಯುಗದ ಚರ್ಚೆಯಾಗಿ ಮಾರ್ಪಟ್ಟಿರುವುದು ಸುಳ್ಳಲ್ಲ. ಅದೇ ರೀತಿ ಈ ವ್ಯವಸ್ಥೆಯು ಯಾವುದೇ ಕೇಂದ್ರವಿಲ್ಲದೆ ಅಗೋಚರವಾಗಿ ಏಕಕಾಲಕ್ಕೆ ಜಗತ್ತಿನೆಲ್ಲೆಡೆ ಹರಡುತ್ತಿರುವುದನ್ನು ತಳ್ಳಿಹಾಕಲಾಗದು. ಜಾಗತೀಕರಣಕ್ಕೆ ಯಾವುದೇ ಒಂದು ಶಕ್ತಿ ಅಥವಾ ವಿಶೇಷ ಸವಲತ್ತುಗಳ ಸ್ಥಳಗಳಿಲ್ಲ ಎಂದು ಇದರ ಪ್ರತಿಪಾದಕರಾದ ಮೈಕಲ್ ಹಾರ್ಡ್ ಮತ್ತು ಆಂಟೋನಿಯಾ ನೇಗ್ರಿ ಅಭಿಪ್ರಾಯ ಪಟ್ಟಿದ್ದಾರೆ.

ವಿಶ್ವ ಬ್ಯಾಂಕ್ 1991ರ ತನ್ನ ವಾರ್ಷಿಕ ವರದಿಯಲ್ಲಿ ಕಮ್ಯೂನಿಷ್ಟ್ ಪ್ರಣಾಳಿಕೆಯ ಕೆಲವು ಸಾಲುಗಳನ್ನು ಎತ್ತಿಕೊಂಡು ಜಾಗತೀಕರಣದ ಬಗ್ಗೆ ಹೀಗೆ ವ್ಯಾಖ್ಯಾನಿಸಿತ್ತು. "ಉತ್ಪಾದನೆಯಲ್ಲಿ ಸತತವಾಗಿ ಕ್ರಾಂತಿಯಾಗುವುದು, ಸಾಮಾಜಿಕ ಪರಿಸ್ಥಿತಿ ಅಡೆ ತಡೆಗಳಿಲ್ಲದೆ ವ್ಯತ್ಯಾಸವಾಗುವುದು, ನಿರಂತರ ಅನಿಶ್ಚಿತತೆ ಹಾಗೂ ಕ್ಷೋಭೆ ಉಂಟಾಗುತ್ತಿದ್ದು ಇವುಗಳ ಪರಿಣಾಮದಿಂದ ಉಂಟಾಗುವ ಎಲ್ಲಾ ಸ್ಥಿರ ಹಾಗೂ ಘನೀಭೂತ ಸಂಬಂಧಗಳು ಅವುಗಳೊಂದಿಗೆ ಬರುವ ಅಭಿಪ್ರಾಯ, ಪೂರ್ವಾಗ್ರಹಗಳು ತೊಡೆದು ಹಾಕಲ್ಪಡುತ್ತವೆ. ಹೊಸದಾಗಿ ರೂಪುಗೊಂಡವು ಸ್ಥಿರವಾಗುವ ಮುನ್ನ ಹಳತಾಗಿ ಹೋಗುತ್ತವೆ. ಘನ ಸ್ಥಿತಿಯಲ್ಲಿ ಇರುವಂತಹವು ಗಾಳಿಯಲ್ಲಿ ಕರಗಿ ಹೋಗುತ್ತವೆ. ಯೋಜನಾಬದ್ಧ ಆರ್ಥಿಕತೆಯಿಂದಾಗಿ ಮಾರುಕಟ್ಟೆಯ ಆರ್ಥಿಕ ವ್ಯವಸ್ಥೆ ಸ್ಥಿತ್ಯಂತರವಾಗುತ್ತದೆ. ಹಾಗಾಗಿ ಜಾಗತೀಕರಣ ಪ್ರಕ್ರಿಯೆ ಎಂಬುದು ಯಾವುದೇ ಗೋಚರ ಹಸ್ತದ ಪ್ರಭಾವವಿಲ್ಲದ ಅವಿಭಾಜ್ಯ ಮೂಲ ಪ್ರಕ್ರಿಯೆ."

"ಸ್ತ್ರೀ ಪರ ಚಿಂತನೆ ಎಂಬುದು ಈವರೆಗೆ ಅಕ್ಷರಸ್ಥ ಮಧ್ಯಮ ವರ್ಗದ ಮಹಿತೆಯರ ಬೌದ್ಧಿಕ ಚರ್ಚೆ" ಎಂಬಷ್ಟಕ್ಕೆ ಸೀಮಿತವಾಗಿದೆ. ಈ ಪರಿಧಿಯನ್ನು ದಾಟಿ ನಮ್ಮ ಚರ್ಚೆಯ ನೆಲೆಗಳನ್ನು ಮಹಿಳಾ ಸಮುದಾಯದ ಎಲ್ಲಾ ಸ್ತರಗಳಿಗೂ ವಿಸ್ತರಿಸುವ ಅಗತ್ಯವಿದೆ. ಅಕ್ಷರದಲ್ಲಿ ಹಿಡಿದಿಡಲಾಗದ ಅನಕ್ಷರಸ್ಥ ಹೆಣ್ಣು ಮಕ್ಕಳ ಮೂಕ ವೇದನೆ, ತಳ ಹಾಗೂ ಬುಡಕಟ್ಟು ಸಮುದಾಯದ ಸ್ತ್ರೀಯರ ಒಡಲಾಳದ ನೋವು ಹೀಗೆ ಅವ್ಯಕ್ತ ಚರಿತ್ರೆಯೊಂದು ಅನಾಮಿಕವಾಗಿ ಉಳಿದು ಬಿಟ್ಟಿದೆ. ಮುಕ್ತ ಮಾರುಕಟ್ಟೆಯ ವ್ಯವಸ್ಥೆ ಜಾರಿಯಲ್ಲಿರುವ ಈ ಯುಗದಲ್ಲಿ ಎಲ್ಲವನ್ನೂ ಹಣದ ಮಾನದಂಡದಿಂದ ಅಳೆಯುತ್ತಿರುವಾಗ ಸ್ತ್ರೀ ಸಮುದಾಯ ಕುರಿತಂತೆ ನಮ್ಮ ಆಲೋಚನೆ ಮತ್ತು ಚರ್ಚೆಯ ನೆಲೆಗಟ್ಟುಗಳು ಮತ್ತಷ್ಟು ಸದೃಢವಾಗಬೇಕಿದೆ.

ವಿಶ್ವ ಬ್ಯಾಂಕ್‌ನ ಈ ವ್ಯಾಖ್ಯಾನವನ್ನು ಅವಲೋಕಿಸಿದಾಗ ಜಾಗತೀಕರಣಕ್ಕೆ ಯಾವುದೇ ಪರ್ಯಾಯವಿಲ್ಲ ಎಂಬ ಸಂದೇಶ ಸಾರುವ ಪ್ರಯತ್ನ ಇದಾಗಿದೆ ಎನ್ನಬಹುದು. ಇವೆಲ್ಲವೂ ಕ್ರಿ.ಶ. 1500ರಿಂದ 1800ರವರೆಗೆ ನಡೆದ ಐರೋಪ್ಯ ರಾಷ್ಟ್ರಗಳ ವಿಸ್ತರಣೆ ಹಾಗೂ 1800ರಿಂದ 1950ರವರೆಗೆ ನಡೆದ ಸಾಮ್ರಾಜ್ಯಶಾಹಿಗಳ ವಿಸ್ತರಣೆಯ ಮುಂದುವರಿದ ಅಧ್ಯಾಯವೆನ್ನಬಹುದು. ಅಂದು ಸಾಮ್ರಾಜ್ಯಶಾಹಿ ಯುಗದಲ್ಲಿ ಈಸ್ಟ್ ಇಂಡಿಯಾ ಕಂಪನಿಯಂತಹುಗಳ ಮೂಲಕ ಬಂಡವಾಳಶಾಹಿ ವ್ಯವಸ್ಥೆ ವ್ಯಾಪಕವಾಗಿ ಹರಡುತ್ತಿತ್ತು. ಈಗ ಇದು ಬಹುರಾಷ್ಟ್ರೀಯ ಕಂಪನಿಗಳ ಮೂಲಕ ಹರಡುತ್ತಿದೆ ಅಷ್ಟೆ.

ಜಾಗತೀಕರಣ ವ್ಯವಸ್ಥೆಯಲ್ಲಿ ಮುಕ್ತ ವ್ಯಾಪಾರವನ್ನು ನೆಪವಾಗಿರಿಸಿಕೊಂಡು ಉಪಭೋಗ ಸಂಸ್ಕೃತಿಯನ್ನು ವೈಭವೀಕರಿಸುವ ಹಾಗೂ ದೈಹಿಕ ಲೋಲುಪತೆಯೇ ಮುಖ್ಯವಾಗಿರುವ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ನಮ್ಮ ಮೇಲೆ ಹೇರತೊಡಗಿರುವುದು ಸಾಂಸ್ಕೃತಿಕ ಆಕ್ರಮಣವಲ್ಲದೆ ಬೇರೇನಲ್ಲ. ಈ ಸಾಂಸ್ಕೃತಿಕ ದಾಳಿಯಿಂದ ಅನೇಕ ಸಮುದಾಯಗಳು, ಬುಡಕಟ್ಟು ಜನಾಂಗ ಮತ್ತು ನಮ್ಮ ಪೂರ್ವಿಕರು ಪರಂಪರಾಗತವಾಗಿ ಪೋಷಿಸಿಕೊಂಡು ಬಂದಿದ್ದ ದೇಶಿ ಜ್ಞಾನ, ಅವಿಭಕ್ತ ಕುಟುಂಬ ಪದ್ಧತಿ, ಸಮುದಾಯಿಕ ಪ್ರಜ್ಞೆ, ಸಾಮರಸ್ಯ ಮತ್ತು ಮಾನವೀಯ ಸಂಬಂಧಗಳು ನಶಿಸುತ್ತಾ ನೆಲ ಜಲ, ಪರಿಸರ ಮಾಲಿನ್ಯಗೊಂಡು ಜಗತ್ತೇ ಒಂದು ಹಳ್ಳಿ ಎಂಬ ಪರಿಕಲ್ಪನೆಯ ನೆಪದಲ್ಲಿ ವರ್ತಮಾನದ ಬದುಕು ಗೊಂದಲದ ಗೂಡಾಗಿದೆ.

ವಿಶ್ವ ಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿಯಾಗಿದ್ದ ಕೋಫಿ ಅನ್ನಾನ್ ಒಮ್ಮೆ ಭಾಷಣದಲ್ಲಿ ಜಾಗತೀಕರಣದ ಬಗ್ಗೆ ಪ್ರತಿಕ್ರಿಯಿಸುತ್ತಾ ಜಾಗತಿಕ ಮಟ್ಟದಲ್ಲಿ ಹೆಚ್ಚುತ್ತಿರುವ ಅಸಮಾನತೆಯ ಬಗ್ಗೆ ಆಕ್ರೋಶ ವ್ಯಕ್ತಪಡಿಸುತ್ತಾ "ಶ್ರೀಮಂತ ರಾಷ್ಟ್ರಗಳು ಮುಕ್ತ ಮಾರುಕಟ್ಟೆಯ ಬಗ್ಗೆ ಗುಣಗಾನ ಮಾಡುವುದು ಅಥವಾ ಆ ಕುರಿತು ಬಡ ರಾಷ್ಟ್ರಗಳಿಗೆ ಬೋಧನೆ ಮಾಡುವುದು ಕಪಟ ಆಚರಣೆಯಾಗಿದೆ. ಸ್ವತಃ ಶ್ರೀಮಂತ ರಾಷ್ಟ್ರಗಳು ಬಡ ರಾಷ್ಟ್ರಗಳಿಗೆ ತಮ್ಮ ಮಾರುಕಟ್ಟೆಯನ್ನು ತೆರೆದಿಡದೆ ತೃತೀಯ ಜಗತ್ತಿನ ರಾಷ್ಟ್ರಗಳ ಮಾರುಕಟ್ಟೆಗೆ ಬಾರಿ ರಿಯಾಯಿತಿಯಿಂದ ಕೂಡಿದ ತಮ್ಮ ಸರಕು, ಸೇವೆ, ಸಾಮಗ್ರಿಗಳನ್ನು ತಂದು ರಾಶಿ ಹಾಕಿದರೆ ಈ ಪೈಪೋಟಿಯಲ್ಲಿ ಬಡ ರಾಷ್ಟ್ರಗಳು ಬದುಕುವುದು ಕಷ್ಟವಾಗುತ್ತದೆ. ಶ್ರೀಮಂತ ರಾಷ್ಟ್ರಗಳು ತಮ್ಮ ಉತ್ಪಾದನೆ ಮತ್ತು ಉಪಭೋಗದ ವಿಧಾನವನ್ನು ಬದಲಾಯಿಸದೆ ಜಾಗತಿಕ ಪರಿಸರವನ್ನು ರಕ್ಷಿಸಲು ಬಡ ರಾಷ್ಟ್ರಗಳಿಗೆ ಒತ್ತಾಯ ಮಾಡಿದರೆ ಅದು ಸರ್ವಾಧಿಕಾರದ ಮನೋಭಾವ ಅಷ್ಟೆ" ಎಂದಿದ್ದರು.

ನಿಜವಾದ ಅಭಿವೃದ್ಧಿಯ ಕಲ್ಪನೆಯ ಕೂಸುಗಳಾದ ಹಸಿವು ಬಡತನ ಅಸ್ಪೃಶ್ಯತೆ, ತಾರತಮ್ಯ, ನಿರುದ್ಯೋಗ, ಲಿಂಗಬೇಧ ಮುಂತಾದ ಶೋಷಣೆಗಳನ್ನು ಹೋಗಲಾಡಿಸಲಿ ಇವತ್ತಿಗೂ ಸಾಕ್ಷರತೆ ಒಂದು ಪ್ರಭಲವಾದ ಅಸ್ತ್ರ. ಇಂದಿನ ಖಾಸಗೀಕರಣದ ಸ್ಥಿತಿಯಲ್ಲಿ ಶಿಕ್ಷಣವೆಂಬುದು ದಂಧೆಯಾಗಿರುವಾಗ ಸಾಕ್ಷರತೆಯನ್ನು ಸಮರ್ಥವಾಗಿ ಜಾರಿಗೆ ತರುವಲ್ಲಿ ನಮ್ಮ ಆಡಳಿತಶಾಹಿ ಹಾಗೂ ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತಿದೆ. ಇಂತಹ ವ್ಯವಸ್ಥೆಗೆ ನೇರ ಬಲಿಪಶುವಾಗುವವರು ಅನಕ್ಷರಸ್ಥರು ಮತ್ತು ಮಹಿಳೆಯರು.

ಜಗತ್ತಿನ ಯಾವುದೇ ಸಂಸ್ಕೃತಿಯಲ್ಲಿ ಈ ಭೂಮಿಯ ಹುಟ್ಟಿನಿಂದ ಇಲ್ಲಿಯವರೆಗೆ ಗಂಡು ಹೆಣ್ಣು ಎಂಬ ಎರಡು ವಿರುದ್ಧ ಲಿಂಗಗಳ ಜೀವಿಗಳ ನಡುವೆ ಲೈಂಗಿಕ ಕ್ರಿಯೆ ಸಾಮಾನ್ಯವಾಗಿತ್ತು. ಇದು ಪ್ರಾಣಿಗಳಲ್ಲಿ ಕೂಡ ಒಂದು ನೈಸರ್ಗಿಕ ಕ್ರಿಯೆಯಂತೆ ಮುಂದುವರಿದಿದೆ. ಇತ್ತೀಚಿನ ವರ್ಷಗಳಲ್ಲಿ ಸಲಿಂಗಕಾಮಿಗಳ ವಿಕೃತ ಲೈಂಗಿಕ ಕ್ರಿಯೆಯನ್ನು ಹಾಗೂ ಅವರ ವಿವಾಹವನ್ನು ಹಲವು ರಾಷ್ಟ್ರಗಳು ಮಾನ್ಯತೆ ಮಾಡಿದ್ದು ಇದು ಮನುಷ್ಯ ಮನುಷ್ಯ ನಡುವಿನ ಸಂಬಂಧ ಹಾಗೂ ವಿವಾಹ ಮತ್ತು ಕುಟುಂಬ ವ್ಯವಸ್ಥೆ ಕುರಿತಂತೆ ನಮ್ಮ ಚಿಂತನೆಗಳ ಮಾದರಿಗಳನ್ನು ಮರುರೂಪಿಸುವಂತೆ ಒತ್ತಾಯಿಸುತ್ತಿದೆ. ಆಧುನಿಕ ಭಾರತದ ನಗರಗಳ ಜೀವನ ಕ್ರಮ ಮತ್ತು ಅಲ್ಲಿ ದೊರೆಯುತ್ತಿರುವ ಶಿಕ್ಷಣ, ಉದ್ಯೋಗಾವಕಾಶಗಳ ಪ್ರಭಾವದಿಂದ ಹೆಣ್ಣಿನ ವಿವಾಹದ ವಯಸ್ಸು ಮುಂದೂಡಲ್ಪಟ್ಟಿದೆ.

ಶಿಕ್ಷಣ, ಆರೋಗ್ಯ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಬಡತನ ನಿರ್ಮೂಲನೆ ಜೊತೆಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯಲ್ಲಿ ಎಲ್ಲಾ ವರ್ಗದ ಜನತೆ ಮುಕ್ತವಾಗಿ ಪಾಲ್ಗೊಳ್ಳಬೇಕಾಗಿದೆ. ಈ ಕಾರಣಕ್ಕಾಗಿಯಾದರೂ ದೇಶ, ಭಾಷೆ, ಸಂಸ್ಕೃತಿ ಅವುಗಳ ಅಗತ್ಯ ಮತ್ತು ಆಶಯಗಳ ಕುರಿತಂತೆ ಮರುಚಿಂತನೆ ಜರೂರಾಗಿ ಜರುಗಬೇಕಾಗಿದೆ.

ಜಾಗತೀಕರಣ ಕುರಿತಂತೆ ಈ ಸಂಕ್ಷಿಪ್ತ ಹಿನ್ನೆಲೆಯಲ್ಲಿ ವರ್ತಮಾನದ ಮಹಿಳೆ, ಆಕೆಯ ಸ್ಥಿತಿ ಗತಿ, ಸಂವೇದನೆ ಕುರಿತು ಹೇಳುವುದಾದರೆ ಆಕೆಯ ಪಾತ್ರ ಬದಲಾಗಿಲ್ಲ ದೃಶ್ಯಗಳಷ್ಟೇ ಬದಲಾಗಿವೆ ಎನ್ನಬಹುದು. ವಿಶ್ಲೇಷಣೆಗೂ ನಿಲುಕದ ಅನೇಕ ಸಾಮಾಜಿಕ ಸ್ಥಿತ್ಯಂತರ ಮತ್ತು ಸಾಂಸ್ಕೃತಿಕ ಪಲ್ಲಟಗಳು ನಮ್ಮನ್ನು ದಿಗ್ಭ್ರಮೆಗೆ ದೂಡಿವೆ. ಈ ಹಿನ್ನೆಲೆಯಲ್ಲಿ ಆಧುನಿಕ ಮಹಿಳೆಯ ಸಂವೇದನೆ, ಸಂಕಟಗಳನ್ನು ಗ್ರಹಿಸುವುದೂ ಕೂಡ ಸವಾಲಿನ ವಿಷಯ.

ಜಾಗತೀಕರಣ ಈ ದೇಶಕ್ಕೆ ಕಾಲಿಡುವ ಮುನ್ನ ಎರಡು ದಶಕಗಳ ಹಿಂದಿನ ಭಾರತದ ಸಾಮಾಜಿಕ ವ್ಯವಸ್ಥೆ, ಕಟ್ಟು ಪಾಡುಗಳು, ರೂಢಿ ಸಂಪ್ರದಾಯ, ಕೌಟುಂಬಿಕ ವ್ಯವಸ್ಥೆ, ಸಾಂಸ್ಕೃತಿಕ ಆಚರಣೆ ಇವೆಲ್ಲವೂ ನಮ್ಮ ನಿರೀಕ್ಷೆ ಮೀರಿ ಪಲ್ಲಟಗೊಂಡಿವೆ. ಗಂಡು ಮತ್ತು ಹೆಣ್ಣು ಕುರಿತಂತೆ ಈವರೆಗೆ ನಾವು ಗ್ರಹಿಸಿದ ನಿಲುವುಗಳು, ನಿರ್ವಚಿಸಿಕೊಂಡು ಬಂದ ಕ್ರಮವನ್ನು ಮರುಚಿಂತನೆ ಮಾಡುವಂತೆ ಪ್ರೇರೇಪಿಸಿದೆ.

ನಮ್ಮ ಆಹಾರ, ಉಡುಪು, ನಾವು ಬಳಸುವ ಗೃಹಪಯೋಗಿ ವಸ್ತುಗಳಿಂದ ಹಿಡಿದು ನಮ್ಮ ನಡೆ ನುಡಿಗಳನ್ನು ಬಹು ರಾಷ್ಟ್ರೀಯ ಕಂಪನಿಗಳು ಮಾಧ್ಯಮಗಳ ಮೂಲಕ ನಮ್ಮನ್ನು ನಿಯಂತ್ರಿಸುತ್ತಿವೆ. ಜೊತೆಗೆ ನಮ್ಮ ಆಲೋಚನಾ ಕ್ರಮದ ದಿಕ್ಕನ್ನೇ ಬದಲಾಯಿಸಿವೆ.

ಉದಾರೀಕರಣದಿಂದ ಖಾಸಗಿ ವಲಯದಲ್ಲಿ ಸೃಷ್ಟಿಯಾದ ಉದ್ಯೋಗದ ಅವಕಾಶ ಇಂದಿನ ತಲೆಮಾರಿಗೆ ಗಂಡು ಹೆಣ್ಣು ಎಂಬ ಬೇಧವಿಲ್ಲದೆ ಸ್ವಾಭಿಮಾನವನ್ನು ಜೊತೆಗೆ ಸ್ವೇಚ್ಛಾಚಾರವನ್ನು ತಂದುಕೊಟ್ಟಿತು. ಇದರಿಂದಾಗಿ ನಮ್ಮ ಸಾಮಾಜಿಕ ಕಟ್ಟು ಪಾಡುಗಳು ಛಿದ್ರಗೊಂಡವು.

ಜಗತ್ತಿನ ಯಾವುದೇ ಸಂಸ್ಕೃತಿಯಲ್ಲಿ ಈ ಭೂಮಿಯ ಹುಟ್ಟಿನಿಂದ ಇಲ್ಲಿಯವರೆಗೆ ಗಂಡು ಹೆಣ್ಣು ಎಂಬ ಎರಡು ವಿರುದ್ಧ ಲಿಂಗಗಳ ಜೀವಿಗಳ ನಡುವೆ ಲೈಂಗಿಕ ಕ್ರಿಯೆ ಸಾಮಾನ್ಯವಾಗಿತ್ತು. ಇದು ಪ್ರಾಣಿಗಳಲ್ಲಿ ಕೂಡ ಒಂದು ನೈಸರ್ಗಿಕ ಕ್ರಿಯೆಯಂತೆ ಮುಂದುವರಿದಿದೆ. ಇತ್ತೀಚಿನ ವರ್ಷಗಳಲ್ಲಿ ಸಲಿಂಗಕಾಮಿಗಳ ವಿಕೃತ ಲೈಂಗಿಕ ಕ್ರಿಯೆಯನ್ನು ಹಾಗೂ ಅವರ ವಿವಾಹವನ್ನು ಹಲವು ರಾಷ್ಟ್ರಗಳು ಮಾನ್ಯತೆ ಮಾಡಿದ್ದು ಇದು ಮನುಷ್ಯ ಮನುಷ್ಯ ನಡುವಿನ ಸಂಬಂಧ ಹಾಗೂ ವಿವಾಹ ಮತ್ತು ಕುಟುಂಬ ವ್ಯವಸ್ಥೆ ಕುರಿತಂತೆ ನಮ್ಮ ಚಿಂತನೆಗಳ ಮಾದರಿಗಳನ್ನು ಮರುರೂಪಿಸುವಂತೆ ಒತ್ತಾಯಿಸುತ್ತಿದೆ.

ಆಧುನಿಕ ಭಾರತದ ನಗರಗಳ ಜೀವನ ಕ್ರಮ ಮತ್ತು ಅಲ್ಲಿ ದೊರೆಯುತ್ತಿರುವ ಶಿಕ್ಷಣ, ಉದ್ಯೋಗಾವಕಾಶಗಳ ಪ್ರಭಾವದಿಂದ ಹೆಣ್ಣಿನ ವಿವಾಹದ ವಯಸ್ಸು ಮುಂದೂಡಲ್ಪಟ್ಟಿದೆ. ಅದೇ ರೀತಿ ಧರ್ಮ ಮತ್ತು ಜಾತಿಯ ಚೌಕಟ್ಟನ್ನು ಮೀರಿ ತಮ್ಮ ಸಂಗಾತಿಗಳನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ ಕೂಡ ಆಧುನಿಕ ತಲೆಮಾರಿಗೆ ಲಭಿಸಿದೆ. ಇಂದಿನ ದಿನಗಳಲ್ಲಿ ನಗರಗಳಲ್ಲಷ್ಟೇ ಅಲ್ಲ ಹಳ್ಳಿಗಳಲ್ಲೂ ಹೆಣ್ಣಿನ ಶೀಲವೆಂಬುವುದು ಪವಿತ್ರ ಎಂಬ ಪರಿಕಲ್ಪನೆ ಉಳಿದಿಲ್ಲ. ವಿವಾಹಕ್ಕೆ ಮುನ್ನ ಲೈಂಗಿಕ ಅನುಭವ, ದಾಂಪತ್ಯ ಬದುಕಿನಾಚೆಗಿನ ಸಂಬಂಧ ಇತ್ತೀಚೆಗೆ ಸಾಮಾನ್ಯವಾಗಿಬಿಟ್ಟಿದೆ. ಇವೆಲ್ಲವನ್ನೂ ಮೀರಿ ಕುಟುಂಬ ಅಥವಾ ವಿವಾಹ ಬಂಧನಕ್ಕೆ ಒಳಪಡದೆ ಒಟ್ಟಾಗಿ ಬದುಕುವ ಪ್ರವೃತ್ತಿ ಇತ್ತೀಚಿನ ದಿನಗಳಲ್ಲಿ ಜನಪ್ರಿಯವಾಗತೊಡಗಿದೆ. ಇದರ ಜೊತೆಗೆ ಸ್ವತಂತ್ರವಾಗಿ ಬದುಕುತ್ತಿರುವ ಹೆಣ್ಣೊಬ್ಬಳು ತಾನು ಇಷ್ಟ ಪಟ್ಟ ವ್ಯಕ್ತಿಯೊಬ್ಬನಿಂದ ಮಗುವನ್ನು ಪಡೆದು ತಾಯಿಯಾಗಿ ದಾಂಪತ್ಯದ ಹಂಗಿಲ್ಲದೆ ಬದುಕುವ ಅವಕಾಶವನ್ನು ಸಮಾಜ ಕಲ್ಪಿಸಿಕೊಟ್ಟಿದೆ. ಇಂತಹ ಹೆಣ್ಣುಮಕ್ಕಳ ಕುರಿತಂತೆ ನಮ್ಮಗಳ ದೃಷ್ಟಿಕೋನವೂ ಬದಲಾಗಿದೆ.

ಜಾಗತೀಕರಣದ ಅತಿ ದೊಡ್ಡ ಹೊಡೆತವೆಂದರೆ ನಮ್ಮ ಅವಿಭಕ್ತ ಕುಟುಂಬಗಳ ವಿನಾಶ. ಈ ವ್ಯವಸ್ಥೆಯ ಬಗ್ಗೆ ಏನೇ ದೋಷಗಳಿರಲಿ ಹೆಣ್ಣು ಮಕ್ಕಳಿಗೆ ಹಾಗೂ ವೃದ್ಧ ತಂದೆತಾಯಿಗಳಿಗೆ ಈ ವ್ಯವಸ್ಥೆಯಡಿ ರಕ್ಷಣೆ ಇತ್ತು. ಪ್ರಸ್ತುತ ಚಾಲ್ತಿಯಲ್ಲಿರುವ ಕುಟುಂಬ ವ್ಯವಸ್ಥೆಯಲ್ಲಿ ಪುರುಷನೇ ಯಜಮಾನ ಎಂಬ ಮಾತು ಗೇಲಿಯ ಸಂಗತಿಯಾಗಿದೆ. ಪುರುಷನ ಸಮನಾಗಿ ದುಡಿಯುವ ಮಹಿಳೆ ಕೂಡ ಕುಟುಂಬ ನಿರ್ವಹಣೆಯ ಸಮಾನ ಹೊಣೆ ಹೊತ್ತಿದ್ದಾಳೆ. ಸ್ತ್ರೀ ಪುರುಷರಿಬ್ಬರ ದುಡಿತದ ಪರಿಣಾಮ ಮಕ್ಕಳ ಪಾಲನೆ ಪೋಷಣೆ ತ್ರಾಸದಾಯಕವಾಗಿದ್ದು

(35ನೇ ಪುಟಕ್ಕೆ)

ಸಂವಾದ



ವೈಶಿಷ್ಟ್ಯಪೂರ್ಣ ಅಂಬೇಡ್ಕರ್ ಹಬ್ಬ–2011, ಏಪ್ರಿಲ್ 14ರಂದು ಸ್ಫೂರ್ತಿಧಾಮದ ಸುಂದರ ವಾತಾವರಣದ ನಡುವೆ ಅರ್ಥಪೂರ್ಣವಾಗಿ ನಡೆಯಿತು. ತಳಸಮುದಾಯಗಳ ಅರಿವು, ಜಾಗೃತಿ ಮತ್ತು ಅಭಿವೃದ್ಧಿಯನ್ನು ಸಾಕಾರಗೊಳಿಸಲು ವಿವಿಧ ಸ್ಥರಗಳಲ್ಲಿ ದುಡಿಯುತ್ತಿರುವ ನಾಡಿನ ಚಿಂತಕರು, ಸಾಮಾಜಿಕ ಕಾರ್ಯಕರ್ತರ ದಂಡೇ ಅಂದು ಸ್ಫೂರ್ತಿಧಾಮದಲ್ಲಿ ನೆರೆದಿತ್ತು.

ಬುದ್ಧ ವಂದನೆಯೊಂದಿಗೆ ಆರಂಭವಾದ ಕಾರ್ಯಕ್ರಮ ದೇಶದ ಪ್ರಖ್ಯಾತ ದಲಿತ ಚಿಂತಕ ಮತ್ತು ಮಾನವ ಹಕ್ಕುಗಳ ಹೋರಾಟಗಾರ ಆನಂದ ತೇಲ್‌ತುಂಬ್ಡೆ ಅವರ ವೈಚಾರಿಕ ಚಿಂತನೆಯೊಂದಿಗೆ ಗರಿಗಟ್ಟಿಗೊಂಡಿತು. ಸಂಜೆ 'ಬೋಧಿವೃಕ್ಷ' ಹಾಗೂ 'ಬೋಧಿವರ್ಧನ' ಪ್ರಶಸ್ತಿಗಳ ವಿತರಣೆ. ಪ್ರಶಸ್ತಿ ವಿತರಿಸಿದ ಡಾ॥ ಯು. ಆರ್. ಅನಂತಮೂರ್ತಿಯವರ ಮನದಾಳದ ಮಾತುಗಳು, ನೆರೆದವರ ಅರಿವನ್ನು ವಿಸ್ತರಿಸುವುದರ ಜೊತೆಗೆ 'ಅಂಬೇಡ್ಕರ್ ದಲಿತರ ವಿಮೋಚನೆ ಮಾಡುವುದರೊಂದಿಗೆ, ಬ್ರಾಹ್ಮಣರನ್ನು ಸಂಕುಚಿತ ಮನೋಭಾವನೆಯಿಂದಲೂ ವಿಮೋಚನೆಗೊಳಿಸಿದರು' ಎಂಬ ಹೊಸ ಹೊಳಹನ್ನು ನೀಡಿದವು.

'ಸ್ಫೂರ್ತಿಧಾಮ' ತಳಸ್ತರದವರ ಬದುಕನ್ನು ಗುಣಾತ್ಮಕವಾಗಿ ವಿಸ್ತರಿಸುವ ಕಾರ್ಯದಲ್ಲಿ ತೊಡಗಿಕೊಂಡಿರುವವರನ್ನು ಗೌರವಿಸುವ ಸಲುವಾಗಿ ಒಂದು ಲಕ್ಷ ರೂ. ಮೌಲ್ಯದ ಒಂದು 'ಬೋಧಿವೃಕ್ಷ' ಪ್ರಶಸ್ತಿ ಹಾಗೂ ತಲಾ ಇಪ್ಪತ್ತು ಸಾವಿರ ರೂ.ಗಳ ಐದು 'ಬೋಧಿ ವರ್ಧನ' ಪ್ರಶಸ್ತಿಗಳನ್ನು ನೀಡುತ್ತಿದ್ದು, ಈ ಬಾರಿಯ 'ಬೋಧಿ ವೃಕ್ಷ' ಪ್ರಶಸ್ತಿಯನ್ನು, ಅಂಬೇಡ್ಕರ್ ಬರಹ ಮತ್ತು ಭಾಷಣಗಳನ್ನು ಜಗತ್ತಿಗೆ ಪರಿಚಯಿಸಿದ ಭಗವಾನ್‌ದಾಸ್ (ಮರಣೋತ್ತರ) ಹಾಗೂ 'ಬೋಧಿವರ್ಧನ' ಪ್ರಶಸ್ತಿಗಳನ್ನು, ಪೌರಕಾರ್ಮಿಕರ ಹಕ್ಕುಗಳಿಗಾಗಿ ನಿರಂತರ ಹೋರಾಟ ಮಾಡುತ್ತಿರುವ ಶ್ರೀ. ಎಸ್. ಕೆ. ಕಾಂತ, ಬಿಳಿಗಿರಿರಂಗನ ಬೆಟ್ಟದ ದೇಶೀ ಪ್ರಸೂತಿ ತಜ್ಞೆ ಶ್ರೀಮತಿ ಕೇತಮ್ಮ, ಅಲೆಮಾರಿಗಳ ಸಂಘಟನೆಗಾಗಿ ಶ್ರಮಿಸುತ್ತಿರುವ ಡಾ॥ ಕೆ. ಎಂ ಮೇತ್ರಿ, ದಲಿತ ಚಳವಳಿಯ ಹಿರಿಯ ಹೋರಾಟಗಾರ ಶ್ರೀ ಎಸ್. ವೆಂಕಟೇಶ್ ಹಾಗೂ ಹಾಸ್ಟೆಲ್ ತೆರೆದು ದಲಿತ ವಿದ್ಯಾರ್ಥಿಗಳಿಗೆ ವಿದ್ಯೆಕಲಿಯಲು ಜೀವಮಾನವಿಡೀ ಶ್ರಮಿಸಿದ ಶ್ರೀ. ಡಿ. ವೆಂಕಟಯ್ಯ (ಮರಣೋತ್ತರ) ಅವರಿಗೆ ನೀಡಿ ಗೌರವಿಸಲಾಯಿತು.

ಅಂಬೇಡ್ಕರ್ ಹಬ್ಬ 2011









ಜಾಂಟಿಲೆ ಜಾರೋಣಿ

ಕಥೆ

○ ಫ್ರೆಂಚ್ ಮೂಲ: ಆಲ್ಬರ್ಟ್ ಕಮೂ
ಕನ್ನಡಕ್ಕೆ: ಕೇಶವ ಮಳಗಿ

ಬಸ್ಸಿನ ತೆರೆದ ಕಿಟಕಿಯತ್ತ ನುಗ್ಗಿದ ನೊಣ ಒಂದು ಕ್ಷಣ ನಿಸ್ತೇಜವಾಗಿ ಗಿರಕಿ ಹೊಡೆಯಿತು. ಸುಸ್ತಾಗಿ ಪಟಕ್ಕನೆ ಹಾರಿ ಹೋದಂತೆನ್ನಿಸಿತು. ಜಾನಿಯ ಕಣ್ನೋಟದಿಂದ ಮರೆಯಾಗಿ ಆಕೆಯ ಗಂಡನ ನಿಶ್ಚಲ ಕೈಮೇಲೆ ಕುಳಿತು ದೂಳುಮಯ ಗಾಳಿ ಕಿಟಕಿಗೆ ಬಡಿದಾಗಾಲೊಮ್ಮೆ ಥರಗುಟ್ಟಿತು. ಚಳಿಗಾಲದ ಮಸುಕು ಬೆಳಕಿನ ಮುಂಜಾವಿನಲ್ಲಿ, ತಗಡಿಯ ಚರಚರ ಸದ್ದು, ಯಂತ್ರಗಳ ಶಬ್ದಗಳ ನಡುವೆ ಮೋಟಾರು ತೆವಳುತ್ತ ಸಾಗಿತ್ತು. ಜಾನಿ ಗಂಡನತ್ತ ನೋಡಿದಳು. ಪೊದೆ ಹುಬ್ಬಿನ ಕೆಳಭಾಗದಲ್ಲಿ ನೆರೆಯುತ್ತಿರುವ ಕೂದಲು, ದಪ್ಪ ಮೂಗು, ಅವಡಸವಡ ಬಾಯಿ. ಮಾರ್ಸೆಲ್, ಹುಲ್ಲು ತುಂಬಿದ ಬೆದರುಗೊಂಬೆಯಂತೆ ಕಂಡ. ಬಸ್ಸು ತಗ್ಗುದಿನ್ನೆಯ ರಸ್ತೆಯಲ್ಲಿ ತುಳುಕಿದಾಗಲೊಮ್ಮೆ ತನ್ನನ್ನೇ ಎತ್ತಿ ಕುಕ್ಕಿಕೊಳ್ಳುತ್ತಿದ್ದಾನೆ ಅನ್ನಿಸುತ್ತಿತ್ತು. ಧಡೂತಿ ದೇಹ ಒಮ್ಮೆ ಮೇಲಕ್ಕೆದ್ದು ಇಳಿಬಿಟ್ಟ ಕಾಲುಗಳ ಮೇಲೆ ಕೂರುತ್ತಿತ್ತು. ಬಳಿಕ ಕಣ್ಣುಗಳನ್ನು ಅರೆಮುಚ್ಚಿ, ಆತ ಕಳೆದುಹೋದವನಂತೆ ಕಾಣತೊಡಗುತ್ತಿದ್ದ. ಕೂದಲು ರಹಿತವಾಗಿದ್ದ ಆತನ ಕೈಗಳು ಮಾತ್ರ ಚಲಿಸುವಂತೆ ಕಾಣುತ್ತಿದ್ದವು. ಉಣ್ಣೆಯ ತೆಳುವಾದ ಬಟ್ಟೆ ಆತನ ತೋಳುಗಳನ್ನು ಮುಚ್ಚಿತ್ತು. ಕಾಲುಗಳ ನಡುವೆ ಸಿಲುಕಿದಂತಿದ್ದ ಕೈಗಳಿಗೆ ಮಾತ್ರ ನೊಣದ ಹಾರಾಟದ ಪರಿವೆಯೇ ಇದ್ದಂತಿರಲಿಲ್ಲ.

ಒಮ್ಮೆಲೆ ಭರೋ ಗಾಳಿಯ ಶಬ್ದ ಅವರ ಕಿವಿಗಳಿಗೆ ಅಪ್ಪಳಿಸಿತು. ಬಸ್ಸನ್ನು ಸುತ್ತಿಕೊಂಡಿದ್ದ ದೂಳಿನ ಮುಸುಕು ಇನ್ನೂ ದಟ್ಟವಾಯಿತು. ಯಾರೋ ಹಿಡಿ ಮಣ್ಣನ್ನು ತೂರುತ್ತಿದ್ದಾರೇನೋ ಎಂಬಂತೆ ಮರಳು ಕಿಟಕಿಗೆ ರಾಚುತ್ತಿತ್ತು. ಇದೀಗ ನೊಣ ತನ್ನ ನಿಸ್ತೇಜ ರೆಕ್ಕೆ ಅಗಲಿಸಿ, ಹಾರಿ ಮರೆಯಾಯಿತು. ನಿಧಾನಗೊಂಡ ಬಸ್ಸು ನಿಂತಿತು. ಕೊಂಚ ಸಮಯಕ್ಕೆ ಗಾಳಿಯ ರಭಸ ಕಡಿಮೆಯಾಗಿ ಮಸುಕು ಸ್ವಲ್ಪ ಮರೆಯಾಗತೊಡಗಿತು. ಬಸ್ಸು ಮತ್ತೆ ಚಲಿಸತೊಡಗಿದಂತೆ ದೂಳಿನಲ್ಲಿ ಮರೆಯಾಗಿದ್ದ ಬೆಳಕಿನ ಕಿರಣಗಳು ಮತ್ತೆ ಹೊಳೆದವು. ಉಕ್ಕಿನಿಂದ ಕತ್ತರಿಸಿದಂತೆ ಕಾಣುತ್ತಿದ್ದ, ಬೆಳ್ಳಗೆ ಹೊಳೆವ ವಿರಳ ತಾಳೆ ಮರಗಳು ಕಿಟಕಿಯ ಬಳಿ ಹಾಯ್ದು ತಕ್ಷಣವೇ ದೂರದೂರಕ್ಕೆ ಸಾಗುತ್ತಿದ್ದವು.

'ಆಹಾ! ದೇಶವೇ!' ಮಾರ್ಸೆಲ್ ಉದ್ಗರಿಸಿದ.

ತಮ್ಮ ಮುಖ ಮುಸುಕುಗಳಲ್ಲಿ (ಬುರ್ನೀಸು) ಹೂತು ಹೋದವರಂತೆ ಕಂಡು, ತೂಕಡಿಸುತ್ತಿದ್ದ ಅರಬರು ಬಸ್ಸಿಡೀ ತುಂಬಿಕೊಂಡಿದ್ದರು. ಕೆಲವರು ಮುಂದಿನ ಸೀಟಿನ ಮೇಲೆ ಕಾಲುಗಳನ್ನಿಟ್ಟು ಬಸ್ಸು ಸರಿದಾಡಿದಾಗಲೆಲ್ಲ ಉಳಿದವರಿಗಿಂತ ಹೆಚ್ಚಾಗಿ ಕಾಲುಗಳಿಂದ ತಾಳ ಹಾಕುತ್ತಿದ್ದರು. ಅರಬರ ಮೌನ ಮತ್ತು ನಿರ್ಭಾವುಕತೆ ಜಾನಿಯ ಮೇಲೆ ಪರಿಣಾಮ ಬೀರುವಂತಿದ್ದವು. ಈ ಮೂಕ ಪಡೆಯೊಂದಿಗೆ ದಿನಗಳಿಂದ ಪ್ರಯಾಣಿಸುತ್ತಿದ್ದೇನೆ ಎಂಬ ಭಾವ ಅವಳನ್ನು ಆವರಿಸಿತು. ಆದರೆ, ಬಸ್ಸು ಬೆಳಗ್ಗೆಯಷ್ಟೇ ರೇಲ್ವೆ ಸ್ಟೇಶನ್ನಿನಿಂದ ಹೊರಟಿತ್ತು. ಜನವಿರಳವಾಗಿದ್ದ, ಕಲ್ಲುಗಳಿಂದ ತುಂಬಿ ಕೆಂಪುಬಣ್ಣದ ಕ್ಷಿತಿಜವರೆಗೆ ತನ್ನ ವಿಸ್ತಾರವನ್ನು ಹಬ್ಬಿಸಿಕೊಂಡಂತೆ ಕಾಣುತ್ತಿದ್ದ ಪ್ರದೇಶದಲ್ಲಿ ಬಸ್ಸು ಈ ಎರಡು ಗಂಟೆಗಳಿಂದ ಚಲಿಸುತ್ತಿತ್ತು. ಏರುತ್ತಲೇ ಇದ್ದ ಗಾಳಿಯ ರಭಸ ಅಗಾಧ ವಿಸ್ತಾರವನ್ನು ತನ್ನೊಳಗೆ ನುಂಗಿತು. ಆ ಗಳಿಗೆಯಿಂದ ಪ್ರಯಾಣಿಕರು ಏನೊಂದನ್ನೂ ಕಾಣಲು ಸಾಧ್ಯವಿಲ್ಲದಂತಾಯಿತು. ಬಳಿಕ ಒಬ್ಬೊಬ್ಬರಾಗಿ ಮೌನಕ್ಕೆ ಶರಣಾಗಿ, ಆಗೀಗ ಬಸ್ಸಿನೊಳಗೆ ತೂರಿಬರುತ್ತಿದ್ದ ದೂಳಿನಿಂದ ಕಿರಿಕಿರಿ ಗೊಳಗಾದವರಂತೆ ಕಣ್ಣು-ತುಟಿಗಳನ್ನು ತೀಡಿಕೊಳ್ಳುತ್ತ ನಿದ್ರೆಯಿರದ ರಾತ್ರಿಯ ಸ್ಥಿತಿಯಲ್ಲಿ ಪಯಣ ಮುಂದುವರೆಸಿದ್ದರು.

'ಜಾನಿ'! ಗಂಡನ ಕೂಗಿಗೆ ಆಕೆ ಬೆಚ್ಚಿಬಿದ್ದಳು. ಎತ್ತರಕ್ಕೆ, ಕಟ್ಟುಮಸ್ತಾಗಿರುವ ತಾನು ಎಂತಹ ಅಸಂಬದ್ಧ ಹೆಸರನ್ನು ಹೊಂದಿದ್ದೇನೆ ಎಂದು ಅಚ್ಚರಿಗೊಂಡಳು. ಸ್ಯಾಂಪಲ್ ಪೆಟ್ಟಿಗೆ ಎಲ್ಲಿದೆ ಎಂಬುದು ಮಾರ್ಸೆಲ್‌ಗೆ ಬೇಕಾಗಿತ್ತು. ತನ್ನ ಸೀಟಿನ ಕಾಲಡಿಯ ಖಾಲಿ ಜಾಗದಲ್ಲಿ ಸವರಿದಾಗ ಕಾಲಿಗೆ ಸಿಲುಕಿದ್ದೇ ಪೆಟ್ಟಿಗೆ ಇರಬೇಕು ಅನ್ನಿಸಿತು. ಕೊಂಚವಾದರೂ ಸರಿದಾಡದೆ ಕೆಳಗೆ ಬಾಗಲು ಆಕೆಗೆ ಸಾಧ್ಯವಾಗಲಿಲ್ಲ. ಹೈಸ್ಕೂಲಿನಲ್ಲಿ ಕ್ರೀಡಾಪಟುವಾಗಿದ್ದ ಆಕೆ ಎಂದೂ ಉಸಿರುಗಟ್ಟಿದವಳಲ್ಲ. ಬಹಳ ಹಿಂದೆಯೇ? ಇಪ್ಪತ್ತೈದು ವರ್ಷಗಳಾಗಿರಬೇಕು. ಇಪ್ಪತ್ತೈದು ವರ್ಷಗಳು ಏನೇನೂ ಅಲ್ಲ: ಮದುವೆಯಾಗುವುದು ಒಳ್ಳೆಯದೋ, ಮುಕ್ತ ಜೀವನ ಮೇಲೋ ಎಂದು ಜಿಜ್ಞಾಸೆ ನಡೆಸಿದ್ದು ಇನ್ನೂ ನಿನ್ನೆಮೊನ್ನೆ ಅಂತಲೇ ಅನ್ನಿಸಿತು. ಒಂದು ದಿನ ತಾನೊಬ್ಬಳೇ ಒಬ್ಬಂಟಿಯಾಗಿ ಮುದುಕಿಯಾಗುತ್ತೇನೆ ಎಂದು ಯೋಚಿಸಿದ್ದು ಕೂಡ ನೆನ್ನೆಮೊನ್ನೆಯೇ

ಇರಬೇಕು ಅಂದುಕೊಂಡಳು. ಆದರೆ ಆಕೆ ಒಂಟಿಯಾಗಿಯೇನೂ ಇರಲಿಲ್ಲ. ಅವಳನ್ನು ಬಿಟ್ಟು ಕೊಡಲಾರೆ ಎಂಬಂತಿಟ್ಟ ಕಾನೂನು ವಿದ್ಯಾರ್ಥಿ ಅವಳ ಪಕ್ಕದಲ್ಲಿಯೇ ಇದ್ದ. ಕೊಂಚ ಕುಳ್ಳಗಿದ್ದ, ಹೊಟ್ಟೆಬಾಕನೆಂಬಂತೆ ತೋರಿಸಿಕೊಳ್ಳುತ್ತಿದ್ದ, ಇದ್ದಕ್ಕಿದ್ದಂತೆ ಗಹಗಹಿಸುತ್ತಿದ್ದ, ಗರಗರ ತಿರುಗುವ ಕಪ್ಪುಕಂಗಳ ಇವನನ್ನು ಆಕೆ ಇಷ್ಟವೇನೂ ಪಟ್ಟಿರಲಿಲ್ಲ. ಆದಾಗ್ಯೂ ಕೊನೆಗೆ ಒಪ್ಪಿಕೊಂಡಿದ್ದಳು. ಆದರೆ ಈ ದೇಶದ ಉಳಿದ ಫ್ರೆಂಚರೊಂದಿಗೆ ಹಂಚಿಕೊಂಡಿದ್ದ ಆತನ ಬದುಕುವ ಛಲವನ್ನು ಆಕೆ ಮೆಚ್ಚಿದ್ದಳು. ಜನ ಅಥವ ಘಟನೆಗಳು ಆತನ ನಿರೀಕ್ಷೆಗೆ ತಕ್ಕಂತೆ ಇಲ್ಲದಿದ್ದಾಗ ಆತ ತೋರುತ್ತಿದ್ದ ಸಂಯಮ ಕೂಡ ಆಕೆಗೆ ನೆಚ್ಚಿದ್ದವು. ಎಲ್ಲಕ್ಕಿಂತ ಮಿಗಿಲಾಗಿ ಪ್ರೀತಿಗೆ ಒಳಗಾಗುವುದನ್ನು ಆಕೆ ಇಷ್ಟಪಟ್ಟಿದ್ದಳು. ಆತನೂ ಕಡಿಮೆಯಿಲ್ಲದಂತೆ ತನ್ನೆಲ್ಲ ಒಲ್ಮೆಕೆಯನ್ನು ಈಕೆಯತ್ತಲೇ ಹರಿಸುತ್ತಿದ್ದ. ತಾನಿರುವುದೇ ಈತನಿಗಾಗಿ ಎಂದು ಆಕೆ ಭಾವಿಸುವಂತೆ ವರ್ತಿಸುತ್ತಿದ್ದ, ಮಾತ್ರವಲ್ಲ, ಅವಳ ಅಸ್ತಿತ್ವವನ್ನು ಕೂಡ ಸಾಕಾರಗೊಳಿಸುತ್ತಿದ್ದ. ಇಲ್ಲ, ಆಕೆ ಒಂಟಿಯಾಗಿರಲಿಲ್ಲ. . . .

ಬಸ್ಸು ಭಾರಿ ಸದ್ದು ಮಾಡುತ್ತ ಕಣ್ಣಿಗೆ ಕಾಣದ ಅಡೆತಡೆಗಳ ನಡುವೆ ತನ್ನ ದಾರಿಯನ್ನು ಸವೆಸುತ್ತಿತ್ತು, ಒಳಗೆ ಮಾತ್ರ ಯಾರೊಬ್ಬರೂ ಚಲಿಸದೆ ನಿಶ್ಚಲರಾಗಿದ್ದರು. ಜಾನಿಗೆ ದಿಢೀರನೆ ಯಾರೋ ತನ್ನನ್ನು ಗಮನಿಸುತ್ತಿದ್ದಾರೆ ಎಂಬ ಭಾವ. ತಾನು ಕುಳಿತ ಸೀಟಿನ ಮುಂದುವರಿಕೆಯಂತಿದ್ದ ಬಾಕಿನ ಅಂಚಿನತ್ತ ತಿರುಗಿದಳು. ಆತ ಅರಬನೇನೂ ಆಗಿರಲಿಲ್ಲ. ಪಯಣದ ಆರಂಭದಲ್ಲಿ ಅವನನ್ನು ಗಮನಿಸದಿದ್ದುದು ಆಕೆಯಲ್ಲಿ ಅಚ್ಚರಿ ತಂದಿತು. ಆತ ಸಹಾರ ವಿಭಾಗದ ಫ್ರೆಂಚ್ ಸೇನಾ ತುಕಡಿ ತೊಡುವ ಸಮವಸ್ತ್ರ ತೊಟ್ಟಿದ್ದ. ಸುಟ್ಟ ಮುಖದ ಮೇಲೆ ಬೂದು ಬಣ್ಣದ ಚೂಪನೆಯ ಟೋಪಿ ಧರಿಸಿದ್ದ. ತನ್ನ ಸ್ಫಟಿಕ ಕಣ್ಣುಗಳಿಂದ ಆಕೆಯನ್ನಾತ ಮೌನವಾಗಿ ನಿರುಕಿಸುತಿದ್ದ. ಇದ್ದಕ್ಕಿದ್ದಂತೆ ಕೆಂಪಾದ ಆಕೆ ತಟ್ಟನೆ ತನ್ನ ಗಂಡನತ್ತ ತಿರುಗಿಕೊಂಡಳು. ಆತ ಮಾತ್ರ ಆಕೆಯನ್ನು ಹಾದು ಹೊರಗಿನ ಗಾಳಿಮುಸುಕನ್ನು ದಿಟ್ಟಿಸುತ್ತಲೇ ಇದ್ದ. ತೊಟ್ಟಿದ್ದ ಕೋಟಿನೊಳಗೆ ಆಕೆ ಹುದುಗಿಕೊಂಡಳು. ಆದರೂ, ಎತ್ತರಕ್ಕೆ, ಒತ್ತಿ ಹೊಲಿದಂತಿದ್ದ ತನ್ನ ಸಮವಸ್ತ್ರದಲ್ಲಿ ಅತಿ ಸಪೂರವಾಗಿ ಕಾಣುತ್ತಿದ್ದ, ಮರಳು ಮತ್ತು ಎಲುಬುಗಳ ಮಿಶ್ರಣದಂತಿದ್ದ ಫ್ರೆಂಚ್ ಸೈನಿಕನನ್ನು ಆಕೆ ಕಾಣಬಹುದಿತ್ತು. ಈಗಲಷ್ಟೇ ತನ್ನೆದುರು ಕುಳಿತ ಅರಬರ ಸಪೂರ ಕೈಗಳನ್ನು; ಬಿಸಿಲಿಗೆ ಕರಕಲಾದ ಮುಖಗಳನ್ನು ಮೊದಲ ಬಾರಿಗೆ ಎಂಬಂತೆ ಗಮನಿಸಿದಳು. ಮಾತ್ರವಲ್ಲ, ತಾನೂ ತನ್ನ ಪತಿ ಒತ್ತೊತ್ತಾಗಿ ಕುಳಿತಿರುವುದು; ಅರಬರು ತೊಟ್ಟ ಬಟ್ಟೆಗಳು ಸೀಟಿನ ಬಹುಭಾಗ ಆವರಿಸಿರುವುದನ್ನೂ ಗುರುತಿಸಿದಳು. ತಾನು ತೊಟ್ಟ ಕೋಟಿನ ತುದಿಗಳನ್ನು ಒತ್ತಾಗಿ ಎಳೆದುಕೊಂಡಳು. ಆದರೂ ಸಮ ಎತ್ತರದ, ಕೊಂಚ ಮೈ ತುಂಬಿಕೊಂಡಿದ್ದರೂ ಪುರುಷರಿಗೆ ಆಕರ್ಷಕವಾಗಿಯೇ ಕಾಣುತ್ತಿದ್ದಳು. ದೇಹ ತುಸು ದಪ್ಪವಾಗಿದ್ದರೂ ಅದಕ್ಕೆ ವ್ಯತಿರಿಕ್ತವಾಗಿರುವ ಹೊಳೆವ ತಿಳಿ ಕಣ್ಣು, ಕೊಂಚ ಎಳಸಾದ ಮುಖ ಆರ್ದ್ರವೂ, ಆಕರ್ಷಣೀಯವೂ ಆಗಿವೆ ಎಂದು ಅವಳು ಬಲ್ಲವಳಾಗಿದ್ದಳು.

ಇಲ್ಲ, ಆಕೆ ಕನಸಿದಂತೆ ಯಾವುದೂ ಇರಲಿಲ್ಲ. ಮಾರ್ಸೆಲ್ ಈ ಪ್ರಯಾಣಕ್ಕೆ ಕರೆದೊಯ್ಯುವುದಾಗಿ ಹೇಳಿದಾಗ ನಿಜವೆಂದರೆ ಆಕೆ ವಿರೋಧಿಸಿದ್ದಳು. ಆತನಾದರೋ ಈ ಪ್ರಯಾಣವನ್ನು ಎಂದಿನಿಂದಲೋ ಯೋಜಿಸಿಟ್ಟಿದ್ದ. ಇನ್ನಷ್ಟು ನಿಖರವಾಗಿ ಹೇಳುವುದಾದರೆ, ಯುದ್ಧ ಮುಗಿದು ವಹಿವಾಟು ಮೊದಲಿನಂತಾದಾಗಲೇ ಈ ಪಯಣ ನಿರ್ಧಾರವಾಗಿತ್ತು. ಯುದ್ಧಕ್ಕಿಂತ ಮೊದಲು, ಕಾನೂನು ಪದವಿಗೆ ಶರಣು ಹೊಡೆದಾದ ಮೇಲೆ, ಮನೆತನದಿಂದ ಬಳುವಳಿಯಾಗಿ ಪಡೆದ ಸಣ್ಣ ಜವಳಿ ವ್ಯಾಪಾರ ಜೀವನಕ್ಕೆ ಒಳ್ಳೆಯ ಆಧಾರವನ್ನೇ ಒದಗಿಸಿತ್ತು. ಕರಾವಳಿಯಲ್ಲಿ ತಾರುಣ್ಯದ ಬದುಕು ಹಿತಕಾರಿಯೇ. ಆದರೆ ಆತನಿಗೆ ದೇಹಶ್ರಮ ಅಷ್ಟಾಗಿ ಒಗ್ಗದು. ಬಲುಬೇಗ ಆಕೆಯನ್ನು ಕಡಲತಡಿಗೆ ಕರೆದೊಯ್ಯುವುದನ್ನು ನಿಲ್ಲಿಸಿದ. ಅವರ ಬಳಿಯಿದ್ದ ಸಣ್ಣ ಕಾರು ಏನಿದ್ದರೂ ಭಾನುವಾರದ ಡ್ರೈವ್‌ಗೆ ಸೀಮಿತವಾಗಿತ್ತು. ಮಾರ್ಸೆಲ್, ಮಿಕ್ಕ ಸಮಯವನ್ನು ಬಣ್ಣದ ಬಟ್ಟೆಗಳಿಂದ ತುಂಬಿದ ಅಂಗಡಿಯಲ್ಲಿ, ಅರೆ-ಯುರೋಪಿಯನ್, ಅರೆ-ಸ್ಥಳೀಯವೆನ್ನ ಬಹುದಾದ ಮನೆಯಲ್ಲಿ ಕಳೆಯಲು ಬಯಸುತ್ತಿದ್ದ. ಅರಬ್ ಗೃಹಲಂಕಾರಿಕ ವಸ್ತು, ಮಧ್ಯಮವರ್ಗದ ಪೀಠೋಪಕರಣಗಳಿಂದ ಸಿಂಗರಿಸಿದ ಮೂರು ಕೋಣೆಗಳ ಮನೆಯಲ್ಲಿ ವಾಸಿಸುತ್ತಿದ್ದ ಅವರಿಗೆ ಮಕ್ಕಳಿರಲಿಲ್ಲ. ಅರೆಮುಚ್ಚಿದ ಬಾಗಿಲಿನ ನೆರಳಿನಡಿಯಲ್ಲಿ ವರ್ಷಗಳು ಉರುಳಿ ಹೋಗಿದ್ದವು. ಬೇಸಿಗೆ, ಕಡಲತಡಿ, ಪ್ರವಾಸ, ಅಷ್ಟೇಕೆ ಆಕಾಶ ಕೂಡ ಅವರಿಗೆ ದೂರವೆಂಬಂತೆಯೇ ಇದ್ದವು. ಮಾರ್ಸೆಲ್‌ಗೆ ತನ್ನ ವ್ಯಾಪಾರ ಬಿಟ್ಟರೆ ಇನ್ನಾವುದರಲ್ಲಿಯೂ ಆಸಕ್ತಿ ಕುದುರುತ್ತಿರಲಿಲ್ಲ. ಆತನ ನಿಜವಾದ ಆಸಕ್ತಿಯೇನಿದ್ದರೂ ಹಣವೆಂಬುದನ್ನು ತಾನು ಕಂಡುಕೊಂಡಿದ್ದೇನೆ, ಎಂದೇ ಆಕೆ ನಂಬಿದ್ದಳು. ಯಾವುದೇ

ನಡುಬೇಸಿಗೆಯಲ್ಲಿ ಹೇಳದೆ-ಕೇಳದೆ ಯುದ್ಧ ಆರಂಭಗೊಂಡಿತ್ತು. ಸೈನ್ಯದಿಂದ ತಿರಸ್ಕೃತಗೊಂಡ, ಕೊರತೆಯಿರುವಂತಹ ಜವಳಿಯನ್ನು ಮಾರ್ಸೆಲ್ ಸಂಗ್ರಹಿಸಿದ್ದ. ಸ್ಥಗಿತಗೊಂಡ ವ್ಯಾಪಾರ, ಬೇಯುವ ಜನರಿಲ್ಲದೆ ಬಿಕೋ ಎನ್ನುವ ಬೀದಿಗಳು. ಈಗೇನಾದರೂ ಆದರೆ ಆಕೆಯನ್ನು ರಕ್ಷಿಸುವವರು ಯಾರೂ ಇರುವುದಿಲ್ಲ. ಆದ್ದರಿಂದಲೇ ಮಾರುಕಟ್ಟೆಗೆ ಮರಳಿ ಜವಳಿ ಬಂದಿದ್ದೇ ಘಟ್ಟದ ಮೇಲಿನ ಹಳ್ಳಿಗಳಿಗೆ, ಪಶ್ಚಿಮದ ಕಡೆಗೆ, ದಳ್ಳಾಳಿಗಳನ್ನು ತಪ್ಪಿಸಿ ನೇರವಾಗಿ ಅರಬ್ ವ್ಯಾಪಾರಿಗಳೊಂದಿಗೆ ವಹಿವಾಟು ನಡೆಸಲು ನಿರ್ಧರಿಸಿದ್ದ ಮಾರ್ಸೆಲ್, ಪ್ರಯಾಣಕ್ಕೆ ಸಿದ್ಧನಾಗಿದ್ದ. ಹೆಂಡತಿಯನ್ನು ತನ್ನೊಂದಿಗೆ ಕರೆದೊಯ್ಯಲು ಬಯಸಿದ್ದ. ಉಬ್ಬಸದ ತೊಂದರೆಯಿದ್ದ ಆಕೆಗೆ ಪ್ರಯಾಣ ಪ್ರಯಾಸಕರವಾಗಿರುತ್ತದೆ ಎಂದು ತಿಳಿದಿತ್ತು. ಹಾಗೆಂದೇ, ಊರಲ್ಲಿಯೇ ಆತನಿಗಾಗಿ ಕಾಯಲು ಸಿದ್ಧವಿದ್ದಳು. ಆದರೆ ಆತ ಹಠಕ್ಕೆ ಬಿದ್ದಿದ್ದ. ಮಾರ್ಸೆಲ್‌ನನ್ನು ಒಪ್ಪಿಸಲು ಅಗಾಧ ಪ್ರಮಾಣದ ಶಕ್ತಿ ವ್ಯಯವಾಗುತ್ತದೆಂದು ಆಕೆಯೂ ಸಮ್ಮತಿಸಿದ್ದಳು.

ನಿರ್ದಿಷ್ಟ ಕಾರಣವಿಲ್ಲದಿದ್ದರೂ ತನಗೆ ಹಣ ಇಷ್ಟವಾಗುವುದಿಲ್ಲ ಎಂದು ಅಂದುಕೊಂಡಿದ್ದಳು. ಆತನ ಗಳಿಕೆ ತನ್ನ ಪ್ರಯೋಜಕ್ಕೆಂದೇ ಆಕೆ ತಿಳಿದಿದ್ದಳು. ಆತನೇನೂ ಜಿಪುಣನಾಗಿರಲಿಲ್ಲ, ಬದಲಿಗೆ ಜಾನಿಯ ವಿಷಯದಲ್ಲಿ ಉದಾರಿಯೇ ಆಗಿದ್ದ.

"ನನಗೇನಾದರೂ ಹೆಚ್ಚುಕಮ್ಮಿಯಾದರೆ ನೀನು ಸುಖವಾಗಿರಬಹುದು, ಚಿಂತೆ ಬೇಡ" ಎಂದೇ ಮಾರ್ಸೆಲ್ ಹೇಳುವುದಿತ್ತು. ಅಗತ್ಯಗಳಿಗೆ ಬೇಕಾದ ರಕ್ಷಣೆ ಇರಲೇಬೇಕು. ಆದರೆ, ತೀರ ಸರಳ ಅಗತ್ಯಗಳನ್ನು ಹೊರತುಪಡಿಸಿದರೆ ಆಕೆ ರಕ್ಷಣೆಗಾಗಿ ಎಲ್ಲಿ ಮೊರೆಯಿಡಬಹುದಿತ್ತು? ಆಗೀಗ ಗೊಂದಲಕ್ಕೊಳಗಾಗಿ ಇಂಥದ್ದರ ಕುರಿತೇ ಜಾನಿ ತಲೆಕೆಡಿಸಿಕೊಳ್ಳುವುದಿತ್ತು. ಅದೇನೇ ಇದ್ದರೂ ಮಾರ್ಸೆಲ್‌ನ ಅಂಗಡಿಯ ಲೆಕ್ಕಪತ್ರಗಳ ದೇಖರೇಖಿ, ಪಾಳಿಯಂತೆ ಅಂಗಡಿಯಲ್ಲಿ ವ್ಯಾಪಾರದ ಉಸ್ತುವಾರಿಯನ್ನು ಆಕೆ ವಹಿಸಿಕೊಳ್ಳುತ್ತಿದ್ದಳು. ಅತ್ಯಂತ ಕಠಿಣ ಸಮಯವೆಂದರೆ ಬೇಸರದ ಸಿಹಿ ಅನುಭವವನ್ನು ಕೂಡ ಕೊಲುವ ಬೇಸಿಗೆಯೇ.

ನಡುಬೇಸಿಗೆಯಲ್ಲಿ ಹೇಳದೆ-ಕೇಳದೆ ಯುದ್ಧ ಆರಂಭಗೊಂಡಿತ್ತು. ಸೈನ್ಯದಿಂದ ತಿರಸ್ಕೃತಗೊಂಡ, ಕೊರತೆಯಿರುವಂತಹ ಜವಳಿಯನ್ನು ಮಾರ್ಸೆಲ್ ಸಂಗ್ರಹಿಸಿದ್ದ. ಸ್ಥಗಿತಗೊಂಡ ವ್ಯಾಪಾರ, ಬೇಯುವ ಜನರಿಲ್ಲದೆ ಬಿಕೋ ಎನ್ನುವ ಬೀದಿಗಳು. ಈಗೇನಾದರೂ ಆದರೆ ಆಕೆಯನ್ನು ರಕ್ಷಿಸುವವರು ಯಾರೂ ಇರುವುದಿಲ್ಲ. ಆದ್ದರಿಂದಲೇ ಮಾರುಕಟ್ಟೆಗೆ ಮರಳಿ ಜವಳಿ ಬಂದಿದ್ದೇ ಘಟ್ಟದ ಮೇಲಿನ ಹಳ್ಳಿಗಳಿಗೆ, ಪಶ್ಚಿಮದ ಕಡೆಗೆ, ದಳ್ಳಾಳಿಗಳನ್ನು ತಪ್ಪಿಸಿ ನೇರವಾಗಿ ಅರಬ್ ವ್ಯಾಪಾರಿಗಳೊಂದಿಗೆ ವಹಿವಾಟು ನಡೆಸಲು ನಿರ್ಧರಿಸಿದ್ದ ಮಾರ್ಸೆಲ್, ಪ್ರಯಾಣಕ್ಕೆ ಸಿದ್ಧನಾಗಿದ್ದ. ಹೆಂಡತಿಯನ್ನು ತನ್ನೊಂದಿಗೆ ಕರೆದೊಯ್ಯಲು ಬಯಸಿದ್ದ. ಉಬ್ಬಸದ ತೊಂದರೆಯಿದ್ದ ಆಕೆಗೆ ಪ್ರಯಾಣ ಪ್ರಯಾಸಕರವಾಗಿರುತ್ತದೆ ಎಂದು ತಿಳಿದಿತ್ತು. ಹಾಗೆಂದೇ, ಊರಲ್ಲಿಯೇ ಆತನಿಗಾಗಿ ಕಾಯಲು ಸಿದ್ಧವಿದ್ದಳು. ಆದರೆ ಆತ ಹಠಕ್ಕೆ ಬಿದ್ದಿದ್ದ. ಮಾರ್ಸೆಲ್‌ನನ್ನು ಒಪ್ಪಿಸಲು ಅಗಾಧ ಪ್ರಮಾಣದ ಶಕ್ತಿ ವ್ಯಯವಾಗುತ್ತದೆಂದು ಆಕೆಯೂ ಸಮ್ಮತಿಸಿದ್ದಳು. ಇದೀಗ ಅವರು ಇಲ್ಲಿದ್ದರು. ಜಾನಿ ಅಂದುಕೊಂಡಂತೆ ಯಾವುದೂ ಇಲ್ಲಿರಲಿಲ್ಲ. ಬಿಸಿಲು, ನೊಣಗಳ ಹಿಂಡು, ಸೋಂಪಿನ ಬೀಜಗಳ ವಾಸನೆ ಸೂಸುವ ಗಬ್ಬು ಹೊಟೇಲುಗಳನ್ನು ಕನಸಿ ಆಕೆ ಬೆಚ್ಚಿದ್ದಳು. ಉತ್ತರ ಧ್ರುವದಲ್ಲಿನಂತೆ ಕೊರೆವ ಗಾಳಿ, ಚಳಿಯನ್ನು ಆಕೆ ಖಂಡಿತ ಊಹಿಸಿರಲಿಲ್ಲ. ತಾಳೆ ಮರಗಳು, ಮೃದುವಾದ ಮರಳನ್ನು ಕೂಡ ಆಕೆ ಕನಸಿದ್ದಳು. ಆದರೆ ಇಲ್ಲಿ ಎಲ್ಲೆಲ್ಲಿಯೂ ಕಲ್ಲುಗಳು ತುಂಬಿದ್ದವು. ಆಕಾಶದುದ್ದಕ್ಕೂ ಹಬ್ಬಿದ ಚಳಿ, ಒಣ ಗರಿಕೆ ಚಿಗುರುವ ನೆಲದ ತುಂಬ ಕಲ್ಲು ರಾಶಿ ಹೀಗೆ ಮರುಭೂಮಿ ಆಕೆಯ ಎದುರು ತೆರೆದು ನಿಂತಿತ್ತು.

ಬಸ್ಸು ದಿಢೀರನೆ ನಿಂತಿತು. ಚಾಲಕ ಏನೋ ಮಣಮಣಿಸಿದ. ಆ ಭಾಷೆಯನ್ನು ಬಿಮುಕಿಟೀ ತಲಿಸುತ್ತ ಬಂದಿದ್ದರೂ ಅರ್ಥವಾಗುತ್ತಿರಲಿಲ್ಲ. "ಏನಾಯಿತು?" ಮಾರ್ಸೆಲ್ ಕೇಳಿದ. ಇದೀಗ ಚಾಲಕ ಫ್ರೆಂಚ್‌ನಲ್ಲಿ ಇಂಜಿನ್‌ನಲ್ಲಿ ಉಸುಕು ಸೇರಿಕೊಂಡಿರಬೇಕು ಎಂದು ಹೇಳಿದ. ಮಾರ್ಸೆಲ್ ಮತ್ತೆ ದೇಶವನ್ನು ಶಪಿಸಿದ. ಬಾಯಗಲಿಸಿ ನಕ್ಕ ಚಾಲಕ, ಇದೇನೂ ಚಿಂತಿಸುವ ವಿಷಯ ಅಲ್ಲವೆಂದು, ಕ್ಷಣಾರ್ಧದಲ್ಲಿ ಮರಳನ್ನು ಸ್ವಚ್ಛಗೊಳಿಸುವುದಾಗಿಯೂ ಪ್ರಯಾಣ ಮತ್ತೆ ಎಂದಿನಂತೆ ಮುಂದುವರೆಯಲಿದೆ ಎಂದು ಆಶ್ವಾಸನೆ ನೀಡಿದ. ಚಾಲಕ ಬಾಗಿಲು ತೆಗೆದದ್ದೇ ತಣ್ಣಗೆ ಕೊರೆಯುವ ಮರಳಿನ ಕಣಗಳು ಒಳನುಗ್ಗಿ ಮುಖಕ್ಕೆ ಬಡಿದವು. ಎಲ್ಲ ಅರಬರೂ ಮೂಗನ್ನು ತಮ್ಮ ಬುರ್ನಾಸಿನೊಳಗೆ ತೂರಿಸಿ ಹೂತುಹೋದರು. "ಬಾಗಿಲು ಮುಚ್ಚಿ" ಮಾರ್ಸೆಲ್ ಕೂಗಿಕೊಂಡ. ಚಾಲಕ ನಗುತ್ತ ಬಾಗಿಲಿನ ಬಳಿ ಬಂದ. ಡ್ಯಾಶ್‌ಬೋರ್ಡಿನಿಂದ ಕೆಲವು ಪರಿಕರಗಳನ್ನು ಎತ್ತಿಕೊಳ್ಳುತ್ತ ಬಸ್ಸಿನ ಮುಂಭಾಗ ತಲುಪಲು ಮಂಜಿನಲ್ಲಿ ಮರೆಯಾದ. ಬೇಕೆಂದೇ ಎನ್ನುವಂತೆ ಬಾಗಿಲು ಮುಚ್ಚಲಿಲ್ಲ. "ಆತ ಬದುಕಿನಲ್ಲಿಯೇ ಎಂಜಿನ್ ಎಂದರೇನೆಂದು ನೋಡಿರಲಿಕ್ಕಿಲ್ಲ, ಬೇಕಾದರೆ ಪಣ ಕಟ್ಟುವೆ" ಮಾರ್ಸೆಲ್ ಗೊಣಗಿಕೊಂಡ. "ಆಯಿತು ಬಿಡು" ಜಾನಿ ಹೇಳಿದಳು.

ಹೊರಗೆ ಬಸ್ಸಿನ ಪಕ್ಕದಲ್ಲಿಯೇ ನಿಲುವಂಗಿಗಳನ್ನು ಧರಿಸಿದ ನಿಶ್ಚಲ ಆಕೃತಿಗಳನ್ನಾಕೆ ಕಂಡಳು. ಹೊದಿಕೆಯಿಂದ ತುಂಬಿ ಹೋಗಿದ್ದ ದೇಹದ ಪಿಳಿ ಕಣ್ಣುಗಳು ಮಾತ್ರ ಕಾಣುತ್ತಿದ್ದವು. ಪ್ರಯಾಣಿಕರನ್ನು ಬಿಡುಗಣ್ಣಿಂದ ಅವರು ನೋಡುತ್ತಿದ್ದರು. "ಕುರಿಗಾಹಿಗಳು" ಮಾರ್ಸೆಲ್ ಉಸುರಿದ.

ಬಸ್ಸಿನೊಳಗೆ ನೀರವ ಮೌನವಿತ್ತು. ಅಂತವಿರದ ದಿಗಂತಗಳಿಂದ ಬೀಸುತ್ತಿದ್ದ ಗಾಳಿಯ ದನಿಯನ್ನು ಕೇಳುವಂತೆ ಅವರೆಲ್ಲ ತಲೆ ತಗ್ಗಿಸಿ ಕುಳಿತಿದ್ದರು. ಜಾನಿಗೆ ಮರೆತೇಹೋಗಿದ್ದ ಲಗೇಜು ಇದ್ದಕ್ಕಿದ್ದಂತೆ ಎಂಬಂತೆ ನೆನಪಿಗೆ ಬಂತು. ರೇಲ್ವೆ ಸ್ಟೇಶನ್ ಬಳಿ ಚಾಲಕನೇ ಅವರ ಟ್ರಂಕು ಮತ್ತು ಕೆಲವು ಗಂಟುಗಳನ್ನು ಬಸ್ಸಿನ ಮೇಲೆ ಹೇರಿಸಿದ್ದ. ಒಳಗೆ ತಲೆಯ ಮೇಲುಭಾಗದಲ್ಲಿ ಸಾಮಾನಿಡುವ ಸ್ಥಳಗಳಲ್ಲಿ ಸುಕ್ಕುಸುಕ್ಕಾದ ಕೋಲು, ಖಾಲಿ ಚೀಲಗಳನ್ನು ಮಾತ್ರ ಕಾಣಬಹುದಿತ್ತು. ದಕ್ಷಿಣದಿಂದ ಪ್ರಯಾಣಿಸುತ್ತಲಿದ್ದ ಇವರೆಲ್ಲ ಖಾಲಿ ಕೈಗಳಿಂದ ಬಂದವರೆಂಬುದು ಎದ್ದು ಕಾಣುತ್ತಿತ್ತು.

ಚಾಲಕ ಮರಳಿ ಬಂದಾಗ ಎಂದಿನಂತೆ ಚುರುಕಾಗಿದ್ದ. ಎಲ್ಲರಂತೆ ಅವನೂ ನಿಲುವಂಗಿ ಹೊದ್ದಿದ್ದು ಕಣ್ಣುಗಳು ಮಾತ್ರ ಮಿಂಚುತ್ತಿದ್ದವು. ಪ್ರಯಾಣ ಮುಂದುವರೆಯಲಿದೆ ಎಂದು ಘೋಷಿಸಿದ. ಒಳಬಂದು ಬಾಗಿಲನ್ನು ಮುಚ್ಚಿದ್ದೇ ಗಾಳಿಯ ಶಬ್ದ ಅಡಗಿ, ಕಿಟಕಿಗೆ ಮಳೆಯಂತೆ ರಾಚುವ ಮರಳಿನ ಸದ್ದು ಕೇಳತೊಡಗಿತು. ಎಂಜಿನ್ ಕರಕರ ಸಪ್ಪಳ ಮಾಡಿತು. ಚಾಲಕ ತುಸು ಹೊತ್ತು ಸರ್ಕಸ್ ಮಾಡಿದ ಮೇಲೆ ಎಂಜಿನ್ ಚಾಲೂ ಆಗಿ ಪಯಣ ಮುಂದುವರೆಯಿತು. ಚಿಂದಿಯ ಮುದ್ದೆಯಂತೆ ನಿಶ್ಚಲವಾಗಿ ನಿಂತಿದ್ದ ಕುರಿಗಾಹಿಗಳ ಗುಂಪಿನಿಂದ ಕೈಯೊಂದು ಮೇಲಕ್ಕೆದ್ದಿತು. ತಕ್ಷಣವೇ ಅವರ ಹಿಂದೆ ಮರೆಯಾದ ಮಂಜಿನಲ್ಲಿ ಸೇರಿಹೋಯಿತು. ಕಚ್ಚಾರಸ್ತೆಯಲ್ಲಿ ಬಸ್ಸು ಕುಕ್ಕುತ್ತ ಸಾಗತೊಡಗಿತು. ಧಕ್ಕೆಗೆ ಅರಬರು ಹಿಂದೆಮುಂದೆ ತೂಗಿದರು. ಹಣ್ಣಿನ ರಸದ ಪುಟ್ಟ ಡಬ್ಬಿ ಆಕೆಯ ಕಣ್ಣೆದುರು ಕಂಡಾಗ ಜಾನಿ ನಿದ್ರೆಗೆ ಜಾರುತ್ತಿದ್ದಳು. ಫ್ರೆಂಚ್ ಸೈನಿಕ ಆಕೆಯೆದುರು ನಗುತ್ತಲಿದ್ದ. ಆಕೆ ಸಂಕೋಚದಿಂದ ತೆಗೆದುಕೊಳ್ಳುತ್ತ ಕೃತಜ್ಞತೆ ಸೂಚಿಸಿದಳು. ಸೈನಿಕ ಡಬ್ಬಿಯನ್ನು ತೆಗೆದುಕೊಂಡು ತನ್ನ ಕಿಸೆಯೊಳಗೆ ಇಳಿಸಿ ನಗುವನ್ನು ಸೂಸಿದ. ಇದೀಗ ಆತನ ಕಣ್ಣುಗಳು ರಸ್ತೆಯತ್ತ ನೆಟ್ಟಿದ್ದವು. ಜಾನಿ ಮಾರ್ಸೆಲ್‌ನತ್ತ ತಿರುಗಿ ನೋಡಿದಾಗ ಆತನ ಬಲಿಷ್ಠ ಕತ್ತು ಕಾಣಿಸಿತು. ಆತ ಕಿಟಕಿಯ ಮೂಲಕ ದಿಗಂತದಲ್ಲಿ ಏಳುತಿದ್ದ ದಟ್ಟವಾದ ಮಂಜನ್ನು ದಿಟ್ಟಿಸುತ್ತಿದ್ದ. ಪಯಣದಲ್ಲಿ ಅವರು ಗಂಟೆಗಳನ್ನೇ ಕಳೆದಿದ್ದರು, ಹೊರಗಡೆಯಿಂದ ಭಾರಿ ಸದ್ದು ಕೇಳಿಸಿದ್ದೇ ಬಸ್ಸಿನೊಳಗಿನ ಜೀವಿಗಳಿಗೆ ಉಸಿರು ತುಂಬಿಬಂತು. ನಿಲುವಂಗಿಗಳಲ್ಲಿದ್ದ ಮಕ್ಕಳು, ಬುಗುರಿಯಂತೆ ಸುತ್ತುತ್ತ, ಚಪ್ಪಾಳೆ ತಟ್ಟಿ ನೆಗೆಯುತ್ತ ಬಸ್ಸಿನೊಳಗೆ ಓಡಾಡತೊಡಗಿದರು. ಬಸ್ಸು ಇಳಿದಾದ ಉದ್ದನೆಯ ಬೀದಿಯಲಿ ಹೋಗುತ್ತಿತ್ತು; ಅವರು ಇದೀಗ ಒಯಸಿಸ್ ತಲುಪುತ್ತಿದ್ದರು. ಗಾಳಿಯ ರಭಸ ಕಡಿಮೆಯಾಗಿರಲಿಲ್ಲವಾದರೂ ಮಣ್ಣಿನ ಗೋಡೆಗಳು ಮರಳಿನ ಕಣವನ್ನು ತಡೆಹಿಡಿಯುತ್ತಿದ್ದವು. ಹೀಗಾಗಿ, ಬೆಳಕು ಸ್ಪಟಿಕವಾಗಿತ್ತು. ಹಾಗೆಂದು ಆಕಾಶ ತಿಳಿಯಾಗಿದೆ ಎನ್ನುವಂತಿರಲಿಲ್ಲ.

ಕರ್ಕಶ ಸದ್ದು ಮಾಡುತ್ತ ಬಸ್ಸು ಹೊಟೇಲಿನ ಕಮಾನು ಹಾದು ದೂಳುಮಯ ಕಿಟಕಿಯೆದುರು ನಿಂತಿತು. ಜಾನಿ ಕೆಳಗೆ ಇಳಿದದ್ದೇ ಆಕೆಗೆ ತಲೆಸುತ್ತು ಬಂದಂತಾಯಿತು. ತನ್ನ ಎಡಭಾಗಕ್ಕೆ ಓಯಸಿಸ್‌ನ ಮೊದಲ ತಾಳೆ ಮರವನ್ನು ಆಕೆ ಕಂಡಳು. ಮಧ್ಯಾಹ್ನವಾಗಿದ್ದರೂ ಚಳಿ ಕೊರೆಯುತ್ತಿತ್ತು; ಗಾಳಿ ನಡುಕ ಹುಟ್ಟಿಸುತ್ತಿತ್ತು. ಮಾರ್ಸೆಲ್‌ನತ್ತ ತಿರುಗಿದಾಗ ಬಸ್‌ನಲ್ಲಿ ಕಂಡ ಸೈನಿಕ ಆಕೆಯತ್ತ ಬರುತ್ತಿರುವುದನ್ನು ನೋಡಿದಳು. ನಗು ಮತ್ತು ಶುಭನುಡಿಯನ್ನು ಆಕೆ ನಿರೀಕ್ಷಿಸಿದ್ದಳು. ಆದರೆ ಆತನಾದರೂ ಅವಳತ್ತ ನೋಟ ಕೂಡ ಹಾಯಿಸದೆ ತನ್ನ ಬಟ್ಟೆಗಳ ಟ್ರಂಕ್‌ನೊಂದಿಗೆ ಮರೆಯಾದುದು ಅಚ್ಚರಿ ತಂದಿತು. ಕಪ್ಪನೆಯ ಹಮಾಲನೊಬ್ಬ ಬಸ್ಸಿನ ಮೇಲಿನಿಂದ ಸಾಮಾನುಗಳನ್ನು ಇಳಿಸುತ್ತಿದ್ದ. ಬಸ್ಸಿನ ಮೇಲೆ ನಿಂತಿದ್ದ ಚಾಲಕ ಈವರೆಗೂ ಲಗೇಜ್‌ಗಳ ಬಗ್ಗೆ ತಲೆ ಕೆಡಿಸಿಕೊಂಡಂತ್ತಿದ್ದವನು ಇದೀಗ ನಿರಾಳವಾಗಿದ್ದ. ನಿಲುವಂಗಿಗಳನ್ನು ತೊಟ್ಟಿದ್ದ ವ್ಯಕ್ತಿಗಳು ಬಸ್ಸಿನ ಕೆಳಗೆ ಕಾಯುತ್ತ ನಿಂತಿದ್ದರು. ಆಕೆ ಇದ್ದಕ್ಕಿದ್ದಂತೆ ಅಸ್ವಸ್ಥಳಾದಳು. ನಾನು ಹೊಟೇಲಿಗೆ ಹೋಗುತ್ತಿದ್ದೇನೆ, ಆಕೆ ಮಾರ್ಸೆಲ್‌ಗೆ ನುಡಿದಳು. ಮಾರ್ಸೆಲ್, ತಾಳ್ಮೆಗೆಟ್ಟು ಚಾಲಕನಿಗೆ ಬೈಯುತ್ತಿದ್ದ.

ಜಾನಿ ಹೊಟೆಲ್ ಪ್ರವೇಶಿಸಿದಳು. ತೆಳ್ಳಗೆ, ಮುಗುಂಮ್ಮಾಗಿ ಕಾಣುತ್ತಿದ್ದ ಫ್ರೆಂಚ್ ಮ್ಯಾನೇಜರ್ ಆಕೆಯೆದುರು ಪ್ರತ್ಯಕ್ಷನಾದ. ಮೊದಲ ಮಹಡಿಗೆ ಕರೆದೊಯ್ದು, ಬೀದಿಯತ್ತ ಗ್ಯಾಲರಿಯನ್ನು ಹೊಂದಿದ ಕೋಣೆಯನ್ನು ಒಪ್ಪಿಸಿದ. ಕೋಣೆಯಲ್ಲಿ ಕಬ್ಬಿಣದ ಮಂಚ ಮತ್ತು ಬಿಳಿಬಣ್ಣ ಬಳಿದ ಒಂದು ಕುರ್ಚಿ ಮಾತ್ರ ಇದ್ದವು. ಪರದೆಗಳಿಲ್ಲದ ವಾರ್ಡ್‌ರೋಬ್, ಹಿಂಬದಿಗೆ ಮರಳು ತುಂಬಿದ್ದ ಕಕ್ಕಸುಮನೆ. ಮ್ಯಾನೇಜರ್ ಬಾಗಿಲನ್ನು ಮುಚ್ಚಿ ಹೋದದ್ದೇ ತಣ್ಣನೆಯ ಗಾಳಿ ಬಿಳಿ ಗೋಡೆಗಳಿಂದ ಬರುತ್ತಿದೆ ಎಂದು ಜಾನಿ ಭಾವಿಸಿದಳು. ತನ್ನ ಚೀಲವನ್ನು ಎಲ್ಲಿಡಬೇಕು, ತಾನೆಲ್ಲಿ ಕುಳಿತುಕೊಳ್ಳಬೇಕೆಂದು ಆಕೆ ಗೊಂದಲಕ್ಕೆ ಬಿದ್ದಳು. ವಿರಾಮವಾಗಿ ಕುಳಿತರೂ, ನಿಂತರೂ ನಡುಗುವುದೇನೂ ತಪ್ಪುತ್ತಿರಲಿಲ್ಲ. ಆಕೆ ಕೈಯಲ್ಲಿ ಚೀಲವನ್ನು ಹಿಡಿದು, ಆಕಾಶಕ್ಕೆ ತೆರೆದುಕೊಂಡ ಛಾವಣಿಯ ಬಳಿಯಿದ್ದ ಕಿಟಕಿಯತ್ತ ನೋಡುತ್ತ ನಿಂತೇ ಇದ್ದಳು. ಯಾಕೆಂದು ತಿಳಿಯದೇ ಕಾಯುತ್ತ ನಿಂತಳು. ತೀವ್ರ ಒಂಟಿತನ, ಕೊರೆವ ಚಳಿ, ಭಾರವಾದ ಹೃದಯದಿಂದ ಆಕೆ ಬಳಲಿದಳು. ಬೀದಿಯಿಂದ ಬರುತ್ತಿದ್ದ ಸದ್ದು, ಬಸ್ಸಿನ ಬಳಿ ಗಂಟಲು ಹರಿದುಕೊಳ್ಳುತ್ತಿದ್ದ ಮಾರ್ಸೆಲ್‌ನ ಧ್ವನಿಯನ್ನು ಮರೆತು ಆಕೆ ಕನಸುತ್ತಿದ್ದಳು. ಕಿಟಕಿಯಿಂದ ಹರಿದುಬರುತ್ತಿದ್ದ ಗಾಳಿ ನದಿಯ ಸಪ್ಪಳಕ್ಕೆ ತೆರೆದುಕೊಂಡು, ತಾಳೆ ಮರಗಳು ಸೂಸುತ್ತಿದ್ದ ಸದ್ದು ತನಗೆ ಎಷ್ಟೊಂದು ಹತ್ತಿರವಾಗಿದೆ ಎಂದು ಅನ್ನಿಸಿತು. ಗಾಳಿ ಮತ್ತಷ್ಟು ಬಲವಾಯಿತು, ನೀರಿನ ಅಲೆಗಳ ಶಬ್ದ ಜೋರಾಯಿತು. ಆಕೆ ಗೋಡೆಯಾಚೆಗೆ ಸಮುದ್ರದಂತೆ ಚಾಚಿದ ಸಪೂರ ನೇರ ತಾಳೆಮರಗಳು ತೊನೆಯುತ್ತಿರುವಂತೆ ಕನಸಿದಳು. ಆಕೆ ಕನಸಿದಂತೆ ಯಾವುದೂ ಇರಲಿಲ್ಲ. ಆದರೆ ದಣಿದ ಆಕೆಯ ಕಣ್ಣುಗಳಿಗೆ ಹಾಗೆನ್ನಿಸಿತಷ್ಟೇ. ಭಾರವಾಗಿ ಕೈಗಳನ್ನು ಇಳಿಬಿಟ್ಟು ನಿಂತಿದ್ದ ಆಕೆಯ ಕಾಲುಗಳಿಂದ ನಿಧಾನ ಚಳಿ ಮೇಲಕ್ಕೇರುತ್ತಿತ್ತು. ನೇರ, ಸಪೂರವಾಗಿದ್ದ ತಾಳೆಮರಗಳನ್ನು ನೋಡುತ್ತ ಅವಳು ತಾನು ತರುಣಿಯಾದಂತೆ ಕನಸಿದಳು.

ಕರ್ಕಶ ಸದ್ದು ಮಾಡುತ್ತ ಬಸ್ಸು ಹೊಟೇಲಿನ ಕಮಾನು ಹಾದು ದೂಳುಮಯ ಕಿಟಕಿಯೆದುರು ನಿಂತಿತು. ಜಾನಿ ಕೆಳಗೆ ಇಳಿದದ್ದೇ ಆಕೆಗೆ ತಲೆಸುತ್ತು ಬಂದಂತಾಯಿತು. ತನ್ನ ಎಡಭಾಗಕ್ಕೆ ಓಯಸಿಸ್‌ನ ಮೊದಲ ತಾಳೆ ಮರವನ್ನು ಆಕೆ ಕಂಡಳು. ಮಧ್ಯಾಹ್ನವಾಗಿದ್ದರೂ ಚಳಿ ಕೊರೆಯುತ್ತಿತ್ತು; ಗಾಳಿ ನಡುಕ ಹುಟ್ಟಿಸುತ್ತಿತ್ತು. ಮಾರ್ಸೆಲ್‌ನತ್ತ ತಿರುಗಿದಾಗ ಬಸ್‌ನಲ್ಲಿ ಕಂಡ ಸೈನಿಕ ಆಕೆಯತ್ತ ಬರುತ್ತಿರುವುದನ್ನು ನೋಡಿದಳು. ನಗು ಮತ್ತು ಶುಭನುಡಿಯನ್ನು ಆಕೆ ನಿರೀಕ್ಷಿಸಿದ್ದಳು. ಆದರೆ ಆತನಾದರೂ ಅವಳತ್ತ ನೋಟ ಕೂಡ ಹಾಯಿಸದೆ ತನ್ನ ಬಟ್ಟೆಗಳ ಟ್ರಂಕ್‌ನೊಂದಿಗೆ ಮರೆಯಾದುದು ಅಚ್ಚರಿ ತಂದಿತು. ಕಪ್ಪನೆಯ ಹಮಾಲನೊಬ್ಬ ಬಸ್ಸಿನ ಮೇಲಿನಿಂದ ಸಾಮಾನುಗಳನ್ನು ಇಳಿಸುತ್ತಿದ್ದ. ಬಸ್ಸಿನ ಮೇಲೆ ನಿಂತಿದ್ದ ಚಾಲಕ ಈವರೆಗೂ ಲಗೇಜ್‌ಗಳ ಬಗ್ಗೆ ತಲೆ ಕೆಡಿಸಿಕೊಂಡಂತ್ತಿದ್ದವನು ಇದೀಗ ನಿರಾಳವಾಗಿದ್ದ. ನಿಲುವಂಗಿಗಳನ್ನು ತೊಟ್ಟಿದ್ದ ವ್ಯಕ್ತಿಗಳು ಬಸ್ಸಿನ ಕೆಳಗೆ ಕಾಯುತ್ತ ನಿಂತಿದ್ದರು.

ಶುಚಿಯಾಗಿ ಅವರು ಕೆಳಗಿನ ಊಟದ ಕೋಣೆಗೆ ನಡೆದರು. ಗೋಡೆಗಳಿಗೆ ನೇರಳೆ ಮತ್ತು ಗುಲಾಬಿ ಬಣ್ಣದ ತಾಳೆಮರ ಮತ್ತು ಒಂಟೆಗಳ ಪೆಯಿಂಟಿಂಗ್‌ಗಳನ್ನು ನೇತು ಹಾಕಿದ್ದರು. ಕಮಾನಾಕಾರದ ಕಿಟಕಿ ಕೊಂಚ ಮಾತ್ರ ಬೆಳಕಿಗೆ ತೆರೆದುಕೊಂಡಿತ್ತು. ಮಾರ್ಸೆಲ್, ಹೊಟೇಲ್ ಮ್ಯಾನೇಜರನಿಂದ ವ್ಯಾಪಾರಿಗಳ ಕುರಿತು ಮಾಹಿತಿಯನ್ನು ಕಲೆಹಾಕಿದ್ದ. ಸೈನ್ಯದ ದಿರಿಸಿನಲ್ಲಿದ್ದ ವಯಸ್ಸಾದ ಅರಬನೊಬ್ಬ ಅವರಿಗೆ ಬಡಿಸಿದ. ಹೆಂಡತಿ ನೀರು ಕುಡಿಯುತ್ತಿದ್ದುದನ್ನು ಗಮನಿಸಿ, ಅದನ್ನು ಕಾಯಿಸಿ ಆರಿಸಿರೋಲ್ಲ, ಕುಡಿಬೇಡ. ವೈನ್ ಕುಡಿ ಎಂದ. ವೈನ್ ಅಮಲು ತರಿಸುತ್ತಿದ್ದುದರಿಂದ ಆಕೆ ಇಷ್ಟ ಪಡಲಿಲ್ಲ. ಹಂದಿಮಾಂಸದ ಊಟವೂ ಲಭ್ಯವಿತ್ತು. "ಕುರಾನ್ ಅದನ್ನು ನಿಷೇಧಿಸುತ್ತದೆ". "ಆದರೆ ಹದವಾಗಿ ಬೇಯಿಸಿದ ಹಂದಿ ಮಾಂಸದಿಂದ ಜನರಿಗೆ ಕಾಯಿಲೆ ಬರುವುದಿಲ್ಲ ಎಂದು ಕುರಾನ್ ಅರಿತಿರಲಿಲ್ಲ. ನಾವು ಫ್ರೆಂಚರು ಅದನ್ನು ಹೇಗೆ ಹದವಾಗಿ ಬೇಯಿಸಬೇಕು ಎಂಬುದನ್ನು ಬಲ್ಲೆವು. ಏನು ಯೋಚನೆ ಮಾಡ್ತಾ ಇದೀಯ?" ಜಾನಿ

ಏನೂ ಯೋಚಿಸುತ್ತಿರಲಿಲ್ಲ. ಅಥವ ಪ್ರವಾದಿಗಳ ಮೇಲೆ ಬಾಣಸಿಗನ ಮಾತುಗಳ ಪರಿಣಾಮದ ಕುರಿತೂ ಇದ್ದರೂ ಇರಬಹುದು. ಊಟ ತ್ವರಿತವಾಗಿ ಮುಗಿಸಬೇಕಿತ್ತು. ಮರುದಿನ ಅವರು ದಕ್ಷಿಣದ ಒಳಭಾಗಕ್ಕೆ ಪ್ರಯಾಣ ಬೆಳೆಸಬೇಕಿತ್ತು. ಮಧ್ಯಾಹ್ನದೊಳಗೆ ಮುಖ್ಯ ವರ್ತಕರನ್ನು ಮಾರ್ಸೆಲ್ ಭೇಟಿಯಾಗುವುದಿತ್ತು. ಕಾಫಿ ತರುವಂತೆ ವಯಸ್ಸಾದ ಅರಬ್ ಸಪ್ಲೆಯರ್‌ನಿಗೆ ಮಾರ್ಸೆಲ್ ಕೇಳಿಕೊಂಡ. ಆತ ಗಂಭೀರವಾಗಿ ತಲೆ ಅಲುಗಿಸಿ ಮರಳಿದ. "ಬೆಳಗಿನ ಹೊತ್ತು ನಿಧಾನ, ಸಂಜೆ ಹೊತ್ತು ನಿರಾಳ ಆರಾಮವಾಗಿ" ಎಂದು ಸಪ್ಲೆಯರ್‌ನನ್ನು ನೋಡುತ್ತ ಮಾರ್ಸೆಲ್ ನಕ್ಕ. ಕೊನೆಗೂ ಕಾಫಿ ಬಂತು. ತಕ್ಷಣವೇ ಗುಟುಕರಿಸಿ ಚಳಿ ಮತ್ತು ದೂಳು ತುಂಬಿದ ರಸ್ತೆಯನ್ನು ತುಳಿದರು.

ಟ್ರಂಕ್ ಹೊರಲು ತರುಣ ಅರಬನೊಬ್ಬನನ್ನು ಕರೆದ ಮಾರ್ಸೆಲ್, ಕೂಲಿಯ ಕುರಿತು ಚೌಕಾಸಿ ನಡೆಸಿದ. "ಕೇಳಿದ್ದರಲ್ಲಿ ಮುಕ್ಕಾಲು ಭಾಗದರೂ ಸಿಗಲಿ ಅಂತ ಮೊದಲಿಗೇ ದುಪ್ಪಟ್ಟು ಕೇಳುತ್ತಾರೆ. ನಾನು ಬಿಡುತ್ತೀನ?", ಎಂದು ಮಾರ್ಸೆಲ್ ತನ್ನ ಚೌಕಾಸಿ ಸಿದ್ಧಾಂತವನ್ನು ಈ ಹಿಂದೆ ಅನೇಕ ಸಲ ಹೇಳಿದಂತೆಯೇ ಜಾನಿಗೆ ಹೇಳಿದ. ಬಸವಳಿದಿದ್ದರೂ ಸಾವರಿಸಿ ಜಾನಿ ಇಬ್ಬರೂ ಹೊರೆಯಾಳುಗಳ ಹಿಂದೆ ನಡೆದಳು. ತನ್ನ ಭಾರೀ ಕೋಟಿನೊಳಗೆ ಆಕೆ ಉಣ್ಣೆಯ ದಿರಿಸನ್ನು ತೊಟ್ಟಿದ್ದಳು. ಕಡಿಮೆ ಹೊರೆಯ ಬಟ್ಟೆಯಾದರೆ ಚೆನ್ನವೆಂದು ಆಕೆಗೆ ಅನ್ನಿಸಿತ್ತು. ಹಂದಿಮಾಂಸವನ್ನು ಹದವಾಗಿ ಬೇಯಿಸಿದ್ದರೂ, ವೈನ್‌ಅನ್ನು ತುಸುವೇ ಸೇವಿಸಿದ್ದರೂ ಆಕೆಗೆ ಮಳಮಳ ಅನ್ನಿಸತೊಡಗಿತ್ತು.

ದೂಳುಮಯ ಮರಗಳಿದ್ದ ಚಿಕ್ಕ ಉದ್ಯಾನವನವನ್ನು ಅವರು ಹಾದು ಹೋದರು. ಕೆಳಗಿಳಿಬಿದ್ದ ತಮ್ಮ ನಿಲುವಂಗಿಗಳನ್ನು ಕೈಯಲ್ಲಿ ಹಿಡಿದುಕೊಂಡು ಸಾಗುತ್ತಿದ್ದ ಅರಬರು ಇವರತ್ತ ದಿಟ್ಟಿಸದೆ ದಾರಿ ಬಿಟ್ಟು ಹೋಳಾಗುತ್ತಿದ್ದರು. ಅವರು ತೊಟ್ಟಿದ್ದ ಬಟ್ಟೆಗಳು ಮಾಸಲಾಗಿದ್ದರೂ ತನ್ನೂರಿನ ಅರಬರಲ್ಲಿ ಇಲ್ಲದ ಒಂದು ರೀತಿಯ ಘನತೆಯನ್ನು ಹೊಂದಿರುವಂತೆ ಜಾನಿಗೆ ಭಾಸವಾಯಿತು. ಸಂದಣಿಯಲ್ಲಿ ದಾರಿ ಮಾಡಿಕೊಡುತ್ತಿದ್ದ ಟ್ರಂಕಿನ ಹಿಂದೆ ಜಾನಿ ನಡೆಯುತ್ತಿದ್ದಳು. ಕೆಮ್ಮಣ್ಣಿನ ಗೋಡೆಯೊಂದನ್ನು ಬಳಸಿ ಅವರು ನಡೆದರು. ಅಂಗಡಿಗಳು, ದೂಳು ತುಂಬಿದ ಮರಗಳಿರುವ ಚೌಕದಲ್ಲಿ ಗೋಡೆ ಕೊನೆಗೊಂಡಿತ್ತು. ಅವರು ಚೌಕದಲ್ಲಿಯೇ ತುಸು ನಿಂತರು. ಅದರೆದುರು ಚಿಕ್ಕ ಸೇನಾ ಉಗ್ರಾಣದಂತಿದ್ದ, ದಟ್ಟ ನೀಲಿ ಬಣ್ಣ ಬಳಿದಿದ್ದ ಕಟ್ಟಡದೆದುರು ನಿಂತರು.

ತೆರೆದ ಬಾಗಿಲಿನಿಂದ ಮಾತ್ರ ಬೆಳಕು ಹಾದು ಬರುತ್ತಿದ್ದ ಆ ಕಿಷ್ಕಿಂದೆಯಲ್ಲಿ ಬಿಳಿ ಗಿರಿಜಾ ಮೀಸೆಯ ಅರಬನೊಬ್ಬ ನಿಂತಿದ್ದ. ಬಾಗಿ ಮೂರು ಪಿಂಗಾಣಿ ಕಪ್ಪುಗಳಲ್ಲಿ ಚಹಾ ನೀಡುತ್ತಿದ್ದ. ಕತ್ತಲೆಯಲ್ಲಿ ಹೂತಂತಿದ್ದ ಅಂಗಡಿಯ ಉಳಿದ ವಸ್ತುಗಳು ಗೋಚರಿಸುವ ಮೊದಲು ಮಾರ್ಸೆಲ್ ಮತ್ತು ಜಾನಿಗೆ ಹೊಸಲಿನಲ್ಲಿಯೇ ಶುಂಠಿ ಚಹಾದ ವಾಸನೆ ಸ್ವಾಗತಿಸಿತು. ಚಹಾ ಬಟ್ಟಲುಗಳು, ಕಾರ್ಡುಗಳ ಮಧ್ಯೆ ಪೇರಿಸಿಟ್ಟ ತಟ್ಟೆಗಳನ್ನು ದಾಟಿದ್ದೇ ಮಾರ್ಸೆಲ್ ಕೌಂಟರಿ ಬಳಿಯಿದ್ದ. ಬೆಳಕಿಗೆ ತಡೆಯಾಗದಂತೆ ಜಾನಿ, ಬಾಗಿಲಿನಲ್ಲಿಯೇ

ಪಟ್ಟಣದ ಮಧ್ಯಭಾಗದಲ್ಲಿದ್ದ ಇನ್ನೊಂದು ಅಂಗಡಿಗೆ ಅವರು ತೆರಳಿದರು. ನಡು ಮಧ್ಯಾಹ್ನ ಮೀರಿ ಆಕಾಶ ಹೆಚ್ಚುಕಡಿಮೆ ತಿಳಿಯಾದಂತಿತ್ತು. ಚೌಕದಲ್ಲಿ ಅವರು ನಿಂತರು. ಕೈಗಳನ್ನು ತೀಡಿಕೊಳ್ಳುತ್ತ ಮಾರ್ಸೆಲ್ ತನ್ನ ಪೆಟ್ಟಿಗೆಯತ್ತ ಮಮಕಾರದಿಂದ ನೋಡಿದ. ನೋಡಲ್ಲಿ, ಜಾನಿ ಹೇಳಿದಳು. ಚೌಕದ ಆಚೆ ಬದಿಯಿಂದ ಎತ್ತರಕ್ಕಿದ್ದ ಅರಬನೊಬ್ಬ ಇವರತ್ತಲೇ ಧಾವಿಸುತ್ತಿದ್ದ. ನೋಡಲು ಸಪೂರವಾಗಿದ್ದು, ಆಕರ್ಷಕವಾಗಿ, ಆಕಾಶ ನೀಲಿ ಬಣ್ಣದ ನಿಲುವಂಗಿ, ಹಳದಿ ಬೂಟುಗಳು, ಕೈಗವಸು ತೊಟ್ಟು ತನ್ನ ಕರಕಲಾದ ಮುಖವನ್ನು ಎತ್ತಿಸಿಕೊಂಡು ನಡೆದುಬರುತ್ತಿದ್ದ. ಆತ ತೊಟ್ಟ ರುಮಾಲು ಆಗೀಗ ಜಾನಿಯ ಅಭಿಮಾನಕ್ಕೆ ಪಾತ್ರವಾಗುತ್ತಿದ್ದ ಸ್ಥಳೀಯ ಫ್ರೆಂಚ್ ಅಧಿಕಾರಗಳ ಟೋಪಿಯನ್ನು ಹೋಲುತ್ತಿತ್ತು. ನಿಧಾನಕ್ಕೆ ಕೈಗವಸೊಂದನ್ನು ತೆಗೆಯುತ್ತ ಇವರೆಡೆಗೆ ಬರುತ್ತಿದ್ದರೂ ಇವರನ್ನೂ ಮೀರಿ ಏನನ್ನೋ ಗಮನಿಸುತ್ತಿರುವವನಂತೆ ಕಾಣುತ್ತಿದ್ದ.

ನಿಂತಿದ್ದಳು. ಅಂಗಡಿಯ ಹಿಂಭಾಗದಲ್ಲಿ ಮೂಟೆಯ ಮೇಲೆ ಕುಳಿತ ಇಬ್ಬರು ಅರಬರು ತನ್ನನ್ನೇ ದಿಟ್ಟಿಸುತ್ತ ಕಿಸಿಯುತ್ತಿರುವುದನ್ನು ಗಮನಿಸಿದಳು. ಕೆಂಪು-ಕಪ್ಪು ನೆಲಹಾಸುಗಳು, ಕಸೂತಿಯ ಶಾಲುಗಳು ಗೋಡೆಗೆ ನೇತು ಹಾಕಿದ್ದರು. ನೆಲದ ಮೇಲೆ ಗಂಟುಗಳು, ಸುವಾಸಿತ ಔಷಧೀಯ ಬೇರು-ಎಲೆಗಳು ತುಂಬಿದ್ದ ಪೆಟ್ಟಿಗೆ ಹರಡಿಕೊಂಡಿದ್ದವು. ಉಣ್ಣೆ ಮತ್ತು ಸಾಂಬಾರ ಪದಾರ್ಥಗಳ ವಾಸನೆ ಕೋಣೆ ತುಂಬ ತುಂಬಿದ್ದು ಈ ವಾಸನೆಯನ್ನು ಮೀರಿ ಚಹಾದ ಪರಿಮಳ ಪಸರಿಸಿತ್ತು.

ಮಾರ್ಸೆಲ್ ವ್ಯಾಪಾರದ ಮಾತುಕತೆ ನಡೆಸುವಾಗಲೆಲ್ಲ ಬಳಸುವ ಮೆಲು ದನಿಯಲ್ಲಿ ತುಂಬ ಮಾತಾಡಿದ. ಬಳಿಕ ತಾನು ತಂದ ಬಟ್ಟೆ, ರೇಶ್ಮೆಗಳನ್ನು ಹರಡಲು ಅನುಕೂಲವಾಗುವಂತೆ ಕೌಂಟರಿನಲ್ಲಿದ್ದ ಸಣ್ಣಪುಟ್ಟ ಸಾಮಾನುಗಳನ್ನು ಸರಿಸಿ, ಟ್ರಂಕ್ ತೆರೆದು ವಯಸ್ಸಾದ ವ್ಯಾಪಾರಿಯತ್ತ ಹರಡಿದ. ಯೌವ್ವನ ಕಳೆದುಕೊಳ್ಳುತ್ತಿರುವ ಹೆಂಗಸು ಅನುಮಾನದಲ್ಲಿ ತನ್ನನ್ನೇ ಓಲೈಸಿಕೊಳ್ಳುವ ಉತ್ಸುಕತೆ, ನಗು, ದನಿಯಲ್ಲಿ ನಾಟಕೀಯತೆ ಬೆರೆಸಿ ಮಾತನಾಡಿದ. ತೆರೆದ ಕೈಗಳನ್ನು ವ್ಯಾಪಾರದ ವಿಶ್ವಾಸದ ಸಂಕೇತದಂತೆ ಬಿಗಿದು ತೋರಿಸಿದ. ಮುದುಕ ತಲೆಯಾಡಿಸುತ್ತ ಚಹಾ ತಟ್ಟೆಯನ್ನು ತನ್ನ ಹಿಂದಿದ್ದ ಅರಬರಿಗೆ ನೀಡುತ್ತ ಅತಿ ಕಡಿಮೆ ಮಾತಾಡಿದ. ಆತನ ಮಾತುಗಳು ಮಾರ್ಸೆಲ್‌ಗೆ ಅಷ್ಟೇನು ಉತ್ಸಾಹ ತುಂಬುವಂತಿರಲಿಲ್ಲ. ಆತ ತನ್ನ ಬಟ್ಟೆಗಳನ್ನು ಸರಿಮಾಡಿಕೊಂಡು ಟ್ರಂಕಿನೊಳಗೆ ತುಂಬಿದ. ಹಣೆಯ ಮೇಲೆ ಚೆಲ್ಲಾಪಿಲ್ಲಿಯಾಗಿದ್ದ ಬೆವರನ್ನು ಒರೆಸಿಕೊಂಡು ಹಮಾಲನನ್ನು ಕರೆದದ್ದೇ ಅವರು ಮುಂದಿನ ದಾರಿ ತುಳಿದರು. ಮುಂದಿನ ಅಂಗಡಿಯ ವರ್ತಕ ಆರಂಭದಲ್ಲಿ ನಿರುತ್ಸಾಹಿಯಂತೆ ಕಂಡರೂ ಕೊಂಚ ಅದೃಷ್ಟ ಖುಲಾಯಿಸಿದಂತೆಯೇ ಕಂಡಿತು.

"ಈ ಜನ ತಮ್ಮನ್ನ ತಾವು ದೇವರು ಅಂತ ತಿಳಕೊಂಡಿದ್ದಾರೆ. ಆದರೇನು, ವಹಿವಾಟು ಕೂಡ ಮಾಡ್ತಾರೆ. ಬದುಕು ಎಲ್ಲರಿಗು ಕಠಿಣವೇ!" ಮಾರ್ಸೆಲ್ ಹೇಳಿದ.

ಜಾನಿ ಮಾತಾಡದೆ ಹಿಂದೆ ನಡೆದಳು. ಗಾಳಿ ಹೆಚ್ಚುಕಡಿಮೆ ತಟಸ್ಥವಾಗಿತ್ತು. ಆಕಾಶ ಕೂಡ ತಿಳಿಯಾಗುವಂತೆ ಕಾಣುತ್ತಿತ್ತು. ನೀಲಿ ಕೊಳದಿಂದಲೆಂಬಂತೆ ಮೋಡಗಳ ಮರೆಯಿಂದ ಬೆಳಕಿನ ಕಿರಣವೊಂದು ಹೊಳೆಯಿತು. ಈಗವರು ಚೌಕವನ್ನು ಬಿಟ್ಟು ಈಚೆ ಬಂದಿದ್ದರು. ಮಣ್ಣಿನ ಗೋಡೆಗಳಿದ್ದ, ಬಾಡಿದ ಗುಲಾಬಿ ಗಿಡ ಅಥವ ಬಾಡಿ ನಿಂತ ದಾಳಿಂಬೆ ಮರಗಳಿರುವ ಸಣ್ಣ ಓಣಿಗಳ ಮೂಲಕ ಹಾದು ಬಂದರು. ದೂಳಿನ ವಾಸನೆ, ಕಾಫಿ ಪರಿಮಳ, ಸುಟ್ಟ ಕಟ್ಟಿಗೆಯಿಂದ ಹೊರಡುತ್ತಿದ್ದ ಹೊಗೆ, ಕಲ್ಲು ಮತ್ತು ಕುರಿಗಳ ವಾಸನೆ ಪಟ್ಟಣದ ಈ ಭಾಗದ ವಿಶೇಷತೆ. ಎಲ್ಲ ನೆಲಮಾಳಿಗೆಯ ಅಂಗಡಿಗಳು. ಜಾನಿಗೆ ಕಾಲುಗಳು ಭಾರವಾಗುತ್ತಿವೆ ಅನ್ನಿಸಿತು. ಆಕೆಯ ಗಂಡ ವ್ಯಾಪಾರ ಕುದುರುತ್ತಿದ್ದುದರಿಂದ ಗೆಲುವಾಗಿದ್ದ. ಆತ ಜಾನಿಯನ್ನು ಚಿನ್ನ ಎಂದು ಕರೆದ; ಪ್ರಯಾಣ ಖಾಲಿಕೈ ಮಾಡಲಿಲ್ಲ ಎಂದ. ಜಾನಿ ಕೂಡ ಉತ್ಸಾಹದಿಂದ ಖಂಡಿತ ಹೌದು ಎಂದಳು. ಅರಬರೊಂದಿಗೆ ನೇರ ವ್ಯವಹಾರವೇ ಉತ್ತಮ ಎಂದಳು.

ಪಟ್ಟಣದ ಮಧ್ಯಭಾಗದಲ್ಲಿದ್ದ ಇನ್ನೊಂದು ಅಂಗಡಿಗೆ ಅವರು ತೆರಳಿದರು. ನಡು ಮಧ್ಯಾಹ್ನ ಮೀರಿ ಆಕಾಶ ಹೆಚ್ಚುಕಡಿಮೆ ತಿಳಿಯಾದಂತಿತ್ತು. ಚೌಕದಲ್ಲಿ ಅವರು ನಿಂತರು. ಕೈಗಳನ್ನು ತೀಡಿಕೊಳ್ಳುತ್ತ ಮಾರ್ಸೆಲ್ ತನ್ನ ಪೆಟ್ಟಿಗೆಯತ್ತ ಮಮಕಾರದಿಂದ ನೋಡಿದ. ನೋಡಲ್ಲಿ, ಜಾನಿ ಹೇಳಿದಳು. ಚೌಕದ ಆಚೆ ಬದಿಯಿಂದ ಎತ್ತರಕ್ಕಿದ್ದ ಅರಬನೊಬ್ಬ ಇವರತ್ತಲೇ ಧಾವಿಸುತ್ತಿದ್ದ. ನೋಡಲು ಸಪೂರವಾಗಿದ್ದು, ಆಕರ್ಷಕವಾಗಿ, ಆಕಾಶ ನೀಲಿ ಬಣ್ಣದ ನಿಲುವಂಗಿ, ಹಳದಿ ಬೂಟುಗಳು, ಕೈಗವಸು ತೊಟ್ಟು ತನ್ನ ಕರಕಲಾದ ಮುಖವನ್ನು ಎತ್ತಿಕೊಂಡು ನಡೆದುಬರುತ್ತಿದ್ದ. ಆತ ತೊಟ್ಟ ರುಮಾಲು ಆಗೀಗ ಜಾನಿಯ ಅಭಿಮಾನಕ್ಕೆ ಪಾತ್ರವಾಗುತ್ತಿದ್ದ ಸ್ಥಳೀಯ ಫ್ರೆಂಚ್ ಅಧಿಕಾರಗಳ ಟೋಪಿಯನ್ನು ಹೋಲುತ್ತಿತ್ತು. ನಿಧಾನಕ್ಕೆ ಕೈಗವಸೊಂದನ್ನು ತೆಗೆಯುತ್ತ ಇವರೆಡೆಗೆ ಬರುತ್ತಿದ್ದರೂ ಇವರನ್ನೂ ಮೀರಿ ಏನನ್ನೋ ಗಮನಿಸುತ್ತಿರುವವನಂತೆ ಕಾಣುತ್ತಿದ್ದ. "ಸರಿ, ಸರಿ, ತನ್ನನ್ನೊಬ್ಬ ಸೈನ್ಯಾಧಿಕಾರಿ ಎಂದು ತಿಳಿದುಕೊಂಡವನು" ಮಾರ್ಸೆಲ್ ನುಡಿದ. ಆತ ಇವರ ಟ್ರಂಕನ್ನು, ಇವರನ್ನು ಗಮನಿಸದವನಂತೆ ನುಗ್ಗತೊಡಗಿದ. ಅವರ ನಡುವಿನ ಅಂತರ ಕಡಿಮೆಯಾಗತೊಡಗಿತು. ಮಾರ್ಸೆಲ್‌ಗೆ ಏನನ್ನಿಸಿತೋ ಚಿಕ್ಕ ಪೆಟ್ಟಿಗೆಯನ್ನು ಸರಕ್ಕನೆ ಎಳೆದುಕೊಂಡು ಹಿಂದೆ ಇಟ್ಟುಕೊಂಡ. ಆತನಾದರೂ ಇದಾವುದನ್ನೂ ಗಮನಿಸದೆ ಗೋಡೆಯ ಕಡೆ ಅದೇ ವೇಗದಿಂದ ಮುನ್ನಡೆದ. ಜಾನಿ ಆತಂಕ ಗೊಂಡವನಂತೆ ಕಂಡ ತನ್ನ ಗಂಡನತ್ತ ನೋಡಿದಳು. "ಏನು ಮಾಡಿದರೂ ನಡೆದುಹೋಗಿಬಿಡುತ್ತೆಂತ ಅಂದುಕೊಂಡಿದ್ದಾರೆ ಈ ಜನ". ಜಾನಿ ಅದಕ್ಕೇನೂ ಉತ್ತರಿಸಲಿಲ್ಲ. ಅರಬನ ಈ ಉದ್ಧಟತನದಿಂದ ಆಕೆ ಹತಾಶಳಾಗಿದ್ದಳು. ಇಲ್ಲಿಂದ ಹೊರಡಬೇಕು, ಎಂದು ಅನ್ನಿಸಿದಾಗ ತನ್ನ ಪುಟ್ಟ ಮನೆಯ ನೆನಪು ಮುತ್ತಿತು. ತಣ್ಣಗೆ ಕೊರೆಯುವ ಹೊಟೇಲ್ ರೂಮಿಗೆ ಹೋಗುವ ಆಲೋಚನೆ ಕೂಡ ಅಷ್ಟೊಂದು ರುಚಿಸಲಿಲ್ಲ. ಮರುಭೂಮಿಯ ವಿಗಂಗಮ ನೋಟ ಒದಗಿಸುವ ಕೋಟೆಯ ಮೇಲ್ಭಾಗಕ್ಕೆ ಹೋಗಿ ಎಂದು ಹೊಟೇಲ್ ಮ್ಯಾನೇಜರ್ ಹೇಳಿದ್ದು ನೆನಪಿಗೆ ಬಂದು ಮಾರ್ಸೆಲ್‌ಗೆ ಹೇಳಿದಳು. ಪೆಟ್ಟಿಗೆಯನ್ನು ಹೊಟೇಲಿನಲ್ಲಿ ಇಡುವ ಸಲಹೆ ನೀಡಿದಳು. ಆದರೆ ಸುಸ್ತಾದವನಂತೆ ಕಂಡ ಆತ ರಾತ್ರಿ ಊಟದ ಮೊದಲು ಸ್ವಲ್ಪ ಹೊತ್ತು ವಿರಮಿಸ ಬಯಸಿದ್ದ. ಪ್ಲೀಸ್ ಎಂದು ಜಾನಿ ಹೇಳಿದಾಗ, ಆಕೆಯತ್ತ ಗಮನವಿಟ್ಟು ನೋಡಿ, ಸರಿ ಬಿಡು ಚಿನ್ನ, ಅಂದ.

ಹೊಟೇಲಿನ ಎದುರಿರುವ ರಸ್ತೆಯಲ್ಲಿ ಆಕೆ ಕಾದಳು. ಬಿಳಿ ಬಟ್ಟೆಗಳನ್ನು ತೊಟ್ಟ ಸಂದಣಿ ಏರುತ್ತಲೇ ಹೋಯಿತು. ಹೆಂಗಸರು ಕಾಣುತ್ತಲೇ ಇರಲಿಲ್ಲ. ಜಾನಿ ಯಾವತ್ತೂ ಈ ಪ್ರಮಾಣದಲ್ಲಿ ಪುರುಷರನ್ನು ನೋಡಿರಲಿಲ್ಲ. ಆದರೂ, ಯಾರೊಬ್ಬರೂ ಆಕೆಯತ್ತ ನೋಡುತ್ತಿರಲಿಲ್ಲ. ಕೆಲವರು ಅವಳತ್ತ ನೋಡದೆ ಅಲ್ಲಿಂದ ಹಾದು ಹೋಗುವಾಗ ಕರಕಲಾದ ಮುಖದಲ್ಲಿ ಎಲ್ಲರೂ ಒಂದೇ ರೀತಿಯಲ್ಲಿ ಕಾಣುತ್ತಿದ್ದರು. ಬಸ್ಸಿನಲ್ಲಿ ಕಂಡ ಫ್ರೆಂಚ್ ಸೈನಿಕ, ಒಮ್ಮೆ ಘನತೆಯದ್ದೆಂದು ಅನ್ನಿಸಿದ ಕೈಗವಸುಗಳ ವಂಚಕ ಅರಬ. ತನ್ನ ಮುಖಗಳನ್ನವರು ಅವಳತ್ತ ನೋಡದೆ ಈ ವಿದೇಶಿ ಮಹಿಳೆಯತ್ತ ತಿರುಗಿಸುತ್ತಿದ್ದರು, ಅವಳ ಅಂಗಾಲುಗಳು ಬೆವರತೊಡಗಿದಂತೆ ಮೌನವಾಗಿ, ನಿಧಾನಕ್ಕೆ ನಡೆದು ಹೋಗುತ್ತಿದ್ದರು. ಆಕೆಯ ಅಸಹನೆ, ಇಲ್ಲಿಂದ ಹೊರಟುಬಿಡಬೇಕು ಎಂಬ ಭಾವನೆ ತೀವ್ರವಾಗತೊಡಗಿತು. "ನಾನೇಕೆ ಇಲ್ಲಿಗೆ ಬಂದೆ?" ಎಂದುಕೊಳ್ಳುವಷ್ಟರಲ್ಲಿ ಮಾರ್ಸೆಲ್ ಮರಳಿ ಬಂದಿದ್ದ.

ಕೋಟೆಯ ಮೆಟ್ಟಿಲುಗಳನ್ನು ಅವರು ಏರಿ ಮುಗಿಸಿದಾಗ ಇಳಿ ಮಧ್ಯಾಹ್ನದ ಐದು ಗಂಟೆ. ಗಾಳಿ ಸಂಪೂರ್ಣ ಸ್ತಬ್ದವಾಗಿತ್ತು. ತಿಳಿಯಾಗಿದ್ದ ಆಗಸ ಕೆಂಪುನೀಲಿಗಳಿಂದ ಕಂಗೊಳಿಸುತ್ತಿತ್ತು. ಮೊದಲಿಗಿಂತ ತೀಕ್ಷ್ಣವಾಗಿದ್ದ ಒಣ ಶೀತಲ ಗಾಳಿ ಅವರ ದವಡೆಗಳನ್ನು ನಡುಗಿಸುತ್ತಿತ್ತು. ಅರ್ಧ ದಾರಿಯಲ್ಲಿ ಗೋಡೆಗೊರಗಿದ್ದ ವಯಸ್ಸಾದ ಅರಬ ಚಲಿಸದೆ, ಗೈಡ್ ಬೇಕೆ? ಎಂದು ಪ್ರಶ್ನಿಸಿದ್ದ. ಅವರ ಉತ್ತರ ನಕಾರವಾಗಿರುತ್ತದೆ ಎಂದು ಮೊದಲೇ ಅರಿತವನಂತೆ. ಅಲ್ಲಲ್ಲಿ ದಣಿವಾರಿಸಿಕೊಳ್ಳುವ ಹಾಸುಗಲ್ಲುಗಳು ಇದ್ದರೂ ಕೋಟೆಯ ದಾರಿ ನೇರ ಮತ್ತು ದೂರ ಎಂಬಂತ್ತಿತ್ತು. ಅವರು ಏರುತ್ತ ಹೋದಂತೆಲ್ಲ ಅವಕಾಶ ಹೆಚ್ಚುತ್ತ ಹೋಗುತ್ತಿತ್ತು, ಓಯಸಿಸ್‌ನ ಪ್ರತಿಯೊಂದು ಶಬ್ದವು ತನ್ನ ಅಸದೃಶ್ಯ ಪರಿಶುದ್ಧತೆಯಲ್ಲಿ ಎಂಬಂತೆ ಬಂದು ಮುಟ್ಟುತ್ತಿದ್ದ, ಬೆಳೆಯುತ್ತಲೇ ಹೋಗುತ್ತಿದ್ದ ಬೆಳಕು, ಒಣ ಶೀತಲ ಗಾಳಿಯಲ್ಲಿ ಅವರೂ ಬೆಳಗತೊಡಗಿದರು. ಏರುತ್ತ ಹೋದಂತೆಲ್ಲ ಅವರನ್ನು ಸುತ್ತಿಸುಳಿಯುತ್ತಿದ್ದ ಸ್ಫಟಿಕ ಗಾಳಿ ಮತ್ತುಷ್ಟು ಬೆಳೆಯುತ್ತಿದೆ ಎಂಬ ಭಾವವುಕ್ಕಿಸುತ್ತಿತ್ತು, ಜತೆಗೆ ಹಾದುಹೋಗುವ ಬೆಳಕು ಶಬ್ದದ ಅಲೆಯನ್ನು ಸೃಷ್ಟಿಸುತ್ತಿದೆ ಎಂಬತ್ತಿತ್ತು. ಅಂಚನ್ನು ತಲುಪಿದ ಮೇಲೆ ಅವರ ಕಣ್ಣೋಟವು

ಚಳಿಗೆ ಹಲ್ಲು ನುರಿಯುತ್ತಿರುವುದು ಜಾನಿ ಅನುಭವಕ್ಕೆ ಬಂದಿತು. "ನಾವು ಇಲ್ಲಿದ್ದರೆ ಸಾವೇ ಗತಿಯಾಗುತ್ತೆ. ನಿನ್ನ ಹುಚ್ಚುತನ ಸಾಕು, ನಡೀ ಹೋಗೋಣ" ಮಾರ್ಸೆಲ್ ನುಡಿದ. ತನ್ನ ಕೈಗಳಿಂದ ಬಿರುಸಾಗಿ ಆಕೆಯನ್ನು ಎಳೆದ. ವಿಧೇಯ ಜಾನಿ ಉಪ್ಪರಿಗೆ ಗೋಡೆಯಿಂದ ತಿರುಗಿ ಆತನನ್ನು ಹಿಂಬಾಲಿಸಿದಳು. ಮೆಟ್ಟಿಲುಗಳ ಮೇಲೆ ನಿಶ್ಚಲನಾಗಿ ಕುಳಿತಿದ್ದ ಅರಬ್ ಮುದುಕ ಅವರು ಪಟ್ಟಣದ ಕಡೆಗೆ ಇಳಿದುಹೋಗುವುದನ್ನು ನೋಡಿದ. ಜಾನಿ, ದಿಢೀರನೆ ಆವರಿಸಿದ ದಣಿವಿಗೆ ಶರಣಾದವಳಂತೆ ಅಸಹನೀಯವೆನ್ನಿಸುವ ತನ್ನ ದೇಹಭಾರ ಹೊತ್ತು ಅಂಧಳಂತೆ ಅನುಸರಿಸಿದಳು. ಆಕೆಯ ಭಾವೋತ್ಕಟತೆ ಹೊರಟುಹೋಗಿತ್ತು. ಇದೀಗ ತಾನೇ ಪ್ರವೇಶಿಸಿರುವ ಈ ಲೋಕದಲ್ಲಿ ತಾನು ಅತಿ ಎತ್ತರದ, ಅತಿ ಭಾರದ ಮತ್ತು ಅತಿಯಾದ ಬಿಳಿಯ ಬಣ್ಣದವಳು ಅನ್ನಿಸಿತು. ಒಂದು ಮಗು, ಒಬ್ಬ ಬಾಲಕಿ, ಒಣ ಮನುಷ್ಯ ಮತ್ತು ಕುಟಿಲ ನರಿಗಳು ಮಾತ್ರ ಆ ನೆಲವನ್ನು ತುಳಿಯಬಲ್ಲವು ಎಂದು ಅನ್ನಿಸಿತು.

ತಾಳೆಮರಗಳಾಚೆಯ ದಿಗಂತಕ್ಕೆ ತೆರೆದುಕೊಂಡಿದ್ದೇ, ಇಡೀ ಆಕಾಶವೇ ಏಕಫ್ರಾಗಿ ಶಬ್ದವೊಂದು ಸ್ಫೋಟಗೊಂಡು ಆ ಶಬ್ದ ತನ್ನ ಮೇಲಿನ ಅವಕಾಶವನ್ನು ವ್ಯಾಪಿಸುತ್ತ, ತನ್ನ ಮೌನಕ್ಕೆ ಧಕ್ಕೆ ಬರದಿರಲೆಂದೇ ಇದ್ದಕ್ಕಿದ್ದಂತೆ ಅಪಾರವಾಗಿ ಹರಡಿರುವ ವಿಸ್ತಾರತೆಯಲ್ಲಿ ಕಣ್ಮರೆಯಾಗಿದೆ, ಎಂದು ಜಾನಿಗೆ ಅನ್ನಿಸಿತು.

ಪರಿಪೂರ್ಣ ಕೋನದಲ್ಲಿ ಎಂಬಂತೆ ಜಾನಿಯ ದೃಷ್ಟಿ ನಿಧಾನಕ್ಕೆ ಪೂರ್ವದಿಂದ ಪಶ್ಚಿಮಕ್ಕೆ ಹರಿಯಿತು. ಕೆಳಗೆ–ನೀಲಿ ಮತ್ತು ಬಿಳಿ ಬಣ್ಣದ ಅರಬರ ಮನೆಗಳ ಛಾವಣಿಗಳ ಮೇಲೆ ಬಿಸಿಲಿನಲ್ಲಿ ಒಣಗುತ್ತಿದ್ದ ಕೆಂಪು ಮೆಣಸಿನ ಬಣ್ಣ ಪೈಪೋಟಿಗಿಳಿದಂತೆ ಹೊಳೆಯುತ್ತಿತ್ತು. ಕಣ್ಣಿಗೆ ಯಾರೊಬ್ಬರೂ ಕಾಣುತ್ತಿರಲಿಲ್ಲ. ಆದರೆ ಮನೆಯೊಳಗಿಂದ ಹುರಿದ ಕಾಫಿ ಬೀಜದ ಪರಿಮಳ, ಕೇಕೆ, ನಗು ಮತ್ತು ಹಿಡಿದಿಡಲಾಗದ ಯಾತನೆಗಳು ಚಿಮ್ಮಿ ಹೊರ ಬರುತ್ತಿದ್ದವು. ಓಯಸಿಸ್‌ನಿಂದ ಪಶ್ಚಿಮಕ್ಕೆ ತಾಳೆಮರಗಳ ತೋಟದಾಚೆ ಕಪ್ಪು ಡೇರೆಗಳು ಕಾಣುತ್ತಿದ್ದವು. ಇಲ್ಲಿಂದ ಬೂದುಬಣ್ಣದ ಭೂಮಿಗಂಟಿ ಪುಟಾಣಿಯಾಗಿ ಕಾಣುವ ನಿಶ್ಚಲ ಒಂಟೆಗಳ ಸಮೂಹವು ಅರ್ಥವನ್ನು ಇನ್ನೂ ಬಗೆಯಬೇಕಾದ ಅಪರಿಚಿತ ಭಾಷೆಯ ಅಕ್ಷರಗಳಂತೆ ಗೋಚರಿಸುತ್ತಿದ್ದವು. ಮರುಭೂಮಿಯನ್ನು ವ್ಯಾಪಿಸಿದ್ದ ಮೌನವು ಅವಕಾಶದಂತೆ ಅಪರಿಮಿತವಾಗಿತ್ತು.

ಕೋಟೆಯ ಉಪ್ಪರಿಗೆಯ ಗೋಡೆಗೆ ತನ್ನ ಮೈಯನ್ನು ಚೆಲ್ಲಿಕೊಂಡಿದ್ದ ಜಾನಿ ತನ್ನೆದುರು ಹರಡಿಕೊಂಡಿದ್ದ ಶೂನ್ಯವನ್ನು ಹರಿದು ಬಿಸುಟಲಾಗದೆ ಮೂಕಿಯಾಗಿದ್ದಳು. ಆಕೆಯ ಪಕ್ಕದಲ್ಲಿದ್ದ ಮಾರ್ಸೆಲ್ ತಣ್ಣಗೆ ಕೊರೆಯುತ್ತ ಕಳವಳಗೊಂಡಿದ್ದ. ಕೆಳಗಿಳಿದು ಹೋದರೆ ಸಾಕು ಎಂಬಂತಿತ್ತು ಆತನ ಮನಃಸ್ಥಿತಿ. ಅಷ್ಟಕ್ಕೂ ಇಲ್ಲಿ ನೋಡುವಂಥದ್ದಾದರೂ ಏನಿದೆ? ಆದರೆ ಆಕೆಗೆ ಕ್ಷಿತಿಜದಿಂದ ತನ್ನ ಕಣ್ಣುಗಳನ್ನು ಕೀಲಿಸಲಾಗಲಿಲ್ಲ. ಕೆಳಗೆ, ಅಗೋ ಅಲ್ಲಿ, ಬುವಿ–ಬಾನು ತಬ್ಬುವ ದಕ್ಷಿಣ ದಿಕ್ಕಿನ ಅಂಚಿನ ಪರಿಶುದ್ಧ ರೇಖೆಯಲ್ಲಿ, ಇಂದಿನವರೆಗೂ ನನಗೆ ತಿಳಿದಿಲ್ಲದ, ಆದರೆ ಯಾವತ್ತೂ ಬಯಸುತ್ತಿದ್ದ ಯಾವುದೋ ತನಗಾಗಿ ಕಾಯುತ್ತಿದೆ, ಎಂದು ಜಾನಿಗೆ ಇದ್ದಕ್ಕಿದ್ದಂತೆ ಭಾಸವಾಯಿತು. ಮಧ್ಯಾಹ್ನದ ಕೊನೆಯ ಅವಧಿಯ ಬೆಳಕು ನಿಧಾನಕ್ಕೆ ಮೃದುವಾಯಿತು; ಪ್ರಖರತೆ ಕರಗಿತು. ಇದೇ ವೇಳೆಗೆ, ವಿಧಿಯಾಟದಂತೆ ಏಕಾಏಕಿ ಹೃದಯ ಹೊತ್ತು ಅಲ್ಲಿಗೆ ಬಂದಿದ್ದ ಹೆಣ್ಣೊಂದು ವರ್ಷಗಳಿಂದ ತನ್ನೊಳಗೆ ಬಿಗಿದಿಟ್ಟಿದ್ದ ಅಭ್ಯಾಸ, ಬೇಸರಗಳನ್ನು ಸಾವಕಾಶ ಕಳಚಿಕೊಳ್ಳತೊಡಗಿದಳು.

ಆಕೆ ಅಲೆಮಾರಿಗಳ ಡೇರೆಗಳತ್ತ ನೋಡಿದಳು. ಅಲ್ಲಿ ವಾಸಿಸುವ ನರಪಿಳ್ಳೆಗಳನ್ನೂ ಅವಳು ಕಂಡಿರಲಿಲ್ಲ; ಕಪ್ಪು ಡೇರೆಗಳಲ್ಲಿ ಮನುಷ್ಯರ ಚಲನೆಯೇ ಇರಲಿಲ್ಲ. ಆದಾಗ್ಯೂ, ಇಂದಿನವರೆಗೂ ತಿಳಿದಿರದ ಅಲ್ಲಿನ ಮನುಷ್ಯರ ಕುರಿತು, ಅವರ ಅಸ್ತಿತ್ವದ ಕುರಿತು ಆಕೆ ಯೋಚಿಸಬಲ್ಲವಳಾಗಿದ್ದಳು. ಮನೆಯಿಲ್ಲದೆ, ಲೋಕವಿದೂರವಾಗಿ ವಿಶಾಲ ಗಡಿಗಳಲ್ಲಿ ಅಲೆಯುವ ಹಿಡಿಯಷ್ಟು ಇರುವ ಈ ಜನರನ್ನು ಆಕೆ ಗುರುತಿಸಿದ್ದಳು. ಭೂಮಿ ನಿಶ್ಚಲವಾಗಿದೆಯೇನೋ ಅನ್ನಿಸುವಂತಿತ್ತು. ಈ ಕ್ಷಣದಿಂದ ಯಾರೂ ವೃದ್ಧರಾಗುವುದಿಲ್ಲ ಮತ್ತು ಸಾವನ್ನು ಎದುರಿಸಬೇಕಾಗುವುದಿಲ್ಲ. ಪ್ರತಿಕ್ಷಣವೂ ಆಕೆಯ ಹೃದಯದಲ್ಲಿ ಯಾರೋ ನೋವು–ಕಾತರಗಳಿಂದ ರೋಧಿಸುವುದನ್ನು ಬಿಟ್ಟರೆ ಉಳಿದೆಲ್ಲೆಡೆ ಜೀವ ಸ್ತಬ್ದಗೊಂಡಿತ್ತು.

ಬೆಳಕು ಚಲಿಸತೊಡಗಿತು. ಚಳಿಯೊಂದಿಗೆ ಕೆಂಪಗಾಗಿದ್ದ ಸ್ಫಟಿಕ ಸೂರ್ಯನೂ ಪಶ್ಚಿಮಕ್ಕೆ ವಾಲತೊಡಗಿದ. ಪೂರ್ವ ದಿಕ್ಕಿನಲ್ಲಿ ಬೂದು ಬಣ್ಣದ ಅಲೆಗಳು ಹುಟ್ಟಿ ಎಲ್ಲವನ್ನೂ ನಿಧಾನಕ್ಕೆ ವ್ಯಾಪಿಸಲು ಸಜ್ಜಾದವು. ಚಳಿಗೆ ಹಲ್ಲು ನುರಿಯುತ್ತಿರುವುದು ಜಾನಿ ಅನುಭವಕ್ಕೆ ಬಂದಿತು. "ನಾವು ಇಲ್ಲಿದ್ದರೆ ಸಾವೇ ಗತಿಯಾಗುತ್ತೆ. ನಿನ್ನ ಹುಚ್ಚುತನ ಸಾಕು, ನಡೀ ಹೋಗೋಣ" ಮಾರ್ಸೆಲ್ ನುಡಿದ. ತನ್ನ ಕೈಗಳಿಂದ ಬಿರುಸಾಗಿ ಆಕೆಯನ್ನು ಎಳೆದ. ವಿಧೇಯ ಜಾನಿ ಉಪ್ಪರಿಗೆ ಗೋಡೆಯಿಂದ ತಿರುಗಿ ಆತನನ್ನು ಹಿಂಬಾಲಿಸಿದಳು. ಮೆಟ್ಟಿಲುಗಳ ಮೇಲೆ ನಿಶ್ಚಲನಾಗಿ ಕುಳಿತಿದ್ದ ಅರಬ್ ಮುದುಕ ಅವರು ಪಟ್ಟಣದ ಕಡೆಗೆ ಇಳಿದುಹೋಗುವುದನ್ನು ನೋಡಿದ. ಜಾನಿ, ದಿಢೀರನೆ ಆವರಿಸಿದ ದಣಿವಿಗೆ ಶರಣಾದವಳಂತೆ ಅಸಹನೀಯವೆನ್ನಿಸುವ ತನ್ನ ದೇಹಭಾರ ಹೊತ್ತು ಅಂಧಳಂತೆ ಅನುಸರಿಸಿದಳು. ಆಕೆಯ ಭಾವೋತ್ಕಟತೆ ಹೊರಟುಹೋಗಿತ್ತು. ಇದೀಗ ತಾನೇ ಪ್ರವೇಶಿಸಿರುವ ಈ ಲೋಕದಲ್ಲಿ ತಾನು ಅತಿ ಎತ್ತರದ, ಅತಿ ಭಾರದ ಮತ್ತು ಅತಿಯಾದ ಬಿಳಿಯ ಬಣ್ಣದವಳು ಅನ್ನಿಸಿತು. ಒಂದು ಮಗು, ಒಬ್ಬ ಬಾಲಕಿ, ಒಣ ಮನುಷ್ಯ ಮತ್ತು ಕುಟಿಲ ನರಿಗಳು ಮಾತ್ರ ಆ ನೆಲವನ್ನು ತುಳಿಯಬಲ್ಲವು ಎಂದು ಅನ್ನಿಸಿತು. ನಿದ್ರೆಗೆ ಜಾರುವುದು, ಸಾವಿಗೆ ಶರಣಾಗುವುದನ್ನು ಬಿಟ್ಟರೆ ಈ ಕ್ಷಣದಿಂದ ಆಕೆ ಏನು ಮಾಡಲು ಸಾಧ್ಯವಿತ್ತು?

ದಿಢೀರನೆ ಮಾತು ಕಳೆದುಕೊಂಡವನಂತೆಯೋ ಅಥವ ಬಾಯಿ ತೆರೆದರೆ ತನ್ನ ತಲೆ ಸುತ್ತುವಿಕೆಯ ಕುರಿತು ಹೇಳುವ ಗಂಡನೊಂದಿಗೆ ಜ್ವರದಿಂದ ಬಳಲುತ್ತ, ಚಳಿಗೆ

ಮುದುರಿ ಆಕೆ ತನ್ನನ್ನೇ ಎಳೆದುಕೊಳ್ಳುತ್ತ ರೆಸ್ಟುರಾ ಸೇರಿ, ಹಾಸಿಗೆಗೆ ಕವುಚಿಕೊಂಡಳು. ಮಾರ್ಸೆಲ್ ಹಾಸಿಗೆ ಸೇರಿ, ಮತ್ತಾವ ಬೇಡಿಕೆಯೂ ಸಲ್ಲಿಸದೆ ದೀಪವನ್ನು ನಂದಿಸಿದ. ಕೋಣೆ ಮಂಜುಗಡ್ಡೆಯಂತೆ ಕೊರೆಯುತ್ತಿತ್ತು. ಏರುತ್ತಿರುವ ಜ್ವರದಂತೆಯೇ ಚಳಿಯೂ ತನ್ನನ್ನು ಆಕ್ರಮಿಸುತ್ತಿದೆ ಎಂದು ಜಾನಿ ಕಂಡುಕೊಂಡಳು. ರಕ್ತ ಹೆಪ್ಪಾಗಿದೆಯೇನೊ ಎಂಬಂತೆ ಆಕೆ ತೇಕುತಿದ್ದಳು. ಎಂಥದ್ದೋ ಭಯ ಅವಳಲ್ಲಿ ಬೆಳೆಯುತ್ತಿತ್ತು. ಹೊರಳಿದಾಗ ಆಕೆಯ ಭಾರಕ್ಕೆ ಹಳೆಯ ಕಬ್ಬಿಣದ ಮಂಚ ಕಿರುಗುಟ್ಟಿತು. ತಾನು ನಿಶ್ಶಕ್ತಳಾಗುವುದು ಆಕೆಗೆ ಬೇಕಿರಲಿಲ್ಲ. ಗಂಡ ಆಗಲೇ ನಿದ್ರೆಗೆ ಜಾರಿದ್ದ. ಅನಿವಾರ್ಯವಾಗಿ ಆಕೆಯೂ ನಿದ್ದೆ ಮಾಡಬೇಕಿತ್ತು. ನಗರದ ಅಸ್ಪಷ್ಟ ಶಬ್ದಗಳು ಕಿರು ಕಿಟಕಿಯ ಮೂಲಕ ಆಕೆಯ ಕಿವಿ ತಲುಪತೊಡಗಿದವು. ಲಾಲಾ ಕಮಾನಿನ ಕೆಫೆಗಳಲ್ಲಿ ಪೋಲಿತನ ಲೇಪಗೊಂಡ ಹಳೆಯ ಹಾಡಿನ ಮಟ್ಟುಗಳು ತನ್ನ ಕಿವಿಗೆ ಬೀಳುತ್ತಿರುವುದನ್ನು ಆಕೆಯೂ ಪೋಲಿಯಾಗಿಯೇ ಕೇಳಿಸಿಕೊಂಡಳು. ಆಕೆ ನಿದ್ರಿಸಲೇ ಬೇಕು. ಆದರೆ ಆಕೆ ಕಪ್ಪು ಡೇರೆಗಳನ್ನು ಎಣಿಸುತ್ತಿದ್ದಳು; ಮುಚ್ಚಿದೆವೆಯ ಹಿಂದೆ ನಿಶ್ಚಲ ಒಂಟೆಗಳು ಪ್ರತ್ಯಕ್ಷವಾದವು; ಅಪಾರ ಯಾತನೆ ಅವಳನ್ನು ಆವರಿಸಿತು. ಹೌದು, ತಾನು ಬಂದಿರುವುದು ಏತಕ್ಕೆ? ಪ್ರಶ್ನೆ ಕೇಳಿಕೊಳ್ಳುತ್ತಲೇ ನಿದ್ರೆಗೆ ಜಾರಿದಳು.

ತುಸು ಹೊತ್ತಿಗೆ ಮತ್ತೆ ಎಚ್ಚರಗೊಂಡಾಗ ಸುತ್ತ ಸಂಪೂರ್ಣ ಮೌನ. ಅದರೆ ನಿಶಬ್ದವಾದ ಆ ಇರುಳಲ್ಲಿ ನಗರದಾಚೆ ನಾಯಿಗಳ ಆಕ್ರಂದನ. ಜಾನಿ ನಡುಗತೊಡಗಿದಳು. ಮತ್ತೆ ಹೊರಳಿದಾಗ ಗಂಡನ ತೋಳು ಬಡಿದದ್ದು ಅನುಭವಕ್ಕ ಬಂದಿತು. ಇದೇ ನನಗೆ ಸುರಕ್ಷಿತ ಆಸರೆಯೆನ್ನುವಂತೆ ಅವನಿಗೆ ಒತ್ತಿಕೊಂಡು ಮತ್ತೆ ನಿದ್ರೆಗೆ ಜಾರಿದಳು. ಆಕೆ ಗುನುಗಿಕೊಳ್ಳುತ್ತಿದ್ದಳು. ಆದರೆ ಅದು ಅವಳಿಗೇ ಕೇಳಿಸುತ್ತಿರಲಿಲ್ಲ. ಮಾರ್ಸೆಲ್‌ನ ಬಿಸಿ ಮಾತ್ರ ಅರಿವಿಗೆ ಬರುತ್ತಿತ್ತು. ಇಪ್ಪತ್ತು ವರ್ಷಕ್ಕಿಂತ ಮಿಗಿಲಾಗಿ, ಪ್ರತಿ ಇರುಳು, ಹೀಗೆಯೇ ಇಬ್ಬರೂ, ಕಾಯಿಲೆ–ಕಸಾಲೆ, ಪಯಣ ಏನೇ ಇರಲಿ ಈಗಿರುವಂತೆಯೇ ಕಳೆದಿದ್ದರು. . . ಅದೂ ಅಲ್ಲದೆ ಒಬ್ಬಳೇ ಮನೆಯಲ್ಲಿ ಇದ್ದಾದರೂ ಏನು ಮಾಡಬಹುದಾಗಿತ್ತು? ಮಕ್ಕಳೂ ಇಲ್ಲ! ಕೊರತೆ ಇರುವುದು ಅದರದ್ದೇ ಅಲ್ಲವೆ?

ಯೋಚಿಸಲು ಹೋಗಿಲ್ಲ. ಅವನಿಗೆ ತನ್ನ ಅಗತ್ಯವಿದೆ ಎಂಬಂತೆ ಸರಳವಾಗಿ ಮಾರ್ಸೆಲ್‌ನನ್ನು ಹಿಂಬಾಲಿಸುವುದಷ್ಟೇ ಆಕೆಗೆ ತಿಳಿದಿತ್ತು. ಆತ ಕೂಡ ಆಕೆಗೆ ನೀಡಿದ್ದ ನೆಮ್ಮದಿಯೆಂದರೆ ನಾನು ಬೇಕಾದವಳು ಎಂಬ ಅರಿವು ಆಕೆಯಲ್ಲಿ ಮೂಡಿಸಿದ್ದಾಗಿತ್ತು. ಆತ ಬಹುಶಃ ಆಕೆಯನ್ನು ಪ್ರೀತಿಸುತ್ತಿರಲಿಲ್ಲ. ಪ್ರೀತಿಯೇ ಏಕೆ ದ್ವೇಷ ಕೂಡ ಇಷ್ಟೊಂದು ಹತ್ತಿರದ ರೂಪ ಪಡೆದಿರಲಿಲ್ಲ. ಅದರ ರೂಪವಾದರೂ ಎಂಥದ್ದಿರುತ್ತದೆ? ಪ್ರತಿ ಇರುಳು ಒಬ್ಬರ ಮುಖವನ್ನು ಒಬ್ಬರು ನೋಡದೆ ಅವರು ಕೂಡುತ್ತಿದ್ದರು. ಇರುಳಿನ ಆ ಕತ್ತಲೆಯಲ್ಲಿ ಹೊರತುಪಡಿಸಿದರೆ ದಿನದ ಬೆಳಕಲ್ಲಿ ಚೀರಿ ಹೇಳುವಂಥ ಪ್ರೇಮವೇನಾದರೂ ಇತ್ತೇ? ಅದೇನೋ. ಅಂತೂ ಮಾರ್ಸೆಲ್‌ಗೆ ತನ್ನ ಅಗತ್ಯವಿದೆ ಮತ್ತು ಆ ಅಗತ್ಯದ ಅಗತ್ಯ ತನಗೂ ಇದೆ ಎಂದು ಮಾತ್ರ ಆಕೆ ಅರಿತಿದ್ದಳು. ಈ ಭಾವದಲ್ಲಿಯೇ ಹಗಲು-ಇರುಳು, ಅದರಲ್ಲೂ ಪ್ರತಿ ಇರುಳಿನಲ್ಲಿ ಏಕಾಂತ, ವೃದ್ಧಾಪ್ಯ, ಸಾವು ಸುಳಿಯಕೂಡದು ಎಂಬ ಗಡಸು ನಿಲುವನ್ನು ಹೊಂದಿದ್ದ ಆತನೊಂದಿಗೆ ಸಮಾಗಮ. ಉನ್ಮಾದ ಉಕ್ಕಿಬರುವವರೆಗೆ ಸಭ್ಯತೆಯ ಸೋಗು ಹಾಕುವ ಇತರ ಹುಚ್ಚು ಪುರುಷರಲ್ಲಿಯೂ ಆಕೆ ಈ ಭಾವನೆಯನ್ನೇ ಕಂಡಿದ್ದಾಳೆ. ಗಂಡಸರು, ಬಯಕೆಯಿಂದಲ್ಲದೆ ತಮಗೆ ಕಾಡುವ ಒಂಟಿತನ, ಇರುಳು ಹುಟ್ಟಿಸುವ ಭಯ, ಹಾಗೂ ಹತಾಶೆಗಳಿಂದ ದೂರ ಸರಿದು ದಹಿಸಿಹೋಗಲು ಎನ್ನುವಂತೆ ಹೆಣ್ಣಿನ ದೇಹದತ್ತ ನುಗ್ಗುತ್ತಾರೆ.

ಆಕೆಯಿಂದ ದೂರ ಹೋಗುವವನಂತೆ ಮಾರ್ಸೆಲ್ ಆ ಬದಿ ಹೊರಳಿದ. ನಿಜ, ಆತ ಆಕೆಯನ್ನೇನೂ ಪ್ರೀತಿಸಿರಲಿಲ್ಲ. ಮಾತ್ರವಲ್ಲ, ಮಿಕ್ಕೆಲ್ಲಕ್ಕಿಂತ ಆಕೆಯೆಂದರೆ ಗಾಬರಿಯಾಗುತ್ತಿದ್ದ. ಹಾಗೆ ನೋಡಿದರೆ ಬಹು ಹಿಂದೆಯೇ ಇಬ್ಬರೂ ಬೇರೆಯಾಗಿ ಒಂಟಿ ಬದುಕು ಸವೆಸಬಹುದಿತ್ತು. ಆದರೆ ಏಕಾಂಗಿಯಾಗಿ ಮಲಗಲು ಯಾರು ತಾನೇ ಬಯಸುತ್ತಾರೆ. ದುರ್ದೆಸೆ ಸುತ್ತಿರುವ, ಲೋಕದೆಲ್ಲ ಲೀಲೆಗಳಿಂದ ಮುಕ್ತರಾದ ಪುರುಷರು ಮಾತ್ರ ಮೃತ್ಯುವಿನೊಡನೆ ಪ್ರತಿ ಇರುಳು ಕಳೆಯುತ್ತಾರೆ. ಮಾರ್ಸೆಲ್ ಅದನ್ನೆಂದೂ ಮಾಡಲು ಸಾಧ್ಯವಿರಲಿಲ್ಲ. ಆತನೊಬ್ಬ ಬಲಹೀನ, ಅಸಹಾಯಕ ಮಗುವಿನಂತೆ ನೋವೆಂದರೆ ಭಯಭೀತನಾಗುವ; ಆಕೆಯ ಆಸರೆ ಬೇಡುವ ಮಗು. ಆಕೆ ಮೈದಡವಿದ್ದೇ ರೋದನವುಕ್ಕಿಬರುವಂಥವನು. ಆಕೆ ಇನ್ನಷ್ಟು ಒತ್ತಿಕೊಂಡು ಅವನ ಎದೆಗೆ ತನ್ನ ಕೈಗಳನ್ನು ಅಮುಕಿದಳು. ತಾನೇ ಬಹುಹಿಂದೆ ಆತನಿಗಿಟ್ಟ ಮುದ್ದಿನ ಹೆಸರನ್ನು ಉಸುರಿದಳು. ಒಬ್ಬರಿಗೊಬಬ್ಬರು ಹಾಗೆ ಕರೆದುಕೊಳ್ಳುವುದನ್ನು ಇಬ್ಬರೂ ಮರೆತು ಎಷ್ಟೋ ಕಾಲವಾಗಿತ್ತು.

ಆ ಹೆಸರನ್ನಾಕೆ ತನ್ನ ಮನದಾಳದಿಂದಲೇ ಕರೆದಿದ್ದಳು. ಆಕೆ ಕೂಡ ಆತನ ಸಾಮರ್ಥ್ಯ, ಕೆಲವು ವಿಪರೀತ ವರ್ತನೆಗಳನ್ನು ಮೀರಿ ಆತನನ್ನು ಬಯಸಿದವಳೇ. ಸಾವೆಂದರೆ ಹೆದರುವವಳೇ. "ಈ ಭಯವನ್ನು ಮೀರಬಲ್ಲೆನಾದರೆ ಸುಖವಾಗಿರುತ್ತೇನೆ" ತಕ್ಷಣವೇ ಹೆಸರಿರದ ಯಾತನೆಯೊಂದು ಅವಳನ್ನು ವ್ಯಾಪಿಸಿತು. ಮಾರ್ಸೆಲ್‌ನಿಂದ ತನ್ನನ್ನು ಪ್ರತ್ಯೇಕಿಸಿಕೊಂಡಳು. ಇಲ್ಲ ಆಕೆ ಯಾವುದನ್ನೂ ಜಯಿಸಲಾರಳು. ಅಸುಖಿಯಾಗಿದ್ದ ಅವಳು ಮುಕ್ತಿ ಕೂಡ ಹೊಂದದೆ ಇನ್ನೇನು ಸಾಯಲಿದ್ದಳು. ಆಕೆಯ ಹೃದಯ ಭಾರವಾಗಿತ್ತು, ಆ ಎದೆ ಭಾರಕ್ಕೆ ಆಕೆಗೆ ಉಸಿರುಗಟ್ಟಿದಂತಾಗುತ್ತಿತ್ತು. ಈ ನೊಗವನ್ನು ಇಪ್ಪತ್ತು ವರ್ಷಗಳಿಂದ ಎಳೆಯುತ್ತಿರುವೆ ಎಂದು ಅನ್ನಿಸಿತು. ಇದೀಗ ತನ್ನೆಲ್ಲ ಶಕ್ತಿಯನ್ನು ಹಾಕಿ ಎದುರಿಸಿ ಮುಕ್ತಳಾಗ ಬಯಸಿದ್ದಳು. ಮಾರ್ಸೆಲ್ ಮತ್ತು ಉಳಿದ ಜಗದ ಜನ ಮುಕ್ತರಾಗದಿದ್ದರೂ ಕೂಡ!

ಮಾರ್ಸೆಲ್ ನಿದ್ರಿಸುತ್ತಿದ್ದ. ಮರುಕ್ಷಣವೇ ಹಾಸಿಗೆ ಬಿಸಿ ಕರಗಿ ಥಂಡಿ ಅವಳನ್ನು ಆಕ್ರಮಿಸಿತು. ಬೀದಿದೀಪಗಳಿಂದ ಬರುತ್ತಿದ್ದ ಮಂದ ಬೆಳಕಿನಲ್ಲಿ ತನ್ನ ಬಟ್ಟೆಗಳನ್ನು ಹುಡುಕಿ ಸದ್ದಾಗದಂತೆ ತೊಟ್ಟುಕೊಂಡಳು. ಕೈಯಲ್ಲಿ ಚಪ್ಪಲಿಗಳನ್ನು ಹಿಡಿದು ಬಾಗಿಲನ್ನು ತಲುಪಿದಳು. ಮತ್ತೊಂದು ಚಣ ಕತ್ತಲಿನಂತೆ ಕಾದವಳಂತೆ ನಿಂತು ನಿಧಾನ ಬಾಗಿಲು ತೆರೆದಳು. ಹಿಡಿಕೆ ಸದ್ದು ಮಾಡಿದಾಗ ಕಲ್ಲಾದಳು. ಎದೆ ಜೋರಾಗಿ ಹೊಡೆದುಕೊಳ್ಳತೊಡಗಿತು. ಆಲಿಸುತ್ತ, ಮೌನ ಆವರಿಸಿದ ಮೇಲೆ ಹಿಡಿಕೆಯನ್ನು ತಿರುಗಿಸಿದಳು. ಇದು ಮುಗಿಯುವುದೇ ಇಲ್ಲವೇನೋ ಎನ್ನುವಷ್ಟು ಅದು ದೀರ್ಘವಾಗಿತ್ತು.

ಹಾಸಿಗೆಯ ಮೇಲೆ ಎದ್ದು ಕುಳಿತಾಗ ತನಗೆ ಅತಿ ಸನಿಹದಲ್ಲಿ ಎಂಬಂತೆ ಕರೆಯೊಂದನ್ನು ಆಲಿಸಿದಳು. ಬಳಲಿದಂತೆ ಮೇಲೇಳುತ್ತಿದ್ದ ಗಾಳಿಯಲೆಯಲ್ಲಿ ತಾಳೆಮರಗಳ ತೋಟದ ನೀರಿನ ಪರಿಮಳವಿತ್ತು. ಸ್ತಬ್ದಗೊಂಡ ಆಕಾಶದ ಕೆಳಗೆ ಮರುಭೂಮಿ ಮತ್ತು ಇರುಳು ಸಮಾಗಮಗೊಂಡ, ಬದುಕು ನಿಶ್ಚಲವಾಗಿ ಯಾರೊಬ್ಬರೂ ವೃದ್ಧರಾಗದ, ಸಾವಿಲ್ಲದ ದಕ್ಷಿಣ ಭಾಗದಿಂದ ಈ ಪರಿಮಳ ಬರುತ್ತಿತ್ತು. ಗಾಳಿಯಲ್ಲಿನ ತೇವ ನಿಧಾನ ಕರಗಿತು. ಇದೀಗ ಆ ಮೂಕ ಕರೆಯನ್ನು ಬಿಟ್ಟು ತಾನು ಇನ್ನೇನೂ ಕೇಳಲಿಲ್ಲವೇನೋ ಎಂದುಕೊಂಡಳು: ಒಂದೊಮ್ಮೆ ಕರೆಗೆ ಉತ್ತರವನ್ನು ನೀಡದೆ ಅದರ ಅರ್ಥ ತನಗಾಗದು ಎಂದೂ ಆಕೆಗನ್ನಿಸಿತು. ಹೌದು, ಒಂದೊಮ್ಮೆ ಎನ್ನುವುದು ಈಗ ನಿಚ್ಚಳವಾಯಿತು!

ತನ್ನ ಗಂಡನ ಉಸಿರನ್ನೇ ಗಮನಿಸುತ್ತ ಮೆತ್ತಗೆ ಎದ್ದು ಕದಲದಂತೆ ಆಕೆ ಹಾಸಿಗೆಯ ಬಳಿ ನಿಂತಳು. ಮಾರ್ಸೆಲ್ ನಿದ್ರಿಸುತ್ತಿದ್ದ. ಮರುಕ್ಷಣವೇ ಹಾಸಿಗೆ ಬಿಸಿ ಕರಗಿ ಥಂಡಿ ಅವಳನ್ನು ಆಕ್ರಮಿಸಿತು. ಬೀದಿದೀಪಗಳಿಂದ ಬರುತ್ತಿದ್ದ ಮಂದ ಬೆಳಕಿನಲ್ಲಿ ತನ್ನ ಬಟ್ಟೆಗಳನ್ನು ಹುಡುಕಿ ಸದ್ದಾಗದಂತೆ ತೊಟ್ಟುಕೊಂಡಳು. ಕೈಯಲ್ಲಿ ಚಪ್ಪಲಿಗಳನ್ನು ಹಿಡಿದು ಬಾಗಿಲನ್ನು ತಲುಪಿದಳು. ಮತ್ತೊಂದು ಚಣ ಕತ್ತಲಿನಂತೆ ಕಾದವಳಂತೆ ನಿಂತು ನಿಧಾನ ಬಾಗಿಲು ತೆರೆದಳು. ಹಿಡಿಕೆ ಸದ್ದು ಮಾಡಿದಾಗ ಕಲ್ಲಾದಳು. ಎದೆ ಜೋರಾಗಿ ಹೊಡೆದುಕೊಳ್ಳತೊಡಗಿತು. ಆಲಿಸುತ್ತ, ಮೌನ ಆವರಿಸಿದ ಮೇಲೆ ಹಿಡಿಕೆಯನ್ನು ತಿರುಗಿಸಿದಳು. ಇದು ಮುಗಿಯುವುದೇ ಇಲ್ಲವೇನೋ ಎನ್ನುವಷ್ಟು ಅದು ದೀರ್ಘವಾಗಿತ್ತು. ಕೊನೆಗೂ ಬಾಗಿಲು ತೆರದು, ಹೊರಬಂದು, ಅದೇ ಹುಶಾರಿಯಲ್ಲಿ ಬಾಗಿಲು ಮುಚ್ಚಿದಳು. ಮಾರ್ಸೆಲ್‌ನ ಮೆಲ್ಲುಸಿರು ಕೊನೆಗಳಿಗೆಗೂ ಕೇಳಿಸಿತು. ಇತ್ತ ತಿರುಗಿದ್ದೇ ಥಂಡಿ ಇರುಳ ಗಾಳಿ ಅವಳ ಮುಖವನ್ನು ಮುತ್ತಿತ್ತು. ನಿಧಾನ ಪ್ರಾಂಗಣ ದಾಟಿದಳು. ಮುಚ್ಚಿದ್ದ ಹೊಟೇಲಿನ ಮುಖ್ಯ ಬಾಗಿಲನ್ನು ತೆರೆಯುವಾಗ ಮೆಟ್ಟಿಲುಗಳ ಬಳಿ ಕಂಡ ಅರಬ್ ಕಾವಲುಗಾರ ಅರಾಬಿಕ್‌ನಲ್ಲಿ ಏನನ್ನೋ ಗೊಣಗಿಕೊಂಡ. "ಈಗ ಬರುತ್ತೇನೆ" ಎಂದು ಹೇಳಿದ ಜಾನಿ ಕತ್ತಲಲ್ಲಿ ಕರಗಿದಳು.

ನಗರ ಮತ್ತು ತಾಳೆಮರಗಳ ತೋಟಗಳ ಮೇಲೆ ನಕ್ಷತ್ರ ಮಾಲೆ ತೂಗು ಬಿದ್ದಿದ್ದವು. ಕೋಟೆಯನ್ನು ತಲುಪುತ್ತಿದ್ದ ಖಾಲಿ ಬೀದಿಯನ್ನಾಕೆ ತುಳಿದಳು. ಚಳಿ ಎದೆ ಕೊರೆಯುತ್ತಿದ್ದರೂ ಅರೆ ಅಂಧಳಂತೆ ಕತ್ತಲು ತುಂಬಿದ ದಾರಿಯಲ್ಲಿ ಆಕೆ ಓಡಿದಳು... ಅರ್ದ ಮೆಟ್ಟಿಲುಗಳನ್ನು ಸವೆಸಿದಾಗ ಚಳಿ ಇನ್ನಷ್ಟು ತೀಕ್ಷ್ಣವಾಗಿ ಹತ್ತುವುದನ್ನು ನಿಲ್ಲಿಸಿಬಿಡಲೇ ಅನ್ನಿಸಿತು. ಏದುಸಿರು ಬೆಚ್ಚಗಾಗಿಸಿರಲಿಲ್ಲ. ಆಕೆ ತೆಗೆದುಕೊಳ್ಳುತ್ತಿದ್ದ ಶ್ವಾಸ ಒಳಹೋಗಿ ಕ್ರಮೇಣ ಬಿಸಿಯನ್ನು ಮೂಡಿಸತೊಡಗಿ ನಡುಗುವಿಕೆ ಕಡಿಮೆಯಾಗತೊಡಗಿತು. ಕೊನೆಗೂ ಆಕೆಯ ಕಣ್ಣುಗಳು ಇರುಳಿನ ಅನಂತ ಅವಕಾಶಕ್ಕೆ ತೆರೆದುಕೊಂಡವು.

ಜಾನಿಯನ್ನು ಏಕಾಂತ ಮತ್ತು ಮೌನ ಮುತ್ತಿದಾಗ ಉಸಿರು, ಶಬ್ದ ಏನೊಂದೂ ಇಲ್ಲವೆಂಬಂತಿತ್ತು. ತನ್ನ ಮೇಲೆ ವ್ಯಾಪಿಸಿಕೊಂಡ ಆಕಾಶವನ್ನು ಗಾಳಿ ಅಲೆಯೊಂದು ಗುಡಿಸುತ್ತಿದೆ ಎಂದು ಆಕೆಗೆ ಅನ್ನಿಸಿತು. ಆಕಾಶದಲ್ಲಿ ಆಗುತ್ತಿದ್ದ ಎಲ್ಲ ಬದಲಾವಣೆಗಳಲ್ಲಿ ತಾನೂ ಭಾಗಿಯಾದಂತೆ ಭಾಸವಾಯಿತು. ಆಕೆಯ ಕಣ್ಣೆದುರು ಆಕಾಶದ ತಾರೆಗಳು ಮರುಭೂಮಿಯಲ್ಲಿ ಕಳಚಿ ಬೀಳುತ್ತಿದ್ದವು. ಪ್ರತಿ ಚುಕ್ಕೆ ನೆಲ ಸೇರಿದಾಗಲೂ ತಾನು ಇರುಳಿಗೆ ಇನ್ನಷ್ಟು ತೆರೆದುಕೊಳ್ಳುತ್ತಿದ್ದೇನೆ ಎಂಬ ಭಾವ ಉಕ್ಕುತ್ತಿತ್ತು. ಆಳವಾಗಿ ಉಸಿರೆಳೆದುಕೊಳ್ಳುತ್ತಿದ್ದಾಕೆಗೆ ಚಳಿ, ತನ್ನ ಇರುವಿಕೆ, ನೀರಸ ಬದುಕಿನ ಅಸ್ತಿತ್ವ, ಬದುಕುವ ಪುರಾತನ ಬಯಕೆ, ಸಾವಿನ ಭಯ ಎಲ್ಲ ಮರೆತೇ ಹೋಗಿದ್ದವು. ಎಷ್ಟೋ ವರ್ಷಗಳ ಭಯ, ಹುಚ್ಚಾಟ, ನಿರರ್ಥಕತೆಗಳಿಗೆ ಅಂತ ಹಾಡುವತ್ತ ಆಕೆ ಬಂದಿದ್ದಳು. ಜತೆಗೆ, ತನ್ನ ಬೇರುಗಳನ್ನು ಮರಳಿ ಪಡೆದು, ಮೈಯೊಳಗಿನ ಹೂ ಹೊಸದಾಗಿ ಅರಳುತ್ತಿದ್ದು ಇದೀಗ ನಡುಗುತ್ತಿಲ್ಲ ಎಂದು ಕಂಡುಕೊಂಡಳು. ತನ್ನ ಹೊಟ್ಟೆಯನ್ನು ಗೋಡೆಗೆ ಒತ್ತುತ್ತ, ತಿರುಗುತ್ತಿದ್ದ ಆಕಾಶದತ್ತ ವಾಲಿ ಕಾದಳು. ಕುದಿವ ಹೃದಯ ತಣ್ಣಗಾಗಿ, ವಿರಮಿಸಿ, ತನ್ನೊಳಗೆ ಮೌನ ಆವರಿಸಲಿ ಎಂದು ಜಾನಿ ಕಾಯುತ್ತಿದ್ದಳು. . . ಮುಂದಿನ ಗಳಿಗೆಗೆ ಕೊರೆವ ಭೂಮಿಗೆ ಬೆನ್ನುಕೊಟ್ಟು ಮಲಗಿದ್ದ ಆಕೆಯನ್ನು ಆಕಾಶ ಆಕ್ರಮಿಸಿತು.

ಜಾನಿ ಜಾಗರೂಕತೆ ವಹಿಸಿ ವಾಪಸ್ಸು ಬಂದಾಗ ಮಾರ್ಸೆಲ್ ಇನ್ನೂ ಎದ್ದಿರಲಿಲ್ಲ. ಆಕೆ ಹಾಸಿಗೆಯಲ್ಲಿ ಒರಗಿಕೊಂಡಾಗ ಏನೋ ಗೊಣಗಿದವನು ಮುಂದಿನ ಕ್ಷಣಕ್ಕೆ ಎದ್ದು ಕುಳಿತ. ಆತ ಮಾತನಾಡುತ್ತಿದ್ದರೂ ಏನು ಹೇಳುತ್ತಿದ್ದಾನೆಂದೇ ಈಕೆಗೆ ಅರ್ಥವಾಗಲಿಲ್ಲ. ಎದ್ದು ದೀಪ ಬೆಳಗಿಸಿದವನೇ ಆಕೆಯ ಕಪಾಳಕ್ಕೆ ಬಾರಿಸಿದ. ತಡಬಡಾಯಿಸುತ್ತ ಸಿಂಕಿನತ್ತ ನಡೆದ. ಬಾಟಲಿ ತುಂಬ ನೀರು ಕುಡಿದ. ಹಾಸಿಗೆಗೆ ಮರಳಿ ಸೇರಲು ಸಿದ್ಧವಾಗಿದ್ದವನು ಆಕೆಯನ್ನು ಕಂಡಿದ್ದೇ ಇನ್ನಷ್ಟು ಕುಪಿತನಾದ. ಜಾನಿ, ಅಂಕೆ ತಪ್ಪಿದವಳಂತೆ ಕಣ್ಣೀರು ಹನಿಸುತ್ತಿದ್ದಳು. ಅಳುತ್ತಲೇ, "ಏನೂ ಆಗಿಲ್ಲ ಚಿನ್ನೂ, ಏನೂ ಆಗಿಲ್ಲ" ಎಂದು ಉಸುರಿದಳು. □

(25ನೇ ಪುಟದಿಂದ)

ಕೆಲವು ದಂಪತಿಗಳು ಒಂದೇ ಮಗುವಿಗೆ ಕಟ್ಟು ಬಿದ್ದರೆ, ಹಲವರು ಮಕ್ಕಳಿಲ್ಲದ ಬದುಕನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇದರ ಸಾಮಾಜಿಕ ಪರಿಣಾಮ ದೂರಗಾಮಿಯಾಗಿದ್ದು ನಂತರದ ದಿನಗಳಲ್ಲಿ ಈ ದಂಪತಿಗಳ ಭವಿಷ್ಯದ ಬದುಕು ಹಾಗೂ ರಕ್ಷಣೆ ಯಾರದು ಎಂಬುದಕ್ಕೆ ಕಾಲವೇ ಉತ್ತರಿಸಬೇಕು.

ಈಗಾಗಲೇ ನಮ್ಮ ದೇಶದಲ್ಲಿ ದುಡಿಯುವ ಮಕ್ಕಳ ಜೊತೆ ಬದುಕುವ ಅವಕಾಶದಿಂದ ವಂಚಿತರಾದ ವೃದ್ಧ ತಂದೆ ತಾಯಿಗಳ ಯಾತನಾಮಯ ಬದುಕು ಜ್ವಲಂತ ಸಮಸ್ಯೆಯಾಗಿದೆ. ಇತ್ತೀಚೆಗಷ್ಟೇ ನಮ್ಮ ಕೇಂದ್ರ ಸರಕಾರ 60ವರ್ಷ ಮೇಲ್ಪಟ್ಟ ವೃದ್ಧರನ್ನು ಸಾಕುವ ಹೊಣೆಯನ್ನು ಅವರ ಮಕ್ಕಳಿಗೆ ವರ್ಗಾಯಿಸಿ ಕಾಯ್ದೆ ರೂಪಿಸಿದೆ. ವರ್ತಮಾನದ ನಗರಗಳ ಸಂಕೀರ್ಣವಾದ ವಸತಿ ವ್ಯವಸ್ಥೆಯ ಸಂಸಾರಗಳಲ್ಲಿ ಪೋಷಕರನ್ನು ಇಟ್ಟುಕೊಂಡು ಬದುಕುವುದು ಮಕ್ಕಳ ಪಾಲಿಗೆ ದುಸ್ತರದ ಸಂಗತಿ.

ಇವೆಲ್ಲವೂ ವ್ಯಕ್ತಿಗತ ಹಾಗೂ ಕೌಟುಂಬಿಕ ಸಮಸ್ಯೆಯಾದರೆ ಇದರಾಚೆಗಿನ ಸಮಾಜಿಕ ಸಮಸ್ಯೆಯೊಂದು ನಮಗರಿವಿಲ್ಲದಂತೆ ನಮ್ಮನ್ನಾವರಿಸಿಕೊಂಡಿದೆ. ಜಾಗತೀಕರಣದ ಅತಿ ದೊಡ್ಡ ಕೊಡುಗೆ ಎಂದರೆ ಇದರಿಂದ ಸೃಷ್ಟಿಯಾದ ನವ ಮಧ್ಯಮ ವರ್ಗ ಹಾಗೂ ಅವರಲ್ಲಿ ಹುಟ್ಟಿಕೊಂಡ ಕೊಳ್ಳುಬಾಕ ಸಂಸ್ಕೃತಿ. ಸರಳವಾದ ಜೀವನ ಮತ್ತು ನೈಸರ್ಗಿಕ ಕೊಡುಗೆಗಳಾದ ನೆಲ-ಜಲ-ವಾಯು ಇವುಗಳ ಮಿತವಾದ ಬಳಕೆ ಕುರಿತ ಪರಿಕಲ್ಪನೆಗಳು ನವ ಮಧ್ಯಮ ವರ್ಗದ ಪಾಲಿಗೆ ಅಪಮಾನಕಾರ ಸಂಗತಿಗಳು. ಇವರ ಆಹಾರ, ಪಾನೀಯ, ಉಡುಪು ಪ್ರಸಿದ್ಧ ಬ್ರಾಂಡ್‌ಗಳ ಉತ್ಪನ್ನಗಳೇ ಆಗಿರಬೇಕು. ಜೊತೆಗೆ ಇವರು ಬಳಸುವ ಮೊಬೈಲ್, ಕಂಪ್ಯೂಟರ್, ಟಿ.ವಿ. ಕಾರು ಇವುಗಳೆಲ್ಲಾ ಪ್ರತಿ ವರ್ಷ ಬದಲಾಗುತ್ತಿರಬೇಕು. ಉಳ್ಳವರ ಇಂತಹ ಹವ್ಯಾಸದಿಂದಾಗಿ ಸಮಕಾಲೀನ ನಗರ ಜೀವನ ಬಡವರ ಪಾಲಿಗೆ ನರಕಯಾತನೆಯಾಗಿದೆ. ಇದರಿಂದಾಗಿ ಈಗ ಭಾರತ ಒಂದು ದೇಶವಾಗಿ ಉಳಿದಿಲ್ಲ. ಉಳ್ಳವರ ಭಾರತ ಒಂದು, ನರಳುವವರ ಭಾರತ ಇನ್ನೊಂದು. ಹೀಗೆ ಎರಡು ಭಾರತಗಳು ಸೃಷ್ಟಿಯಾಗಿದ್ದು ಎಲ್ಲರ ಗಮನ ಮತ್ತು ಗುರಿ ಉಳ್ಳವರ ಭಾರತವೇ ಆಗಿದೆ. ನರಳುವ ಭಾರತದಲ್ಲಿನ ಜನ ರಾಜಕಾರಣಿಗಳ ಪಾಲಿಗೆ ಜೀವಂತ ಮತಗಳಾಗಿ ಬದುಕುತ್ತಿದ್ದಾರೆ ಅಷ್ಟೆ.

ಔದ್ಯೋಗಿಕರಣದ ಒತ್ತಡ ಹಾಗೂ ರಭಸದಿಂದ ಬೆಳೆಯುತ್ತಿರುವ ನಗರೀಕರಣ ಇವುಗಳ ಪರಿಣಾಮ ನಮ್ಮ ಫಲವತ್ತಾದ ಕೃಷಿ ಭೂಮಿಗಳೆಲ್ಲ ರಿಯಲ್ ಎಸ್ಟೇಟ್ ಏಜೆಂಟರ ಪಾಲಾಗಿವೆ. ಕುಂಠಿತಗೊಂಡ ಆಹಾರ, ಬೇಳೆ, ತರಕಾರಿ ಇವುಗಳ ಉತ್ಪಾದನೆ ಇದರಿಂದಾಗಿ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದ್ದು ಬಡವರ ಬದುಕು ಮೂರಾಬಟ್ಟೆಯಾಗಿದೆ. 15 ರೂ ಕೊಟ್ಟು ಒಂದು ಲೀಟರ್ ನೀರು ಖರೀದಿಸುವ ಮಧ್ಯಮವರ್ಗದ ಜನಾಂಗಕ್ಕೆ ಅದೇ ಮೌಲ್ಯಕ್ಕೆ ಗ್ರಾಮಾಂತರ ಪ್ರದೇಶದಲ್ಲಿ 1 ಲೀಟರ್ ಹಾಲು ದೊರೆತರೂ ಕೊಳ್ಳಲಾಗದ ಅಸಹಾಯಕ ಸ್ಥಿತಿಯಲ್ಲಿ ಜನರಿದ್ದಾರೆ ಎಂಬ ಕಟು ಸತ್ಯ ಅರ್ಥವಾಗಲಾರದು.

ಇಂತಹ ಸಾಮಾಜಿಕ, ಸಾಂಸ್ಕೃತಿಕ ಪಲ್ಲಟಗಳ ನೇರ ಪರಿಣಾಮ ಬೀರುವುದು ಹೆಣ್ಣಿಗೆ ಹೊರತು ಗಂಡಿಗಲ್ಲ. ಸಮಾಜದ ಅಡಿಪಾಯದಂತಿರುವ ಕೌಟುಂಬಿಕ ವ್ಯವಸ್ಥೆಯಲ್ಲಿ ಹೆಣ್ಣೊಬ್ಬಳು ಗೃಹಿಣಿಯಾಗಿ, ತಾಯಿಯಾಗಿ, ಸೊಸೆಯಾಗಿ, ಸಹೋದರಿಯಾಗಿ ಹೀಗೆ ನಿರ್ವಹಿಸುವ ಪಾತ್ರಗಳು ಹಲವಾರು. ಉಳ್ಳವರ ಭಾರತವಾಗಲಿ, ನರಳುವವರ ಭಾರತವಾಗಲಿ ಅಲ್ಲಿ ಹೆಣ್ಣೊಬ್ಬಳು ಅನುಭವಿಸುವ ಯಾತನೆಗಳು ವಿಭಿನ್ನವಾದರೂ ನೋವು ಮಾತ್ರ ಒಂದೆ. ಇಂತಹ ಸ್ಥಿತಿಯಲ್ಲಿ ಆಧುನಿಕ ಹೆಣ್ಣಿನ ಸಂವೇದನೆ ಕುರಿತಂತೆ ವಿಶ್ಲೇಸಿಸುವುದು ಕಷ್ಟಕರವಾದ ಸಂಗತಿ.

ಇಂಗ್ಲೀಷ್ ಭಾಷೆಯಲ್ಲಿನ ಸೆನ್ಸಬಿಲಿಟಿ ಎಂಬ ಶಬ್ಧ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಸಂವೇದನೆಯಾಗಿ ಚಾಲ್ತಿಯಲ್ಲಿದ್ದರೂ ಅದನ್ನು ವಿವಿಧ ದೃಷ್ಟಿಕೋನಗಳಿಂದ ಬಳಸಲಾಗುತ್ತಿದೆ. ಮುಸ್ಲಿಂ, ದಲಿತ, ಸ್ತ್ರೀ ಸಂವೇದನೆ ಎಂಬರ್ಥದಲ್ಲಿ ಬಳಸಲಾಗುತ್ತಿದ್ದು ಇವತ್ತಿನ ಸಾಹಿತ್ಯ ಸೃಷ್ಟಿಯ ಸಂದರ್ಭದಲ್ಲಿ ಇದು ಅರ್ಥ ಕಳೆದುಕೊಳ್ಳುತ್ತಿದೆ. ತಮಿಳುನಾಡು ಮೂಲದ ಪೂರ್ಣ ಪ್ರಮಾಣದಲ್ಲಿ ಹೆಣ್ಣು-ಗಂಡು ಅಲ್ಲದ ರೇವತಿ ಎಂಬಾಕೆಯ ಆತ್ಮ ಕತೆ "ಎ ಟ್ರೂ ಸ್ಟೋರಿ ಎಬೌಟ್ ಮೈ ಸೆಲ್ಫ್" ಎಂಬ ಕೃತಿಯನ್ನು ಪೆಂಗ್ವಿನ್ ಪ್ರಕಾಶನ ಪ್ರಕಟಿಸಿದ್ದು ಈ ಕೃತಿಯಲ್ಲಿ ಹಿಜಡಾ ಸಮುದಾಯ ಅನುಭವಿಸುವ ಯಾತನೆ, ಸಂಕಟಗಳು ಓದುಗರನ್ನು ಬೆಚ್ಚಿ ಬೀಳಿಸುತ್ತವೆ. ಈ ಕೃತಿಯ ಸಂವೇದನೆಯನ್ನು ನಾವು ಯಾವ ನೆಲೆಯಲ್ಲಿ ಅರ್ಥೈಸಿಕೊಳ್ಳಬೇಕು?. ಇದು ಪುರುಷ ಸಂವೇದನೆಯೊ ಅಥವಾ ಸ್ತ್ರೀ ಸಂವೇದನೆಯೊ? ಇದೊಂದು ಉತ್ತರವಿಲ್ಲದ ಪ್ರಶ್ನೆ.

ನಮ್ಮ ದೇಶದಲ್ಲಿ ದುಡಿಯುವ ಮಕ್ಕಳ ಜೊತೆ ಬದುಕುವ ಅವಕಾಶದಿಂದ ವಂಚಿತರಾದ ವೃದ್ಧ ತಂದೆ ತಾಯಿಗಳ ಯಾತನಾಮಯ ಬದುಕು ಜ್ವಲಂತ ಸಮಸ್ಯೆಯಾಗಿದೆ. ವರ್ತಮಾನದ ನಗರಗಳ ಸಂಕೀರ್ಣವಾದ ವಸತಿ ವ್ಯವಸ್ಥೆಯ ಸಂಸಾರಗಳಲ್ಲಿ ಪೋಷಕರನ್ನು ಇಟ್ಟುಕೊಂಡು ಬದುಕುವುದು ದುಸ್ತರದ ಸಂಗತಿ. ಇವೆಲ್ಲವೂ ವ್ಯಕ್ತಿಗತ ಹಾಗೂ ಕೌಟುಂಬಿಕ ಸಮಸ್ಯೆಯಾದರೆ ಇದರಾಚೆಗಿನ ಸಮಾಜಿಕ ಸಮಸ್ಯೆಯೊಂದು ನಮಗರಿವಿಲ್ಲದಂತೆ ನಮ್ಮನ್ನಾವರಿಸಿಕೊಂಡಿದೆ. ಜಾಗತೀಕರಣದ ಅತಿ ದೊಡ್ಡ ಕೊಡುಗೆ ಎಂದರೆ ಇದರಿಂದ ಸೃಷ್ಟಿಯಾದ ನವ ಮಧ್ಯಮವರ್ಗ ಹಾಗೂ ಅವರಲ್ಲಿ ಹುಟ್ಟಿಕೊಂಡ ಕೊಳ್ಳುಬಾಕ ಸಂಸ್ಕೃತಿ. ಸರಳವಾದ ಜೀವನ ಮತ್ತು ನೈಸರ್ಗಿಕ ಕೊಡುಗೆಗಳಾದ ನೆಲ-ಜಲ-ವಾಯು ಇವುಗಳ ಮಿತವಾದ ಬಳಕೆ ಕುರಿತ ಪರಿಕಲ್ಪನೆಗಳು ನವ ಮಧ್ಯಮ ವರ್ಗದ ಪಾಲಿಗೆ ಅಪಮಾನಕಾರ ಸಂಗತಿಗಳು.

ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಗಂಡು ಕೇಂದ್ರ ಸ್ಥಾನದಲ್ಲಿ ನಿಂತುಕೊಂಡು ತನ್ನನ್ನು "ನಾನು" ಎಂದು ನಿರ್ವಚಿಸಿಕೊಂಡುಬಂದ ಹಿನ್ನೆಲೆಯಲ್ಲೇ ಸ್ತ್ರೀ ಸಂವೇದನೆಯೊಂದು ಕವಲೊಡೆಯಲು ಕಾರಣವಾಯಿತು. ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಆರ್ಥಿಕ ಜಗತ್ತಿನ ಎಲ್ಲ ಸೂತ್ರಗಳನ್ನು ಪುರುಷ ಜಗತ್ತು ತನ್ನ ಕೈಯಲ್ಲಿರಿಸಿಕೊಂಡು ಬಂದ ಕಾರಣಕ್ಕಾಗಿಯೇ ನಮ್ಮ ನಾಗರೀಕತೆ, ಪುರಾಣ, ಇತಿಹಾಸದ ತುಂಬ ರಾಜ ಮಹಾರಾಜರುಗಳ ಜಯಾಪಜಯ ಯುದ್ಧಗಳ ಕಥನ, ಅರಮನೆಯ ವೈಭವ ತುಂಬಿ ತುಳುಕಿತೆ ಹೊರತು ಅರಮನೆಯೊಳಗಿನ ಮೌನ ಜೀವಿಗಳ ಸಂವೇದನೆಗೆ ಇತಿಹಾಸದ ಪುಟಗಳಲ್ಲಿ ಸ್ಥಾನ ದೊರಕಲೇ ಇಲ್ಲ. ಈ ಕಾರಣಕ್ಕಾಗಿಯೇ ಸ್ತ್ರೀ ಸಂವೇದನೆಯ ನೆಲೆಗಟ್ಟಿನಲ್ಲಿ ನಮ್ಮ ಪುರಾಣ, ಇತಿಹಾಸಗಳ ದ್ರೌಪತಿ, ಕುಂತಿ, ಊರ್ಮಿಳೆ, ಶಾಕುಂತಲಾ, ಅಹಲ್ಯೆ, ಸೀತೆ ಮುಂತಾದವರು ಮರು ವಿಮರ್ಶೆಗೆ ಒಳಪಡುತ್ತಿದ್ದಾರೆ.

ಹೆಣ್ಣು ಗಂಡು ನಡುವಿನ ಜೈವಿಕತೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜಗತ್ತಿನ ಅನುಭವದ ಭಿನ್ನತೆಯಿಂದಾಗಿ ಅವರ ಸಂವೇದನೆಗಳಲ್ಲಿ ವಿಭಿನ್ನತೆ ಇರುವುದು ಸಹಜ. ಗಂಡನಷ್ಟು ಸಲೀಸಾಗಿ ಹೆಣ್ಣೊಬ್ಬಳು ತನ್ನ ಗ್ರಹಿಕೆಗಳನ್ನು ನೇರವಾಗಿ ಅಭಿವ್ಯಕ್ತಿಗೊಳಿಸಲು ಸಾಧ್ಯವಾಗದ ಸಾಂಸ್ಕೃತಿಕ ಒತ್ತಡಗಳಿಂದ ನರಳಿದ್ದಾಳೆ. ಹಾಗಾಗಿ ಈವರೆಗೆ ಸ್ತ್ರೀ ಸಂವೇದನೆಯು ಅದು ಕಾವ್ಯವಿರಲಿ, ಕಥನವಿರಲಿ, ರೂಪಕ ಅಥವಾ ಪ್ರತಿಮೆಗಳ ಮೂಲಕ ಅಭಿವ್ಯಕ್ತಿಗೊಂಡಿದೆ.

ವರ್ತಮಾನದ ಜಗತ್ತಿನಲ್ಲಿ ಮಹಿಳಾ ಲೇಖಕಿಯರಿಗೆ ಅಂತಹ ಯಾವುದೇ ಒತ್ತಡಗಳಿಲ್ಲ. ಹಾಗಾಗಿ ಇವತ್ತಿಗೂ ನಮ್ಮೆದುರು ದ್ರೌಪತಿಯ ಪ್ರತಿ ರೂಪದಂತಿರುವ, ನಗರದ ಪಬ್‌ಗಳಲ್ಲಿ ತನ್ನ ಹಸುಗೂಸಿನ, ವೃದ್ಧ ತಂದೆ ತಾಯಿಗಳ ಹಸಿವು ನೀಗಿಸುವುದಕ್ಕಾಗಿ ಅರೆ ಬೆತ್ತಲೆ ಕುಣಿಯುವ ಹೆಣ್ಣಿನ ಹಿಂದೆ ನೋವಿನ ಕಥನ ವೊಂದಿದೆ. ಅವಳ ದೇಹ ಸಿರಿಯನ್ನೇ ಗುರಿಯಾಗಿಸಿ ಕೊಂಡ ಮನಸ್ಸಿಗೆ ಅವಳೆದೆಯ ಬಾಗಿಲನ್ನು ತೆರೆದು ನೋಡುವ ವ್ಯವಧಾನವಿಲ್ಲ.

ಇಂದಿಗೂ ಗೊಲ್ಲ ಜನಾಂಗದಲ್ಲಿ ಗರ್ಭಿಣಿ ಹೆಣ್ಣನ್ನು ಊರಾಚೆ ಗುಡಿಸಲಲ್ಲಿ ಬಿಟ್ಟು ಬರುವ ಸಂಪ್ರದಾಯವಿದ್ದು ತನ್ನ ಹೆರಿಗೆಯನ್ನು ತಾನೇ ಮಾಡಿಕೊಳ್ಳುವ ಈ ಹೆಣ್ಣಿನ ಸ್ಥಿತಿ ಅಶೋಕವನದ ಸೀತೆಯ ಏಕಾಂಗಿತನದ ನೋವಿಗಿಂತ ಕಡಿಮೆಯೇ?. ನಾವು ಯಾವುದನ್ನೂ ಅನಿಷ್ಟ ಆಚರಣೆಗಳು ಎಂದು ಕರೆಯಲ್ಪಟ್ಟವೊ ಅವೆಲ್ಲವೂ ಜಾಗತೀಕರಣದ ಈ ಯುಗದಲ್ಲಿ ಹೊಸ ರೂಪ ತಾಳಿ ನಮ್ಮೆದುರು ಬಂದು ನಿಂತಿವೆ. ದೇವದಾಸಿ ಪದ್ಧತಿ ನಿರ್ಮೂಲನೆಯಾಯಿತು ಎಂದುಕೊಂಡಿರುವಾಗಲೇ ಇವತ್ತಿಗೂ ಕೂಡ ಧಾರವಾಡ ಜಿಲ್ಲೆಯ ಕಲಘಟಗಿ ಹಾಗೂ ಕುಂದಗೋಳ ತಾಲೂಕಿನಿಂದ ವರ್ಷವೊಂದಕ್ಕೆ 300 ಕ್ಕೂ ಹೆಚ್ಚು ಹೆಣ್ಣು ಮಕ್ಕಳು ವಧು ದಕ್ಷಿಣೆಯ ನೆಪದಲ್ಲಿ ಮಾರಾಟವಾಗಿ ಮುಂಬೈ ನಗರದ ವೇಶ್ಯಾ ವಾಟಿಕೆಗೆ ದೂಡಲ್ಪಡುತ್ತಿದ್ದಾರೆ.

ಇಂತಹ ಯಾತನಾಮಯ ಸ್ಥಿತಿಗಳನ್ನು ನಾವು ಯಾವ ನೆಲೆಯಲ್ಲಿ ಗ್ರಹಿಸಬೇಕು? ಇದಕ್ಕಾಗಿಯೇ ನಮ್ಮ ಸ್ತ್ರೀ ಸಂವೇದನೆಯ ಪಾತಾಳಿಯನ್ನು ಮತ್ತಷ್ಟು ವಿಸ್ತರಿಸಬೇಕೆ? ಬೇಡವೆ? ಇದು ನಮ್ಮ ಮುಂದಿರುವ ಪ್ರಶ್ನೆ. □

ಬಣ್ಣ ಬಣ್ಣದ ಕ್ರಾಂತಿಗಳು, ಜೀನ್ ಶಾರ್ಪ್‌ರ
ಅಹಿಂಸಾ ರಾಜಕಾರಣ ಹಾಗೂ ಗಾಂಧಿ

೧೫

ಇಂದಿನ ಯುದ್ಧ, ಮಿಲಿಟರಿ ಆಡಳಿತ, ಜನಾಂಗೀಯ ಘರ್ಷಣೆ, ಹಾಗೂ ಸರ್ವಾಧಿಕಾರಿಗಳ ಸಂದರ್ಭದಲ್ಲಿ ಎರಡು ಚರ್ಚೆಗಳು ಬಹು ಮುಖ್ಯವೆನಿಸಿತ್ತದೆ: ಯುದ್ಧವನ್ನು ತಡೆಗಟ್ಟುವ ಅಥವಾ ಸರ್ವಾಧಿಕಾರಿಗಳನ್ನು ಸ್ಥಾನ ಪಲ್ಲಟಗೊಳಿಸುವ ಸಂದರ್ಭದಲ್ಲಿ ಯಾವ ಮಾರ್ಗಗಳನ್ನು ಅನುಸರಿಸಿಸಬೇಕು? ಸಂಘರ್ಷದ ಮಾರ್ಗ ಹಾಗೂ ಅಹಿಂಸಾ ಮಾರ್ಗಗಳಲ್ಲಿ ಅಥವಾ ಅಸ್ತ್ರಗಳಲ್ಲಿ ಯಾವುದು ಶ್ರೇಷ್ಟ ಅಥವಾ ಉತ್ತಮ? ವಾಸ್ತವವಾಗಿ ಇಲ್ಲಿ ತಾತ್ವಿಕತೆಯ ಪ್ರಶ್ನೆಯೂ ಅಡಗಿದೆ: ಒಂದೆಡೆ ಗಾಂಧಿಯೋತ್ತರದ ನವ-ಗಾಂಧಿವಾದ ಅಥವಾ ಪ್ಯಾಸಿಸಂ ಇದ್ದರೆ, ಇನ್ನೊಂದೆಡೆ ಮಾವೋವಾದ ಅಥವಾ ಸಾಂಪ್ರದಾಯಿಕ ಮಾರ್ಕ್ಸ್‌ವಾದ ಇದೆ. ಈ ಚರ್ಚೆ ಆರಂಭಗೊಂಡದ್ದು ಈಜಿಪ್ಟ್ ಜನಕ್ರಾಂತಿ ಅಥವಾ ಜನಾಂದೋಳನ ಆರಂಭಗೊಂಡ ನಂತರವೆಂದೇ ಹೇಳಬೇಕು

ಅಧ್ಯಕ್ಷ ಮುಬಾರಕ್ ವಿರುದ್ಧ ಈಜಿಪ್ಟ್‌ನಲ್ಲಿ ಜನಾಂದೋಳನ ಆರಂಭಗೊಂಡದ್ದು 2011 ಜನವರಿ 25ರಂದು. ಅಸಹಕಾರ ಚಳವಳಿಯ ರೂಪದಲ್ಲಿ ಆರಂಭಗೊಂಡ ಈ ಜನಾಂದೋಳನ ಅಧ್ಯಕ್ಷ ಮುಬಾರಕ್‌ರವರ ರಾಜೀನಾಮೆಯಲ್ಲಿ ಪರ್ಯಸನಗೊಂಡಿತ್ತು. ಈ ಜನಾಂದೋಳವನ್ನು ಲೋಟಸ್ ಕ್ರಾಂತಿಯೆಂದೂ, ಸಿಟ್ಟಿನ ಕ್ರಾಂತಿಯೆಂದೂ, ಯುವಕರ ಕ್ರಾಂತಿಯೆಂದೂ, ಶ್ವೇತ ಕ್ರಾಂತಿಯೆಂದೂ, ಸ್ವಾತಂತ್ರ್ಯ ಕ್ರಾಂತಿಯೆಂದೂ ಬಣ್ಣಿಸುವ ವಾಡಿಕೆ ಇದೆ. ಅದರ ಹಿಂದೆ ಇರುವ ಮೂಲ ಶಕ್ತಿ ಯಾವುದು? ಅದಕ್ಕೂ ಗಾಂಧಿಗೂ ಇರುವ ಸಂಬಂಧವೇನು? ವಸಾಹತು ಸಂದರ್ಭದಲ್ಲಿ ಉಪಯೋಗಿಸಿದ ಗಾಂಧಿಯ ಅಹಿಂಸಾ ಹಾಗೂ ಅಸಹಕಾರ ತಂತ್ರಗಾರಿಕೆ ಅಥವಾ ಅಸ್ತ್ರ ಇಂದಿನ ಸಂದರ್ಭದಲ್ಲಿ ಸರ್ವಾಧಿಕಾರಿಗಳಿಗೆ ಹಾಗೂ ತೀವ್ರತರ ಎಡಪಂಥೀಯ ಮಾವೋವಾದಕ್ಕೆ ಪರ್ಯಾಯವಾಗಬಲ್ಲುದೇ ಎಂಬಿ ಕೆಲವು ಪ್ರಶ್ನೆಗಳು ಈ ಸಂದರ್ಭದಲ್ಲಿ ಉದ್ಭವಿಸುವುದು ಸಹಜ.

ಈ ಕ್ರಾಂತಿಗೆ ಅಂತರಜಾಲದಲ್ಲಿ ಪ್ರಚಲಿತವಾಗಿರುವ ಫೇಸ್ ಬುಕ್ ನ "ವಿ ಆರ್ ಅಲ್ ಖಲೀದ್ ಸಯೀದ್" ಎಂಬ ಗುಂಪು ಕಾರಣವೆಂದು ಕೂಡಲೇ ತಿರ್ಮಾನಿಸಲಾಗುತ್ತದೆ. ಈ ರೀತಿಯ ಗುಂಪುಗಳು ಫೇಸ್ ಬುಕ್‌ನಲ್ಲಿ ಗಾಂಧಿ ಕುರಿತು ಕೂಡ ಹುಟ್ಟಿಕೊಂಡಿವೆ. ವಿಚಿತ್ರವೆಂದರೆ ಈ ಗುಂಪು ತನ್ನನ್ನು "ವಿ ಹೇಟ್ ಗಾಂಧಿ" ಎಂಬ ಶೀರ್ಷಿಕೆಯಲ್ಲಿ ಕಾರ್ಯಾಚರಣೆ ನಡೆಸುತ್ತಿದೆ.ಈ ಗುಂಪು ನಿರ್ದಯವಾಗಿ ಗಾಂಧಿಯನ್ನು ತುಚ್ಚೀಕರಿಸಿ ವಿಶ್ಲೇಷಿಸುತ್ತದೆ. ವಿಚಿತ್ರವೆಂದರೆ ಈ ಗುಂಪಿನಲ್ಲಿರುವವರು ಬಹಳಷ್ಟು ಮಂದಿ ಅತ್ಯಂತ ಸುಶಿಕ್ಷಿತರು, ಬುದ್ಧಿವಂತರು. ವಾಸ್ತವವಾಗಿ ಈಜಿಪ್ಟ್‌ನ ಗುಂಪಿಗೆ ಪ್ರೇರಕವಾಗಿದ್ದದ್ದು ಅಮೇರಿಕಾದಲ್ಲಿ ನೆಲೆಸಿರುವ ಹಾಗೂ ಗಾಂಧಿಯ ಅಹಿಂಸಾ ತತ್ವದ ಮೇಲೆ ಆಳವಾದ ನಂಬಿಕೆ ಇಟ್ಟಿರುವ ರಾಜ್ಯಶಾಸ್ತ್ರ ಪಂಡಿತರಾದ ಜೀನ್ ಶಾರ್ಪ್. ದುರಂತವೆಂದರೆ ಶಾರ್ಪ್ ಕುರಿತು ಅಮೇರಿಕಾದ ಬಹಳ ಕಡಿಮೆ ಜನ ಅರಿತಿದ್ದಾರೆ. ಇವರಿಗೆ ಹೆದರುವವರು ಬೇರಾರು ಅಲ್ಲ, ಹೊರತು ಜಗತ್ತಿನಲ್ಲಿರುವ ಸರ್ವಾಧಿಕಾರಿಗಳು. ಮಿಲಿಟರಿ ಆಡಳಿತಗಾರರು ಹಾಗೂ ಉದಾರವಾದಿ ಪ್ರಜಾಪ್ರಭುತ್ವ ವಿರೋಧಿಗಳು.

ಈ ಶಾರ್ಪ್ ಗಾಂಧಿಯ ವಾರಸುದಾರರಲ್ಲ, ಗಾಂಧಿಯ ಖಾಸ ಶಿಷ್ಯನೂ ಅಲ್ಲ. ಆದರೆ ಗಾಂಧಿಯ ಅಹಿಂಸೆಯನ್ನು ಆಳವಾಗಿ ಪ್ರೀತಿಸುವವರು. ಅದರ ಮೂಲಕ ಸರ್ವಾಧಿಕಾರಗಳನ್ನು ಮೂಲೋಲ್ಪಾಟನೆ ಮಾಡ ಬಯಸುವವರು ಹಾಗೂ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಲು ಬಯಸುವವರು. ಅಲ್ಲದೇ ಗಾಂಧಿಯ ಅಹಿಂಸಾ ಮಾರ್ಗಕ್ಕೆ ಹೊಸ ರೂಪವನ್ನು, ಹೊಸ ಚೌಕಟ್ಟು ನೀಡಲು ಬಯಸುವವರು

ಜೀನ್ ಶಾರ್ಪ್ ಅಮೇರಿಕಾದ ಮೆಸೆಚುಸೆಟ್ ವಿವಿಯ ಪದವೀಧರರು. ಅದೇ ವಿವಿಯಲ್ಲಿ ಹಲವು ವರುಷ ಪ್ರಾಧ್ಯಾಪಕರಾಗಿ ನಿವೃತ್ತಿಯಾದ ನಂತರ ಅಲ್ಬರ್ಟ್ ಐನ್ಸ್ಟೀನ್ ಇಸ್ಟಿಟೂಟ್ ಎಂಬುದನ್ನು ಸ್ಥಾಪಿಸಿ ಜಗತ್ತಿನಲ್ಲಿ ಸರ್ವಾಧಿಕಾರವನ್ನು ಅಹಿಂಸಾ ಹೋರಾಟದ ಮುಖಾಂತರ ಬದಲಾಯಿಸುವ ಹೊಸ ಸಾಂಪ್ರದಾಯವನ್ನು ಜಗತ್ತಿಗೆ ಕಲಿಸಿ ಕೊಟ್ಟರು. ಅವರ ಸಂಸ್ಥೆಯ ಮೂಲಧ್ಯೇಯಗಳನ್ನು ಗಮನಿಸಿದರೆ ಈ ಆಂಶಗಳು ಮೇಲ್ನೋಟಕ್ಕೆ ಕಂಡುಬರುತ್ತದೆ. ಅವುಗಳೆಂದರೆ ಪ್ರಜಾಪ್ರಭುತ್ವ ಸಂಸ್ಥೆ ಹಾಗೂ ಸ್ವಾತಂತ್ರವನ್ನು ಎತ್ತಿ ಹಿಡಿಯುವುದು, ಸರ್ವಾಧಿಕಾರ, ಧಮನೀಯತೆ ಹಾಗೂ ಜನಾಂಗೀಯತೆಯನ್ನು ವಿರೋಧಿಸುವುದು, ನೀತಿಯ ಸಾಧನವಾಗಿರುವ ಕ್ರೌರ್ಯವನ್ನು ಕಡಿಮೆ ಮಾಡುವುದು ಇತ್ಯಾದಿ ಸೇರಿವೆ.

ಜೀನ್ ಶಾರ್ಪ್ ಅಮೇರಿಕಾದ ಮೆಸೆಚುಸೆಟ್ ವಿವಿಯ ಪದ ವೀಧರರು. ಅದೇ ವಿವಿಯಲ್ಲಿ ಹಲವು ವರುಷ ಪ್ರಾಧ್ಯಾಪಕರಾಗಿ ನಿವೃತ್ತಿಯಾದ ನಂತರ ಅಲ್ಬರ್ಟ್ ಐನ್ಸ್ಟೀನ್ ಇಸ್ಟಿಟೂಟ್ ಎಂಬುದನ್ನು ಸ್ಥಾಪಿಸಿ ಜಗತ್ತಿನಲ್ಲಿ ಸರ್ವಾಧಿಕಾರವನ್ನು ಅಹಿಂಸಾ ಹೋರಾಟದ ಮುಖಾಂತರ ಬದಲಾಯಿಸುವ ಹೊಸ ಸಾಂಪ್ರದಾಯವನ್ನು ಜಗತ್ತಿಗೆ ಕಲಿಸಿ ಕೊಟ್ಟರು. ಅವರ ಸಂಸ್ಥೆಯ ಮೂಲಧ್ಯೇಯಗಳನ್ನು ಗಮನಿಸಿದರೆ ಈ ಆಂಶಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ. ಅವುಗಳೆಂದರೆ ಪ್ರಜಾಪ್ರಭುತ್ವ ಸಂಸ್ಥೆ ಹಾಗೂ ಸ್ವಾತಂತ್ರವನ್ನು ಎತ್ತಿ ಹಿಡಿಯುವುದು, ಸರ್ವಾಧಿಕಾರ, ಧಮನೀಯತೆ ಹಾಗೂ ಜನಾಂಗೀಯತೆಯನ್ನು ವಿರೋಧಿಸುವುದು, ನೀತಿಯ ಸಾಧನವಾಗಿರುವ ಕ್ರೌರ್ಯವನ್ನು ಕಡಿಮೆ ಮಾಡುವುದು ಇತ್ಯಾದಿ ಸೇರಿವೆ.

ಜೀನ್ ಶಾರ್ಪ್ ಮಾರ್ಕ್ಸ್‌ವಾದಿಯಲ್ಲ, ಅಥವಾ ಚೆಗವಾರಂತೆ ಕ್ರಾಂತಿಯನ್ನು ಜಗತ್ತಿನ ಎಲ್ಲಾ ಕಡೆ ವಿಸ್ತರಿಸಲು ಪಣತೊಟ್ಟ ತೀವ್ರತರ ಎಡಪಂಥೀಯರೂ ಅಲ್ಲ. ಆದರೆ ಅವರು ಮಾವೋನಷ್ಟೇ ಪ್ರಸಿದ್ಧರು, ಚೆಗೆವಾರನಷ್ಟೆ ಅಭಿಮಾನಿಗಳನ್ನು ಹೊಂದಿರುವವರು. ಬಹಳಷ್ಟು ಸಂದರ್ಭದಲ್ಲಿ ಸರ್ವಾಧಿಕಾರ ಕೊನೆಗೊಂಡಾಗ ಅದಕ್ಕೆ ತಾವೇ ಕಾರಣರೆಂದು ಅಥವಾ ತಮ್ಮ ಆಲೋಚನೆಗಳ ಪ್ರಭಾವವೆಂಬ ವಾದವನ್ನು ಶಾರ್ಪ್ ಒಪ್ಪುವುದಿಲ್ಲ.

ಶಾರ್ಪ್ ಅವರನ್ನು ವಿವಿಧ ಪ್ರಕಾರವಾಗಿ ಕರೆಯುತ್ತಾರೆ: ಅಹಿಂಸಾ ಚಳವಳಿಯ "ಮೆಖೆವೆಲ್ಲಿ" "ಅಹಿಂಸಾ ಯುದ್ಧದ ಕ್ಲಾಸ್ವಿಟ್ಜ್" "ಅಹಿಂಸಾ ತತ್ವದ ಹೊಸ ಪಿತಾಮಹ" ಇತ್ಯಾದಿ. ಯಾಕೆಂದರೆ ಅವರ ಸರ್ವಾಧಿಕಾರಿಯನ್ನು ವಿರೋಧಿಸುವ ಅಹಿಂಸಾ ಸೂತ್ರಗಳು, ಕ್ಷಿಪ್ರ ಕ್ರಾಂತಿಯನ್ನು ತಡೆಗಟ್ಟಲು ಮುಂದಿಡುವ ಅಹಿಂಸಾ ಸೂತ್ರಗಳು ಅವರನ್ನು ಜಗತ್ತಿನ ಇನ್ನೊಂದು "ಗಾಂಧಿಯನ್ನಾಗಿಸಿದೆ" ಎಂದರೂ ಸುಳ್ಳಲ್ಲ. ಆದರೂ ಇವರಿಬ್ಬರ ನಡುವೆ ವ್ಯತ್ಯಾಸಗಳಿರುವುದು ಕೂಡ ಅಷ್ಟೇ ವಾಸ್ತವ

ಗಾಂಧಿಯ ತರಹ ಅವರು ಅಸ್ಪಷ್ಟವಾಗಿ, ಅಮೂರ್ತವಾಗಿ ವಾದಿಸುವುದಿಲ್ಲ. ಬಹಳಷ್ಟು ಸಂದರ್ಭದಲ್ಲಿ ಅವರ ವಾದಗಳು ವ್ಯವಸ್ಥಿತವಾಗಿರುತ್ತದೆ ಹಾಗೂ ಬಹಳ ಸರಳವಾಗಿರುತ್ತದೆ. ಅವರ ಪುಸ್ತಕಗಳನ್ನು ಓದಿದರೆ ಒಂದೆಡೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿರುವ ವ್ಯವಸ್ಥಿತ ವಾದಗಳ ನೆನೆಪಾಗುತ್ತದೆ, ಮತ್ತೊಂದೆಡೆ ಮಾವೋನ ವ್ಯವಸ್ಥಿತ ವಾದಗಳ ನೆನಪಾಗುತ್ತದೆ. ಯಾಕೆಂದರೆ ಇವರಿಬ್ಬರೂ ವ್ಯವಸ್ಥೆ ವಿರುದ್ಧ ಯುದ್ಧವನ್ನು, ವೈರಿಗಳನ್ನು ವಿವರಿಸುವಾಗ ಅದರ ಪ್ರತೀ ಸೂಕ್ಷ್ಮತೆಯನ್ನು ವಿವರಿಸುತ್ತಾರೆ. ಇದನ್ನು ಶಾರ್ಪ್‌ರವರ ಅಸಹಕಾರ ಹೋರಾಟ

ಗಳಲ್ಲಿರುವ ಪ್ರಕಾರಗಳ ವಿಶ್ಲೇಷಣೆಗಳಲ್ಲಿ, ಸರ್ವಾಧಿಕಾರಿಗಳ ವಿರುದ್ಧ ಉಪಯೋಗಿಸುವ ವಿವಿಧ ತಂತ್ರಗಾರಿಕೆಗಳ ವಿಶ್ಲೇಷಣೆಗಳಲ್ಲಿ ನೋಡಬಹುದು.

ಎರಡನೇದಾಗಿ ಶಾರ್ಪ್‌ರ ಕಾಲಮಾನಕ್ಕೂ ಗಾಂಧಿಯ ಕಾಲಮಾನಕ್ಕೂ ಅಜಗಜಾಂತರವಿದೆ. ಗಾಂಧಿಯ ಸಮಯ ರಾಷ್ಟ್ರೀಯ ಹೋರಾಟದ ಸಮಯ, ಪ್ರಜಾಪ್ರಭುತ್ವ ಇನ್ನೂ ಬಾಲ್ಯಾವಸ್ಥೆಯಲ್ಲಿದ್ದ ಕಾಲವದು. ಅಮೇರಿಕಾದ ಯಜಮಾನಿಕೆಗೆ ಸೋವಿಯತ್ ಯೂನಿಯನ್ ತಡೆಯೊಡ್ಡುವ ಕಾಲವದು. ಅಲ್ಲದೇ ಫ್ಯಾಸಿ ಸಂ ಜಗತ್ತಿನ ವಿವಿಧೆಡೆ ಹರಡುತ್ತಿದ್ದ ಕಾಲ ಕೂಡ ಹೌದು. ಅದೇ ಸಂದರ್ಭದಲ್ಲಿ ಗಾಂಧಿಯ ಅಹಿಂಸಾ ರಾಜಕಾರಣ ಮೇಲ್ನೋಟಕ್ಕೆ ಭಾರತಕ್ಕೆ ಸೀಮಿತಗೊಂಡರೂ, ವಾಸ್ತವವಾಗಿ ಅದರ ಪ್ರಯೋಗ ಜಗತ್ತಿನ ವಿವಿಧೆಡೆ ಸೂಕ್ಷ್ಮವಾಗಿ ನಡೆಯುತ್ತಿದ್ದ ಕಾಲ. ಗಾಂಧಿ ಒಬ್ಬ ದಂತ ಕತೆಯಾಗಿದ್ದ ಕಾಲ ಕೂಡ ಹೌದು. ಅವರ ಹೆಸರಿನಲ್ಲಿ ಅಮೇರಿಕಾದಲ್ಲಿ, ಇಂಗ್ಲೆಂಡಿನಲ್ಲಿ, ಜಗತ್ತಿನ ಇನ್ನಿತರ ಕಡೆ ಹತ್ತು ಹಲವು ಪೌರ ಸಮಾಜಗಳು ಹುಟ್ಟಿಕೊಂಡಿದ್ದವು, ಹಾಗೂ ಅವರ ಅಹಿಂಸಾ ತತ್ವದ ಪ್ರಯೋಗವನ್ನ ಮಾಡುತ್ತಿದ್ದವು. ಈ ರೀತಿಯ ಪ್ರಯೋಗ ಗಾಂಧಿಯೋತ್ತರ ಕಾಲದಲ್ಲೂ ನೋಡಬಹುದು. ಜಾಗತೀಕರಣ ಸಂದರ್ಭದಲ್ಲಿ ಹುಟ್ಟಿದ ನೂರಾರು ಸಾಮಾಜಿಕ ಚಳವಳಿಗಳಲ್ಲಿ ಗಾಂಧಿ ಇರುವುದು ವಾಸ್ತವ. ಈ ಎಲ್ಲಾ ಚಳವಳಿಗಳಿಗೂ ಗಾಂಧಿ ಸ್ಪೂರ್ತಿಯಾಗುತ್ತಾರೆ ಹಾಗೂ ಅವರ ಪುಸ್ತಕ "ಹಿಂದ್ ಸ್ವರಾಜ್" ಜಾಗತೀಕರಣಕ್ಕೆ ಪರ್ಯಾಯವಾಗುತ್ತದೆ.

ಈ ಸಂದರ್ಭದಲ್ಲಿ ಜೀನ್ ಶಾರ್ಪ್ ಗಾಂಧಿಯ ಅಹಿಂಸಾ ತತ್ವಗಗಳಿಂದ ಆಕರ್ಷಿತವಾಗಿದ್ದರೆ ಆಶ್ಚರ್ಯ ಪಡೆಯಬೇಕಾಗಿಲ್ಲ. ಆದರೆ ಜೀನ್ ಶಾರ್ಪ್‌ಗೂ ಗಾಂಧಿಗೂ ಇರುವ ವ್ಯತ್ಯಾಸವೆಂದರೆ ಜೀನ್‌ಗೆ ಜಗತ್ತು ಈಗಲೂ ಸಂಪೂರ್ಣವಾಗಿ ಸರ್ವಾಧಿಕಾರಿಗಳಿಂದ ಸ್ವತಂತ್ರಗೊಂಡಿಲ್ಲ, ಹಾಗೂ ಜಗತ್ತು ಸಂಪೂರ್ಣವಾಗಿ ಪ್ರಜಾಪ್ರಭುತ್ವಗೊಂಡಿಲ್ಲ. ಅಲ್ಲದೇ ಗಾಂಧಿ ತರಹ ಅವರ ಅಹಿಂಸಾ ತತ್ವದ ಪ್ರಯೋಗ ಒಂದು ದೇಶಕ್ಕೆ ಮಾತ್ರ ಸೀಮಿತಗೊಳ್ಳಲಿಲ್ಲ. ಅವರು ತಮ್ಮ ಪ್ರಸಿದ್ಧ ಪುಸ್ತಕ ಫ್ರಮ್ ದಿಕ್ಟೇಟರ್‌ಶಿಪ್ ಟು ಡೆಮೋಕ್ರಸಿಯಲ್ಲಿ ಹೇಳುವಂತೆ, 2008ರಲ್ಲಿ 34 ಶೇಕಡಾಡಷ್ಟು ಜಗತ್ತಿನ ಪ್ರಜೆಗಳು "ಮುಕ್ತ ಗೊಳ್ಳದ" ಅತ್ಯಂತ ಕನಿಷ್ಠ ರಾಜಕೀಯ ಹಕ್ಕುಗಳಿರುವ ದೇಶಗಳಲ್ಲಿ ಜೀವಿಸುತ್ತಿದ್ದಾರೆ, ಇಂತಹ ದೇಶಗಳ ಸಂಖ್ಯೆಯೇ 42 ಇದೆ. ಈ ರಾಷ್ಟ್ರಗಳ ಮುಖ್ಯ ಲಕ್ಷಣ ವೆಂದರೆ ಇಲ್ಲೆಲ್ಲಾ ಮಿಲಿಟರಿ ಆಡಳಿತ (ಬರ್ಮ), ಸಾಂಪ್ರ ದಾಯಿಕವಾದ ಅರಸೊತ್ತಿಗೆ, (ಸೌದಿ ಹಾಗು ಭೂತಾನ್), ಭಲಾಢ್ಯ ಏಕ ಪಕ್ಷ ಪದ್ಧತಿ (ಚೀನಾ, ಉತ್ತರ ಕೋರಿಯಾ), ವಿದೇಶಿ ಆಳ್ವಿಕೆ" (ಟಿಬೆಟ್, ಪಶ್ಚಿಮ ಸಹಾರ) ಇದೆ[1]

ಗಾಂಧಿಯ ಪ್ರಭಾವವನ್ನು ಜೀನ್ ಶಾರ್ಪ್ ಬಹಳಷ್ಟು ಸಂದರ್ಭದಲ್ಲಿ ಒಪ್ಪಿಕೊಳ್ಳುತ್ತಾರೆ. ಇದು ಅವರ ದೊಡ್ಡತನವೂ ಹೌದು. ಗಾಂಧಿಯ ಕುರಿತಾದ ಉಲ್ಲೇಖ ಇವರ ಬಹಳಷ್ಟು ಪುಸ್ತಕಗಳಲ್ಲಿ ಕಂಡು ಬರುತ್ತದೆ. ಈಜಿಪ್ಟಿನ ಪ್ರಜೆಗಳು ಸರ್ವಾಧಿಕಾರಿಯನ್ನು ಧಿಕ್ಕರಿಸಿದಾಗ ಅಮೇರಿಕಾದ ಟೈಮ್ಸ್ ಪತ್ರಿಕೆ "ಇದು ಗಾಂಧಿಯ ನೇರ ಕಾಣಿಕೆ" ಎಂದೆಲ್ಲಾ ಬಣ್ಣಿಸಿತ್ತು. ತನ್ನ ಒಂದು ಮಹತ್ವದ ಪುಸ್ತಕ[2] Gandhi as a Political Strategist, with Essays on Ethics and Politics ನಲ್ಲಿ ಗಾಂಧಿಯ ರಾಜಕೀಯ ಮಹತ್ವವನ್ನು, ಅಹಿಂಸಾ ಚಳವಳಿಯ ಉಗಮ, ಗಾಂಧಿಯ ಸತ್ಯ, ರಾಜಕೀಯ ಸಂಘರ್ಷ, ಭಾರತದಲ್ಲಿ ಅಹಿಂಸಾ ಚಳವಳಿ ಬೆಳೆದ ದಾರಿ, ಗಾಂಧಿಯ ರಚನಾತ್ಮಕ ಚಟುವಟಿಕೆ, ಅಹಿಂಸಾ ಚಳವಳಿಗೆ ಭಾರತದ ಕೊಡುಗೆ, ಅಹಿಂಸೆ ಹಾಗೂ ನೈತಿಕತೆಯ ರಾಜಕಾರಣ ಇತ್ಯಾದಿಗಳ ಬಗ್ಗೆ ಚರ್ಚಿಸುತ್ತಾರೆ. Gandhi weilds the weapon of moral power ಎಂಬ ಇನ್ನೊಂದು ಪುಸ್ತಕದಲ್ಲಿ ಗಾಂಧಿಯ ಕುರಿತು ಈ ರೀತಿ ಹೇಳುತ್ತಾರೆ," Gandhiji's life, message and work derive vital signific ance for he points to an alter native to war. He turned his back to violence, but he did not on that account meekly sub mit to evil. He discovered a way of figh ting evil in dynamic way, which he felt could never know defeat". ಅದೇ ರೀತಿ ಇನ್ನೊಂದು ಪುಸ್ತಕ Gandhi As A Political Strategist ನಲ್ಲಿ ಗಾಂಧಿಯನ್ನು, "an extraor dinary political strategist, and although not a systematic social analyst", ಎಂದು ಕರೆಯುತ್ತರೆ." ಇದು ಗಾಂಧಿಯನ್ನು ತಮ್ಮ ತಾತ್ವಿಕತೆಯಲ್ಲಿ ಒಪ್ಪಿಕೊಂಡ ರೂಪವೂ ಹೌದು.

ವಾಸ್ತವವಾಗಿ ಜೀನ್ ಶಾರ್ಪ್‌ರ ಅಹಿಂಸಾ ಚಿಂತನೆಯ ಪ್ರಭಾವವನ್ನು ಈಜಿಪ್ಟ್‌ಗೆ ಮಾತ್ರ ಸೀಮಿತಗೊಳಿಸಬಾರದು. ಈಜಿಪ್ಟ್‌ನಲ್ಲಿ ಜನ ಆಂದೋಳನಗಳು ಆರಂಭಗೊಳ್ಳುವ ಮೊದಲು ಟ್ಯುನೀಷೀಯಾದಲ್ಲಿ ಯುವಕರ ಹೋರಾಟಗಳು ಆರಂಭಗೊಂಡಿದ್ದವು. ಅದಕ್ಕೆ ಶಾರ್ಪ್‌ರವರ ಚಿಂತನೆಗಳು ಕಾರಣೀಭೂತವಾದವು. ಅದಕ್ಕೂ ಮೊದಲು ಐರೋಪ್ಯದಲ್ಲಿ ಕಮ್ಯೂನಿಷ್ಟ್ ಸರಕಾರದ ಪತನಕ್ಕೂ ಹಾಗೂ ಅಲ್ಲಿ ನಡೆದ ವಿವಿಧ "ಬಣ್ಣಗಳ"ಕ್ರಾಂತಿಗೂ ಅವರ ಪ್ರಭಾವವೇ ಕಾರಣೀಭೂತರೆಂಬ ವಾದವಿದೆ. ನೈಜವಾಗಿ ನೋಡುವುವಾದರೆ "ಬಣ್ಣಗಳ" ಉಲ್ಲೇಖ, ಹಾಗೂ ಸರ್ವಾಧಿಕಾರಿಗಳ ಪ್ರಭುತ್ವವನ್ನು ಕೊನೆಗಾಣಿಸಲು "ಬಣ್ಣಗಳನ್ನು" ಸಂಕೇತವಾಗಿ ಬಳಸಬೇಕೆಂಬ ವಾದ ಅವರ ಅಸಹಕಾರ ತತ್ವಗಳಲ್ಲಿ ದಟ್ಟವಾಗಿ ಕಂಡುಬರುತ್ತದೆ. ಇದನ್ನು ನವ-ಗಾಂಧಿವಾದದ ಇನ್ನೊಂದು ರೂಪವೆಂದರೆ ಅತಿಶೋಕ್ತಿಯಾಗಲಾರದು.

ಶಾರ್ಪ್‌ರವರ ವಿವಿಧ ಪುಸ್ತಕಗಳು ವಿವಿಧ ದೇಶಗಳಲ್ಲಿ ಬದಲಾವಣೆಗೆ ಪ್ರೇರಕವಾಗಿದ್ದವು ಎಂದರೆ ಸುಳ್ಳಲ್ಲ. ಅವರ ಫ್ರಮ್ ಡಿಕ್ಟೇಟರ್‌ಶಿಪ್ ಟು ಡಿಮೋಕ್ರಾಸಿಯು ಸರ್ಬಿಯಾ, ಜಾರ್ಜಿಯಾ, ಉಕ್ರೇನ್, ಕಿರಿಂಗ್‌ಸ್ತಾನ, ಜಿಂಬ್ವಾವ್ವೆ ಹಾಗೂ ಬೆಲೂರಸ್ ಚಳವಳಿಗೆ ಪ್ರೇರಕವಾಯಿತು. ವಾಸ್ತವಾಗಿ ಈ ಪುಸ್ತಕವನ್ನು ಪ್ರಥಮಬಾರಿಗೆ 1993ರಲ್ಲಿ ಮೈನಮಾರ್‌ನ ಪ್ರಜಾಪ್ರಭುತ್ವ ಹೋರಾಟಗಳಿಗೆ ಬಳಸಲಾಯಿತು. ಅಲ್ಲದೇ ಮೈನಮಾರ್‌ನ ಹೋರಾಟಗಳಿಗೂ ಈ ಪುಸ್ತಕ ಸ್ಪೂರ್ತಿಯಾಯಿತು. ಅದೇ ರೀತಿ ಥೈಲ್ಯಾಂಡ್, ಇಂಡೋನೇಶಿಯಾದ ಮಿಲಿಟರಿ ವಿರುದ್ಧ ಕೂಡ ಸ್ಪರ್ತಿಯಾಯಿತು. ಅವರ ಇನ್ನೊಂದು ಪುಸ್ತಕ ಸಿವಿಲಿಯನ್ ಬೆಸ್ಡ್ ಡಿಫೆನ್ಸ್ ಲಿಥುವೇನಿಯಾ. ಲಾಟ್ವಿಯಾ. ಎಟ್ಲೋನೀಯಾ ಸರಕಾರಗಳಿಗೆ ಸೋವಿಯತ್ ಯೂನಿಯನ್ ಒಕ್ಕೂಟದಿಂದ ಹೊರಬರಲು 1991 ರಲ್ಲಿ ಶಕ್ತಿಯನ್ನು ನೀಡಿತ್ತು. ಇದೇ ರೀತಿ ಅವರ ಕೃತಿಗಳು ಇರಾನ್‌ನಲ್ಲಿ 2009ರಲ್ಲಿ ಅಸಫಲ "ಪಚ್ಚೆ" ಕ್ರಾಂತಿಗೂ ಅವಕಾವನ್ನು ಮಾಡಿಕೊಟ್ಟಿತ್ತು. ಆ ಸಂದರ್ಭದಲ್ಲಿ ಚಳವಳಿಗಾರರು ಅವರ 198 ಅಸಹಕಾರ ತಂತ್ರಗಳಲ್ಲಿ ನೂರಕ್ಕೂ ಮಿಕ್ಕಿ ತಂತ್ರಗಳನ್ನು ಉಪಯೋಗಿಸಿದ್ದರು ಎಂಬ ಹೆಗ್ಗಳಿಕೆ ಇದೆ.

ಜೀನ್ ಶಾರ್ಪ್‌ರ ವಾದಗಳಲ್ಲಿ ಎರಡು ವಿಶಿಷ್ಟತೆ ಇದೆ, ಒಂದೆಡೆ ಇತಿಹಾಸವನ್ನು ಪರೀಕ್ಷಿಸುತ್ತಾ, ಮೌಲ್ಯೀಕರಿಸುತ್ತಾ ಪ್ರಸ್ತುತ ಕಾಲಮಾನದಲ್ಲಿ ಅದರ ಪ್ರಸ್ತುತೆಯನ್ನು ಹುಡುಕುವ ಯತ್ನದ ಮೆಥಡಾಲಜಿ ಇದ್ದರೆ, ಇನ್ನೊಂದೆಡೆ ಜನಾಂದೋಳನದಲ್ಲಿ ಅಹಿಂಸೆಯ ಕಾಳಜಿ ಹಾಗೂ ಒತ್ತು ಇವರಲ್ಲಿ ದಟ್ಟವಾಗಿ ಕಂಡುಬರುತ್ತದೆ.

ಜೀನ್ ಶಾರ್ಪ್ ಜನಾಂದೋಳನಗಳ ಸಂದರ್ಭದಲ್ಲಿ ಹೋರಾಟಗಳಿಗೆ "ಬಣ್ಣ"ಗಳ ಶೀರ್ಷಿಕೆಯನ್ನು

ವಾಸ್ತವವಾಗಿ ಜೀನ್ ಶಾರ್ಪ್‌ರ ಅಹಿಂಸಾ ಚಿಂತನೆಯ ಪ್ರಭಾವವನ್ನು ಈಜಿಪ್ಟ್‌ಗೆ ಮಾತ್ರ ಸೀಮಿತಗೊಳಿಸಬಾರದು. ಈಜಿಪ್ಟ್‌ನಲ್ಲಿ ಜನ ಆಂದೋಳನಗಳು ಆರಂಭಗೊಳ್ಳುವ ಮೊದಲು ಟ್ಯುನೀಷೀಯಾದಲ್ಲಿ ಯುವಕರ ಹೋರಾಟಗಳು ಆರಂಭಗೊಂಡಿದ್ದವು. ಅದಕ್ಕೆ ಶಾರ್ಪ್‌ರವರ ಚಿಂತನೆಗಳು ಕಾರಣೀಭೂತವಾದವು. ಅದಕ್ಕೂ ಮೊದಲು ಐರೋಪ್ಯದಲ್ಲಿ ಕಮ್ಯೂನಿಷ್ಟ್ ಸರಕಾರದ ಪತನಕ್ಕೂ ಹಾಗೂ ಅಲ್ಲಿ ನಡೆದ ವಿವಿಧ "ಬಣ್ಣಗಳ"ಕ್ರಾಂತಿಗೂ ಅವರ ಪ್ರಭಾವವೇ ಕಾರಣೀಭೂತರೆಂಬ ವಾದವಿದೆ. ನೈಜವಾಗಿ ನೋಡುವುವಾದರೆ "ಬಣ್ಣಗಳ" ಉಲ್ಲೇಖ, ಹಾಗೂ ಸರ್ವಾಧಿಕಾರಿಗಳ ಪ್ರಭುತ್ವವನ್ನು ಕೊನೆಗಾಣಿಸಲು "ಬಣ್ಣಗಳನ್ನು" ಸಂಕೇತವಾಗಿ ಬಳಸಬೇಕೆಂಬ ವಾದ ಅವರ ಅಸಹಕಾರ ತತ್ವಗಳಲ್ಲಿ ದಟ್ಟವಾಗಿ ಕಂಡುಬರುತ್ತದೆ. ಇದನ್ನು ನವ-ಗಾಂಧಿವಾದದ ಇನ್ನೊಂದು ರೂಪವೆಂದರೆ ಅತಿಶೋಕ್ತಿಯಾಗಲಾರದು. ಶಾರ್ಪ್‌ರವರ ವಿವಿಧ ಪುಸ್ತಕಗಳು ವಿವಿಧ ದೇಶಗಳಲ್ಲಿ ಬದಲಾವಣೆಗೆ ಪ್ರೇರಕವಾಗಿದ್ದವು ಎಂದರೆ ಸುಳ್ಳಲ್ಲ. ಅವರ ಫ್ರಮ್ ಡಿಕ್ಟೇಟರ್‌ಶಿಪ್ ಟು ಡಿಮೋಕ್ರಸಿಯು ಸರ್ಬಿಯಾ, ಜಾರ್ಜಿಯಾ, ಉಕ್ರೇನ್, ಕಿರಿಂಗ್‌ಸ್ತಾನ, ಜಿಂಬ್ವಾವ್ವೆ ಹಾಗೂ ಬೆಲೂರಸ್ ಚಳವಳಿಗೆ ಪ್ರೇರಕವಾಯಿತು.

[illegible]ತ್ತಾರೆ. ಹಾಗೂ ಸಂಕೇತಗಳ ಮೂಲಕ ಗುರು [illegible]ಯುಸುತ್ತಾರೆ. ಆದಕಾರಣ ಜಾಗತೀಕರಣದ ಸಂದರ್ಭದಲ್ಲಿ ಹುಟ್ಟಿದ ವಿವಿಧ ಆಂದೋಳನಗಳನ್ನು "ಶ್ವೇತ", "ಕಿತ್ತಳೆ", "ಪಚ್ಚೆ" ವೆಲ್ವೆಟ್" ಎಂದೆಲ್ಲಾ ನಾಮಕರಣಗೊಳ್ಳಲು ಜೀನ್ ಶಾರ್ಪ್ ಕಾರಣರು ಎಂದರೂ ತಪ್ಪಾಗಲಾರದು. ಈ ರೀತಿಯ ನಾಮಕರಣ ಗಾಂಧಿಯಲ್ಲಿ ಕಂಡುಬರುವುದಿಲ್ಲ. ಆದರೆ ಗಾಂಧಿಯ ಹೋರಾಟಗಳಲ್ಲಿ ಒಂದು ವಿಶಿಷ್ಟತೆ ಇದೆ. ಅದರಲ್ಲಿ ದೇಸಿಯತೆಯ ಛಾಪು: ಹರತಾಳ್, ಸತ್ಯಾಗ್ರಹ, ಹಿಜ್ರತ್, ಇತ್ಯಾದಿ. ಇದೇ ಸಂದರ್ಭದಲ್ಲಿ ಒಂದು ಪ್ರಶ್ನೆ ಕೇಳುವುದು ಅನಿವಾರ್ಯವೆನಿಸುತ್ತದೆ: ಗಾಂಧಿಯ ಅಹಿಂಸಾ ಹೋರಾಟ ಭಾರತಕ್ಕೆ ಮಾತ್ರ ಸೀಮಿತಗೊಂಡಿತ್ತೇ?. ಹಿಟ್ಲರ್ ಹಾಗೂ ನಾಜಿಗಳ ವಿರುದ್ಧ ಅಹಿಂಸಾ ಮಾರ್ಗವನ್ನು ಅನುಸರಿಸಲು ಗಾಂಧಿ ನೀಡಿದ ಕರೆ ಅದರ ಜಾಗತೀಕ ಮಹತ್ವವನ್ನು ಹೇಳುತ್ತದೆ. ಅಲ್ಲದೇ ಅದೇ ಸುಮಾರಿಗೆ ಜಗತ್ತಿನ ವಿವಿದೆಡೆ ಗಾಂಧಿ ಹೆಸರಿನಲ್ಲಿ ಹುಟ್ಟಿದ ನೂರಾರು ಸರಕಾರೇತರ ಸಂಘ ಸಂಸ್ಥೆಗಳ ಅಹಿಂಸಾ ಮಾರ್ಗದ ಪ್ರಯೋಗ ಗಾಂಧಿ ಯವರ ಮಹತ್ವವನ್ನು ಹೇಳುತ್ತದೆ. ಜೇನ್ ಶಾರ್ಪ್‌ರ ಅಹಿಂಸಾ ಮಾರ್ಗದ ವಾದ ಗಾಂಧಿವಾದದ ವಿಸ್ತರಣೆ ಎನ್ನಲೇಬೇಕು.

ಜೀನ್ ಶಾರ್ಪ್‌ವರ ವಾದದಲ್ಲಿ ಒಂದು ಸರಳವಾದ ಅಂಶವಿದೆ. ಅದು ಅತ್ಯಂತ ಶಕ್ತಿಶಾಲಿಯೂ ಹೌದು. ಅವರ ಪ್ರಕಾರ ಸರ್ವಾಧಿಕಾರಿಯ ಶಕ್ತಿ ಹಾಗೂ ಅಧಿಕಾರವು ಮೂಲತ:ವಾಗಿ ಪ್ರಜೆಗಳ ಮೌನ ಸಮ್ಮತಿಯಿಂದ ಬಂದಿದೆ. ಈ ಮೌನ ಸಮ್ಮತಿಯನ್ನು ಮುರಿದ ದಿನವೇ ಸರ್ವಾಧಿಕಾರಿಯ ಅಧಿಕಾರ ಕೊನೆಗೊಳ್ಳುತ್ತದೆ ಎಂಬ ಮುಖ್ಯ ವಾದವನ್ನು ಮುಂದಿಡುತ್ತಾರೆ. ಅಲ್ಲದೇ ಅವರ ಪ್ರಕಾರ ಈ ಅಧಿಕಾರ ಅಥವಾ ಶಕ್ತಿ ಅಡಕವಾಗಿರುವುದು ಸಮಾಜದಲ್ಲಿ. ಅಲ್ಲದೇ ಜನರ ಸಹಕಾರ, ವಿಧೇಯತೆ ಹಾಗೂ ಜನರ ಮೌನ ಸಮ್ಮತಿ ಈ ಅಧಿಕಾರವನ್ನು, ಶಕ್ತಿಯನ್ನು ಚಲಾಯಿಸಲು ಅವಕಾಶ ಮಾಡಿಕೊಡುತ್ತದೆ. ಇದನ್ನು ಬದಲಾಯಿಸಬೇಕಾದರೆ, ಅಥವಾ ಸರ್ವಾಧಿಕಾರವನ್ನು ಕೊನೆಗಾಣಿಸಬೇಕಾದರೆ ಜನರಲ್ಲಿ ಪ್ರಭುತ್ವವನ್ನು ಬದಲಾಯಿಸುವ ಪ್ರಭಲ ಇಚ್ಛೆ ಇರಬೇಕು, ಅಲ್ಲದೇ ಅದು ಸಾಧ್ಯವಾಗುವುದು ಒಂದು ಸಂದರ್ಭದಲ್ಲಿ – ಆದರಲ್ಲೂ ಆಳ್ವಿಕೆಗೆ ಸಹಕಾರ ಹಾಗೂ ವಿಧೇಯತೆಯನ್ನು "ಅಸಹಕಾರದ" ಮೂಲಕ ವಾಪಾಸು ಪಡೆದುಕೊಂಡಾಗ ಮಾತ್ರ[3]. ಅವರ ವಾದವನ್ನು ಉಲ್ಲೇಖಿಸುವುದಾದರೆ," This view of power claims that all governments depend on sources of power which come from the society, and are made available because of the assistance, cooperation, and obedience of members of that society. When such assistance, cooperation, and obedience are withdrawn effectively the government's power is weakened, and when the sources of power are severed permanently, the government's power is destroyed. Hence, all government, no matter how tyrannical, is potentially subject to control by the citizenry if they are willing to withhold their support despite repression until the regime, with no further sources of power available, disintegrates

ಆಸಕ್ತಿಯ ವಿಷಯವೆಂದರೆ ಜೇನ್ ಶಾರ್ಪ್ "ನಾಗರೀಕರ ಇಚ್ಛೆ" ಹಾಗೂ "ಅಸಹಕಾರ" ವಾದವನ್ನು ಗಾಂಧಿಯ ಮುಖಾಂತರ ತೆಗೆದುಕೊಳ್ಳುತ್ತಾರೆ. ಇದು ಶಾರ್ಪ್‌ರ ಬೌದ್ಧಿಕ ಚಲನಶೀಲತೆಯ ಮೂಲವನ್ನು ಎತ್ತಿ ಹೇಳುತ್ತದ. ಈ ಹಿನ್ನಲೆಯಲ್ಲಿ ಅವರು ವಿವಿಧ ಅಹಿಂಸಾ ಮಾರ್ಗಗಳನ್ನು ಪ್ರತಿಪಾದಿಸುತ್ತಾರೆ. ಗಾಂಧಿಯಲ್ಲಿ ಅಹಿಂಸಾ ಅಸ್ತ್ರಕ್ಕೆ ನಿರ್ಧಿಷ್ಟ ಸಂಖ್ಯೆಗಳಿಲ್ಲ, ಶಾರ್ಪ್‌ರಲ್ಲಿ ಅದು ನಿರ್ಧಿಷ್ಟವಾಗಿ 198 ಸಂಖ್ಯೆಗೆ ಸೀಮಿತವಾಗಿರುತ್ತದೆ.

ವಾಸ್ತವವಾಗಿ ಅಹಿಂಸಾ ತಂತ್ರಗಳನ್ನು ಮೂರು ವಿಭಾಗಗಳನ್ನಾಗಿ ವಿಭಜಿಸಬಹುದು. ಅವುಗಳಲ್ಲಿ ಮುಷ್ಕರ ಹಾಗೂ ಸಮಜಾಯಿಸುವುವಿಕೆ, ಅಸಹಕಾರ, ಹಾಗೂ ಹಸ್ತಕ್ಷೇಪ ಸೇರಿವೆ. ಮೊದಲನೇ ತಂತ್ರಗಳಲ್ಲಿ 54 ಪ್ರಕಾರಗಳಿವೆ. ಅವುಗಳಲ್ಲಿ ಸಾಂಕೇತಿಕ ಮುಷ್ಕರ, ಪೇರೆಡ್ ಇತ್ಯಾದಿ ಸೇರಿವೆ. ಅಸಹಕಾರದಲ್ಲಿ ಮೂರು ಪ್ರಕಾರಗಳಿವೆ: ಸಾಮಾಜಿಕ ಅಸಹಕಾರ (ಇದರಲ್ಲಿ 16 ಪ್ರಕಾರಗಳಿವೆ), ಆರ್ಥಿಕ ಅಸಹಕಾರ (26 ಪ್ರಕಾರಗಳಿವೆ) ಹಾಗೂ ರಾಜಕೀಯ ಪ್ರಕಾರ (ಇದರಲ್ಲಿ 38 ರೀತಿಗಳಿವೆ), ಕೊನೆಯ ತಂತ್ರವಾದ "ಹಸ್ತಕ್ಷೇಪ"ದಲ್ಲಿ 41 ವಿಧಗಳನ್ನು ಜೀನ್ ಶಾರ್ಪ್ ಗುರುತಿಸುತ್ತಾರೆ.

ಜೇನ್ ಶಾರ್ಪ್ "ನಾಗರೀಕರ ಇಚ್ಛೆ" ಹಾಗೂ "ಅಸಹಕಾರ" ವಾದವನ್ನು ಗಾಂಧಿಯ ಮುಖಾಂತರ ತೆಗೆದುಕೊಳ್ಳುತ್ತಾರೆ. ಇದು ಶಾರ್ಪ್‌ರ ಬೌದ್ಧಿಕ ಚಲನಶೀಲತೆಯ ಮೂಲವನ್ನು ಎತ್ತಿ ಹೇಳುತ್ತದೆ. ಈ ಹಿನ್ನಲೆಯಲ್ಲಿ ಅವರು ವಿವಿಧ ಅಹಿಂಸಾ ಮಾರ್ಗಗಳನ್ನು ಪ್ರತಿಪಾದಿಸುತ್ತಾರೆ. ಗಾಂಧಿಯಲ್ಲಿ ಅಹಿಂಸಾ ಅಸ್ತ್ರಕ್ಕೆ ನಿರ್ಧಿಷ್ಟ ಸಂಖ್ಯೆಗಳಿಲ್ಲ, ಶಾರ್ಪ್‌ರಲ್ಲಿ ಅದು ನಿರ್ಧಿಷ್ಟವಾಗಿ 198 ಸಂಖ್ಯೆಗೆ ಸೀಮಿತವಾಗಿರುತ್ತದೆ.. ವಾಸ್ತವವಾಗಿ ಅಹಿಂಸಾ ತಂತ್ರಗಳನ್ನು ಮೂರು ವಿಭಾಗಗಳನ್ನಾಗಿ ವಿಭಜಿಸಬಹುದು. ಅವುಗಳಲ್ಲಿ ಮುಷ್ಕರ ಹಾಗೂ ಸಮಜಾಯಿಸುವುವಿಕೆ, ಅಸಹಕಾರ, ಹಾಗೂ ಹಸ್ತ ಕ್ಷೇಪ ಸೇರಿವೆ. ಮೊದಲನೇ ತಂತ್ರಗಳಲ್ಲಿ 54 ಪ್ರಕಾರಗಳಿವೆ. ಅವುಗಳಲ್ಲಿ ಸಾಂಕೇತಿಕ ಮುಷ್ಕರ, ಪೇರೆಡ್ ಇತ್ಯಾದಿ ಸೇರಿವೆ. ಅಸಹಕಾರದಲ್ಲಿ ಮೂರು ಪ್ರಕಾರಗಳಿವೆ: ಸಾಮಾಜಿಕ ಅಸಹಕಾರ (ಇದರಲ್ಲಿ 16 ಪ್ರಕಾರಗಳಿವೆ), ಆರ್ಥಿಕ ಅಸಹಕಾರ (26 ಪ್ರಕಾರಗಳಿವೆ) ಹಾಗೂ ರಾಜಕೀಯ ಪ್ರಕಾರ(ಇದರಲ್ಲಿ 38 ರೀತಿಗಳಿವೆ), ಕೊನೆಯ ತಂತ್ರವಾದ "ಹಸ್ತಕ್ಷೇಪ"ದಲ್ಲಿ 41 ವಿಧಗಳನ್ನು ಜೇನ್ ಶಾರ್ಪ್ ಗುರುತಿಸುತ್ತಾರೆ.

ನೈಜವಾಗಿ ವಿಶ್ಲೇಷಿಸುವುದಾದರೆ ಈ ಎಲ್ಲಾ ತಂತ್ರಗಳು ಹೊಸತೇನಲ್ಲ. ಅವುಗಳ ಇತಿಹಾಸವನ್ನು ಕೆದಕಿದರೆ ನಮಗೆ ಮತ್ತೆ ಗಾಂಧಿಯವರು ನೆನಪಾಗುತ್ತಾರೆ. ಆದರೆ ಅದರ ಶಕ್ತಿ ಇರುವುದು ಅದರ ಅಳವಡಿಕೆಯಲ್ಲಿ. ಬಹಳಷ್ಟು ತಂತ್ರಗಳನ್ನು ಹಾಗೂ ಅಸ್ತ್ರಗಳನ್ನು ಗಾಂಧಿ ತಮ್ಮ ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಅಳವಡಿಸಿದ್ದರು[4], ಜೀನ್ ಶಾರ್ಪ್ ಈ ಪಟ್ಟಿಯಲ್ಲಿ ಇನ್ನಷ್ಟು ಹೊಸ ತಂತ್ರಗಳನ್ನು ಸೇರಿಸಿದರು ಎಂದು ಹೇಳಿದರೆ ಅತೀಶಯೋಕ್ತಿಯಾಗಲಾರದು. ಆದಕಾರಣ ಇವುಗಳು ಗಾಂಧಿಯೋತ್ತರ ಕಾಲಾವಧಿಯ ಹೊಸ ಅಹಿಂಸಾ ರಾಜಕೀಯದ ತಂತ್ರ ಅಥವಾ ಅಸ್ತ್ರಗಳಾಗುತ್ತವೆ.

ಹೊಸತನದಿಂದ ಕೂಡಿದ ಅಹಿಂಸಾ ತಂತ್ರಗಳೆಂದರೆ[5] ಸಾರ್ವಜನಿಕವಾಗಿ ಬತ್ತಲೆಯಾಗುವುದು, ಸ್ವಂತ ಆಸ್ತಿಯನ್ನು ಧ್ವಂಸ ಮಾಡುವುದು, ಹೊಸ ಸಂಜ್ಞೆಗಳನ್ನು ಅಳವಡಿಸುವುದು, ಚಳವಳಿಗೆ ಬಣ್ಣದ ಲೇಪ ಹಾಗೂ ಶೀರ್ಷಿಕೆ ನೀಡುವುದು, ಸರಕಾರಿ ನೌಕರರನ್ನು ಹೀಯಾಳಿಸುವುದು, ಸಾಂಕೇತಿಕ ಶಬ್ದಗಳ ಹಾಗೂ ಧ್ವನಿಗಳ ಉಪಯೋಗ, ಸಾಂಕೇತಿಕ ಬೆಳಕುಗಳ ಉಪಯೋಗ ಇತ್ಯಾದಿ. ಆಸಕ್ತಿಯ ವಿಷವೆಂದರೆ ಜೀನ್ ಶಾರ್ಪ್ ಈ ಅಹಿಂಸಾ ತಂತ್ರಗಳಲ್ಲಿ ನಾಟಕ ಹಾಗೂ ಮ್ಯೂಸಿಕ್, ಕಲಿಕೆ ಮತ್ತು ಹಾಡುಗಳ ಉಪಯೋಗವನ್ನೂ ಅಲ್ಲದೇ ಸತ್ತವರನ್ನು ಅಹಿಂಸಾ ಹೋರಾಟದ ಭಾಗವಾಗಿ ಗುರುತಿಸುತ್ತಾರೆ. ಅದರಲ್ಲಿ ರಾಜಕೀಯ ಶೋಕಾಚರಣೆ, ಅಣುಕು ಸಾವಿನ ಮೆರವಣಿಗೆ, ಸಮಾಧಿಗಳಿಗೆ ಗೌರವ ಸಲ್ಲಿಸುವುದು ಕೂಡ ಸೇರಿದೆ.

ಸಾಮಾಜಿಕ ಅಸಹಕಾರದಲ್ಲಿ ಸಾಮಾಜಿಕ ಬಹಿಷ್ಕಾರ, ಸಾಮಾಜಿಕ ಸಂಸ್ಥೆಗಳಿಗೆ ಬಹಿಷ್ಕಾರ, ಸಾಮಾಜಿಕ ವ್ಯವಸ್ಥೆಯಿಂದ ಹೊರಗುಳಿಯಲು ಮನೆಯಲ್ಲಿಯೇ ಇದ್ದುಬಿಡುವುದು, ಸಾಮುದಾಯಿಕವಾಗಿ ಪಲಾಯನ ಮಾಡುವುದು ಕೂಡ ಸೇರಿಕೊಂಡಿವೆ. ಈ ಸಂದರ್ಭದಲ್ಲಿ ಜೀನ್ ಶಾರ್ಪ್ ಬಳಕೆದಾರರಿಗೆ ಆರ್ಥಿಕ ಅಸಹಕಾರದ ತತ್ವವನ್ನು ಮುಂದಿಡುತ್ತಾರೆ. ಅದರಲ್ಲಿ ಗೇಣಿಯನ್ನು ನೀಡದಿರುವುದು, ಬಾಡಿಗೆಗೆ ನೀಡಲು ಅಸಹಕರಿಸುವುದು, ಕನಿಷ್ಠ ಖರ್ಚು ಮಾಡುವುದು, ಬಹಿಷ್ಕರಿಸಿದ ವಸ್ತುಗಳನ್ನು ಉಪ ಯೋಗಿಸದೇ ಇರುವುದು ಇತ್ಯಾದಿ ಸೇರಿವೆ. ಈ ರೀತಿಯ ಅಸಹಾಕಾರ ಬರೇ ಬಳಕೆದಾರರಿಗೆ ಮಾತ್ರ ಸೀಮಿತಗೊಳಿಸಲಿಲ್ಲ. ಈ ಅಸಹಾಕಾರವನ್ನು ಅವರು ಕಾರ್ಮಿಕರಿಗೆ, ಮಧ್ಯವರ್ತಿಗಳಿಗೆ, ಮ್ಯಾನೇಜ್‌ಮೆಂಟ್‌ಗೆ ಕೂಡ ನೀಡುತ್ತಾರೆ.

ಇವೆಲ್ಲರ ನಡುವೆ ಸರ್ವಾಧಿಕಾರಿಯನ್ನು ವಿರೋಧಿಸಲು ಅವರು ನೀಡುವ ಸಲಹೆ ಏಕರೂಪಿಯಲ್ಲ. ಸರ್ವಾಧಿಕಾರಿ ರಾಜಕೀಯವಾಗಿ ಬಲಹೀನವಾಗಿದ್ದರೆ ರಾಜಕೀಯ ಅಸ್ತ್ರಗಳನ್ನೂ, ಆರ್ಥಿಕವಾಗಿ ಬಲಹೀನವಾಗಿದ್ದರೆ ಆರ್ಥಿಕ ಅಸ್ತ್ರಗಳನ್ನು ಉಪಯೋಗಿಸಬೇಕೆಂದು ಜೀನ್ ಶಾರ್ಪ್ ವಾದಿಸುತ್ತಾರೆ. ಆದರೆ ಈ ಎಲ್ಲಾ

ಅಸ್ತ್ರಗಳು ಅಂತಿಮವಾಗಿ ಅಹಿಂಸಾ ರೂಪದಲ್ಲಿರಬೇಕೆಂದು ಬಯಸುತ್ತಾರೆ ಹಾಗೇನೆ ವಾದಿಸುತ್ತಾರೆ. ಒಟ್ಟಾರೆಯಾಗಿ ಜನತೆ ಸರ್ವಾಧಿಕಾರಿಯೊಂದಿಗೆ ಅಹಿಂಸಾ ರೂಪದಲ್ಲಿ ಅಸಹಕರಿಸಿದಾಗ, ಹಾಗೂ ಅವನ ನ್ಯಾಯಬದ್ಧತೆಯನ್ನು ಪ್ರಶ್ನಿಸಿದಾಗ ವ್ಯವಸ್ಥೆ ತನ್ನಿಂದ ತಾನಾಗಿಯೇ ಪತನಗೊಳ್ಳುತ್ತದೆ.

ಈ ಎಲ್ಲಾ ಕಾರಣಗಳಿಗಾಗಿಯೇ ಮಿಲಿಟರಿ ಆಡಳಿತಗಾರರಿಗೆ, ಸರ್ವಾಧಿಕಾರಿಗಳಿಗೆ, ಏಕ ವ್ಯಕ್ತಿ ಆಡಳಿತಗಾರರಿಗೆ ಜೀನ್ ಶಾರ್ಪ್ ಕಂಡರೆ ಭಯ. ವಿಚಿತ್ರವೆಂದರೆ ಈ ವ್ಯಕ್ತಿ ಎಲ್ಲಿಯೂ ಕಂಡು ಬರುವುದಿಲ್ಲ. ಯಾವುದೇ ಹೋರಾಟಗಳ ಮುಂಚೂಣಿಯಲ್ಲಿಲ್ಲ. ಆದರೂ ಜಗತ್ತನ್ನು ಬದಲಾಯಿಸುವಷ್ಟು ಶಕ್ತಿಶಾಲಿ. ಒಂದು ಕಾಲದಲ್ಲಿ ಗಾಂಧಿಯಂತೆ ಆದರ್ಶವಾದಿಯಾಗಿದ್ದ ಜೀನ್ ಶಾರ್ಪ್ ಇವತ್ತು ವಾಸ್ತವವಾದಿ. ಅಹಿಂಸಾ ಅಸ್ತ್ರ ಬರೀ ಆದರ್ಶ ಕಲ್ಪನೆಯಾಗದೇ ಜನಸಾಮಾನ್ಯರು ತಮ್ಮ ದಿನ ನಿತ್ಯವಲ್ಲಿ ಪ್ರಯೋಗಿಸಬೇಕೆಂದು ವಾದಿಸಿದವರು. ಇವರಿಂದಾಗಿಯೇ ಅವರು ಪ್ರತೀಯೊಂದು ವ್ಯವಸ್ಥೆಗೂ, ಪ್ರಭುತ್ವಕ್ಕೂ, ತತ್ವಗಳಿಗೂ ದುಸ್ವಪ್ನವಾಗುತ್ತಾರೆ. ಇದರಲ್ಲಿ ಉದಾರವಾದಿ ಪ್ರಜಾಪ್ರಭುತ್ವವೂ, ತೀವ್ರತರ ಎಡಪಂಥೀಯವೂ ಹೊರ ತಾಗಿಲ್ಲ. ಒಂದು ರೀತಿಯಲ್ಲಿ ನೋಡುವುದಾದರೆ ಗಾಂಧಿಗಿಂತಲೂ ಒಂದು ಹೆಜ್ಜೆ ಮುಂದಿಟ್ಟವರು.

ಆದಕಾರಣ ಒಂದು ಪ್ರಶ್ನೆ ಇಲ್ಲಿ ಅನಿವಾರ್ಯ: ಗಾಂಧಿಯಿಂದ ಸ್ಫೂರ್ತಿ ಪಡೆದ ಜೀನ್ ಶಾರ್ಪ್ ಬಲಶಾಲಿಯೇ? ಅಥವಾ ಅಹಿಂಸಾ ಮಾರ್ಗಗಳನ್ನು ತನ್ನ ರಾಜಕೀಯ ಅಸ್ತ್ರವನ್ನಾಗಿ ವಸಾಹತುಶಾಹಿಯನ್ನು ತಲ್ಲಣಗೊಳಿಸಿದ ಗಾಂಧಿಯೇ? ವಾಸ್ತವವಾಗಿ ಗಾಂಧಿ ಜೀನ್ ಶಾರ್ಪ್ ಮುಖಾಂತರ ಇನ್ನಷ್ಟು ಬಲಶಾಲಿಯಾಗುವುದರಲ್ಲಿ ಸಂಶಯವಿಲ್ಲ. ಆದಕಾರಣ ಮಿಲಿಟರಿ ಆಡಳಿತಗಾರರು, ಸರ್ವಾಧಿಕಾರಿಗಳು ತತ್‌ಕ್ಷಣವಾಗಿ ಜೀನ್ ಶಾರ್ಪ್‌ಗೆ ಹೆದರಿದರೂ, ಅಂತಿಮವಾಗಿ ಅವರು ಹೆದರಬೇಕಾದದ್ದು ಗಾಂಧಿಗೆ. ಇವತ್ತಿನ ತಾತ್ವಿಕತೆಯ ಅನುಸಂಧಾನದ ಸಂದರ್ಭದಲ್ಲಿ ಗಾಂಧಿಯ ಅಹಿಂಸಾ ಅಸ್ತ್ರವೂ ಪ್ರಭಲವಾದರೆ ಹಾಗೂ ಸಫಲವಾದರೆ ಅದನ್ನು ಜನ ಸಾಮಾನ್ಯರ ಜಯವೆಂದೂ ತಿಳಿಯಬೇಕು. ಅಂತಿಮವಾಗಿ ಅದು ಅಹಿಂಸೆಯ ಜಯವೂ ಹೌದು, ಜನ ಸಾಮಾನ್ಯರ ಜಯವೂ ಹೌದು.

ಆಕರ ಗ್ರಂಥಗಳು
1. ಜೀನ್ ಶಾರ್ಪ್, ಫ್ರಮ್ ಡಿಕ್ಟೇಟರ್‌ಶಿಪ್ ಟು ಡೆಮೋಕ್ರಸಿ, ೨೦೧೦ ಪುಟ ೨
2. ಜೀನ್ ಶಾರ್ಪ್, ಗಾಂಧೀ ಆಸ್ ಎ ಪೊಲಿಟಿಕಲ್ ಸ್ಟ್ರಾಟಜಿಸ್ಟ್ ವಿಥ್ ಎಸ್ಸೆ ಆನ್ ಎಥಿಕ್ಸ್ ಅಂಡ್ ಪೊಲಿಟಿಕ್ಸ್, ದಿ ಆಲ್ಬರ್ಟ್ ಐನ್‌ಸ್ಟೀನ್ ಇನ್ಸ್ಟಿಟ್ಯೂಟ್,
3. ಜೀನ್ ಶಾರ್ಪ್, ದ ಅರ್ ರಿಯಲಿಸ್ಟಿಕ್ ಆಲ್‌ಟಲ್ ನೇಟಿವ್ಸ್, ದಿ ಆಲ್ಬರ್ಟ್ ಐನ್‌ಸ್ಟೀನ್ ಇನ್ಸ್ಟಿಟ್ಯೂಟ್, ೨೦೦೮
4. ಜೀನ್ ಶಾರ್ಪ್, ದಿ ಪೊಲಿಟಿಕ್ಸ್ ಆಫ್ ನಾನ್ ವಯಲೆಂಟ್, ದಿ ಆಲ್ಬರ್ಟ್ ಐನ್‌ಸ್ಟೀನ್ ಇನ್ಸ್ಟಿಟ್ಯೂಟ್, ೨೦೧೦
5. ಜೀನ್ ಶಾರ್ಪ್, ೧೯೮ ಮೆಥೆಡ್ಸ್ ಆಫ್ ನಾನ್ ವಯಲೆಂಟ್ ಆಕ್ಷನ್, ದಿ ಆಲ್ಬರ್ಟ್ ಐನ್‌ಸ್ಟೀನ್ ಇನ್ಸ್ಟಿಟ್ಯೂಟ್, ೨೦೧೦



ಬುದ್ಧಂ ಶರಣಂ ಗಚ್ಛಾಮಿ

ಕಳೆದು ಹೋಗಬಹುದೇ ಹೀಗೆ ನೀನು
ಮಣ್ಣಲ್ಲಿ ಹೂತ ಗತದಂತೆ,
ಅರಿತಿರಲಿಲ್ಲ ನಾನು ನೀ ಕಳೆದು ಹೋಗುವಿಯೆಂದು

ಒಮ್ಮೊಮ್ಮೆ ಕಂಡು–ಕಾಣದಂತೆ ಇರುತ್ತಿದ್ದಿ ನೀ
ಸೂಕ್ಷ್ಮ ಮೋಕ್ಷಗಳ ಅರಿಯದ ಬುದ್ದಿ ನಾನು
ಕಳೆದು ಹೋಗುವ, ಹುಡುಕುವ ಗತಿ
ಅವಶ್ಯಕತೆ, ಅರಿವಿನ ಹಸಿವು
ಹುಡುಕುತ್ತಿದೆ ನಿನ್ನ ಎಲ್ಲೆಲ್ಲೂ,
ಇರಬಹುದೇ ಹೇಳು ನೀ ಈ ಮಣ್ಣಲ್ಲಿ
ಈ ಕಾಲಿ ವ್ಯಾಪಾರದ ಬಂದದಲ್ಲಿ

ತೊರೆಯ ಬೇಕೆನಿಸಿದ್ದಾದರೂ ಏಕೆ ಹೀಗೆ
ಕೋಣನೆದುರು ಕಿನ್ನುರಿ ಏಕೆಂದೇ?
ಮತ್ತೆ ಬರಬಹುದೇ ನೀನು,
ಎತ್ತಿ ನಿಲ್ಲಿಸಲು ನಮ್ಮೆಲ್ಲರ
ತೋರಿಸಲು ಹೊಸಬೆಳಕು,
ಕತ್ತಲಾದ ಜನರ ಬದುಕಿನೆಡೆಗೆ.

○ ಭಾಗ್ಯ ಹಾಗಲಗಂಚಿ

ಮಾರ್ಕ್ಸ್, ಗಾಂಧಿ, ಅಂಬೇಡ್ಕರ್ ಮತ್ತು ಲೋಹಿಯಾರಿಂದ

ನಾವು ಕಲಿಯಬಹುದಾದ್ದು...



ಯಾವುದನ್ನಾದರೂ ಖಂಡಿಸುತ್ತಾ ಅಥವಾ ಯಾವುದನ್ನಾದರೂ ಬೆಂಬಲಿಸುತ್ತಾ ಮಾತಾಡೋದ್ರಲ್ಲಿ ನಮಗೆ ಟ್ರೈನಿಂಗ್ ಆಗೋಗಿದೆ. ನಾನು ಅವೆರಡನ್ನೂ ಮಾಡಬಾರದು ಅಂತ ಇರೋದ್ರಿಂದ ಮಾತು ಬೆಳೆಸೋದು ಈಗ ಬಹಳ ಕಷ್ಟ.

ಅಂದರೆ ಯಾವುದೇ ಆಗಲಿ ಕೇವಲ ಮಾತಿನ ವರಸೆಗಾಗಿ ಆಡುವ ಮಾತುಗಳಾಗಿಬಿಟ್ಟರೆ ಇನ್ನೂ ಕಷ್ಟ. ಗಾಂಧೀಜಿ ಬಗ್ಗೆ ಮಾತಾಡ್ತಾ ಮಾತಾಡ್ತಾ ನಾವು ಆತನನ್ನು ದೇವ ಮಾನವನನ್ನಾಗಿ ಮಾಡಬಹುದು. ಅದಕ್ಕೆ ಕಡೆಯೇ ಇಲ್ಲ. ಮಾರ್ಕ್ಸ್‌ನ ಬಗ್ಗೆ ಕೂಡ ಹಾಗೇ ಮಾತನಾಡುತ್ತಾ ಹೋಗಬಹುದು ಎಂದು ಕಾಣುತ್ತದೆ. ಲೋಹಿಯಾ ಬಗ್ಗೆ ಅಂಬೇಡ್ಕರ್ ಬಗ್ಗೆ ಕೂಡ ಹಾಗೆ ಮಾಡಬಹುದು. ನನಗೆ ಅಂತಹ ಮಾತುಗಳ ಬಗ್ಗೆ ಈ ಸಧ್ಯದಲ್ಲಿ ಸಮ್ಮತಿ ಇಲ್ಲ. ನನ್ನ ಮನೋಸ್ಥಿತಿ ಏನು ಎಂಬುದನ್ನು ಸೂಚಿಸುವುದಕ್ಕೆ ರವೀಂದ್ರನಾಥ ಠಾಗೂರ್ ಕವಿತೆಯೊಂದರ ಸಾಲುಗಳು ನೆನಪಿಗೆ ಬರ್‍ತಾ ಇವೆ ನನಗೆ. ಪೂರ್ತಿ ಅನುವಾದ ಅಲ್ಲ. ಅದರ ಸಾರಾಂಶದಲ್ಲಿ ಹೇಳ್ತೀನಿ –

'ನೀರು ತುಂಬಿ ಕಣ್ಣು ಮಂಜಾಗಿರುವ ಈ ಸಮಯದಲ್ಲಿ
ದುಃಖದ ಭಾರ ಹೆಚ್ಚಾಗಿ ಹೃದಯ ಭಾರವಾಗಿರುವ ಈ ಘಳಿಗೆಗಳಲ್ಲಿ
ಜಗತ್ತಿನ ಎಲ್ಲ ಗುರುಗಳನ್ನ ಅಭಿವಂದನೆಗಳಿಲ್ಲದೆಯೇ
ಬೀಳ್ಕೊಡುತ್ತಿದ್ದೇನೆ ನಾನು'

ಹೆಚ್ಚೂ ಕಡಿಮೆ ನನ್ನ ಪರಿಸ್ಥಿತಿ ಇದು. ಯಾವುದನ್ನ ನೆಚ್ಚಬೇಕು? ಯಾವುದನ್ನ ವಿರೋಧಿಸಬೇಕು? ವಿರೋಧಿಸುತ್ತಾ ಹೋದರೆ ಎಲ್ಲದರಲ್ಲೂ ವಿರೋಧ ಕಾಣಿಸುತ್ತಾ ಇದೆ. ಮೆಚ್ಚುತ್ತಾ ಹೋದರೆ ಎಲ್ಲದನ್ನೂ ಮೆಚ್ಚುತ್ತಾ ಹೋಗಬಹುದು. ಆದರೆ ಇವೆರಡರ ನಡುವಿನ ಅಥವಾ ಆಚೆಗಿನ ಸತ್ಯ ಯಾವುದು? ಅದನ್ನು ಚಿಂತಿಸುವ ಕಾರಣಕ್ಕೇ ಮಂಥನ ವೇದಿಕೆಯವರು ಈ ರೀತಿಯಾಗಿರುವ ಒಂದು ವಿಚಾರ ಗೋಷ್ಠಿಯನ್ನು ಇಟ್ಟಿದ್ದಾರೆ ಅಂತ ನಾನು ಭಾವಿಸುತ್ತೇನೆ. ಆದ್ದರಿಂದ ನಾನು ಆರಂಭದಲ್ಲೇ ಹೇಳುತ್ತಾ ಇದ್ದೇನೆ, ನಾನು ಯಾವುದರ ಪರವಾಗಿಯೂ ಅಥವಾ ಯಾವುದರ ವಿರೋಧವಾಗಿಯೂ ಏನೂ ಹೇಳಲಾಗದ ಸ್ಥಿತಿಯಲ್ಲಿ ಇದ್ದೀನಿ.

ಕಾರಣ ಏನು ಅಂತ ಹೇಳಿದರೆ ಬಹುಶಃ ಭೇದಗಳನ್ನು ಹುಡುಕುತ್ತಾ ಕೂರಲು ಇದು ಸಕಾಲವಲ್ಲ. ಈ ಏಕಾಂಗಿ ಸತ್ಯಗಳನ್ನ ಹಿಡಿದು, ನಾನು ಹಿಡಿದ ಮೊಲಕ್ಕೆ ಮೂರು ಕೊಂಬು ಎಂದು ವಾದ ಮಾಡುತ್ತಾ ಕೂರುವುದಕ್ಕೂ ಇದು ಒಳ್ಳೆ ಕಾಲವಲ್ಲ. ನಾವು ಆ ರೀತಿಯಾಗಿರುವ ವಾದಗಳಲ್ಲಿ ಕಾಲಹರಣ ಮಾಡಬಾರದು ಎಂದು ನನಗನ್ನಿಸುತ್ತಿದೆ. ಇದೆಲ್ಲ ಪೂರ್ತಿ ನನ್ನ ಅನಿಸಿಕೆಗಳು. ಗಾಂಧೀಯದೂ ಅಲ್ಲ, ಮಾರ್ಕ್ಸ್‌ದೂ ಅಲ್ಲ, ಲೋಹಿಯಾದೂ ಅಲ್ಲ. 'ಎಲ್ಲ ಗುರುಗಳನ್ನ ಬೀಳ್ಕೊಟ್ಟಿದ್ದೇನೆ. ಅಭಿವಂದನೆಗಳಿಲ್ಲದೆಯೇ'.

ಬಹಳ ಗೊಂದಲದಿಂದಲೇ ಈ ಮಾತು ಹೇಳಬೇಕಾಗಿದೆ. ಕಳೆದ 20 ವರ್ಷಗಳಿಂದ ಸಾಮಾಜಿಕ ಕ್ಷೇತ್ರ ದಲ್ಲಿ ಕ್ರಿಯಾಶೀಲ ಆಗಿದ್ದೇನೆ, ಹೆಚ್ಚೂ ಕಡಿಮೆ ಆವಾಗಾವಾಗ ಥ್ಯಾನ್ಸಿಯೆನಿಸಿದ ಎಲ್ಲ ವಾದಗಳನ್ನೂ ಓದಿದ್ದೇನೆ. ಈಗ ಕರೆಕ್ಟಾಗಿ ಯಾವುದರ ಬಗ್ಗೆಯಾದರೂ ಮಾತನಾಡು ಐದು ನಿಮಿಷ ಅಂದ್ರೆ ಸಾಧ್ಯವಾಗದೆ ತೊದಲಿಸುತ್ತಾ ಇದ್ದೀನಿ. ಇದು ಬಹಳ ಸಂಕಟಕರ ಸನ್ನಿವೇಶ. ಅದದೇ ಪಕ್ಷದಲ್ಲೋ ಅಥವಾ ಅದದೇ ಸಂಘಟನೆಯಲ್ಲೋ ಇದ್ದಾಗ್ಗ ಅವುಗಳ ಬಗ್ಗೆ ಒಂದೂವರೆ ಗಂಟೆ, ಎರಡು ಗಂಟೆ ಮಾತಾಡ್ತಾ ಇದ್ದೆ ನಾನು.

ಭೇದ ಹುಡುಕುವ ಕಾಲ ಹೊರಟುಹೋಗಿದೆ ಎಂದೆ ನಾನು. ಕಾರಣ ಏನಂದ್ರೆ ಪ್ರಪಂಚ ಏಕಧ್ರುವೀಕೃತಗೊಂಡಿದೆ. ಇದು ಮೊದಲನೇ ಅಂಶ. ಇವತ್ತು ಪ್ರಪಂಚ ರಾಜಕೀಯವಾಗಿ ಯೂನಿಪೋಲಾರ್ ಆಗಿದೆ. ಆದ್ದರಿಂದ ಹೆಚ್ಚು ಭೇದಗಳನ್ನ ಹುಡುಕಿ ವಾದ ಮಾಡೋಕೆ ನಮ್ಮ ನಡುವೆ ಅವಕಾಶ ಇಲ್ಲ.

ಎರಡನೆಯದು ವಿಶ್ವದ ಬಂಡವಾಳ ಏಕೀಕೃತಗೊಂಡಿದೆ ಮತ್ತು ವಿಶ್ವದ ಮಾರುಕಟ್ಟೆ ಏಕೀಕೃತಗೊಂಡಿದೆ. ಆದ್ದರಿಂದ ನಮ್ಮ ಕಳವಳಗಳ ವ್ಯಾಪಕತೆ ಬಹಳ ಜಾಸ್ತಿ ಆಗಿದೆ. ದುಃಖದ ಆಳ ಕೂಡ ತುಂಬ ದೀರ್ಘವಾಗಿದೆ.

ಇಂತಹ ಸಂದರ್ಭದಲ್ಲಿ ಜನಪರ ತಾತ್ವಿಕತೆಗಳ ನಡುವೆ ಭೇದಗಳನ್ನ ಹುಡುಕುತ್ತಾ ಕೂತರೆ ಕಾಲಕ್ಷೇಪ ಆಗುತ್ತದೆ ಅಷ್ಟೆ. ಇವತ್ತು ಸಮಗ್ರೀಕರಣದ ಅಗತ್ಯ ಇದೆ. ಏಕೀಕೃತ ಪ್ರಾಪಂಚಿಕ ಬಂಡವಾಳ ವ್ಯವಸ್ಥೆಯನ್ನು ವಿರೋಧಿಸೋಕೆ ಯಾರು ಎಷ್ಟು ಅಭಿವೃದ್ಧಿ ಹೊಂದಿದ್ದೀವಿ? ಯಾರು ಯಾವ ವರ್ಗ ನೆಲೆಯಲ್ಲಿ ನಿಂತಿದ್ದೀವಿ ಅನ್ನೋದು ಬಹಳ ದೊಡ್ಡ ಸಮಸ್ಯೆ ಆಗಿ ಉಳಿದಂತಿಲ್ಲ. ಇವತ್ತು ಇರುವಂತಹ ಜಗತ್ತಿನ ಆರ್ಥಿಕ, ರಾಜಕೀಯ ಪರಿಸ್ಥಿತಿಯಲ್ಲಿ ಬಹುಪಾಲು ಜನವರ್ಗಗಳು, ಒಟ್ಟಾರೆ ಜನರು ಎನ್ನುವವರೇ ಬೇಟೆಯಾಡಲ್ಪಡುತ್ತಾ ಇದ್ದಾರೆ. ಆದ್ದರಿಂದಲೇ ನಮಗೆ ಇವತ್ತು ಬೇಕಾಗಿರುವುದು ಬಹಳ ಸಮಗ್ರವಾಗಿರುವಂತಹ ಒಂದು ತಾತ್ವಿಕ ದೃಷ್ಟಿಕೋನ. ಇದರಲ್ಲಿ ಬಹಳ ಮುಖ್ಯವಾಗಿರುವ ಪ್ರಶ್ನೆ ಇದೆ.

ನಮಗಿರುವ ಸಮಸ್ಯೆ ಏನೆಂದರೆ ನಾವು ಬುದ್ಧನನ್ನು ಇನ್ನೂ ಸಮಗ್ರವಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಮಾರ್ಕ್ಸ್‌ನನ್ನೂ ಕೂಡ ಹಾಗೆಯೇ. ಗಾಂಧಿಯನ್ನೂ ಕೂಡ ಸಮಗ್ರವಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ.

ಇದು ಬರೀ ದೇಹ ಅಥವಾ ಆತ್ಮದ ಪ್ರಶ್ನೆ ಅಲ್ಲ. ಆ ರೀತಿ ಪದಬಳಕೆಯೇ ಇವತ್ತು ದೋಷಪೂರ್ಣ ಅಂತ ಕಾಣಿಸುತ್ತಾ ಇದೆ. ಇದು ದೇಹಾತ್ಮವಾದ. ಬುದ್ಧ ಅದನ್ನೇ ಹೇಳುತ್ತಿದ್ದುದು. ದೇಹ ಮತ್ತು ಆತ್ಮ ಅಂತ ಎರಡು ಶಬ್ದವನ್ನ ಬಳಸಿಲ್ಲ ಆತ. ಚೇತನ ಮತ್ತು ಭೌತಿಕತೆ ಅಂತ ಎರಡಾಗಿ ನೋಡುವುದಲ್ಲ. ದೇಹಾತ್ಮ ಇದೆ ಇಲ್ಲಿ. ಇದು ಸರಿಯಾದ ದೃಷ್ಟಿಕೋನ. ಆದ್ದರಿಂದ ಚೈತನ್ಯವನ್ನ ಮಾತ್ರವೇ ಗಟ್ಟಿಗೊಳಿಸುವ ಮುಖಾಂತರ, ಚೈತನ್ಯವನ್ನ ಮಾತ್ರವೇ ಉದ್ದೀಪನಗೊಳಿಸುವ ಮುಖಾಂತರ ನಾವು ಒಂದು ಸಾಮಾಜಿಕ ಬದಲಾವಣೆಯನ್ನು ಸಾಧಿಸುತ್ತೇವೆ ಅನ್ನುವುದು ಎಷ್ಟು ಅಸಾಧುವಾದುದೋ, ಬರೀ

ನಮಗಿರುವ ಸಮಸ್ಯೆ ಏನೆಂದರೆ ನಾವು ಬುದ್ಧನನ್ನು ಇನ್ನೂ ಸಮಗ್ರವಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಮಾರ್ಕ್ಸ್‌ನನ್ನೂ ಕೂಡ ಹಾಗೆಯೇ. ಗಾಂಧಿಯನ್ನೂ ಕೂಡ ಸಮಗ್ರವಾಗಿ ಅರ್ಥ ಮಾಡಿ ಕೊಳ್ಳಬೇಕಾಗಿದೆ. ಇದು ಬರೀ ದೇಹ ಅಥವಾ ಆತ್ಮದ ಪ್ರಶ್ನೆ ಅಲ್ಲ. ಆ ರೀತಿ ಪದಬಳಕೆಯೇ ಇವತ್ತು ದೋಷಪೂರ್ಣ ಅಂತ ಕಾಣಿಸುತ್ತಾ ಇದೆ. ಇದು ದೇಹಾತ್ಮವಾದ. ಬುದ್ಧ ಅದನ್ನೇ ಹೇಳುತಿದ್ದುದು. ದೇಹ ಮತ್ತು ಆತ್ಮ ಅಂತ ಎರಡು ಶಬ್ದವನ್ನ ಬಳಸಿಲ್ಲ ಆತ. ಚೇತನ ಮತ್ತು ಭೌತಿಕತೆ ಅಂತ ಎರಡಾಗಿ ನೋಡುವುದಲ್ಲ. ದೇಹಾತ್ಮ ಇದೆ ಇಲ್ಲಿ. ಇದು ಸರಿಯಾದ ದೃಷ್ಟಿಕೋನ.

ಭೌತಿಕ ತೆಯನ್ನು ಮಾತ್ರ ಉದ್ದೀಪನಗೊಳಿ ಸುವುದರ, ಸರಿಪಡಿಸುವುದರ ಮುಖಾಂತರ ಬದಲಾವಣೆ ತರುತ್ತೇವೆ ಅಂತ ಯೋಚನೆ ಮಾಡೋದು ಕೂಡ ಅಷ್ಟೇ ಕಷ್ಟಕರವಾದುದು, ನಿರುಪಯೋಗಕಾರಿಯಾದುದು ಅಂತ ನನಗನ್ನಿಸುತ್ತಾ ಇದೆ.

ಅಂದರೆ ಈ ದಿನ ನಾವು ನೋಡಬೇಕಾಗಿರುವುದು ದೇಹಾತ್ಮವಾದಕ್ಕೋಸ್ಕರವಾಗಿ. ದೇಹವೂ ಆತ್ಮವೂ. ದೇಹ ಮತ್ತು ಆತ್ಮದ ನಡುವೆ ಐಫನ್ ಕೂಡ ಬೇಕಿಲ್ಲ, ಇದು ಬುದ್ಧನ ದರ್ಶನ. ನನಗೆ ಸರಿ ಅನ್ನಿಸುತ್ತಿದೆ ಅದು. ನಾವು ವ್ಯಕ್ತಿಯೂ ಹೌದು, ಸಮಾಜವೂ ಹೌದು. ಅದನ್ನ ಬೇರ್ಪಡಿಸುವುದೇ ಬಹಳ ಕೃತಕತೆ. ಈವರೆಗೆ ಮಾಡಿರುವ ವಾದಗಳಲ್ಲಿರುವ ಅತಿರೇಕತೆ ಕೂಡ ಬಹುಶಃ ಅದೇನೇ. ಭೌತಿಕ ಸನ್ನಿವೇಶವನ್ನು ಸರಿಪಡಿಸಿರಿ, ಮನುಷ್ಯ ಸರಿಹೋಗ್ತಾನೆ ಅಂತ ಮಾರ್ಕ್ಸ್‌ವಾದಿಗಳು ವಾದ ಮಾಡಿದರು. ಬಹಳ ಜನ ಅವರಿಗನುಕೂಲಕರವಾದದ್ದೇನನ್ನೋ ಒಂದು ಹೇಳ್ತಾರಷ್ಟೆ. ಆದ್ದರಿಂದ ನಾನು ಹೇಳೋದು, ಮಾತನ್ನ ಕಡಿಮೆ ನಂಬಬೇಕು, ಅನುಭವವನ್ನ ಜಾಸ್ತಿ ಗೌರವಿಸಬೇಕು.

ನಾವು ಬಹಳ ತರ್ಕಶುದ್ಧವಾಗಿ ಮಾತನಾಡಬಹುದು. ಬಹಳ ನಿಖರವಾಗಿ ಆಗಿ ಮಾತನಾಡಬಹುದು, ಪುಟಗಳನ್ನೇ ಕೋಟ್ ಮಾಡಬಹುದು, ಆದರೆ ಸತ್ಯ ಅದರ ಹಿಂದೆ ಎಲ್ಲೋ ಅಡಗಿಕೊಂಡಿರುವ ಸಾಧ್ಯತೆ ಇರುತ್ತದೆ. ನಮಗದನ್ನು ಗಮನಿಸುವುದಕ್ಕೆ ಆಗದಿರುವಂತೆ ಕಣ್ಣುಪಟ್ಟಿ ಕಟ್ಟಿಕೊಂಡಿರುತ್ತೇವೆ ಹಾಗೂ ನಾವು ತಕ್ಷಣಕ್ಕೆ ಸಂದರ್ಭೋಚಿತವಾಗಿ ಇರುವುದಕ್ಕೆ ಪ್ರಯತ್ನ ಮಾಡ್ತಾ ಇರುತ್ತೇವೆ. ಇದು ಸಂದರ್ಭೋಚಿತವಾದ ವಾದ ಅಲ್ಲ. ನನ್ನನ್ನು ನಾನು ಪರಿಶೀಲಿಸಿಕೊಳ್ಳುವ ವಾದ. ನಿನಗೆ ನಿಜವಾಗಿಯೂ ಡಿಕ್ಟೇಟರ್‌ಶಿಪ್ ಕೊಟ್ಟರೆ ಏನು ಮಾಡ್ತೀಯ ಹೇಳು ಅಂದ್ರೆ ನಾನು ಏನು ಹೇಳ್ಬೇಕು? ಯಾರಿಗೆ ತುಂಬ ಇಂಟಿಗ್ರಿಟಿ ಇದೆಯೋ ಅವರು ಮಾತ್ರ ಗಟ್ಟಿ ಗಂಟಲಲ್ಲಿ ವಾದ ಮಾಡಬಹುದು. ನಿನಗೆ ಇವತ್ತೇ ಪ್ರಪಂಚವನ್ನ ಮುನ್ನಡೆಸುವ ಸರ್ವ ಹಕ್ಕುಗಳನ್ನ ವಹಿಸಿಕೊಟ್ಟಿದ್ದೀವಿ ಅಂದಾಗ ಏನು ಮಾಡಬಲ್ಲೆ ಎಂಬ ಪೂರ್ಣ ನಂಬಿಕೆಯಿಂದ ಮಾತ್ರ ಮಾತನಾಡುವಂತಾಗಬೇಕು. ಕರೆ ಕೊಡುವಷ್ಟು ಶಕ್ತಿ ಮತ್ತು ಹಕ್ಕು ನನಗಿದೆ ಅಂತ ನನಗೇ ನಂಬಿಕೆ ಇರಬೇಕಲ್ಲ. ಇಲ್ಲದಿದ್ದರೆ ಬಹಳ ಕಷ್ಟ ಇದೆ.

ಆದ್ದರಿಂದ ನನಗನ್ನಿಸುವುದು ಒಂದು ಕಡೆ ಬರೀ ಚೈತನ್ಯವನ್ನ, ಸಮಾಜವನ್ನ ಅಥವಾ ಭೌತಿಕತೆಯನ್ನ ಬದಲಾವಣೆ ಮಾಡುವ ಮೂಲಕ ನಾವಿದನ್ನು ಸಾಧಿಸುತ್ತೇವೆ ಅಂದುಕೊಳ್ಳುವುದು ಬಹಳ ಕಷ್ಟ. ಗಾಂಧಿ ಬಗ್ಗೆ ಏನು ಹೇಳ್ತಾರೆ ಅಂತ ಲೋಹಿಯಾ ಅವರ ಲೇಖನವನ್ನು ಬೆಳಗ್ಗೆಯಿನ್ನೂ ಓದಿದೆ. ಗಾಂಧಿ ಮನುಷ್ಯನ ಭೌತ ಪ್ರಪಂಚದ ಬಗ್ಗೆ ಅಥವಾ ಭೌತಿಕ ಅಸ್ತಿತ್ವದ ಬಗ್ಗೆ ಗಮನ ಕೊಡಲೇ ಇಲ್ಲ ಅನ್ನುವ ಆಕ್ಷೇಪಣೆ ನನಗೆ ಇದ್ದೇ ಇದೆ ಅಂತ ಬರೀತಾರೆ ಗಾಂಧೀಜಿಯವರ ಪ್ರಿಯ ಶಿಷ್ಯ ಲೋಹಿಯಾ. ಮಾರ್ಕ್ಸ್ ಬಗೆಯೂ ಬರೀತಾರೆ. ಅವರು ಸಂಸ್ಕೃತಿ ಮತ್ತು ಮನುಷ್ಯನ ಚೈತನ್ಯ ಹಾಗೂ ಸ್ವಾತಂತ್ರ್ಯದ ಬಗ್ಗೆ ಕೊಡಬೇಕಾದ ಗಮನವನ್ನು ಕೊಡಲಿಲ್ಲ ಅಂತ. ಆದ್ದರಿಂದ ಇವೆರಡನ್ನೂ ಬೇರ್ಪಡಿಸಿ, ಇದು ಸರಿ, ಇದು ತಪ್ಪು ಅಂತ ಹೇಳೋದು ಕಷ್ಟ

ನನಗನ್ನಿಸುವುದು ವ್ಯಕ್ತಿ ಮತ್ತು ಸಮಾಜ, ವ್ಯಷ್ಟಿ ಮತ್ತು ಸಮಷ್ಟಿ, ದೇಹ ಮತ್ತು ಚೈತನ್ಯ ಅಂತ ಅನ್ನಲೇ



ಕಾರ್ಲ್‌ಮಾರ್ಕ್ಸ್

> **ಭಿಕ್ಕು ಸಂಘದಲ್ಲಿ ಒಂದು ನಿಯಮ ಇತ್ತು. ಯಾರೇ ಹೊಸದಾಗಿ ಭಿಕ್ಕು ಸಂಘಕ್ಕೆ ಬಂದರೆ ಮೊದಲು ನೆಲದ ಮೇಲೂ, ಆಮೇಲೆ ಚಾಪೆ ಮೇಲೂ ನಂತರ ಚೀವರದ ಮೇಲೂ ಮಲಗಲು ಅವಕಾಶ ಕಲ್ಪಿಸಬೇಕು ಅಂತ. ಬುದ್ಧನ ಮಗ ರಾಹುಲ ಬಂದು ಹೊಸದಾಗಿ ಭಿಕ್ಕು ಸಂಘಸೇರ್ತಾನೆ. ಆ ಇಡೀ ಭಿಕ್ಕು ಸಂಘದ ವಹಿವಾಟು ನಿರ್ವಹಣೆಗೆ ಇದ್ದ ಹಿರಿಯ ಭಿಕ್ಕು ರಾಹುಲನಿಗೆ ಮೊದಲನೇ ದಿನವೇ ಒಂದು ಮೆತ್ತನೆ ಹಾಸಿಗೆ ಕೊಟ್ಟುಬಿಡುತ್ತಾನೆ. ರಾಜಕುಮಾರ, ಸಾಲದ್ದಕ್ಕೆ ಬುದ್ಧನ ಮಗ ಎಂಬುದು ಆತ ನಿಯಮ ಸಡಿಲಿಸಲು ಕಾರಣ. ಈ ಬಗ್ಗೆ ದೂರು ಬಂದಾಗ ಇದನ್ನ ಚರ್ಚೆ ಮಾಡಿ ಖಂಡಿಸಿದ ಬುದ್ಧ.**

ಬಾರದು. ದೇಹ ಮತ್ತು ಚೇತನ ಇವುಗಳ ಯಾವುದೋ ಒಂದು ಸಮಗ್ರ ರೂಪದಲ್ಲಿ ಮಾತ್ರವೇ ಇವುಗಳನ್ನ ಮುನ್ನಡೆಸೋಕೆ ಸಾಧ್ಯವಾ? ಪ್ರಪಂಚದ ಬೇರೆ ಬೇರೆ ಅನುಭಾವಿಗಳು ಈ ಬಗ್ಗೆ ಹೇಳಿದ್ದಾರೆ. ಅದರ ಅಗತ್ಯವನ್ನು ಮನಗಾಣಲು ಸುಮ್ಮನೆ ಕೆಲವು ಉದಾಹರಣೆ ಪರಿಶೀಲಿಸಲು ಯತ್ನಿಸುತ್ತೇನೆ. ಗಾಂಧಿ ಆಶ್ರಮದ ಪರಿಸ್ಥಿತಿ ಏನಾಗಿತ್ತು? ಅಲ್ಲಿ ಇದ್ದವರೆಲ್ಲ ಉದ್ದೀಪಿತ ಚೇತನರೇ. ಹಾಗಿದ್ದರೂ ಆಶ್ರಮದ ಪರಿಸ್ಥಿತಿ ಪೂರ್ಣ ಸರಿಯಾಗಿತ್ತೆ? ಗಾಂಧೀಯವರ ಮೇಲಿನ ವ್ಯಕ್ತಿಗತ ಅವಲಂಬನೆ ಅಲ್ಲಿ ಯಾವ ಪ್ರಮಾಣದಲ್ಲಿ ಇತ್ತು?

ಬುದ್ಧನ ಭಿಕ್ಕು ಸಂಘದ ಉದಾಹರಣೆಯನ್ನೂ ನೋಡಬಹುದು. ಅಲ್ಲಿದ್ದವರೆಲ್ಲ ಭಿಕ್ಕುಗಳೇ. ವಾಸ್ತವವಾಗಿ ಜಾತಕ ಕಥೆಗಳಲ್ಲಿ ಏನಿದೆ? ಅಂತ ನೋಡಿದರೆ ನಮಗೆ ಗೊತ್ತಾಗೋ ಅಂಶ ಅಲ್ಲೂ ಪೂರ್ತಿ ಎಲ್ಲಾ ಸರಿಯಿರಲಿಲ್ಲ. ಅಲ್ಲೊಬ್ಬ ಭಿಕ್ಕು ವಿಷಯ ಬರ್ತದೆ. ನಿಯಮ ಏನು ಅಂದರೆ, ಭಿಕ್ಕು ಸಂಘದಲ್ಲಿ ಒಬ್ಬನೇ ಬಿಕ್ಕು ಯಾವಾಗ್ಲೂ ಒಂದೇ ಬೀದಿಗೆ, ಒಂದೇ ಮನೆಗೆ ಭಿಕ್ಷೆಗೆ ಹೋಗಬಾರದು ಇದು ಒಂದು ನಿಯಮ. ಒಬ್ಬ ಭಿಕ್ಕು ಯಾವಾಗ್ಲೂ ಒಂದೇ ಬೀದಿಗೆ ಹೋಗ್ತಾ ಇರ್ತಾನೆ. ಬೇರೆಯವರು ಅಲ್ಲಿ ಹೋಗಲು ಅವಕಾಶ ಕೇಳಿದರೆ, ಬೇಡ. ಅಲ್ಲಿ ಬಹಳ ದೊಡ್ಡ ನಾಯಿಗಳು ಇದಾವೆ... ಕಚ್ಚುತ್ತವೆ. ನಾನಾದ್ರೆ ಹೆಂಗೋ ಕಷ್ಟಪಟ್ಟು ನಿಭಾಯಿಸುತ್ತಿದ್ದೀನಿ, ನಿಮಗೇಕೆ ವೃಥಾ ಕಷ್ಟ ಅಂತ ಅನ್ನುತ್ತಿದ್ದ. ಪರಿಶೀಲಿಸಿ ನೋಡಿದರೆ ಅವನು ಅಭ್ಯಾಸ ಮಾಡಿಕೊಂಡಿದ್ದದ್ದು ಯಾವುದು ಅಂತ ಹೇಳಿದರೆ, ಅಲ್ಲಿ ಅತ್ಯಂತ ರುಚಿಕರವಾದ ಊಟ ಕೊಡೋದೊಂದು ಮನೆ ಇತ್ತು. ಭಿಕ್ಕು ಬಂದಿದಾನೆ ಅಂತ ಅಂದ್ರೆ ಬಹಳ ಗೌರವಪೂರ್ಣವಾಗಿ ಹೋಳಿಗೆ ಸೀಕರಣೆನೆಲ್ಲ ಕೊಟ್ಟು ಕಳಿಸ್ತಾ ಇದ್ದರು. ಇದನ್ನು ಭಿಕ್ಕು ಸಂಘದಲ್ಲಿಟ್ಟು ಚರ್ಚೆ ಮಾಡಿ ಇದು ತಪ್ಪು ಅಂತ ಬುದ್ಧ ಬಗೆಹರಿಸಿದ.

ಇದು ಸಾಮಾನ್ಯ ಭಿಕ್ಕುವಿನ ಕತೆಯಾದ್ದರಿಂದ ಇಂತಹ ಆಸೆಬುರುಕುತನ ಮತ್ತು ನಿಯಮ ಉಲ್ಲಂಘನೆ ಸಂಭವಿಸಿರಬಹುದು ಅಂತ ನಮಗನಿಸಬಹುದು. ಬೇರೆಯ ಒಂದು ಉದಾಹರಣೆ ಪರಿಶೀಲಿಸುತ್ತೇನೆ. ಭಿಕ್ಕು ಸಂಘದಲ್ಲಿ ಒಂದು ನಿಯಮ ಇತ್ತು. ಯಾರೇ ಹೊಸದಾಗಿ ಭಿಕ್ಕು ಸಂಘಕ್ಕೆ ಬಂದರೆ ಮೊದಲು ನೆಲದ ಮೇಲೂ, ಆಮೇಲೆ ಚಾಪೆ ಮೇಲೂ ನಂತರ ಚೀವರದ ಮೇಲೂ ಮಲಗಲು ಅವಕಾಶ ಕಲ್ಪಿಸಬೇಕು ಅಂತ. ಬುದ್ಧನ ಮಗ ರಾಹುಲ ಬಂದು ಹೊಸದಾಗಿ ಭಿಕ್ಕು ಸಂಘ ಸೇರ್ತಾನೆ. ಆ ಇಡೀ ಭಿಕ್ಕು ಸಂಘದ ವಹಿವಾಟು ನಿರ್ವಹಣೆಗೆ ಇದ್ದ ಹಿರಿಯ ಭಿಕ್ಕು ರಾಹುಲನಿಗೆ ಮೊದಲನೇ ದಿನವೇ ಒಂದು ಮೆತ್ತನೆ ಹಾಸಿಗೆ ಕೊಟ್ಟುಬಿಡುತ್ತಾನೆ. ರಾಜಕುಮಾರ, ಸಾಲದ್ದಕ್ಕೆ ಬುದ್ಧನ ಮಗ ಎಂಬುದು ಆತ ನಿಯಮ ಸಡಿಲಿಸಲು ಕಾರಣ. ಈ ಬಗ್ಗೆ ದೂರು ಬಂದಾಗ ಇದನ್ನ ಚರ್ಚೆ ಮಾಡಿ ಖಂಡಿಸಿದ ಬುದ್ಧ.

ಆದ್ದರಿಂದ ಉದ್ದೀಪಿತ ಚೇತನಗಳು ಯಾವಾಗಲೂ ಪೂರ್ತಿ ಸರಿ ಇರ್ತಾವೆ ಅಂತ ನಂಬಿ ಕೂತರೆ ಆಗಲ್ಲ. ನಿಯಮಗಳು ಬೇಕು. ಅವುಗಳು ಪಾಲನೆಯಾಗುತ್ತಿವೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಲು ವ್ಯವಸ್ಥೆ ಬೇಕು. ಸಾಧ್ಯವಾದಷ್ಟೂ ಇವೆಲ್ಲ ಪಾರದರ್ಶಕವಾಗಿ, ಸಾಮೂಹಿಕ ಹೊಣೆಗಾರಿಕೆಯ ಮೇಲೆ ನಡೆಯಬೇಕು. ಇದನ್ನು ಹೇಳುವಾಗ ನಮಗೆ ರಷ್ಯಾದಲ್ಲಿ ಏನಾಗಿದೆ ಗೊತ್ತಿದೆ. ಬರೀ ಭೌತಿಕ ವ್ಯವಸ್ಥೆ ನಮ್ಮನ್ನು ಕಾಪಾಡಲಾರದು. ಎಲ್ಲ ಸಮಾಜವಾದಿ ಸಂಬಂಧಗಳೇ. ಬಂಡವಾಳ ಎಲ್ಲವೂ ಸರ್ಕಾರೀಕೃತಗೊಂಡಿದೆ, ರಾಷ್ಟ್ರೀಕೃತಗೊಂಡಿದೆ. ಕಮ್ಯೂನೇ ಎಲ್ಲದರ ಬಗ್ಗೆ ಅಂತಿಮ ತೀರ್ಮಾನ ಮಾಡ್ತಾ ಇದ್ದಾಗಲೂ ಬ್ರೆಜ್ನೇವ್ ಮಗ ಓದೋ ಜಾಗ ಬೇರೆ, ಬೇರೆಯವರ ಮಕ್ಕಳು ಓದೋ ಜಾಗವೇ ಬೇರೆ ಅನ್ನುವಂತಹ ಶ್ರೇಣೀಕರಣ ವ್ಯವಸ್ಥೆ ಅಲ್ಲಿ ಒಳಗಿಂದೊಳಗೆ ರೂಪುಗೊಂಡುಬಿಟ್ಟಿತು.

ಒಂದು ಜೋಕ್ ಹೇಳ್ತಾರೆ ಸ್ಟಾಲಿನ್ ಆಡಳಿತ ಕಾಲದ ಬಗ್ಗೆ. ಅಮೆರಿಕಾದವನೊಬ್ಬ, ರಷ್ಯಾದವನೊಬ್ಬ ವಿಮಾನ ನಿಲ್ದಾಣದಲ್ಲಿ ಸಂಧಿಸಿದಾಗ ಮಾತಾಡ್ತಿರ್ತಾರೆ. ಅಮೆರಿಕಾದವನು ಹೇಳ್ತಾನೆ–ನಾವು ವೈಟ್‌ಹೌಸ್‌ನ ಮೆಟ್ಟಿಲ ಮೇಲೆ ನಿಂತು ಅಮೆರಿಕಾ ಅಧ್ಯಕ್ಷನಿಗೆ ಧಿಕ್ಕಾರ ಅನ್ನಲು

ಅವಕಾಶವಿದೆ, ರಷ್ಯಾದವನು ಹೇಳುತ್ತಾನೆ–ಅದೇನು ಮಹಾ, ನಾವು ಕೂಡ ಕಾಮ್ರೇಡ್ ಸ್ಟಾಲಿನ್ ನಿವಾಸದ ಬಾಗಿಲಲ್ಲೇ ನಿಂತು ಅಮೇರಿಕಾದ ಅಧ್ಯಕ್ಷನಿಗೆ ಧಿಕ್ಕಾರ ಎಂದು ಕೂಗಬಹುದು. ಅಂದ್ರೆ ಅಂತಹ ಕಡೆಗಳಲ್ಲಿ ದಮನವಾಗಿರುವಂತಹ ಅಭಿವ್ಯಕ್ತಿ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಪ್ರಶ್ನೆ ಬಹಳ ದೊಡ್ಡದು. ವ್ಯಕ್ತಿ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಇಲ್ಲದ ಕಡೆ ಎಲ್ಲರ ಪಾಲ್ಗೊಳ್ಳುವಿಕೆಯಿಂದ, ಎಲ್ಲರ ಆಶೋತ್ತರಗಳಿಗಾಗಿ ನಡೆಯುವ ವ್ಯವಸ್ಥೆ ಬದುಕುಳಿಯುವುದು ಸಾಧ್ಯವಿಲ್ಲ.

ಈ ಹಿನ್ನೆಲೆಯಲ್ಲಿ ಮಾವೋ ಹೇಳಿದ ಸಾಂಸ್ಕೃತಿಕ ಕ್ರಾಂತಿಯ ಚಿಂತನೆ ಮುಖ್ಯವಾದದದ್ದು. ಮಾವೋ ಪ್ರಕಾರ ಬರೀ ಸಮಾಜವಾದಿ ಕ್ರಾಂತಿ ಆಗಿಬಿಟ್ಟರೆ ಸಾಕಾಗಲ್ಲ. ಒಂದು ಸಾಂಸ್ಕೃತಿಕ ಕ್ರಾಂತಿ ಬೇಕು. ಇದು ಆತನಿಗೆ ಕ್ರಾಂತಿಯಾಗಿ ಸಮಾಜವಾದಿ ವ್ಯವಸ್ಥೆಯ ಅಧಿಕಾರ ಸ್ಥಾಪನೆ ಹಂತದಲ್ಲಿ ಹೊಳೆದಿದ್ದು. ಸಮಾಜವಾದ ಬಂದಿದೆ. ಆದ್ರೆ ಕಮ್ಯುನಿಸ್ಟ್ ಪಾರ್ಟಿಯೇ ಚೀನಾದಲ್ಲಿ ಬಂಡವಾಳಶಾಹಿಯನ್ನ ಪುನರ್ ಸ್ಥಾಪನೆ ಮಾಡೋದಕ್ಕೆ ಪ್ರಯತ್ನ ಪಡುತ್ತಾ ಇದೆ. ಅಂದರೆ ಮಾನಸಿಕವಾಗಿ ನಾವು ಸಿದ್ಧ ಆಗದಿದ್ದರೆ ಸಮಾಜವಾದಿ ವ್ಯವಸ್ಥೆ ಉಳಿಯಲ್ಲ.

ಸಮಾಜವಾದಿ ವ್ಯವಸ್ಥೆಯನ್ನು ನಿರ್ವಹಿಸೋರು ಯಾರು? ಸಮಾಜವಾದಿ ಮನಸ್ಸು ಮಾತ್ರವೇ ಅದನ್ನು ಚೆನ್ನಾಗಿ ಮಾಡಬಲ್ಲದು. ಅತ್ಯುನ್ನತವಾಗಿ ಹುರಿಗೊಂಡಿರುವ, ಅತ್ಯುನ್ನತವಾಗಿ ಹದಗೊಂಡಿರುವ ಒಂದು ಸಮಾಜವಾದಿ ಮನಸ್ಸು ಮಾತ್ರವೇ ಸಮಾಜವಾದದ ವ್ಯವಸ್ಥೆಯನ್ನು ಸುಗಮವಾಗಿ ನಡೆಸಬಹುದು. ಇಲ್ಲದಿದ್ದರೆ ಅದರೊಳಗಡೆ ಮತ್ತೆ ಅಡ್ಡ ದಾರಿಯಲ್ಲಿ ಬಂಡವಾಳಶಾಹಿಯನ್ನೇ ತರ್ತಾರೆ. ಜನರು ಅಧ್ಯಕ್ಷರ ಹತ್ರ ಮಾತಾಡೋಕಾಗಲ್ಲ, ಚರ್ಚೆ ಮಾಡೋಕಾಗಲ್ಲ, ಪ್ರಶ್ನೆ ಕೇಳೋಕಾಗಲ್ಲ, ಭಿನ್ನಮತ ಹೇಳೋಕಾಗಲ್ಲ ಅಂದ್ರೆ ಎಲ್ಲರ ಪರವಾಗಿ ವ್ಯವಸ್ಥೆ ನಡೀತಿದೆ ಎನ್ನಲು ಸಾಧ್ಯವಿಲ್ಲ. ಎಲ್ಲರಿಗೂ ಕ್ಯೂನಲ್ಲಿ ಬ್ರೆಡ್ ಕೊಡ್ತಾ ಇರುವಾಗ, ಇವರಲ್ಲಿ ಕೆಲವರಿಗೆ ಮಾತ್ರ ಅವರ ಮನೆಗೇ ಬಾಕ್ಸ್ ತುಂಬಾ ಬ್ರೆಡ್ ಹೋಗಿ ಬಿಟ್ಟಿರುತ್ತದೆ. ಕಾರಣಾ ಏನಂದ್ರೆ, ನಾವು ಅದನ್ನ ಪಾಲಿಸಬೇಕು ಅನ್ನುವ ನಿರ್ಧಾರ ಇಲ್ಲದಿದ್ದರೆ, ಕಾನೂನನ್ನು ವಂಚಿಸೋದಕ್ಕೆ ಅವಕಾಶಗಳು ಇದ್ದೇ ಇರ್ತವೆ. ಅದರಲ್ಲೂ ಅಧಿಕಾರವೇ ನಮ್ಮ ಕೈಯ್ಯಲ್ಲಿದ್ರೆ ಅದನ್ನ ವಂಚಿಸೋದು ಇನ್ನೂ ಸುಲಭ.

ಆದ್ದರಿಂದ ನಾವು ಈ ದೇಹಾತ್ಮವಾದದ ರೀತಿಯಲ್ಲಿ ವ್ಯಷ್ಟಿ ಸಮಷ್ಟಿಯನ್ನು– ವ್ಯಕ್ತಿ ಸಮಾಜವನ್ನು – ಭೌತಿಕತೆ ಚೈತನ್ಯವನ್ನು ಒಟ್ಟೊಟ್ಟಿಗೇ ನೋಡದಿದ್ದರೆ ಸರಿಯಾಗುವುದಿಲ್ಲ ಅಂತ ನಾವು ದೃಢವಾಗಿ ಪರಿಗಣಿಸಬೇಕಿದೆ. ಯಾಕೆಂದರೆ ಭಾರತದ ಪ್ರಶ್ನೆಗಳು ಬಹಳ ವಿಚಿತ್ರವಾಗಿದೆ. ನಾನು ಸಾಂಸ್ಕೃತಿಕವಾಗಿ ಬಿಡುಗಡೆಗೊಂಡಿದ್ದೀನಿ ಅಂತ ಮಾತನಾಡಬಹುದು. ಹೌದು ಚೈತನ್ಯವಾಗಿ ನಾನು ಯಾರಿಗೂ ತಲೆಬಾಗದಷ್ಟು ಉದ್ದೀಪಿತನಾಗಿದ್ದೀನಿ ಅಂತ ಹೇಳಬಹುದು. ಆದ್ರೆ ಇಲ್ಲಿರುವ ಸಾಮಾಜಿಕ ಪರಿಸ್ಥಿತಿಗಳ ಪ್ರಶ್ನೆ ಏನು? ನನ್ನ ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರಶ್ನೆ? ನನ್ನ ಸಮಾನತೆಯ ಪ್ರಶ್ನೆ? ನನಗೆ ಇರುವ ಅವಕಾಶಗಳ ಪ್ರಶ್ನೆ? ಇವುಗಳ ಪ್ರಶ್ನೆ ಬಂದರೆ ನಾನು ಸಮಾಜಿಕ ವ್ಯವಸ್ಥೆಯ ವಾಸ್ತವಾಂಶಗಳನ್ನು ನೆನಪಿಡಲೇ ಬೇಕು. ಅದಕ್ಕಾಗಿ ಸಮಾಜದಲ್ಲಿ ಜೊತೆಯೇ ಕೆಲಸ ಮಾಡಬೇಕಾಗುತ್ತದೆ.

ಇದನ್ನು ಏಕಾಂಗಿಯಾಗಿ ಮಾಡೋದಕ್ಕಾಗಲ್ಲ. ಇದು ಬಹಳ ಸಮಸ್ಯಾತ್ಮಕವಾದುದಾದ್ದರಿಂದ ಇದರ ಬಗ್ಗೆ ಏಕಮುಖವಾದವನ್ನ ಮಂಡಿಸೋದು ನನಗಂತೂ ಕಷ್ಟ. ಇದು ಎರಡನೇ ಅಂಶ. ಮೂರನೇ ಅಂಶ ನನಗನ್ನಿಸುತ್ತಾ ಇರೋದು, ಬೆಳಗ್ಗೆಯಿಂದ ನಮ್ಮ ಕಾರ್ಯಕ್ರಮದ ಉದ್ಘಾಟಕರಾದ ರಾಜೇಂದ್ರ ಚೆನ್ನಿ ಮತ್ತು ಆಶಯ ಭಾಷಣ ಮಾಡಿದ ಡಿ ಎಸ್ ನಾಗಭೂಷಣ್ ಬಹಳ ಸರಿಯಾದ್ದು ಹೇಳಿದರು. ಅವರು ಹೇಳಿದಂತೆ ಈ ಆಧುನಿಕತೆಯ ಕಲ್ಪನೆಯನ್ನ ನಾವು ಸ್ವೀಕರಿಸಿರುವ ರೀತಿಯೇ ತಪ್ಪಾಗಿದೆ. ಆಧುನಿಕತೆ ಅಂತ ನಾವು ಯಾವುದನ್ನ ಕೈಗಾರಿಕಾ ಕ್ರಾಂತಿಯ ನಂತರ ಕರೀತಾ ಇದ್ದೀವಿ ಅದು ಕೇವಲ ಸುಖಕೇಂದ್ರಿತ. ಅದು ಬಹಳ ತಪ್ಪಾಗಿರುವಂತಹ ಹಾದಿ. ಅದರಲ್ಲೂ ಕೂಡ ಅನುಭೋಗ ಕೇಂದ್ರಿತವಾಗಿ ಅದು ಬಂಡವಾಳಶಾಹಿಗಳ ಕೈಯಲ್ಲಿ ಸಿಕ್ಕಿಬಿದ್ದರೆ ಅದು ಲಾಭ ಕೇಂದ್ರಿತ ದಾರಿಯೇ ಆಗುತ್ತದೆ. ಸುಖ–ಹೆಚ್ಚು ಸುಖ ಪಡಿಬೇಕು ಅಂದ್ರೆ ಹೆಚ್ಚು ಸರಕುಗಳಿರ್ಬೇಕು. ಹೆಚ್ಚು ಸರಕುಗಳಿರ್ಬೇಕು ಅಂದ್ರೆ ಹೆಚ್ಚು ಹಣ ಇರಬೇಕು. ಹೆಚ್ಚು ಲಾಭ ಪಡೀಬೇಕು ಅಂದ್ರೆ ಹೆಚ್ಚು ಉತ್ಪಾದನೆ ಮಾಡ್ಬೇಕು. ಹೆಚ್ಚು ಲಾಭ ಮತ್ತು ಉತ್ಪಾದನೆ ಅಂದ್ರೆ ಬಹುಸಂಖ್ಯಾತ ಜನರನ್ನ ನಾವು ಸದೆಬಡಿಯಬೇಕು. ಇದು ಬಹಳ ಸುಲಭವಾಗಿರೋ ಸೂತ್ರ. ಯಾವಾಗ್ಲೂ ಹಾಗೇ ನಡೀತಾ ಇರೋದು.

ಹೆಚ್ಚು ಉತ್ಪಾದನೆ ಯಾಕೆ ಮಾಡ್ತಿದ್ದೀರ? ಹೆಚ್ಚು ಲಾಭ ಮಾಡೋದಕ್ಕೆ (ಹೆಚ್ಚು ಜನರಿಗೆ ಹಂಚೋದಕ್ಕಲ್ಲ!) ವಿಶ್ವದ ಮಾರುಕಟ್ಟೆಯ ಮೇಲೆ ಏಕಸ್ವಾಮ್ಯವನ್ನ ಸಾಧಿಸೋದಕ್ಕೆ ಹೆಚ್ಚು ಉತ್ಪಾದನೆ. ಲಾಭ! ಯಾಕೆ ಹೆಚ್ಚು ಲಾಭ ಅಂದ್ರೆ ಹೆಚ್ಚು ಸುಖವನ್ನ ಪಡೆಯೋದಕ್ಕೆ. ಹೆಚ್ಚು ಸುಖ ಪಡೆಯೋದು ಅಂದ್ರೆ ಏನು? ಹೆಚ್ಚು ಸರಕುಗಳನ್ನ ಕೊಂಡುಕೊಳ್ಳೋದು. ಈ ಸರಕುಕೇಂದ್ರಿತವಾಗಿರುವಂತ ದೃಷ್ಟಿಕೋನ, ಲಾಭಕೇಂದ್ರಿತವಾಗಿರುವಂತಹ ಉತ್ಪಾದನೆ ಹಾಗೂ ಅನುಭೋಗಕೇಂದ್ರಿತವಾದ ಜೀವನ ಮೌಲ್ಯ ಇವು ಒಟ್ಟಾರೆ ನಮ್ಮ ಇಂದಿನ ದುಃಸ್ಥಿತಿಗೆ ಕಾರಣ. ಆಧುನಿಕತೆ ತನ್ನಷ್ಟಕ್ಕೆ ತಾನೆ ತೊಂದ್ರೆ ಮಾಡುತ್ತೋ ಇಲ್ಲವೋ ನಾನು ಯೋಚ್ನೆ ಮಾಡಿ ಹೇಳ್ಬೇಕು. ಯಾಕೆಂದರೆ ನಾವು ನಿತ್ಯವೂ ಆಧುನಿಕಗೊಳ್ಳುವವರೇ. ನಾವೀನ್ಯತೆಯ ಅರ್ಥದಲ್ಲಿ ಹೇಳ್ತಾ ಇರೋದು. ನೀರೆತ್ತೋದಕ್ಕೆ ಕಪಿಲೆ ಬಾನೆ ಬೇಕು ಅಂತ ಇವತ್ತು ಯಾರೂ ಕೂಡ ಕೇಳಲ್ಲ.

ಗಾಂಧೀಜಿ ಕೂಡ ಸಂಕೀರ್ಣ ಯಂತ್ರಗಳ ಅಗತ್ಯ ಮನಗಂಡಿದ್ದರು. ಅದು ಬಿಟ್ಟರೆ ಗ್ರಾಮದ ಆರ್ಥಿಕತೆಗೆ ಸರಳವಾದ ಯಂತ್ರಗಳು, ಅದಕ್ಕೆ ಬಳಕೆಗೆ ಬೇಕಾಗಿರೋ ಉತ್ಪಾದನೆ ಇದ್ದರೆ ಸಾಕು ಅಂತ ಹೇಳಿದ್ರು. ಮಾರ್ಕ್ಸ್ ಮಾತ್ರ ಈ ವಿಷಯದಲ್ಲಿ ಭಿನ್ನ. ಆತನಿಗೆ ಬೃಹತ್ ಉತ್ಪಾದನೆ, ಅದರ ಮೂಲಕ ಕಾರ್ಮಿಕರೆಲ್ಲ ಒಂದು ಕಡೆ ಜಮಾವಣೆ ಆಗ್ತಾರೆ. ಆದ್ದರಿಂದ ಅವರಿಗೆ ವರ್ಗ ಚೈತನ್ಯ ಬರುತ್ತೆ. ಆದ್ದರಿಂದ ಕ್ರಾಂತಿಯನ್ನ ಮಾಡ್ತಾರೆ ಅನ್ನುವ ಸಿದ್ಧಾಂತ ಇತ್ತು. ಇರಲಿ ಅದು. ನಾನೀಗ ಈ ವಿಧಾನಗಳ ಬಗ್ಗೆ ಚರ್ಚೆ ಮಾಡುತ್ತಾ ಕೂತರೆ ಉಪಯೋಗ ಇಲ್ಲ.

ಅವರು ಆ ಕಾಲಘಟ್ಟಕ್ಕೆ ಕಂಡುಕೊಂಡ ಸತ್ಯಗಳನ್ನ ಸದುದ್ದೇಶದಿಂದಲೇ ಮಂಡಿಸಿದ್ದರು ಅಂತ ನಾನು ಅವರನ್ನ ಗೌರವಿಸುತ್ತಾ ಇದ್ದೇನೆ. ಅವರು ಯಾರೂ ದ್ರೋಹಿಗಳಾಗಿರಲಿಲ್ಲ. ನಮ್ಮನ್ನ ವಂಚಿಸಬೇಕು ಅಂತ ಹೇಳಿ ಅವರು ಸಿದ್ಧಾಂತಗಳನ್ನ ಮಂಡಿಸಿರಲಿಲ್ಲ. ಇವರೆಲ್ಲರೂ ಕೂಡ ಮನುಕುಲದ ವಿಮೋಚನೆಗೆ ಏನು ಸರಿ ಅಂತ ಚಿಂತಿಸಿ, ಅದನ್ನ ಗಟ್ಟಿಯಾಗಿ ನಂಬಿ ಅವರ ಮನಸ್ಸಿಗೆ ಹೊಳೆದಿದ್ದನ್ನ ನಂಬುಗೆಯಿಂದ ಹೇಳಿದರು. ಚಿಂತನೆ ಆ ಕಾಲಕ್ಕೆ ಮತ್ತು ಆ ಸಂದರ್ಭಕ್ಕೆ ಬಹುಮಟ್ಟಿಗೆ ಬದ್ಧವಾಗಿರುತ್ತದಾದ್ದರಿಂದ, ಮನುಷ್ಯನ ಕಣ್ಣು ಎಷ್ಟು ಸಾಧ್ಯವೋ ಅಷ್ಟು ದೂರ ಮುಂದಕ್ಕೆ ನೋಡಿ ಅದರ ಮೇಲೆ ಅವರು ತಮ್ಮ ಸಿದ್ಧಾಂತ ಹೇಳಿದ್ದಾರೆ. ಅದರಿಂದ ಅವರ ಮೇಲೆ ನಾವು ಜಗಳಹಿಡಿಬೇಕಾಗಿರೋದು ಹೆಚ್ಚಿಲ್ಲ.

ಆಶಯಗಳು ಸರಿಯಾಗೇ ಇದ್ದಿರಬೇಕು. ಅದಕ್ಕೆ ಅವರು ಕೆಲವು ವಿಧಾನಗಳನ್ನು ಹೇಳ್ತಾರೆ. ಇಡೀ ಪ್ರಶ್ನೆ, ನಮ್ಮ ಇಡೀ ಚರ್ಚೆಯ ಪ್ರಶ್ನೆ ನಿಂತಿರೋದು ಇವತ್ತು ಈ ವೈಧಾನಿಕತೆ ಮೇಲೆ. ಅದು ವರ್ಗ ಸಮರವೇ? ಸತ್ಯಾಗ್ರಹವೇ? ಅಸಹಕಾರ ಚಳವಳಿಯೇ? ಕಾನೂನು ಭಂಗವೇ? ಶ್ರಮದಾನವೇ? ಪಾರ್ಲಿಮೆಂಟೇ? ಓಟೇ? ಬಂದೂಕೇ? ನಾವು ಪೂರ್ತಿ ವಿಧಾನಾತ್ಮಕ ಚರ್ಚೆಗಳಲ್ಲಿ ಮಗ್ನವಾಗಿದೀವಿ. ನನಗನ್ನಿಸೋದು ಇದು ಅಷ್ಟು ಉಪಯುಕ್ತಕರವಾದುದಲ್ಲ. ನಾವು ಗಾಂಧೀಜಿಯಿಂದ ಕಲಿಯಬೇಕಾದ್ದು ಮತ್ತು ಒಪ್ಪಬೇಕಾದ ಒಂದು ಮುಖ್ಯಾಂಶವಿದೆ. ಅದು ಏನಂದ್ರೆ ಯಾವುದೇ ಸಂಘಟನೆಯ ಬಲ ಇಲ್ಲದೆ, ಯಾವುದೇ ಆಯುಧದ ಬಲ ಇಲ್ಲದೆ, ವ್ಯಕ್ತಿ ತನ್ನೊಳಗಿರುವ ಅಂತಃಸತ್ವದಿಂದಲೇ ತನ್ನ ಪ್ರತಿಭಟನೆಯನ್ನ ದಾಖಲಿಸಬೇಕು ಮತ್ತು ಅದನ್ನು ನಿರಂತರ ಮಾಡ್ತಾ ಹೋಗ್ಬೇಕು. ಏಕಾಂಗಿಯಾಗಿದ್ದಾಗ್ಯೂ ಹೇಡಿಯಾಗಬಾರದು ಅನ್ನುವುದು ಬಹಳ ದೊಡ್ಡ ಸಿದ್ಧಾಂತ.

ಆದರೆ ಇದನ್ನ ಗಾಂಧಿಯೇ ಮೊದಲು ಹೇಳಿದ್ದೇ? ಬುದ್ಧ ಹೇಳಿರಲಿಲ್ಲವೇ? ಮಹಾವೀರ ಹೇಳಿರಲಿಲ್ಲವೇ? ಬಾಹುಬಲಿ ಹೇಳಲಿಲ್ಲವೇ? ಇದೊಂದು

ವ್ಯಕ್ತಿ ಸ್ವಾತಂತ್ರ್ಯದ ಪ್ರಶ್ನೆ ಬಹಳ ದೊಡ್ಡದು. ವ್ಯಕ್ತಿ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಇಲ್ಲದ ಕಡೆ ಎಲ್ಲರ ಪಾಲ್ಗೊಳ್ಳುವಿಕೆಯಿಂದ, ಎಲ್ಲರ ಆಶೋತ್ತರಗಳಿಗಾಗಿ ನಡೆಯುವ ವ್ಯವಸ್ಥೆ ಬದುಕುಳಿಯುವುದು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಮಾವೋ ಹೇಳಿದ ಸಾಂಸ್ಕೃತಿಕ ಕ್ರಾಂತಿಯ ಚಿಂತನೆ ಮುಖ್ಯವಾದದದ್ದು. ಮಾವೋ ಪ್ರಕಾರ ಬರೀ ಸಮಾಜವಾದಿ ಕ್ರಾಂತಿ ಆಗಿಬಿಟ್ಟರೆ ಸಾಕಾಗಲ್ಲ. ಒಂದು ಸಾಂಸ್ಕೃತಿಕ ಕ್ರಾಂತಿ ಬೇಕು. ಇದು ಆತನಿಗೆ ಕ್ರಾಂತಿಯಾಗಿ ಸಮಾಜವಾದಿ ವ್ಯವಸ್ಥೆಯ ಅಧಿಕಾರ ಸ್ಥಾಪನೆ ಹಂತದಲ್ಲಿ ಹೊಳೆದಿದ್ದು. ಸಮಾಜವಾದ ಬಂದಿದೆ. ಆದ್ರೆ ಕಮ್ಯುನಿಸ್ಟ್ ಪಾರ್ಟಿಯೇ ಚೀನಾದಲ್ಲಿ ಬಂಡವಾಳಶಾಹಿಯನ್ನ ಪುನರ್ ಸ್ಥಾಪನೆ ಮಾಡೋದಕ್ಕೆ ಪ್ರಯತ್ನ ಪಡುತ್ತಾ ಇದೆ.

ಮೌಲ್ಯ. ವ್ಯಕ್ತಿಗೆ ಯಾವಾಗ ತನ್ನ ಅಂತಃಸತ್ವದ ಬಗ್ಗೆ ಗಟ್ಟಿ ನಂಬಿಕೆ ಇರುತ್ತೋ, ತಾನು ಕಂಡುಹಿಡಿದ ಸತ್ಯದ ಬಗ್ಗೆ ಅಥವಾ ತಾನು ನಡೆಯುವ ದಾರಿಯ ಬಗ್ಗೆ ಯಾರಿಗೆ ಆ ರೀತಿಯದ್ದೊಂದು ಬಹಳ ದೊಡ್ಡ ನಿಷ್ಠೆ ಇರುತ್ತದೋ ಅವನದನ್ನು ಪಾಲಿಸುತ್ತಾನೆ. ಆ ರೀತಿಯಾಗಿರುವ ಪರಂಪರೆ ನಮ್ಮಲ್ಲಿ ಮೊದಲಿನಿಂದ ಇದೆ. ನಮ್ಮಲ್ಲಿರುವ ತೊಂದರೆ ಏನು ಅಂದ್ರೆ, ನಾವು ಆಧುನಿಕರಾದ ಮೇಲೆ, ಕೈಗಾರಿಕಾ ಕ್ರಾಂತಿ ಆದ ಮೇಲೆ ಇನ್ನಿಲ್ಲದಷ್ಟು ಗುಂಪುಗಾರಿಕೆ ಮೇಲೆ ಅವಲಂಬಿತರಾದೆವು.

ಗುಂಪು! ಗುಂಪಿಗೆ ಹೌದಪ್ಪಗಳಾಗಿ ಹೋದೆವು. ಗಾಳಿ ಬಂದಾಗ ತೂರಿಕೊಳ್ಳೋದು ಅಂತ ಮಧ್ಯದಲ್ಲಿ ನಿಂತಿರೋದು, ಗಾಳಿ ಬಂದಾಗ ತೂರಿಕೊಳ್ಳೋದು. ಈ ಕಡೆ ನೋಡೋದು ಐವತ್ತು ಜನ ಇದ್ದಾರಾ? ಸರಿ, ಆ ಕಡೆ ನೋಡೋದು, ಎಪ್ಪತ್ತೈದು ಜನ ಇದಾರೆ ಕಣಯ್ಯ ಅದೇ ಸರಿ ಇರಬೇಕು. ಇದು ಈ ರೀತಿಯಾಗಿರುವಂತ ಅನಾರೋಗ್ಯಕರ ಗುಂಪುಗಾರಿಕೆಯ ಅವಲಂಬನೆಯೇ ನಮ್ಮನ್ನ ನಾಶಗೊಳಿಸುತ್ತಿದೆ. ಅದು ಈ ಆಧುನಿಕತೆ ನಮಗೆ ತಂದುಕೊಟ್ಟಿರುವ ರೋಗ. ತನ್ನ ಆತ್ಮಸಾಕ್ಷಿಯ ದನಿಯನ್ನು ಕೇಳದೆ, ತನ್ನ ತಿಳಿವಳಿಕೆಯ ಮಾತನ್ನ ಕೇಳದೆ ಗುಂಪು ಜಾಸ್ತಿ ಇದ್ದರೆ ಅದು ಸರಿಯಾದದ್ದು ಅನ್ನೋದಿದೆಯಲ್ಲ; ದುಡ್ಡು ಜಾಸ್ತಿ ಇರೂನು ಸರಿ ಅಂದ ಹಾಗೆ, ಬಲ ಜಾಸ್ತಿ ಇರೋನು ಸರಿ ಅಂದ ಹಾಗೆ, ಇದೂ ಕೂಡ ಒಂದು ರೋಗವೇ.

ಇದರಿಂದಾಗಿ ಮನುಷ್ಯ ಏಕಾಂಗಿಯಾದಾಗ ಬಹಳ ನಿರ್ಬಲ. ಗುಂಪು ನೋಡ್ಬೇಕು ಅವನು. ಭಾಷಣ ಮಾಡಬೇಕಾದಾಗ ಕೂಡ ಜಾಸ್ತಿ ಚೇರಲ್ಲಿ ಜನ ತುಂಬಿಲ್ಲದಿದ್ದರೆ ಭಾಷಣ ಚೆನ್ನಾಗಿ ಮಾಡಲ್ಲ. ಇದೊಂದು ಗೀಳೇ ಆಗೋಗಿದೆ. ಅವನಿಗೆ ಹೇಳಬೇಕಾದದ್ದೇನಾದ್ರೂ ಇದ್ರೆ ಅವನು ಸುಮ್ಮನೆ ತನ್ನ ಪಾಡಿಗೆ ತಾನು ಹೇಳುವಂತಿರಬೇಕು. ಎಲ್ಲದಕ್ಕೂ ಶ್ರೋತೃಗಳು ಇರಬೇಕು. ಅದು ಸಮಸ್ಯೆಯಲ್ಲ. ಅಲ್ಲಿರುವ ಶ್ರೋತೃಗಳು ಚಪ್ಪಾಳೆ ತಟ್ಟಬೇಕು, ಸಾಧ್ಯ ಆದರೆ ವಿಷಲ್ ಹೊಡೀಲಿ ಅಂತ ಮಾತಾಡಲು ಪ್ರಯತ್ನಿಸುವುದು ಸಮಸ್ಯೆ. ಈ ರೀತಿ ಗುಂಪುಗಳ ಮನರಂಜನೆಗಾಗಿ ಹುಟ್ಟುವ ಚಿಂತನೆಗಳಲ್ಲಿ ಬದುಕಲು ಹೋಗಿ ನಾವು ವ್ಯಕ್ತಿಯ ಆತ್ಮಸಾಕ್ಷಿಯನ್ನ ದುರ್ಬಲ ಮಾಡಿದ್ದೀವಿ. ಆದ್ದರಿಂದ ನಾವು ಈ ವಿಷಯದಲ್ಲಿ ಅಂಬೇಡ್ಕರ್ ಹೇಳಿರಲಿ, ಗಾಂಧಿ ಹೇಳಿರಲಿ, ಲೋಹಿಯಾ ಹೇಳಿರಲಿ, ಹೇಳಿಲ್ಲದಿರಲಿ, ನಾವು ಮಾತ್ರ ಮನುಷ್ಯನ ಅಂತಃಸತ್ವವನ್ನ ಹೆಚ್ಚಿಸುವುದರ ಕಡೆಗೆ ಯಾವಾಗಲೂ ಗಮನ ಕೊಡಬೇಕು.

ಅದಿಲ್ಲದ ಸಂದರ್ಭದಲ್ಲಿ ವ್ಯವಸ್ಥೆ ಏನೂ ಕೆಲಸ ಮಾಡೋದಿಲ್ಲ; ಯಾಕೆಂದರೆ ವ್ಯವಸ್ಥೆ ಸಾವಿರ ಅವಕಾಶಗಳನ್ನ ನಿರ್ಮಿಸಿದ್ದಾಗಲೂ ಕೂಡ ಅದನ್ನ ವಂಚಿಸಬಹುದು. ಅಂಬೇಡ್ಕರ್ ಬಹಳ ಶಕ್ತವಾದ ಸಂವಿಧಾನ ಬರೆದಿದ್ದಾರೆ. ಸಾಮಾಜಿಕ ನ್ಯಾಯದ ಬಗ್ಗೆ ಅದರಲ್ಲಿ ಬಹಳ ಅರ್ಥಪೂರ್ಣ ಅವಕಾಶ ಕಲ್ಪಿಸಲಾಗಿದೆ. ಆದರೂ ಕೂಡ ಭಾರತದಲ್ಲಿ ಯಾಕೆ ಸ್ವಾತಂತ್ರ್ಯ ಬಂದು 60 ವರ್ಷ ಆದ ಮೇಲೆ ಕೂಡ ಸಾಮಾಜಿಕ ನ್ಯಾಯದ ಆಶಯಗಳು ಶಕ್ತವಾಗಿ ನೆಲೆಗೊಂಡಿಲ್ಲ. ಅಂಬೇಡ್ಕರ್ ಆಗಲೇ ಹೇಳಿದ್ದರು– ಇದಕ್ಕಿಂತ ಒಳ್ಳೆಯ ಸಂವಿಧಾನವನ್ನು ಬರೆಯಲು ಸಾಧ್ಯವಿರಬಹುದು, ಆದರೆ ಅದನ್ನು ಜಾರಿಗೊಳಿಸುವ ಮನಸ್ಸುಗಳು, ಕೈಗಳು ಸರಿ ಇಲ್ಲದಿದ್ದರೆ ಮಾತ್ರ ದೇವರೂ ಕೂಡ ಕಾಪಾಡಲಾರ.

ಆದ್ದರಿಂದ ನನಗನಿಸೋದು ಅಭಿವೃದ್ಧಿ ಅನ್ನುವುದನ್ನ ನಾವು ಈ ಸುಖಕೇಂದ್ರಿತ ದೃಷ್ಟಿಕೋನದಿಂದ ಬಿಡುಗಡೆಗೊಳಿಸಬೇಕು. ನೆಮ್ಮದಿಯ ಕಡೆಗೆ ನಾವು ಗಮನ ಕೊಡಬೇಕು. ಸುಖದ ಬದಲು ನೆಮ್ಮದಿಯನ್ನು, ಸಂಪತ್ತಿನ ಹೆಚ್ಚಳದ ಬದಲು ಸಂತೃಪ್ತಿಯನ್ನು ನಾವು ಗುರಿಯಾಗಿಸಿಕೊಳ್ಳಬೇಕು. ಇಡೀ ಪ್ರಪಂಚದಲ್ಲಿರುವಂತಹ ಸಂಪತ್ತಿನಲ್ಲಿ ಶೇ. 60 ಭಾಗ ಅಮೆರಿಕದಲ್ಲಿದೆ. ಅವರಿರುವುದು ಪ್ರಪಂಚದ ಶೇ. 6ರಷ್ಟು ಜನಸಂಖ್ಯೆ ಮಾತ್ರ. 6ರಷ್ಟು ಜನ ಇರುವವರಿಗೆ ಶೇ. 60ರಷ್ಟು ಸಂಪತ್ತಿದ್ದರೂ ಯಾಕೆ ಅಲ್ಲಿ ಮಾನಸಿಕ ರೋಗ ಚಿಕಿತ್ಸಾಲಯಗಳು ಜಾಸ್ತಿ ಇವೆ? ಪ್ರಪಂಚದಲ್ಲಿ ಅತ್ಯಂತ ಕಡಿಮೆ ನೆಮ್ಮದಿಯನ್ನು ಕಂಡಿರುವ ದೇಶ ಅಂದ್ರೆ ಅಮೆರಿಕಾ ದೇಶ. ಇದನ್ನು ಅಮೆರಿಕಾದ ಜಾನ್ ಪರ್ಕಿನ್ಸನ್ ಎಂಬ ಲೇಖಕನೇ ಬರೆದುಕೊಂಡಿದ್ದಾನೆ. ಒಂಥರಾ ಹುಚ್ಚರ ಸಂತೆ ಅದು. ಸಂಪತ್ತೊಂದೇ ಏನೂ ಮಾಡೋದಿಲ್ಲ. ಅದು ನ್ಯಾಯಮಾರ್ಗದಲ್ಲಿ ಬಂದಿದ್ದಲ್ಲದಿದ್ದರೆ ನಮ್ಮೊಳಗೆ ಪಾಪಪ್ರಜ್ಞೆಯನ್ನು ಜಾಸ್ತಿ ಮಾಡುತ್ತೆ. ನಾವು ಪಾಪಿಗಳು ಅಂತ ಅಮೆರಿಕಾದವರಿಗೆ ಗೊತ್ತಾಗುತ್ತಿದೆ. ಅವರ ಮನೋಸ್ಥೈರ್ಯ ಅಸ್ಥಿರಗೊಂಡಿದೆ. ಅಮೆರಿಕಾದ ನಾಗರೀಕ ಬೀದಿಯಲ್ಲಿ ಬರಬೇಕಾದರೆ ಯಾವಾಗ ಸ್ಫೋಟ ಆಗುತ್ತೇನೋ ಅಂತ ಹೆದರುವ ಮನಃಸ್ಥಿತಿ ಉಂಟಾಗಿದೆಯಂತೆ.

ಮೊನ್ನೆ ಒಂದು ಸಣ್ಣ ದೇಶ ಭೂತಾನ್ ಬಗ್ಗೆ ದೇವನೂರು ಕೋಟ್ ಮಾಡಿದಾರೆ. ಭೂತಾನ್ ಸಮಾಜವನ್ನು ನಾವು ಅಭಿವೃದ್ಧಿಯ ಯಾವ ಮಾನದಂಡದಿಂದ ಅಳೆಯಬೇಕು? ಈ ಸಮಾಜದಲ್ಲಿರುವಂತಹ ಸಮತೋಲದಿಂದ ಮತ್ತು ಸಮಾನತೆಯಿಂದ ಎಂದು ಅದರ ಪ್ರಧಾನಮಂತ್ರಿ ಹೇಳಿದ್ದನ್ನು ದೇವನೂರು ಜ್ಞಾಪಿಸಿಕೊಂಡಿದ್ದಾರೆ. ಇದು ಬಹಳ ಮುಖ್ಯವಾದದ್ದು. ಶ್ರೇಷ್ಠತೆಯನ್ನ ಯಾವುದರಿಂದ ಅಳೆಯಬೇಕು. ಅಲ್ಲಿರುವ ಸಾಮಾಜಿಕ ಜೀವನದಲ್ಲಿರಬಹುದಾಗಿರುವ ಸರಾಸರಿ ಶ್ರೇಷ್ಠತೆಯೇ ನಿಜವಾದ ಒರೆಗಲ್ಲು. ಅಪವಾದಗಳು ಇರ್ತಾರೆ, ಅದು ಲೆಕ್ಕವಲ್ಲ. ತುದಿ ಮತ್ತು ತಳದ ನಡುವಿನ ಅಂತರ ಎಷ್ಟು ಕಡಿಮೆ ಇದ್ದರೆ ಅಷ್ಟು ಅದು ಸ್ವಾಗತಾರ್ಹ.

ನಾವು ಭಾರತದ ಅಭಿವೃದ್ಧಿಯನ್ನು ಯಾವುದರಿಂದ ಅಳೆಯಬೇಕು? ಯಾವುದೇ ದೇಶದ ಅಭಿವೃದಿಯನ್ನ ಅಳೆಯಬೇಕಾದರೆ ಎಷ್ಟು ಸೇತುವೆ ಇದೆ? ಎಷ್ಟು ಫ್ಲೈಓವರ್ ಇದೆ? ಎಷ್ಟು ಪರ್‌ಕ್ಯಾಪಿಟಾ ಇನ್‌ಕಮ್ ಇದೆ ಎಂಬುದೇ ದೊಡ್ಡ ಮಾನದಂಡವಲ್ಲ. ನನಗೆ 100 ರೂಪಾಯಿ ಆದಾಯ ಬರುತ್ತಾ ಇದ್ದರೆ, ಇನ್ನೊಬ್ಬನಿಗೆ ಕಡಿಮೆ ಅಂದರೂ 60ರೂಪಾಯಿ ಬರುತ್ತಾ ಇರಬೇಕು. ಇಷ್ಟು ಪ್ರಮಾಣದ ಅಂತರ ಇಟ್ಟಿದ್ದರೆ ಇದು ಸಮತೋಲನದ ಸಮಾಜ. ದಿನಕ್ಕೆ 100ರೂ ಕೂಲಿ ತೆಗೆದುಕೊಳ್ಳುವವರು ಎಷ್ಟು ಜನ ಇದ್ದಾರೆ? ದಿನಕ್ಕೆ ಲಕ್ಷಗಟ್ಟಲೆ ಆದಾಯ ಬರುವವರು ಎಷ್ಟು ಜನ ಇದ್ದಾರೆ? ಆ ರೀತಿಯ ಅಸಮತೋಲನದಲ್ಲಿ ಒಂದು ಸಮಾಜವನ್ನು ಕಟ್ಟಿ ಅಭಿವೃದ್ಧಿ ಆಗಿದೆ ಎಂದು ವಾದ ಮಾಡಿದರೆ, ಅದು ಎಂದೂ ಕೂಡ ಅಭಿವೃದ್ಧಿಯಾಗಿರುವುದಕ್ಕೆ ಸಾಧ್ಯ ಇಲ್ಲ. ಅದು ದಂಗೆಗ್ರಸ್ಥವಾಗಿರುತ್ತದೆ. ಅಭಿವೃದ್ಧಿಯೆಂಬುದೇ ಅಲ್ಲಿ ಕ್ಯಾನ್ಸರ್ ಸ್ವರೂಪ ಪಡೆದುಕೊಂಡಿರುತ್ತದೆ.

ಈ ಹಿನ್ನೆಲೆಯಲ್ಲಿ ನಾನು ಗಾಂಧಿ, ಮಾರ್ಕ್ಸ್, ಅಂಬೇಡ್ಕರ್ ಮತ್ತು ಲೋಹಿಯಾ ಈ ನಾಲ್ಕು ಜನರನ್ನ ನೋಡಿದರೆ ನನಗೆ ಕಂಡಿದ್ದಿಷ್ಟು, ಸುಮ್ಮನೆ ನಾನು ಗ್ರಹಿಸಿದ ಹಾಗೆ ಇವರ ಮುಖ್ಯ ಗಮನವೆಲ್ಲಿದೆ ಅಂತ ನಾವು ನೋಡಬಹುದು. ಮೊದಲನೇ ಲಕ್ಷ್ಯ ಏನು? ಮಾರ್ಕ್ಸ್‌ನಿಗೆ ನೈತಿಕ ಆರ್ಥಿಕತೆ ಬೇಕು. ಮಾರ್ಕ್ಸ್ ಯಾವಾಗಲೂ ಮಾತನಾಡುವುದು ಬಂಡವಾಳಶಾಹಿ ವ್ಯವಸ್ಥೆ ಅನೈತಿಕ ಅಂತ. ಯಾಕೆ ಅಂದರೆ ಸಂಪತ್ತನ್ನ ಸೃಷ್ಟಿ ಮಾಡಿದವರು ಸಂಪತ್ತಿನ ಒಡೆಯರಾಗಿಲ್ಲ. ಯಾರು ಇಷ್ಟೆಲ್ಲಾ ವಸ್ತುಗಳನ್ನ ಉತ್ಪಾದನೆ ಮಾಡಿದರೋ ಅವರು ಅದರಿಂದ ಪರಕೀಯಗೊಂಡಿದ್ದಾರೆ. ಆದ್ದರಿಂದ ಇದು ಶೋಷಣೆಯ ಆರ್ಥಿಕತೆ, ಇದು ಭ್ರಷ್ಟ ಆರ್ಥಿಕತೆ ಮತ್ತು ಇದು ಪಾಪಕೂಪ ಅಂದ ಮಾರ್ಕ್ಸ್. ಆದ್ದರಿಂದ ಅವನು ಹೇಳಿದ್ದು ನೈತಿಕ ಆರ್ಥಿಕತೆಯನ್ನು.

ನಾವು ಈಗಲೂ ಕೂಡ ಹೇಳಬೇಕಾಗಿರುವುದು ನೈತಿಕ ಆರ್ಥಿಕತೆಯನ್ನೇ. ಸಾವಿರಾರು ಕೋಟಿರೂಪಾಯಿ ಹಣ ಅಕ್ರಮ ಮಾರ್ಗದಲ್ಲಿ ಹೋಗಿ ಯಾರ ಬಳಿಯೋ ಶೇಖರಣೆಯಾಗುತ್ತದೆ ಅಂದರೆ ನಮಗೆ ಹೆದರಿಕೆಯಾಗಬೇಕು. ಅಂತಹದಕ್ಕೆ ಈ ಆರ್ಥಿಕ ವ್ಯವಸ್ಥೆ ಅವಕಾಶ ಮಾಡಿಕೊಟ್ಟಿದೆ ಅಂದರೆ ಆ ಸಮಾಜದಲ್ಲಿ ಲೋಪ ಇದೆ ಅದು ಯಾವಾಗಲೂ ದಂದೆಗ್ರಸ್ಥವಾಗುತ್ತೆ. ಮಾರ್ಕ್ಸ್‌ನಿಂದ ಈ ಅಂಶವನ್ನು ನಾವು ಸ್ವೀಕರಿಸಲೇ ಬೇಕು.

ಇನ್ನು ಗಾಂಧಿಗೆ ಬಂದರೆ ಅವರು ಹೇಳುವುದು ನೈತಿಕ ವ್ಯಕ್ತಿ ಬೇಕು ಅಂತ. ವ್ಯಕ್ತಿಶುದ್ಧತೆ ಇಲ್ಲದಿದ್ದರೆ, ಆತ್ಮಪರಿಶುದ್ಧತೆ ಇಲ್ಲದಿದ್ದರೆ ಏನೂ ಮಾಡೋಕೆ ಸಾಧ್ಯ ಇಲ್ಲ ಅನ್ನೋದು ಅವರ ನಿಲುವು. ನೀನು ಏನು ಹೇಳುತ್ತೀಯೋ ಅದನ್ನ ನಂಬು. ನೀನು ಏನು ಹೇಳ್ತೀಯೋ ಅದನ್ನ ಮಾಡು. ಗಾಂಧಿ ಸುಲಭವಾಗಿ ತಮ್ಮ ನಿಲುವುಗಳನ್ನು ಬದಲಿಸಿಕೊಳ್ಳುತ್ತಿದ್ದರು ಎಂದು ಟೀಕೆ ಮಾಡುವವರು ಇದ್ದಾರೆ. ಯಂತ್ರಗಳೇ ಬೇಡ ಅಥವಾ ಯಂತ್ರಗಳಿರಲಿ–ಇರಬಹುದು, ಜಾತಿಗಳೇ ಇರಬೇಕು, ಹೇ... ಜಾತಿಗಳು ಬಹಳ ಪಾಪ, ಅವರಿಗೆ ಈ ಬದಲಾವಣೆ ಏನೂ ಕಷ್ಟ ಅನ್ನಿಸುತ್ತಿರಲಿಲ್ಲ. ಯಾಕೆಂದರೆ ಅವರು ಅಂತರಂಗದ ಪ್ರಾಮಾಣಿಕತೆಯನ್ನು ಆಧರಿಸಿದವರಾಗಿದ್ದರು. ಎಲ್ಲಿ ವ್ಯಕ್ತಿ ನೈತಿಕತೆ ಇಲ್ಲವೋ, ಎಲ್ಲಿ ವ್ಯಕ್ತಿಶುದ್ಧತೆ ಇಲ್ಲವೋ, ಆತ್ಮಶುದ್ಧತೆ ಇಲ್ಲವೋ ಅಲ್ಲಿ ನಾವು ಎಷ್ಟು ಸತ್ಯಗಳನ್ನು ಮಾತನಾಡಿದರೂ ಸುಳ್ಳಾಗಿರುತ್ತದೆ. ಸಾರ್ವಜನಿಕವಾಗಿ ಮಾತನಾಡೋ ಮಾತುಗಳ ಬಗ್ಗೆ ಒಂದು ಹೇಳಿಕೆ ಇದೆ. ಸಾಮಾನ್ಯವಾಗಿ ಮನುಷ್ಯ ಮಾತನಾಡುವುದರಲ್ಲಿ 50 ಭಾಗ ಸುಳ್ಳಂತೆ. ಅದರಲ್ಲೂ ಅವನು ಸಾರ್ವಜನಿಕವಾಗಿ ಮಾತ ನಾಡುತ್ತಾ ಇದ್ದರೆ 75 ಭಾಗ ಸುಳ್ಳಂತೆ. ಆ ರೀತಿಯಾಗಿರುವ ದ್ವಂದ್ವಗಳಿಲ್ಲದ ಮನುಷ್ಯರನ್ನ ಸೃಷ್ಟಿ ಮಾಡುವುದು ಒಂದು ಸ್ವಸ್ಥ ಸಮಾಜಕ್ಕೆ ಬಹಳ ಮುಖ್ಯ.

ಅಂಬೇಡ್ಕರ್ ನೈತಿಕ ಸಮಾಜ ಬೇಕು ಅಂತ ಅಂದರು. ಈ ಸಮಾಜವೇ ಮೇಲು, ಕೀಳುಗಳ ಕಂತೆಯಾಗಿದೆ. ಮೇಲು, ಕೀಳು ಅನ್ನುವ ತಾರತಮ್ಯದ ಮೇಲೆ ನಿಂತಿದೆ. ಆದ್ದರಿಂದ ಈ ಸಮಾಜವನ್ನ ಬದಲಾಯಿಸಬೇಕು. ಹುಟ್ಟು, ಬಣ್ಣ ಇತ್ಯಾದಿಗಳ ಪರಿಗಣನೆ ಇಲ್ಲದೆ, ಎಲ್ಲರೂ ಕೂಡ ಜೀವ ಅನ್ನುವ ಕಾರಣಕ್ಕೆ ಸಮಾನವಾಗಿರಬೇಕು ಅನ್ನುವುದು ಅವರ ನಿಲುವು. ಅಂಬೇಡ್ಕರ್‌ಗೆ ಬೇಕಿದ್ದದ್ದು ಸಾಮಾಜಿಕ ನೈತಿಕತೆ– ಒಂದು ನೈತಿಕ ಸಮಾಜ. ಮನುಷ್ಯನನ್ನ ಹುಟ್ಟಿನ ಮೇಲೆ, ಶಾಸ್ತ್ರಗಳ ಆಧಾರದಲ್ಲಿ, ವೇದಗಳ ಆಧಾರದಲ್ಲಿ, ಸುಳ್ಳುಗಳ ಆಧಾರ

(45ನೇ ಪುಟಕ್ಕೆ)

ಹಸಿವು ನೀಗದ ಪೂಜೆ ಯಾಕೆ ?



-೧೧-

ಜ್ಯೋತಿ ಗುರುಪ್ರಸಾದ್

ಚಿಕ್ಕಂದಿನಿಂದಲೂ ಅಭ್ಯಾಸ ಮಾಡಿರುವ ಕವಿ ಯಾರೆಂದು ತಿಳಿಯದ ಒಂದು ಜನಪದಗೀತೆಯಾಗಿ ಕನ್ನಡಿಗರ ಜನ ಜೀವನದಲ್ಲಿ ಹಾಸುಹೊಕ್ಕಾಗಿರುವ 'ಪುಣ್ಯಕೋಟಿ' ಪದ್ಯವನ್ನು ಈಗ ಮತ್ತೊಮ್ಮೆ ಹೊಸಬಗೆಯ ಕಣ್ಣಿನಿಂದ ನೋಡುವ ಅಗತ್ಯವಿದೆಯೆಂದು ನನಗನಿಸುತ್ತದೆ.

ಬಾಲ್ಯದ ಚಿತ್ರಣವೆಂದರೆ ಮನೆಯ ಹಿತ್ತಲಿನ ಕೊಟ್ಟಿಗೆಯಲ್ಲಿ ಕಟ್ಟಿರುತ್ತಿದ್ದ ಹಸು, ಅದರೊಡನೆ ಸದಾ ಇರುತ್ತಿದ್ದ ಒಂದು ಕರು ಅದು ಚೆನ್ನಾಗಿ ಹಾಲು ಕುಡಿದರೆ ಹಸು ಇನ್ನೂ ಹಾಲು ಚೆನ್ನಾಗಿ ಕೊಡುತ್ತದೆ ಎಂಬ ಭಾವನಾತ್ಮಕವಾದ ಹಾಗೂ ವೈಜ್ಞಾನಿಕವಾಗಿಯೂ ನಿಜವಾಗಿದ್ದ ನಂಬಿಕೆ, ಕೊಟ್ಟಿಗೆ ತುಂಬಾ ಇರುತ್ತಿದ್ದ ಒಣಹುಲ್ಲು–ಹಸಿರು ಹುಲ್ಲುಗಳ ಮೆದೆಗಳು, ದೊಡ್ಡವರು ತಮ್ಮ ಕೈಗೆ ಮತ್ತು ಹಸುವಿನ ಕೆಚ್ಚಲಿಗೆ ಎಣ್ಣೆ ಹಚ್ಚಿ ನಿಧಾನದಲ್ಲಿ ಬೆರಳುಗಳ ಗೊಂಚಲಿನಂಥ ಕೆಚ್ಚಲಿನ ಒಂದೊಂದೇ ಬೆರಳನ್ನು ನೀವುತ್ತಾ ತಂಬಿಗೆ ತುಂಬಾ ಹಾಲು ಕರೆಯುತ್ತಿದ್ದ ದೃಶ್ಯ ಕಣ್ಮುಂದೆ ಬರುತ್ತದೆ. ಹಾಗೆಯೇ ಹಸು ಹಾಕುತ್ತಿದ್ದ ಸಗಣಿ–ಅದನ್ನು ಕ್ರಿಮಿ ನಾಶಕವಾಗಿ ಮನೆಯಲ್ಲಿ ಊಟದ ನಂತರ 'ಗೋಮ್ಯ ಹಚ್ಚುವುದು' ಎಂದು ಸಗಣಿ ಉಂಡೆಯನ್ನು ನೆಲದ ಮೇಲೆ ಒತ್ತಿ ಚೆಲ್ಲಿದ ಅನ್ನದ ಅಗಳುಗಳನ್ನು ಒತ್ತಿ ತೆಗೆಯುತ್ತಿದ್ದ ದೃಶ್ಯ, ಮಣ್ಣಿನ ನೆಲಗಳ ಮನೆಗಳ ಮುಂಭಾಗದಲ್ಲಿ ಸಗಣಿ ನೀರನ್ನು ಚೆಲ್ಲಿ ರಂಗೋಲಿ ಹಾಕುತ್ತಿದ್ದ ದೃಶ್ಯ, ಹಾಗೆಯೇ ಹಬ್ಬ–ಹರಿ ದಿನಗಳಲ್ಲಿ ಹಸುವನ್ನು ಪೂಜಿಸಿ ವಿಶೇಷ ವಂದನೆ ಸಲ್ಲಿಸುತ್ತಿದ್ದ ದೃಶ್ಯ, ಶ್ರಾದ್ಧಗಳ ಸಂದರ್ಭದಲ್ಲಿ ಬ್ರಾಹ್ಮಣಾರ್ಥಕಾರರು ಉಂಡ ಎಂಜಲೆಲೆಗಳನ್ನು ಹೊರೆಗೆಲ್ಲೂ ಎಸೆಯದೆ–ಎಸೆದರೆ ಅದರಲ್ಲಿ ಉಳಿದ ಊಟದ ಪರಿ ಕರಗಳನ್ನು ನಾಯಿಯೇನಾದರೂ ತಿಂದು ಬಿಟ್ಟರೆ 'ಪಾಪ' ಬರುತ್ತದೆಂದು ಹಸು ತಿಂದರೆ ಮಾತ್ರ 'ಪುಣ್ಯ' ಎಂದು ಹಸುವಿಗೇ ಕೊಡುತ್ತಿದ್ದ ದೃಶ್ಯ, ಹಸುವಿಗೆ ಯಾವ ಹೆಸರಿಟ್ಟರೂ 'ಪುಣ್ಯಕೋಟಿ' ಪದ್ಯ ಕೇಳಿದ ಮೇಲೆ ಮತ್ತು ಹಸುವಿನೊಳಗೆ ಮುಕ್ಕೋಟಿ ದೇವತೆಗಳೂ ವಾಸವಿರುತ್ತಾರೆ ಎಂಬ ದಿನ ನಿತ್ಯದ ಬೋಧನೆಯೊಂದಿಗೆ ಹಸುಗಳೆಲ್ಲಾ ಪುಣ್ಯಕೋಟಿಗಳೇ ಅನಿಸುತ್ತಿತ್ತು.

ಶ್ರಾದ್ಧಗಳ ಸಂದರ್ಭದಲ್ಲಿ ಬ್ರಾಹ್ಮಣಾರ್ಥಕಾರರು ಉಂಡ ಎಂಜಲೆಲೆಗಳನ್ನು ಹೊರೆಗೆಲ್ಲೂ ಎಸೆಯದೆ-ಎಸೆದರೆ ಅದರಲ್ಲಿ ಉಳಿದ ಊಟದ ಪರಿ ಕರಗಳನ್ನು ನಾಯಿಯೇನಾದರೂ ತಿಂದು ಬಿಟ್ಟರೆ 'ಪಾಪ' ಬರುತ್ತದೆಂದು ಹಸು ತಿಂದರೆ ಮಾತ್ರ 'ಪುಣ್ಯ' ಎಂದು ಹಸುವಿಗೇ ಕೊಡುತ್ತಿದ್ದ ದೃಶ್ಯ, ಹಸುವಿಗೆ ಯಾವ ಹೆಸರಿಟ್ಟರೂ 'ಪುಣ್ಯಕೋಟಿ' ಪದ್ಯ ಕೇಳಿದ ಮೇಲೆ ಮತ್ತು ಹಸುವಿನೊಳಗೆ ಮುಕ್ಕೋಟಿ ದೇವತೆಗಳೂ ವಾಸವಿರುತ್ತಾರೆ ಎಂಬ ದಿನ ನಿತ್ಯದ ಬೋಧನೆಯೊಂದಿಗೆ ಹಸುಗಳೆಲ್ಲಾ ಪುಣ್ಯಕೋಟಿಗಳೇ ಅನಿಸುತ್ತಿತ್ತು.

ಅದಕ್ಕೆ ತಕ್ಕಂತೆ ಅದು ಕೊಡುವ ರುಚಿಯಾದ ನೊರೆ ಹಾಲು–ಅದರಿಂಗಾತ್ತಿದ್ದ ಮೊಸರು, ಬೆಣ್ಣೆ, ತುಪ್ಪ, ಅದರ ಸಗಣಿಯಿಂದಾಗುತ್ತಿದ್ದ ಬೆರಣಿ, ಅದರ ಚರ್ಮದಿಂದಾಗುತ್ತಿದ್ದ ಚಪ್ಪಲಿಯ ಕಥೆ ಎಲ್ಲಾ ಹಸುವಿನ ಬಗೆಗಿರುವ ಗೌರವವನ್ನು ಖಂಡಿತ ಹೆಚ್ಚಿಸುತ್ತಿತ್ತು. ಜೊತೆಗೆ ಎಮ್ಮೆಗೆ ಯಾಕೆ ಇಂಥದ್ದೇ ಗೌರವ ಸಿಗುವುದಿಲ್ಲ? ಎಂಬ ಪ್ರಶ್ನೆ ಮರತೇ ಹೋಗುತ್ತಿತ್ತು. ಡಾ. ರಾಜ್‌ಕುಮಾರ್ 'ಸಂಪತ್ತಿಗೆ ಸವಾಲ್' ಸಿನಿಮಾದಲ್ಲಿ 'ಯಾರೇ ಕೂಗಾಡಲಿ ಊರೇ ಹೋರಾಡಲಿ ನಿನ್ನ ನೆಮ್ಮದಿಗೆ ಭಂಗವಿಲ್ಲ, ಎಮ್ಮೆ ನಿನಗೆ ಸಾಟಿಯಿಲ್ಲ ಬಿಸಿಲು ಮಳೆಗೆ ಬಿರುಗಾಳಿ ಛಳಿಗೆ ನೀ ಅಳುಕದೆ ಮುಂದೆ ಸಾಗುವೆ ಅರೆ ಹುಯ್ ಅರೆ ಹುಯ್ ಅರೆ ಹುಯ್....' ಎಂದು ಹಾಡುತ್ತಾ ಎಮ್ಮೆ ಮೇಲೆ ಕುಳಿತು ಎತ್ತರದ ಧ್ವನಿಯಲ್ಲಿ, ಧೈರ್ಯದಲ್ಲಿ ಹಳ್ಳಿಯ ಹಾಡನ್ನು ಹಾಡುತ್ತಾ ಹೊರಟಾಗಲೇ ಎಮ್ಮೆಯ ಬಗ್ಗೆಯೂ ಲಕ್ಷ್ಯ ಹರಿದಿದ್ದು ಅದೂ ಹಾಲು ಕೊಡುತ್ತದಲ್ಲವೇ? ಎಂಬ ಪ್ರಶ್ನೆಯನ್ನು ಪ್ರಶ್ನಿಸಿದರೂ ಅದರ ಹಾಲು ಹಸುವಿನ ಹಾಲಷ್ಟು ಒಳ್ಳೆಯದಲ್ಲ, ಬುದ್ಧಿ ಮಂದವಾಗುತ್ತದೆ, ಕಾಫಿಗಾದರೆ ಮಾತ್ರ ಒಳ್ಳೆಯದಾಗುತ್ತದೆ, ಮೊಸರು ಬೆಣ್ಣೆ ತುಪ್ಪಕ್ಕೆಲ್ಲಾ ಅಷ್ಟು ಯೋಗ್ಯವಲ್ಲ ಎಂಬ ಉತ್ತರ ದೊರಕುತ್ತಿತ್ತು. ವೈದಿಕರ ಮನೆಯಲ್ಲಂತೂ ಎಮ್ಮೆ ಕಟ್ಟಿ ಸಾಕುತ್ತಿದ್ದ ದೃಶ್ಯವನ್ನು ನಾನಂತೂ ನೋಡಿಲ್ಲ. ಗೊಲ್ಲನಾಗಿ ಹುಟ್ಟಿದ ಶ್ರೀ ಕೃಷ್ಣನೂ ಗೋವಿಗೆ ಒರಗಿಕೊಂಡು ಕೊಳಲನೂದುವ ದೃಶ್ಯಗಳನ್ನು ಚಿತ್ರಗಳಲ್ಲಿ ನೋಡುತ್ತೇವೆಯೇ ಹೊರತು ಎಮ್ಮೆ ಯಮಧರ್ಮನ ವಾಹನವೆಂದೇ ಪುರಾಣದ ಪ್ರತೀಕ 'ನೀನಾರಿಗಾದೆಯೋ ಎಲೆ ಮಾನವಾ, ಹರಿ ಹರಿ ಗೋವು ನಾನು' ಎಂಬ ಜನಪದಗೀತೆಯಲ್ಲೂ ಕೂಡ ಮಾನವನಿಗಿಂತ ಪ್ರಾಣಿಯೊಂದು ಹೇಗೆ ಶ್ರೇಷ್ಠ ಎಂಬ ಗುಣ ವಿಶ್ಲೇಷಣೆಯೇ ಅಡಗಿದೆ.

> **ಇಟ್ಟರೆ ಸಗಣಿಯಾದೆ**
> **ತಟ್ಟಿದರೆ ಕುರುಳಾದೆ**
> **ಸುಟ್ಟರೆ ನೊಸಲಿಗೆ ವಿಭೂತಿಯಾದೆ**
> **ತಟ್ಟದೆ ಹಾಕಿದರೆ ಮೇಲು ಗೊಬ್ಬರವಾದೆ**

ಎನ್ನುತ್ತಾ ಆ ಒಂದು ಜನಪದ ಗೀತೆ ಸಾಗುತ್ತದೆ. ನಿಜ. ಹಸುವಿನಿಂದ ಎಷ್ಟೊಂದು ಉಪಯೋಗಗಳು! ಹಸು ಎಷ್ಟು ಒಳ್ಳೆಯದು, ಅದರ ಸಾಧು ಗುಣ ಎಷ್ಟು ಚಂದ. ಆದರೆ ಇದೇ ಸಂದರ್ಭದಲ್ಲಿ ಹಸುವಿನಂತೆಯೇ ಮನುಷ್ಯನನ್ನು ಸಲಹುತ್ತಿರುವ ಇತರ ಪ್ರಾಣಿಗಳೂ ಸಾಕು ಪ್ರಾಣಿಗಳಾಗಿ ಆದಿಕಾಲದಿಂದ ಜೀವಿಸುತ್ತಲೇ ಇದೆಯಲ್ಲವೇ? ಮೊಲ, ಕುರಿ, ಕೋಳಿ, ಆಡು ಮುಂತಾದವುಗಳು. ಇದರ ಜೊತೆಗೆ ಮುಖ್ಯವಾಗಿ ನಾಯಿ ಎಂಬ ಕೃತಜ್ಞತೆಯೇ ಪ್ರಧಾನವಾದ ಪ್ರಾಣಿ ಅದನ್ನು 'ನಾರಾಯಣ' ಎಂದು ಕರೆದರೂ ಅದಕ್ಕೆ ಹಸುವಿನ ಪೂಜ್ಯ ಸ್ಥಾನವಿಲ್ಲ. ಮುದ್ದಿನಿಂದ–ಪ್ರೀತಿಯಿಂದ ಸಾಕುವವರು ನಾಯಿಗೂ ಅದರ ಗುಣಕ್ಕಾಗಿ ಆ ಸ್ಥಾನವನ್ನು ಖಂಡಿತ ಕೊಡುತ್ತಾರೆ ಬಿಡಿ. ಆದರೆ ವೈದಿಕ ಸಂಸ್ಕೃತಿಯಲ್ಲಿ ಹಸುವಿಗೆ ನೀಡಲಾಗಿರುವ ಆ ಪೂಜ್ಯ ಸ್ಥಾನ ಮಾತ್ರ ಬೇರೆ ಪ್ರಾಣಿಗಳಿಗೆ ಯಾಕೋ ಒದಗಿ ಬಂದಿಲ್ಲ. "ಸರ್ವ ಜನರೂ–ಸರ್ವ ಜೀವಿಗಳೂ ಸುಖವಾಗಿರಲಿ" ಎಂಬ ಉಕ್ತಿ ವೇದೋಪನಿಷತ್ತುಗಳಿಂದಲೇ ಹುಟ್ಟಿಬಂದರೂ, ಶ್ರೀ ಕೃಷ್ಣನೇ ಗೊಲ್ಲನಾಗಿ ದನ ಕಾಯುವ ಶ್ರಮಿಕ ವರ್ಗಕ್ಕೆ ಸೇರಿದ್ದರೂ, ಕ್ರಮೇಣ ಪುರೋಹಿತಶಾಹೀ ಲಾಭ ದೃಷ್ಟಿಯಿಂದ ಮಾತ್ರ 'ಹಸು'ವನ್ನು ಪ್ರತ್ಯೇಕ ಸ್ಥಾನದಲ್ಲಿ ನಿಲ್ಲಿಸಿ ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಲು ಮಾತ್ರ ದೇವತೆಯ ಸ್ಥಾನ ಕಲ್ಪಿಸಿಬಿಟ್ಟರು ಒಂದು ವರ್ಗದ ಜನ ಮಾತ್ರ ಅನಿಸುತ್ತದೆ.

ಏಕೆಂದರೆ ಹೆಣ್ಣನ್ನು ಕೂಡ 'ಮಾತೃ ದೇವೋ ಭವ' ಎಂದು ದೇವತೆಯ ಸ್ಥಾನಕ್ಕೆ ಏರಿಸಿದ್ದರೂ ಹೆಣ್ಣನ್ನು ಪುರುಷನಿಗಿಂತ ಕಡಿಮೆ ಎಂದು ದುರ್ಬಲ ಸ್ಥಿತಿಯಲ್ಲೇ ಕಾಣುತ್ತಾ ಹೋಗಿ ಅವಳನ್ನು ದಲಿತಳನ್ನಾಗಿಸುವ ಒಂದು ಸಾಮಾಜಿಕ ಪಿಡುಗೇ ಬೆಳೆದು ಇದನ್ನು 'ಸಂಸ್ಕೃತಿ'ಯೊಳಗೆ ಸೇರಿಸುವ ಹುನ್ನಾರ ನಡೆಯಿತು. ಇದೇ ಪುರುಷ ಪ್ರಧಾನ ಕುಟುಂಬದ ಪಿತೂರಿ. ಇಂಥ ಪಿತೂರಿಯೇ ಗೋವನ್ನು ಪ್ರತ್ಯೇಕವಾಗಿಸಿ – ಸಹಜವಾಗಿ ಇತರ ಪ್ರಾಣಿಗಳ ಗುಂಪಿಗೆ ಸೇರಿಸದೆ ತನ್ನದೊಂದು ಶಾಸನ ಸ್ಥಾಪಿಸುವುದಕ್ಕಾಗಿಯೇ ದಾಳದ ಕಾಯಿಯಾಗಿ ಬಳಸಿಕೊಳ್ಳುತ್ತಿರುವಂಥ ಸನ್ನಾಹ ನಡೆಯುತ್ತಿದೆ ಎಂದೆನಿಸುತ್ತದೆ. ಏಕೆಂದರೆ 'ಹುಲಿ' ಕೂಡ ನಮ್ಮ ರಾಷ್ಟ್ರಪ್ರಾಣಿ. ಕಾಡಿನ ಮೃಗವಾಗಿ ತನ್ನ ಮೃಗೀಯ ಸೌಂದರ್ಯದಿಂದ ನಿಸರ್ಗದ ಉಳಿವಿಗೆ ಕಾರಣವಾಗಿರುವಂಥ ಒಂದು ಶ್ರೇಷ್ಠಪ್ರಾಣಿಯಲ್ಲವೇ? ಕೆ.ಎಸ್. ನರಸಿಂಹಸ್ವಾಮಿಯವರು ಹುಲಿಯನ್ನು ಕುರಿತು

ಹೂ ಬಳ್ಳಿಗೆ ದೀಪ
ಹಸಿರು ಬಯಿಲಿಗೆ ದೀಪ
ಹುಲಿಯ ಕಣ್ಣಿನ ದೀಪ ಕಾಡಿನಲ್ಲಿ

ಎಂದು ಬರೆಯುತ್ತಾರೆ. ಹಾಗೆಯೇ 'ಹುಲಿಯ ಹಾಲಿನ ಮೇವು' ಎಂಬುದು ಕೊರವರ ಸಂಸ್ಕೃತಿಯ ಒಂದು ಶೌರ್ಯದ ಸಂಕೇತವಾಗಿದೆ. ಭಾರತೀಸುತರ ಕಾದಂಬರಿಯಲ್ಲಿ ಚೆಂಗುಮಣಿ ಎಂಬ ಯುವಕ ಮಹಾರಾಜರಿಂದ ತನ್ನ ಶೌರ್ಯಕ್ಕಾಗಿ–ನಾಡ ಪ್ರೇಮಕ್ಕಾಗಿ ಪ್ರಶಂಸಿಸಲ್ಪಟ್ಟು ಹುಲಿಯ ಹಾಲಿನ ಮಮತೆಯನ್ನು ರಾಜನ ಕೈಯಿಂದ ಕುಡಿದು ಕೊನೇವರೆಗೂ ಅದೇ ಅದೇ ನಿಷ್ಠೆಗೆ ಸಿಪಾಯಿಯಾಗಿ ತನ್ನ ಉಸಿರನ್ನು ಮುಡಿಪಾಗಿಟ್ಟು ಯೋಧ ನಾಗಿಯೇ ತನ್ನ ರಾಜನನ್ನು ಕಾಪಾಡಿ, ನಾಡನ್ನು ಮೋಸ ವಂಚನೆಗೆ ಗುರಿಯಾಗದಂತೆ ಕಾಪಾಡಿ, ಯುದ್ಧದಲ್ಲಿ ಹೋರಾಡಿ ಕೊನೆಯುಸಿರೆಳೆಯುತ್ತಾನೆ. ಇಷ್ಟೆಲ್ಲಾ ಶೌರ್ಯದ ಕಥೆ 'ಹುಲಿ' ಜೊತೆಗೂ ಮೇಳೈಸಿರುವಾಗ 'ಪುಣ್ಯಕೋಟಿ' ಪದ್ಯದಲ್ಲಿ

ತಬ್ಬಲಿಯು ನೀನಾದೆ ಮಗನೆ
ಹೆಬ್ಬುಲಿಯ ಬಾಯನ್ನು ಹೊಗುವೆನು
ಇಬ್ಬರ ಋಣ ತೀರಿತೆಂದು ತಬ್ಬಿಕೊಂಡಿತು
ಕಂದನಾ...

ಎಂಬಂಥ ಹುಲಿಯನ್ನು ಖಳನಾಯಕನನ್ನಾಗಿ ಚಿತ್ರಿಸಿ ಕ್ರೌರ್ಯಕ್ಕೆ ಸಂಕೇತವಾಗಿಸುವಂಥದ್ದು ಸರಿಯೇ? ಎಂಬುದು ನನ್ನ ಪ್ರಶ್ನೆ. ಇದೇ ಸಂಗತಿಯನ್ನೊಮ್ಮೆ ವಿಮರ್ಶಕರಾಗಿ ಮೊಗಳ್ಳಿ ಗಣೇಶ ಅವರು ಸಾಹಿತ್ಯ ಸಮ್ಮೇಳನವೊಂದರಲ್ಲಿ ಪ್ರಶ್ನಿಸಿ ಪ್ರಬಂಧ ಮಂಡಿಸಿದ್ದರು. ಅವರು ಹುಲಿಯ ಹಸಿವಿಗೆ ಸಂಬಂಧಪಟ್ಟಂತೆ ಸಮಾನತೆಯ ಪ್ರಶ್ನೆಯನ್ನು ಮುಂದಿಟ್ಟಿದ್ದರೆಂಬ ನೆನಪು ನನಗೆ.

ಹಬ್ಬಿದ ಮೇಲೆ ಮಧ್ಯದೊಳಗೆ
ಅರ್ಬುದ ಎಂದೆಂಬ ವ್ಯಾಘ್ರನು
ಅಬ್ಬರಿಸಿ ಹಸಿ ಹಸಿದು ಬೆಟ್ಟದ
ಕಿಬ್ಬಿಯೊಳು ತಾನಿದ್ದನು
ಪುಣ್ಯಕೋಟಿ ಎಂಬ ಹಸುವು
ತನ್ನ ಕಂದನ ನೆನೆದುಕೊಂಡು
ಮುನ್ನ ಹಾಲನು ಕೊಡುವೆನೆನುತಾ
ಚಂದದಿ ತಾ ಬರುತಿರೆ....

ಎಂಬ ಸಾಲುಗಳು 'ಪುಣ್ಯಕೋಟಿ' ಪದ್ಯದಲ್ಲಿ ಬರುತ್ತವೆ. ಆದರೆ ಇತ್ತೀಚೆಗೆ ಮಂಗಳೂರಿನ ಪಿಲಿಕುಳ ನಿಸರ್ಗ ಧಾಮಕ್ಕೆ ಭೇಟಿಯಿತ್ತಾಗ ಹುಲಿಯೂ ಕೂಡ ತನ್ನ ಮರಿಗೆ ಅಷ್ಟೆ ಅಕ್ಕರೆಯಿಂದ ಹಾಲು ಕುಡಿಸುವುದನ್ನು ನೋಡಿದಾಗ ಮತ್ತೆ 'ಪುಣ್ಯಕೋಟಿ'ಯ ಪ್ರಶ್ನೆ ನನ್ನಲ್ಲಿ ಬಲವಾಗಲು ಶುರುವಾಗಿ ಈ ಲೇಖನವಾಗಿ ಮೈದಳೆಯುತ್ತಿದೆ. ಹಸು ಸಾಕು ಪ್ರಾಣಿಯಾಗಿ ನಾಡಿನೊಳಗೆ ರಕ್ಷಿಸಲ್ಪಡಬೇಕಾಗಿರುವಂಥ ಪ್ರಾಣಿ. ಹಾಗೇ ಹುಲಿ ಕಾಡು ಪ್ರಾಣಿಯಾಗಿ ಕಾಡಿನೊಳಗೆ ಕಾಡಿನ ಜೊತೆ–ಜೊತೆಗೆ ರಕ್ಷಿಸಲ್ಪಡಲೇ ಬೇಕಾಗಿರುವಂಥ ಹೆಮ್ಮೆ ಪಡಬೇಕಾದ ಪ್ರಾಣಿ. ಅದು ಸಾಗುವ ದಾರಿಯಲ್ಲಿ ಅದರ ಆಹಾರ ಎದುರಾದರೆ ಅದು ತನಗೆ ಹಸಿವಾಗಿದ್ದರೆ ಅದನ್ನು ತಿನ್ನಬೇಕಾದದ್ದೂ ಕೂಡ ಅದರ ಸಹಜ ನಡವಳಿಕೆ. ಹಸುವಿಗೆ ಹುಲ್ಲು ಸಹಜವಾದಂತೆ ಹುಲಿಗೆ ಅದರ ಆಹಾರ ಸಹಜವಲ್ಲವೇ? ಎಂಬುದಷ್ಟೇ ನನ್ನ ಪ್ರಶ್ನೆ. ಈ ಪದ್ಯವನ್ನು ಈಗಲೂ ಕೇಳುತ್ತಾ ಕಣ್ಣೀರು ಸುರಿಸಬೇಕೆಂದರೆ

ಆರ ಮೊಲೆಯನ್ನು ಕುಡಿಯಲಮ್ಮ
ಆರ ಸೇರಿ ಬದುಕಲಮ್ಮ
ಆರ ಬಳಿಯಲಿ ಮಲಗಲಮ್ಮ
ಆರು ನನಗೆ ಹಿತವರು?

ಎಂದು ಕರುವೊಂದು ತನ್ನ ತಾಯಿ ಹಸುವನ್ನು ಕೇಳುವಾಗ ಕರುಳು ಚುರುಗುಡುವಷ್ಟು

ಎನ್ನ ಒಡಹುಟ್ಟಕ್ಕ ನೀನು
ನಿನ್ನ ಕೊಂದು ಏನ ಪಡೆವೆನು?
ಎನ್ನುತಾ ಹುಲಿ ಹಾರಿ ನೆಗೆದು
ತನ್ನ ಪ್ರಾಣವ ಬಿಟ್ಟಿತು....

ಎನ್ನುವ ಹುಲಿಯ ಆತ್ಮಹತ್ಯೆಯ ಚಿತ್ರಣ ಕಣ್ಣಿಗೆ ಕಟ್ಟುವಾಗಲೂ ದುಃಖವಾಗುತ್ತದೆ.

'ದೇವರ ಹೆಣ' ಎಂಬ ಕುಂ. ವೀ. ಯವರ ಕಥೆಯೊಂದರಲ್ಲಿ ತನ್ನ ಧಣಿ ಗೌಡರ ಮನೆಯಲ್ಲಿ ಜೀತದಾಳಾಗಿ ದುಡಿಯುತ್ತಿದ್ದ ದಲಿತನೊಬ್ಬನ ಹಸಿವನ್ನು ನೀಗಲು ಸತ್ತು ಸಮಾಧಿಯಾಗಿದ್ದ 'ದೇವರಾದ' ಎತ್ತಿನ ಹೆಣವೊಂದು ಆಸರೆಯಾಗಬಲ್ಲದಾದರೂ ಆ 'ಅಪರಾಧ'ಕ್ಕಾಗಿ ತನ್ನ ಧಣಿ ಜಮೀನುದಾರನಿಂದ ಭಯಂಕರ ಶಿಕ್ಷೆಗೆ ಒಳಗಾಗಬೇಕಾದ ದಲಿತ ದುಡಿಮೆಗಾರನ ಪಾಡು ನೆನೆದರ ಈಗಲೂ ವಿಚಲಿತಳಾಗುತ್ತೇನೆ. ಮನುಷ್ಯನ ಹಸಿವನ್ನು ಸಮಾನವಾಗಿ ನೀಗಲಾಗದ 'ಪೂಜೆ–ಪುನಸ್ಕಾರ' ಇವುಗಳು ಮೌಢ್ಯವಲ್ಲವೇ? ಕ್ರೌರ್ಯವಲ್ಲವೇ? ಎಂಬ ಪ್ರಶ್ನೆ ಮೂಡುತ್ತದೆ. ಬಲ್ಲವರು ಉತ್ತರಿಸಬೇಕು. 'ಪುಣ್ಯಕೋಟಿ' ಪದ್ಯ ಎಷ್ಟು ಪ್ರಸ್ತುತ? □

ನಾವು ಕಲಿಯಬಹುದಾದ್ದು...

(43ನೇ ಪುಟದಿಂದ)

ದಲ್ಲಿ ಹೀಗಳೆಯುವುದು, ಅವಮಾನ ಮಾಡುವುದು ಅಧರ್ಮ ಎನ್ನುವುದು ಅಂಬೇಡ್ಕರ್ ಅಭಿಪ್ರಾಯ.

ಲೋಹಿಯಾ ಅವರಿಗೆ ಬೇಕಿದ್ದದ್ದು ನೈತಿಕ ರಾಜಕೀಯ. ಆದ್ದರಿಂದ ಇವು ನಾಲ್ಕು ಚತುಸ್ತಂಭಗಳು. ನೈತಿಕ ಆರ್ಥಿಕತೆ, ನೈತಿಕ ವ್ಯಕ್ತಿ, ನೈತಿಕ ಸಮಾಜ ಮತ್ತು ನೈತಿಕವಾದ ರಾಜಕೀಯ ಈ ನಾಲ್ಕು ಇಲ್ಲದೆ ಏಕಾಂಶವನ್ನು ಆಧರಿಸಿ ಯಾವ ಸಮಾಜವನ್ನೂ ಸ್ವಸ್ಥಗೊಳಿಸುವುದಕ್ಕೆ ಆಗುವುದಿಲ್ಲ. ಇವೆಲ್ಲದರ ಸಮಗ್ರ ಫಲಿತಾಂಶವೇ ಆದರ್ಶವಂತ ಚೈತನ್ಯ. ಒಂದಂಶದಲ್ಲಿ ನಾನು ಪಾಪಿ, ಇನ್ನೊಂದಂಶದಲ್ಲಿ ಬಹಳಾ ಸರಿ ಇದ್ದೀನಿ ಅಂದರೆ ಸುಳ್ಳು ಅದು. ನಾನು ಇಸ್ಲಾಂನ ನೀತಿ ಎಲ್ಲ ಪಾಲಿಸುತ್ತೇನೆ, ಖುರಾನ್ ಹೇಳಿರುವುದೆಲ್ಲ ನನಗೆ ಗೊತ್ತಿದೆ, ಆದರೆ ವ್ಯಗ್ರಗೊಂಡರೆ ಮಾತ್ರ ಬಾಂಬ್ ಹಾಕ್ತೀನಿ ಅಂತ ಹೇಳಿದರೆ ಅದು ಸರಿಯಾಗಲ್ಲ. ಅದೇ ರೀತಿ, ನಾವು ಸರ್ವಸಹಿಷ್ಣುವಾದಿಗಳು, ಭಾರತವೇ ಒಂದು ಸಂಕರ ಸಂಸ್ಕೃತಿ. ಆದರೆ ಮುಸ್ಲಿಮರು ಮಾತ್ರ ಈ ದೇಶದಲ್ಲಿ ಇರಬಾರದು, ಯಾಕೆಂದರೆ ಅವರು ನಮ್ಮ ಸಂಸ್ಕೃತಿಗೆ ಅಪಾಯಕಾರಿಗಳು ಅಂತ ಅನ್ನುವವರದು ಸರಿಯಾದ ನಿಲುವಾಗಿರಲು ಸಾಧ್ಯವಿಲ್ಲ. ಹಾಗೆ ಈ ರೀತಿ ಆಂಶಿಕವಾಗಿ ಆಚರಣೆಗೊಳ್ಳುವ ಯಾವ ನಿಲುವುಗಳೂ ನಮ್ಮ ಪರಿಸ್ಥಿತಿಯನ್ನು ಬದಲಾಯಿಸುವುದಿಲ್ಲ.

ರಾಜಕೀಯವಾಗಿದ್ದರೆ ನಾವು ಸುಳ್ಳುಗಳನ್ನೇ ಹೇಳಬಾರದು, ನೈತಿಕ ರಾಜಕೀಯವನ್ನೇ ಮಾಡಬೇಕು. ವ್ಯಕ್ತಿಯಾಗಿ ಕೂಡ ನಾವು ನೈತಿಕವಾಗಿರಬೇಕು. ಈ ನೈತಿಕತೆ ಅನ್ನುವುದನ್ನು ನಾವು ವ್ಯಾಖ್ಯಾನಿಸಬೇಕು, ಅದು ಏನು ಅಂತ. ತಿನ್ನದಿಲ್ಲ–ಕುಡಿಯದಿಲ್ಲ ಸಿಕ್ಕಾಪಟ್ಟೆ ನೈತಿಕ ಅವನು ಅಂತಾರೆ ಕೆಲವರು. ಈ ಬಗೆಯಲ್ಲಿ ನೈತಿಕತೆಯನ್ನು ಅರ್ಥೈಸುವುದು ಸಾಧ್ಯವಿಲ್ಲ. ಇವೆಲ್ಲ ಮಹಾ ಸುಳ್ಳುಗಳು. ಸುಳ್ಳಿಲ್ಲದೆ ಬದುಕುವುದಕ್ಕೆ ಸಾಧ್ಯ. ಆದರೆ, ಒಂದು ಸ್ವಸ್ಥ ಸಮಾಜ ಉಂಟಾಗುತ್ತೆ. ಅದೇ ರೀತಿ ಆರ್ಥಿಕತೆಯಲ್ಲಿ, ಯಾರು ಸಂಪತ್ತು ಸೃಷ್ಟಿ ಮಾಡ್ತಾರೆ? ಎಷ್ಟು ಪ್ರಮಾಣದ ಸಂಪತ್ತು ಯಾರು ಯಾರ ಕೈಗೆ ಸಿಗಬೇಕು? ಅನ್ನುವ ಒಂದು ಯಂತ್ರಾಂಗ ಇಲ್ಲದಿದ್ದರೆ ಆಗುವುದಿಲ್ಲ. ಗಾಂಧೀಜಿಯಲ್ಲಿರೋ ದೊಡ್ಡ ದೋಷ ಏನು? ಈ ಸಂಪತ್ತಿನ ಹಂಚಿಕೆ ಬಗ್ಗೆ ಅವರಿಗೊಂದು ದೃಢವಾದ ಸೂತ್ರವಿಲ್ಲ. ಮಾರ್ಕ್ಸ್ ಸಂಪತ್ತಿನ ಹಂಚಿಕೆಯ ಬಗ್ಗೆ ಹೇಳಿದ ಸೂತ್ರ ಸರ್ವಸಮರ್ಪಕ ಅನ್ನಲಾಗುವುದಿಲ್ಲ. ವರ್ಗ ಸಮರ, ಕಾರ್ಮಿಕವರ್ಗದ ಸರ್ವಾಧಿಕಾರ, ಅದಾದ ಮೇಲೆ ಕಮ್ಯುನಿಸ್ಟ್ ಪಕ್ಷದ ಸರ್ವಾಧಿಕಾರದಲ್ಲಿ ಸಮಸಮಾಜ ತರುತ್ತೇವೆ. ಹಂಗೂ ಆಗಲ್ಲ. ನೀವು ಎಲ್ಲಿ ಸಂಗ್ರಹಿಸಿದರೂ ಕೂಡ ಅದು ಸಮಸ್ಯಾತ್ಮಕವಾಗುತ್ತದೆ. ವ್ಯಕ್ತಿ ತೀರ್ಪುಗಳ ಮೇಲೆ ಯಾವಾಗ ಅದು ಆಧರಿಸಿರುತ್ತೋ ಯಾವಾಗ್ಲೂ ಕೂಡ ಅಲ್ಲಿ ಏನೋ ಒಂದು ಏರು ಪೇರು ಉಂಟಾಗುತ್ತೆ, ಅದಕ್ಕೆ ನಾವು ಒಂದು ಮೌಲ್ಯ ವ್ಯವಸ್ಥೆಯನ್ನೇ ನಿರ್ಮಿಸಬೇಕು. ಸಂಪತ್ತಿನ ಹಂಚಿಕೆಯ ಬಗ್ಗೆ ನಮಗೊಂದು ಸಿದ್ಧಾಂತ ಇಲ್ಲದಿದ್ದರೆ ಬಹಳ ಕಷ್ಟ.

ಅಂತಿಮವಾಗಿ ನನಗನ್ನಿಸುವುದು ಇವೆಲ್ಲದರ ಅರ್ಥ ಏನು? ಇವರೆಲ್ಲರೂ ಕೂಡ ಬಯಸಿದ್ದು, ಇವರೆಲ್ಲರೂ ಕೂಡ ಬೇಕು ಅಂತ ಹೇಳಿದ್ದು ಅದೇ ಮನುಷ್ಯ ಸಮಾನತೆಯನ್ನ, ಮನುಷ್ಯನ ನೆಮ್ಮದಿಯನ್ನ. ಯಾವುದೇ ಸಿದ್ಧಾಂತಿಗಳನ್ನ ನಾವು ಹೋಗಿ ಕೇಳಿದರೆ, ಯಾವುದೇ ಚಿಂತಕರನ್ನ ಹೋಗಿ ಕೇಳಿದರೆ ಅವರ್ಯಾರೂ ಮತ್ತೊಬ್ಬರನ್ನು ದಮನಿಸಿರಿ ಎಂದು ಹೇಳಲಾರರು. ಒಂದು ಸಮುದಾಯವನ್ನ ನಾಶಮಾಡಿ ಆ ಮುಖಾಂತರ ನಾನು ಉದ್ಧಾರ ಆಗ್ತೀನಿ ಅಂತ ಯಾರೂ ಹೇಳಲಾಗದು. ದಾರ್ಶನಿಕರೆಲ್ಲರೂ ಒಂದೇ ಹೇಳ್ತಾರೆ. ಇಲ್ಲಿ ಎಲ್ಲರೂ, ಎಲ್ಲವೂ ಚೆನ್ನಾಗಿರ್ಬೇಕು. ಸರ್ವರ ನೆಮ್ಮದಿಯೇ ಬಹಳ ಮುಖ್ಯ. ಕರ್ನಾಟಕದ ನೆಮ್ಮದಿ ಕೂಡ ಅಲ್ಲ, ಬರೀ ಭಾರತದ ನೆಮ್ಮದಿ ಕೂಡ ಅಲ್ಲ, ಇಡೀ ಪ್ರಪಂಚದ ನೆಮ್ಮದಿ. ಪ್ರಪಂಚದ ನೆಮ್ಮದಿ ಪ್ರಶ್ನೆ ಬಂದರೆ ಪ್ರಪಂಚದ ಎಲ್ಲ ಜೀವಿಗಳ ನೆಮ್ಮದಿ. ಇಡೀ ಭೂಮಂಡಲದ, ಬ್ರಹ್ಮಾಂಡದ ನೆಮ್ಮದಿ ಅದು.

ಒಂದು ಘಟಕದ ನೆಮ್ಮದಿಯನ್ನು ನಾವು ತೆಗೆದುಹಾಕಿದರೆ ಇನ್ನೊಂದು ಘಟಕ ನೆಮ್ಮದಿಯಾಗಿ ಇರಲ್ಲ. ಅದು ಘಾಸಿಗೊಳ್ಳುತ್ತದೆ. ನಾವು ಸಂಪೂರ್ಣವಾಗಿ ಸಂಬಂಧಿಸಲ್ಪಟ್ಟಿದ್ದೇವೆ. ನಾವು ನೋಡೋದಕ್ಕೆ ಪ್ರತ್ಯೇಕಿತರಾಗಿ ಕಾಣಬಹುದು, ಇಡೀ ಪ್ರಪಂಚ ಒಟ್ಟಾರೆ ಸೃಷ್ಟಿಗೆ ಸಂಬಂಧಪಟ್ಟಿದ್ದು. ವಿಶ್ವಾತ್ಮ ಅದು. ಒಂದೇ ಅಸ್ತಿತ್ವ ಹಲವು ರೂಪಗಳಲ್ಲಿ ಪ್ರಕಟಗೊಂಡಿದೆ. ಆದ್ದರಿಂದ ಎಲ್ಲವೂ, ಎಲ್ಲರೂ ನೆಮ್ಮದಿಯಾಗಿರೋದನ್ನು ಆಶಿಸುವವರು ಮಾತ್ರವೇ ಈ ವ್ಯವಸ್ಥೆಯನ್ನ ಚೆನ್ನಾಗಿಡೋಕೆ ಸಾಧ್ಯ.

ಇದನ್ನ ಒಂದಾಗಿ ನೋಡ್ತೀವಿ ಅಂದಾಗ ನನಗೆ ಗಾಂಧಿ, ಮಾರ್ಕ್ಸ್, ಅಂಬೇಡ್ಕರ್ ಮತ್ತು ಲೋಹಿಯಾ ಅವರ ಚಿಂತನೆಗಳ ನಡುವೆಯೂ ಒಂದಾಗಬಲ್ಲದನ್ನು ನೋಡಬೇಕು ಅನ್ನಿಸುತ್ತಿದೆ. ಆದ್ದರಿಂದ ಒಂದಾಗಿ ನೋಡ್ತಾ ಇದೀನಿ. ಇವುಗಳ ನಡುವೆ ಭೇದಗಳನ್ನೇ ಎಣಿಸಿ ನೋಡ್ಬೇಕು ಅಂತ ಹೇಳಿದರೆ ಇನ್ನು ಸಾಯಂಕಾಲದವರೆಗೂ ವಾದ ಮಾಡ್ತಾನೇ ಇರಬಹುದು. □

(ಮಂಥನ ವಿಚಾರ ವೇದಿಕೆ ಹೊನ್ನಾವರದಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ 'ಮಾರ್ಕ್ಸ್ ನೆಲೆಯಿಂದ ಗಾಂಧಿ' ಎನ್ನುವ ವಿಷಯದ ಮೇಲೆ ಮಾಡಿದ ಭಾಷಣದ ಸಂಪಾದಿತ ಬರಹ ರೂಪ)

ಕಮ್ಯುನಿಸ್ಟರಿಗೆ ನೀಡಿದ ಬೆಂಬಲ

ದಲಿತರು ಮೇಲೇರಲು ಸಹಾಯ ಮಾಡಲಿಲ್ಲ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಎಸ್. ಮರಿಸ್ವಾಮಿ

ಉತ್ತರ ಭಾರತದ ಇಂಡೋ ಗ್ಯಾಂಜೆಟಿಕ್ ಪ್ರದೇಶದಲ್ಲಿ ಹಲ್ವಾಹಿ ಪ್ರಾತ ಅಥವಾ ಹರ್ವಾಹಿ ಪ್ರಾತ ಎಂದು ಕರೆಯಲ್ಪಡುವ ಒಂದು ಭೂಮಾಲೀಕ ಕೂಲಿಕಾರ ಸಂಬಂಧ ಇತ್ತು. ಪ್ರಾತ ಎಂದರೆ ಒಂದು ಸಾಮಾಜಿಕ, ಆರ್ಥಿಕ ವ್ಯವಸ್ಥೆ. ಹಾಲ್ವ ಅಥವಾ ಹಾರ್ ಎಂದರೆ ನೇಗಿಲು ಎಂದರ್ಥ. ವಾಹಿ ಸಹ ಪ್ರಾತವನ್ನು ಸೂಚಿಸುತ್ತದೆ. ಭೂಮಿಯನ್ನು ಉಳುವ ಮನುಷ್ಯ ಹಲ್ವಾಹ ಎಂದು ಕರೆಯಲ್ಪಡುತ್ತಿದ್ದ. ಈ ಪದ್ಧತಿಯಂತೆ ಪ್ರತಿ ದಲಿತ ಕುಟುಂಬ ಭೂ ಮಾಲೀಕನಿಗೆ ಗಂಟುಹಾಕಿಕೊಂಡಿರುತ್ತದೆ ಮತ್ತು ದನಗಳಿಗೆ ಹುಲ್ಲು ತರುವುದು, ಸ್ನಾನಗೃಹಗಳನ್ನು ಸ್ವಚ್ಚಗೊಳಿಸುವುದು, ಜಮೀನು ಉಳುವುದು, ಬೆಳೆಗಳಿಗೆ ನೀರು ಹಾಯಿಸುವುದು, ಕೊಯಿಲು ಮಾಡುವುದು, ಒಕ್ಕಣೆ ಮಾಡುವುದು ಮುಂತಾದ ಎಲ್ಲಾ ಕೆಲಸಗಳನ್ನು ಆ ಕುಟುಂಬ ಮಾಡಬೇಕಿತ್ತು.

ದಲಿತರು ಭಾರತದ ಕಮ್ಯೂನಿಸ್ಟ್ ಚಳುವಳಿಯ ಕೆಂಪು ಧ್ವಜ ಹೊರಲು ಅತಿ ಹೆಚ್ಚು ಅನುಯಾಯಿಗಳನ್ನು ನೀಡಿದ್ದಾರೆ ಎಂಬುದಕ್ಕೆ ಯಾವುದೇ ಪ್ರಯೋಗಾಧಾರಿತ ಅಧ್ಯಯನವಿಲ್ಲ. ಆದರೂ ದಲಿತರು ಅತಿ ಹೆಚ್ಚು ಸಂಖ್ಯೆಯಲ್ಲಿ ಈ ಚಳುವಳಿಯಲ್ಲಿ ಇದ್ದಾರೆ ಎಂದು ನನಗನ್ನಿಸುತ್ತದೆ.

ದಲಿತರು ಕೆಂಪು ಧ್ವಜದಿಂದ ಆಕರ್ಷಿತರಾಗುವುದರಲ್ಲಿ ಅತರ್ಕೀಯವಾದುದೇನೂ ಇಲ್ಲ. ಅವರು ಒಂದು ಕ್ರೂರ ವ್ಯವಸ್ಥೆಯನ್ನು ನಿರ್ಮೂಲನೆ ಮಾಡುವ ಆಶ್ವಾಸನೆ ನೀಡುವ ಮಾರ್ಕ್ಸ್‌ನ ಸಿದ್ದಾಂತದ ಕಡೆ ಆಕರ್ಷಿತರಾಗುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಬಹಳ ಜನ ಈ ಸಾಹಿತ್ಯವನ್ನು ಓದಿರುವುದಿಲ್ಲ. ಮಧ್ಯಮ ವರ್ಗ ಸ್ವಲ್ಪ ಮಟ್ಟಿಗೆ ಆ ಸಾಹಿತ್ಯವನ್ನು ಓದಿರಬಹುದಾದರೂ ಅವರೂ ಸಹ ಕೆಳವರ್ಗದ ದಲಿತರಂತೆ ಮಾರ್ಕ್ಸ್ ಸಿದ್ದಾಂತದಿಂದ ಆಕರ್ಷಿತರಾಗುತ್ತಾರೆ.

ಏಕಾಗಬಾರದು? ಉದಾರವಾದಿಗಳು ವಿಮುಕ್ತಿ, ಕ್ರಾಂತಿ ಮತ್ತು ಮಾರ್ಪಾಡು ಇಂತಹ ಪದಗಳನ್ನು ಉಪಯೋಗಿಸುವುದಕ್ಕೆ ಹಿಂಜರಿಯುತ್ತಾರೆ. ಆದುದರಿಂದ ದಲಿತ ನಾಯಕರುಗಳಿಗೆ ಕೆಂಪು ದ್ವಜ ಸಿದ್ದಾಂತಗಳ ಜೊತೆ ಇರಲು ಅಷ್ಟೇನೂ ಇರುಸುಮುರುಸಾಗುವುದಿಲ್ಲ. ಏಕೆಂದರೆ ಕೆಂಪು ದ್ವಜದ ಸಿದ್ದಾಂತಿಗಳು ದಿನದುದ್ದಕ್ಕೂ ಕ್ರೂರ ವ್ಯವಸ್ಥೆಯಿಂದ ಬಿಡುಗಡೆಯ ಬಗ್ಗೆಯೇ ಮಾತನ್ನಾದರೂ ಆಡುತ್ತಾ ಕಾಲ ಕಳೆಯುತ್ತಾರೆ. ಆದರೆ ಸೂರ್ಯ ಮುಳುಗುತ್ತಿದ್ದಂತೆ ತಮ್ಮ ಕಮ್ಯೂನಿಸ್ಟ್ ಸಹಪಾಠಿಗಳು ಯಾರ ಜೊತೆ ಕಾಲಕಳೆಯುತ್ತಾರೆ ಎಂಬುದು ಮಾತ್ರ ತಿಳಿದಿರುವುದಿಲ್ಲ. ಅದು ಬೇರೆ ವಿಚಾರ.

ಆದುದರಿಂದ ಕಮ್ಯೂನಿಸ್ಟ್ ವಿಚಾರ ದಲಿತ ಪ್ರಜ್ಞೆಗೆ ಆಳವಾಗಿಯೆ ಇಳಿದಿದೆ. ಒಂದು ದಶಕ ನನ್ನನ್ನು ಸೇರಿದಂತೆ ಕಟ್ಟಾ ಅಂಬೇಡ್ಕರ್‌ವಾದಿಗಳೆಂದು ಹೇಳಿಕೊಳ್ಳುವ ಅನೇಕರು ಮಾರ್ಕ್ಸ್‌ನ ಭಾಷೆ ಮಾತಾಡುತ್ತಾರೆ. ಬಹಳಷ್ಟು ದಲಿತರ ಬೌದ್ಧಿಕ ಶಕ್ತಿ, ಸಮಯ ಮತ್ತು ಸಂಪನ್ಮೂಲಗಳನ್ನು ಮಾರ್ಕ್ಸ್‌ವಾದದ ಮೇಲೆ ಹೂಡಲಾಗಿದೆ.

ಕೆಂಪು ದ್ವಜ ಹೊರುವವರನ್ನು ಒಳಗೊಂಡಂತೆ ದಲಿತರು ಮಾಡಬೇಕೆಂದು ಜನರು ಬಯಸಿದ ಚಾರಿತ್ರಿಕ ಕೆಲಸ, ಯು.ಎಸ್. ಸಾಮ್ರಾಜ್ಯಶಾಹಿಯನ್ನು ಒಳಗೊಂಡಂತೆ ಎಲ್ಲ ಸಾಮ್ರಾಜ್ಯ ಶಾಹಿಗಳನ್ನು ಕೊನೆಗೊಳಿಸುವುದು. ದಲಿತರು ತಮ್ಮದೆ ಅಂದರೆ ದುಡಿಯುವ ವರ್ಗಗಳ ಸರ್ವಾಧಿಕಾರದ ಬಗ್ಗೆ ಚಿಂತಿಸುವಂತೆ ಮಾಡಲಾಯಿತು. ಒಂದು ಸಾರಿ ಭಾರತ ಕಮ್ಯೂನಿಸ್ಟ್ ಆದಂತೆ ದಲಿತರು ದುಡಿಯುವ ವರ್ಗಗಳ ತಳಪಾಯವಾಗಿರುವುದರಿಂದ ಅವರು ಆಳುವವರಾಗುತ್ತಾರೆ ಇದು ಆ ಚಿಂತನೆಯ ಸಾರಾಂಶ.

ಒಂದು ಸಾರಿ ಕಮ್ಯೂನಸ್ಟ್ ಕ್ರಾಂತಿ ಭಾರತದಲ್ಲಿ ಯಶಸ್ವಿಯಾಯಿತೆಂದರೆ ಹೊಸ ವ್ಯವಸ್ಥೆಯಲ್ಲಿ ತಾವು ಮುಂಚೂಣಿಯಲ್ಲಿರುತೇವೆ ಎಂದು ಈ ದಲಿತರು ನಂಬಿದರು. ಆದರೆ ವಾಸ್ತವ ಬೇರೆಯಾಗಿದೆ. ಮೂರು ರಾಜ್ಯಗಳು ಅಂದರೆ ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರಗಳು ಎಡ ಪಂಥೀಯ ಸರ್ಕಾರಗಳನ್ನು ಹೊಂದಿವೆ. ಆದರೆ ಒಬ್ಬ ದಲಿತನೂ ಮುಖ್ಯಮಂತ್ರಿಯಾಗಲು ಸಾಧ್ಯವಾಗಿಲ್ಲ. ಭಾರತದ ಎಡ ಪಂಥೀಯ ನೌಕರ ಸಂಘಗಳನ್ನೊಳಗೊಂಡಂತೆ ಕಮ್ಯೂನಿಸ್ಟ್ ಚಳುವಳಿಯ ಒಟ್ಟು ಇತಿಹಾಸದಲ್ಲಿ ದಲಿತರು ಎಂದೂ ನಾಯಕತ್ವದ ಸ್ಥಾನಗಳನ್ನು ತಲುಪಲು ಸಾಧ್ಯವಾಗಿಲ್ಲ. ಆದುದರಿಂದ ದುಡಿಯುವ ವರ್ಗಗಳ ಸರ್ವಾಧಿಕಾರ ಎಂದಾದರೂ ಬಂದರೆ ದಲಿತರ ಸ್ಥಿತಿ ಹೇಗಿರಬಹುದು ಎಂಬುದನ್ನು ಯಾರಾದರೂ ಊಹಿಸಿಕೊಳ್ಳಬಹುದು.

ಹೀಗೆ ಕಮ್ಯೂನಿಸ್ಟ್ ಚಳುವಳಿ ದಲಿತರ ಶಕ್ತಿ ಸಮಯ ಮತ್ತು ಸಂಪನ್ಮೂಲಗಳನ್ನು ಕೊಳ್ಳೆಹೊಡೆದರೂ ಡಾ॥ ಅಂಬೇಡ್ಕರ್ ಅವರನ್ನು ಬೆಂಬಲಿಸುವ ದಲಿತ ನಾಯಕರು ಈ ಜನಾಂಗ ಪ್ರತಿದಿನ ಎದುರಿಸುತ್ತಿರುವ ಕೆಲವು ಪ್ರಶ್ನೆಗಳನ್ನು ಕೇಳಲಿಲ್ಲ.

ಉತ್ತರ ಭಾರತದ ಇಂಡೋ ಗ್ಯಾಂಜೆಟಿಕ್ ಪ್ರದೇಶದಲ್ಲಿ ಹಲ್ವಾಹಿ ಪ್ರಾತ ಅಥವಾ ಹರ್ವಾಹಿ ಪ್ರಾತ ಎಂದು ಕರೆಯಲ್ಪಡುವ ಒಂದು ಭೂಮಾಲೀಕ ಕೂಲಿಕಾರ ಸಂಬಂಧ ಇತ್ತು. ಪ್ರಾತ ಎಂದರೆ ಒಂದು ಸಾಮಾಜಿಕ, ಆರ್ಥಿಕ ವ್ಯವಸ್ಥೆ. ಹಾಲ್ವ ಅಥವಾ ಹಾರ್ ಎಂದರೆ ನೇಗಿಲು ಎಂದರ್ಥ. ವಾಹಿ ಸಹ ಪ್ರಾತವನ್ನು ಸೂಚಿಸುತ್ತದೆ. ಭೂಮಿಯನ್ನು ಉಳುವ ಮನುಷ್ಯ ಹಲ್ವಾಹ ಎಂದು ಕರೆಯಲ್ಪಡುತ್ತಿದ್ದ.

ಈ ಪದ್ಧತಿಯಂತೆ ಪ್ರತಿ ದಲಿತ ಕುಟುಂಬ ಭೂ ಮಾಲೀಕನಿಗೆ ಗಂಟುಹಾಕಿಕೊಂಡಿರುತ್ತದೆ ಮತ್ತು ದನಗಳಿಗೆ ಹುಲ್ಲು ತರುವುದು, ಸ್ನಾನಗೃಹಗಳನ್ನು ಸ್ವಚ್ಚಗೊಳಿಸುವುದು, ಜಮೀನು ಉಳುವುದು, ಬೆಳೆಗಳಿಗೆ ನೀರು ಹಾಯಿಸುವುದು, ಕೊಯಿಲು ಮಾಡುವುದು, ಒಕ್ಕಣೆ ಮಾಡುವುದು ಮುಂತಾದ ಎಲ್ಲಾ ಕೆಲಸಗಳನ್ನು ಆ ಕುಟುಂಬ ಮಾಡಬೇಕಿತ್ತು. ಇದಕ್ಕೆ ಬದಲಾಗಿ ಭೂಮಾಲೀಕ ಆ ಕುಟುಂಬಕ್ಕೆ ಸ್ವಲ್ಪ ಕೃಷಿ ಜಮೀನು ಮತ್ತು ಸಮಯ ಬಂದಾಗ ಸ್ವಲ್ಪ ಹಣ ಸಹಾಯ ಮಾಡುತ್ತಿದ್ದ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಆ ಕುಟುಂಬ ಅವನ ಯಾವುದೇ ಕರೆಗೆ ಸಿದ್ದರಾಗಿರಬೇಕಾಗಿತ್ತು. ಬ್ರಿಟಿಷರು ಈ ವ್ಯವಸ್ಥೆಯನ್ನು ಭಾರತದ ಗುಲಾಮಗಿರಿ ಎಂದು ವರ್ಣಿಸಿದ್ದಾರೆ.

ಕಾಲ ಕಳೆದಂತೆ ಭೂಮಾಲೀಕರು ಅಂದರೆ ಠಾಕೂರರು, ಭೂಮಿಹಾರರು, ಬ್ರಾಹ್ಮಣರು, ನೇಗಿಲು ಮುಟ್ಟುವುದನ್ನೇ ತಡೆಯಲಾಯಿತು. ಯಾವುದೇ ಹಳ್ಳಿಯಲ್ಲಿ 30 ಜನ ಭೂಮಾಲೀಕರಿದ್ದರೆ 30 ದಲಿತ ಕುಟುಂಬಗಳು ಆ ಭೂಮಾಲೀಕರಲ್ಲಿ ಕೆಲಸ ಮಾಡುತ್ತಿದ್ದವು. ಈ ಹಲ್ವಾಹಿ ಕುಟುಂಬಗಳು ತಮ್ಮ ಯಜಮಾನರನ್ನು ಬದಲಿಸುವ ಯಾವುದೇ ಸ್ವಾತಂತ್ರ್ಯವನ್ನು ಹೊಂದಿರಲಿಲ್ಲ. ಭೂಮಾಲೀಕ ಆ ಕುಟುಂಬದ ಅಂದರೆ ಹೆಂಗಸರು, ಮಕ್ಕಳು, ಹಿರಿಯರೂ ಸೇರಿದಂತೆ ಆ ಪೂರ್ಣ ಕುಟುಂಬದ ಮೇಲೆ ಸಂಪೂರ್ಣ ಹಿಡಿತ ಹೊಂದಿದ್ದ. ಈ ಪದ್ದತಿಯು ಅನೇಕ ದಶಕಗಳು ಮುಂದುವರೆದು 2000ದಲ್ಲಿ ಕೊನೆಯಾಯಿತು. ದಲಿತ ಕೆಂಪು ಬಾವುಟ ಹಿಡಿದ್ದದ್ದರಿಂದ ದಲಿತರು ಸಾಮ್ರಾಜ್ಯಶಾಹಿಯೊಡನೆ ಹೋರಾಡಬೇಕೆಂದು ನಾಯಕರು ಬಯಸಿದ್ದರಾದರೂ, ಹಲ್ವಾಹಿ ಪದ್ದತಿಯ ವಿರುದ್ದ ಅವರು ಹೋರಾಡಬೇಕೆಂದು ಬಯಸಲಿಲ್ಲ.

ಯಾವುದೇ ದನ ಸತ್ತಾಗ ದಲಿತರು ಅದಕ್ಕೆ ಸಂಸ್ಕಾರ ಮಾಡಬೇಕು. ಅದಕ್ಕೂ ಮೊದಲು ಅವರು ಆ ದನದ ಚರ್ಮ ಸುಲಿಯಬೇಕು. ಈ ಅವರ ಪರಿಸ್ಥಿತಿ ನಮ್ಮ ದೇಶದ ಕಮ್ಯೂನಿಸ್ಟರ ಗಮನ ಸೆಳೆಯಲಿಲ್ಲ. ಅದಕ್ಕೆ ಬದಲಾಗಿ ಅವರು ದಲಿತರು ಉತ್ತರ ಕೊರಿಯಾದ

ಭಾರತ ತನಗೆ ಚೆನ್ನಾಗಿ ಹೊಂದುವ

ಬಂಡವಾಳಶಾಹಿ ನೀತಿಯನ್ನು ಅಳವಡಿಸಿಕೊಳ್ಳಬೇಕು

ಡಾ. ಅಂಬೇಡ್ಕರ್ ಅವರು ಬಹಳ ತೀವ್ರವಾಗಿ ಮಾರ್ಕ್ಸ್‌ವಾದವನ್ನು ವಿರೋಧಿಸಿದರು. ಅವರು ಸಂಹಿತೆ ಬರೆಯುವ ವೇಳೆಗೆ ರಾಷ್ಟ್ರೀಯ ಸಮಾಜವಾದ ತನ್ನ ಹೊಳುಪನ್ನು ಕಳೆದುಕೊಂಡಿತ್ತು. ಹಾಗಾದರೆ ಅಂಬೇಡ್ಕರ್ ಬಂಡವಾಳಶಾಹಿ ಸಾಮಾಜಿಕ ವ್ಯವಸ್ಥೆಯ ಪರ ಇದ್ದರೆ? ಅವರು ಎಲ್ಲಿಯೂ ಬಂಡವಾಳಶಾಹಿ ವ್ಯವಸ್ಥೆಯನ್ನು ಹೊಗಳಿಲ್ಲ. ಅವರ ಜೀವಮಾನ ಕಾಲದಲ್ಲಿ ಕಮ್ಯುನಿಸಂನ ದುಷ್ಟ ಫಲಿತಾಂಶಗಳು ಇನ್ನೂ ಹೊರ ಬಿದ್ದಿರಲಿಲ್ಲ. ಮೂರನೇ ಜಗತ್ತಿಗೆ ಸೇರಿದ ಅನೇಕ ತಿಳುವಳಿಕೆವುಳ್ಳ ವಿದ್ವಾಂಸರುಗಳಿಗೆ ಬಂಡವಾಳಶಾಹಿಯನ್ನು ಬೆಂಬಲಿಸುವುದು ದೇವನಿಂದನೆ ಮಾಡಿದಂತೆ. ಆದರೂ ಡಾ.ಅಂಬೇಡ್ಕರ್‌ರ ಸಂಹಿತೆ ಸ್ವಲ್ಪ ಭಿನ್ನವಾಗಿಯಾದರೂ ಬಂಡವಾಳಶಾಹಿಯನ್ನು ಬೆಂಬಲಿಸುತ್ತದೆ. ಬಂಡವಾಳಶಾಹಿ ಅನೇಕ ಛಾಯೆಗಳಲ್ಲಿ ಇರಬಹುದು ಎಂದು ಇಂದು ನಮಗೆ ಗೊತ್ತಿದೆ.

ಸಮಾಜವಾದವನ್ನು ರಕ್ಷಿಸಬೇಕು ಎಂದು ಬಯಸಿದರು.

ದಕ್ಷಿಣದಲ್ಲಿ ದಲಿತರಿಗೆ ಪ್ರತ್ಯೇಕ ಲೋಟ ಮತ್ತು ತಟ್ಟೆಗಳಲ್ಲಿ ಟೀ ಮತ್ತು ತಿಂಡಿಗಳನ್ನು ನೀಡಲಾಗುತ್ತದೆ. ಸ್ಥಳೀಯ ಹಜಾಮರು ದಲಿತರಿಗೆ ಕ್ಷೌರ ಮಾಡುವುದಿಲ್ಲ, ಇದರಿಂದಾಗಿ ಅವರು ಬೇರೊಂದು ಪಟ್ಟಣಕ್ಕೆ ಕೂದಲು ಕತ್ತರಿಸಿಕೊಳ್ಳಲು ಹೋಗಬೇಕಾಗುತ್ತದೆ. ಈ ಎಲ್ಲಾ ಅಪಮಾನಕಾರಕ ಪದ್ಧತಿಗಳು ಕಮ್ಯೂನಿಸ್ಟರ ಗಮನ ಸೆಳೆಯಲಿಲ್ಲ. ಅದಕ್ಕೆ ಬದಲಾಗಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಚೈನಾದ ಸ್ಥಾನಕ್ಕಾಗಿ ದಲಿತರು ಹೋರಾಡಬೇಕೆಂದು ಅವರು ಬಯಸಿದರು. ದಲಿತರನ್ನು ಅಪಮಾನಕ್ಕೆಡೆಮಾಡುವ ಇನ್ನೂ ಅನೇಕ ಉದಾಹರಣೆಗಳುಂಟು. ಈ ಪಟ್ಟಿಗೆ ಕೊನೆಯೇ ಇಲ್ಲ.

ದಲಿತ ಜನಾಂಗವನ್ನು ಕೆಂಪು ಬಾವುಟದ ಉರುಳಿನಿಂದ ಬಿಡುಗಡೆ ಮಾಡುವುದಕ್ಕಾಗಿ ಇಂತಹ ವಿಷಯಗಳನ್ನು ಚರ್ಚಿಸಲು ಏಪ್ರಿಲ್ ಮಾಸ ಅವಕಾಶವಾದೀತೆ?

* * * * * * * *

ಅಂಬೇಡ್ಕರ್ ಸಿದ್ಧಾಂತ

1950 ರ ದಶಕದಲ್ಲಿ ಜನರು ಒಡೆದ ಜಗತ್ತಿನಲ್ಲಿ ಜೀವಿಸುತ್ತಿದ್ದರು. ಸೈದ್ಧಾಂತಿಕವಾಗಿ ಇಬ್ಭಾಗವಾಗಿದ್ದ ಈ ಜಗತ್ತಿನಲ್ಲಿ ಕಮ್ಯೂನಿಸ್ಟ್ ಗುಂಪನ್ನು ಹಿಂದಿನ ಸೋವಿಯತ್ ಯೂನಿಯನ್ ನಾಯಕನಾಗಿ ನಡೆಸುತ್ತಿತ್ತು. ಯು.ಎಸ್ ಬಂಡವಾಳಶಾಹಿ ಗುಂಪಿಗೆ ನಾಯಕನಾಗಿತ್ತು. ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟ ತನ್ನ ತುತ್ತತುದಿಯನ್ನು ಮುಟ್ಟಿದ್ದ ಕಾಲ ಅದು. ಆ ದೇಶಗಳು ಸ್ವತಂತ್ರವಾದ ಕೂಡಲೆ ತಮ್ಮದೇ ಆದ ಅಸ್ಮಿತೆ ಆರಿಸಿಕೊಂಡು ತಮ್ಮನ್ನು ಮೂರನೇ ಜಗತ್ತಿನ ದೇಶಗಳು ಎಂದು ಕರೆದುಕೊಂಡುವು.

ಸೋವಿಯತ್ ಯೂನಿಯನ್ ಮೂರನೇ ಜಗತ್ತಿನ ರಾಷ್ಟ್ರಗಳ ನಾಯಕತ್ವಕ್ಕೆ ತನ್ನ ವಾರಸುದಾರತ್ವವನ್ನು ಮುಂದಿಟ್ಟಿತು. ಚೈನಾದ ಕಮ್ಯೂನಿಸ್ಟ್ ಪಕ್ಷ ದೇಶವನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡಾಗ ಜಗತ್ತಿನ ಬಹುಭಾಗ ಕೆಂಪಾಯಿತು. ಅನೇಕ ನಾಯಕರು ಬಂಡವಾಳಶಾಹಿಯ ದಿನಗಳು ಮುಗಿಯುತ್ತಿವೆ ಎಂದೇ ನಂಬಿದ್ದರು. ಆ ಕಾಲದಲ್ಲಿ ವ್ಲದಿಮಿರ್ ಇಲಿಯಿಚ್ ಲೆನಿನ್‌ನ ಪುಸ್ತಕ 'ಇಂಪೀರಿಯಾಲಿಸಂ ಈಸ್ ದ ಹೈಯೆಸ್ಟ್ ಸ್ಟೇಜ್ ಆಫ್ ಕ್ಯಾಪಿಟಲಿಸಂ' ಬಹಳ ಜನಾದರಣೆ ಪಡೆದಿತ್ತು. ಲೆನಿನ್‌ನ ಪ್ರಬಂಧ ತರ್ಕಬದ್ಧವಾಗಿ ಬಂಡವಾಳ ಶಾಹಿಯ ಅಂತ್ಯವನ್ನು ಮುಂದಿಟ್ಟಿತ್ತು. ಒಂದು ಸರಳ ಗಣಿತದ ಲೆಕ್ಕಾಚಾರದ ಮೇಲೆ ಅದು ನಿಂತಿತ್ತು. ಅದೆಂದರೆ ಒಂದು ಸಾರಿ ಮೂರನೇ ಜಗತ್ತಿನ ರಾಷ್ಟ್ರಗಳು ಸಾಮ್ರಾಜ್ಯ ಶಾಹಿಯಿಂದ ಬಿಡುಗಡೆಯಾದಂತೆ ದುಡಿತದ ವರ್ಗಗಳ ಮತ್ತು ಬಂಡವಾಳಶಾಹಿಯ ಮಧ್ಯೆ ಇರುವ ವೈರುಧ್ಯಗಳು ಅದು ಮುರಿದು ಬೀಳುವ ಮಟ್ಟಿಗೆ ತೀವ್ರಗೊಳ್ಳುತ್ತವೆ. ಲೆನಿನ್‌ನ ಪ್ರಕಾರ ಬಂಡವಾಳಶಾಹಿ ರಾಷ್ಟ್ರಗಳ ದುಡಿಯುವ ವರ್ಗಗಳು ಏಕೆ ದಂಗೆ ಏಳುತ್ತಿಲ್ಲವೆಂದರೆ ಅವು ವಸಾಹತುಗಳಿಂದ ಹರಿದು ಬರುವ ಐಶ್ವರ್ಯದ ಪ್ರಯೋಜನ ಪಡೆಯಲು ಬಯಸುತ್ತಿವೆ.

ಬೇರೆಲ್ಲಾ ದೇಶಗಳಂತೆ ಭಾರತದಲ್ಲಿಯೂ ಸಹ ಲೆನಿನ್‌ನ ಘೋಷಣೆ 'ಲಂಡನ್ ಮತ್ತು ವಾಷಿಂಗ್‌ಟನ್‌ಗೆ ದಾರಿ ಕಲ್ಕತ್ತಾ ಮತ್ತು ಪೀಕಿಂಗ್‌ಗಳ ಮೂಲಕ' ಅನ್ನುವುದನ್ನು ಬಹಳಷ್ಟು ಜನ ಒಪ್ಪಿಕೊಂಡಿದ್ದರು. ಅಂದರೆ 1949 ರಲ್ಲಿ ಚೈನಾದಲ್ಲಿ ಕಮ್ಯುನಿಸಂ ಯಶಸ್ವಿಯಾದ ಮೇಲೆ ಭಾರತ ಕೆಂಪಾಗುತ್ತದೆ ಎಂಬುದು ಅನೇಕರ ನಂಬಿಕೆಯಾಗಿತ್ತು. ಜವಹರ್‌ಲಾಲ್ ನೆಹರು ಕೂಡ ಮಾರ್ಕ್ಸ್ ಸಿದ್ಧಾಂತವನ್ನು ಹೊಗಳಿದ್ದರು. ಆದ್ದರಿಂದ ಅನೇಕ ಬ್ರಾಹ್ಮಣರು ಕಮ್ಯುನಿಸ್ಟರಾದದ್ದು ದೇಶದಲ್ಲಿ ಕಮ್ಯುನಿಸಂನ ಯಶಸ್ಸನ್ನು ಸೂಚಿಸುತ್ತದೆ ಎಂದರೆ ಆಶ್ಚರ್ಯವಿಲ್ಲ. ಆ ಸಮಯದಲ್ಲಿ ಡಾ.ಅಂಬೇಡ್ಕರ್ ಅವರ ನಿಲುವುಗಳು ಮತ್ತು ಸಿದ್ಧಾಂತಗಳೇನು? ದಲಿತರು ಈ ಬಗ್ಗೆ ಚರ್ಚಿಸಬೇಕಾಗಿದೆ. ಈ ಅಂಕಣದಲ್ಲಿ ಈ ಬಗ್ಗೆ ಕೆಲವು ಒಳನೋಟಗಳನ್ನು ನೀಡಿದೆ.

1952ರ ಮೊದಲನೇ ಪಾರ್ಲಿಮೆಂಟ್ ಚುನಾವಣೆಗೆ ಮುನ್ನ ಡಾ.ಅಂಬೇಡ್ಕರ್‌ರವರು ತಮ್ಮ ಅಖಿಲ ಭಾರತ ಪರಿಶಿಷ್ಟ ಜಾತಿ ಫೆಡರೇಷನ್‌ನ ಚುನಾವಣಾ ಸಂಹಿತೆ ಬರೆಯಲು ತೀರ್ಮಾನಿಸಿದರು. ಅಕ್ಟೋಬರ್ 6, 1951 ರಂದು ಅವರ ಮನೆಯಲ್ಲಿ ಒಂದು ಸಭೆ ನಡೆಯಿತು. ತಮ್ಮ ಪಕ್ಷ ಚುನಾವಣೆಯಲ್ಲಿ ಗೆದ್ದಲ್ಲಿ ಕೃಷಿಗೆ ಸಂಬಂಧಪಟ್ಟಂತೆ ಯಾವ ನಿಲುವನ್ನು ತಾಳುತ್ತದೆ ಎನ್ನುವುದನ್ನು ಸಂಹಿತೆಯಲ್ಲಿ ಸೂಚಿಸಲಾಗಿದೆ.

1) ಕೃಷಿಯನ್ನು ಯಾಂತ್ರೀಕರಣಗೊಳಿಸಬೇಕು. ಬೆಳೆ ತೆಗೆಯುವ ಪದ್ಧತಿ ಬಹಳ ಸಾಂಪ್ರದಾಯಿಕ ಆಗಿರುವವರೆಗೆ ಭಾರತ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ.

2) ಕೃಷಿಯನ್ನು ಯಾಂತ್ರೀಕರಿಸಲು ಸಹಾಯವಾಗುವಂತೆ ಸಣ್ಣ ಸಣ್ಣ ಭೂ ಹಿಡುವಳಿಗಳನ್ನು ದೊಡ್ಡ ಫಾರ್ಮ್‌ಗಳಾಗಿ ಮಾರ್ಪಡಿಸಬೇಕು.

3) ಉತ್ತಮ ಫಸಲನ್ನು ಪಡೆಯಲು ಅನುಕೂಲವಾಗುವಂತೆ ಸಾಕಷ್ಟು ಗೊಬ್ಬರ, ಉತ್ತಮ ಬೀಜ ಒದಗಿಸಲು ಅವಕಾಶ ಮಾಡಬೇಕು.

ಈ ಸಲಹೆಗಳನ್ನು ಡಾ.ಅಂಬೇಡ್ಕರ್ 60 ವರ್ಷಗಳ ಹಿಂದೆಯೇ ನೀಡಿದ್ದಾರೆ. ಆ ಕಾಲದಲ್ಲಿ ಕಮ್ಯುನಿಸಂನ ಸೈದ್ಧಾಂತಿಕ ನಿಲುವು ಏನಾಗಿತ್ತು?

ಉಳುವವನಿಗೇ ಭೂಮಿ ಎಂಬುದು ಅವರ ಮುಖ್ಯ ಘೋಷಣೆಯಾಗಿರಲಿಲ್ಲವೇ? ದೊಡ್ಡ ಹಿಡುವಳಿಗಳಲ್ಲಿ ಉಳುವವನಿಗೇ ಭೂಮಿ ಸಾಧ್ಯವೇ? ಈ ದೊಡ್ಡ ಹಿಡುವಳಿಗಳು ಅಸ್ತಿತ್ವಕ್ಕೆ ಬರಬೇಕು ಎಂಬ ವಿಚಾರ ಯಾರದು? ಅದು ಕಮ್ಯುನಿಸ್ಟರಿಗೆ ಸೇರಿದ್ದಲ್ಲವೇ? 1951 ರಲ್ಲಿ ಡಾ.ಅಂಬೇಡ್ಕರ್ ಕೃಷಿ ಕ್ಷೇತ್ರದ ಯಾಂತ್ರೀಕರಣ ಬಯಸಿದರು. ಭಾರತದ ಕಮ್ಯುನಿಸ್ಟ್ ಪಕ್ಷಗಳು ಯಾವುದೆ ಸಮಯದಲ್ಲಾದರೂ ಕೃಷಿ ಕ್ಷೇತ್ರದ ಯಾಂತ್ರೀಕರಣವನ್ನು ಬೆಂಬಲಿಸಿವೆಯೇ? ನಿಜ ಹೇಳಬೇಕೆಂದರೆ ಸಮಾಜವಾದಿಗಳ ಜೊತೆ ಸೇರಿ ಕಮ್ಯುನಿಸ್ಟರು ಟ್ರಾಕ್ಟರ್‌ಗಳ ಉಪಯೋಗವನ್ನು ವಿರೋಧಿಸಿದವರಲ್ಲಿ ಮೊದಲಿಗರು. ಇದಕ್ಕೆ ಕಾರಣ ಯಂತ್ರಗಳು ಹೆಚ್ಚು ನಿರುದ್ಯೋಗವನ್ನು ಉಂಟು ಮಾಡುತ್ತವೆ ಎಂಬ ಅವರ ನಂಬಿಕೆ.

ಇಂದು ಸಾಕಷ್ಟು ಗೊಬ್ಬರ ಮತ್ತು ಆರೋಗ್ಯಕರ ಬೀಜಗಳು ಅಂದರೆ ರಾಸಾಯನಿಕ ಗೊಬ್ಬರಗಳು ಮತ್ತು ಹೈಬ್ರಿಡ್ ಬೀಜಗಳ ಬಳಕೆ ಎಂದೇ ಅರ್ಥೈಸಲಾಗುತ್ತದೆ.

ಡಾ.ಅಂಬೇಡ್ಕರ್‌ರ ಚುನಾವಣಾ ಸಂಹಿತೆ ಬಡತನದ ನಿರ್ಮೂಲನಕ್ಕೆ ಒತ್ತುಕೊಟ್ಟಿತ್ತು. ಈ ದೇಶದ ಜನರ ತೀವ್ರ ಬಡತನವನ್ನು ಪರಿಗಣಿಸಿದಲ್ಲಿ ಹೆಚ್ಚು ಉತ್ಪತ್ತಿ ಒಂದೇ ನಮ್ಮ ಮೂಲಭೂತ ಮತ್ತು ಪ್ರಮುಖ ಗುರಿಯಾಗಬೇಕು ಎಂದು ಅಂಬೇಡ್ಕರ್ ತಮ್ಮ ಸಂಹಿತೆಯಲ್ಲಿ ಬರೆದರು.

ಆದರೆ ಯಾವ ವಿಧಧ ವ್ಯವಸ್ಥೆಯಲ್ಲಿ ಉತ್ಪತ್ತಿ ಹೆಚ್ಚಾಗುತ್ತದೆ? ಸಂಹಿತೆ ಇದಕ್ಕೂ ಒಂದು ಉತ್ತರವನ್ನು ನೀಡಿದೆ. ಯಾವುದೇ ಒಂದು ಸಿದ್ಧಾಂತ ಅಥವಾ ವ್ಯವಸ್ಥೆ ತಮ್ಮ ಪಕ್ಷದ ಉತ್ಪನ್ನ ಹೆಚ್ಚಿಸುವ ನಿಲುವಿಗೆ ತಡೆಯಾಗ

ಲಾರದು ಎಂದು ಸಂಹಿತೆ ಹೇಳುತ್ತದೆ. ಇದನ್ನು ಬರೆದಾಗ ಡಾ.ಅಂಬೇಡ್ಕರ್‌ರವರು ಏನನ್ನು ಮನಗಂಡಿದ್ದರು.

ಅವರು ಖಾಸಗಿ ಕ್ಷೇತ್ರದ ವಿರುದ್ಧವಾಗಿದ್ದರೇ? "ಕೈಗಾರಿಕೋದ್ಯಮದ ರೂಪುರೇಷೆಗಳ ಸಮಯ ಮತ್ತು ಪರಿಸ್ಥಿತಿ ಇವು ನಿರ್ಧರಿಸಬೇಕಾದ ವಿಷಯ. ಯಾವ ಸಂದರ್ಭದಲ್ಲಿ ಒಂದು ಕೈಗಾರಿಕೆಯನ್ನು ರಾಷ್ಟ್ರ ಕೈಗೆತ್ತಿಕೊಳ್ಳುವುದು ಸಾಧ್ಯ ಮತ್ತು ಅವಶ್ಯಕವೊ ಆಗ ಪರಿಶಿಷ್ಟ ಜಾತಿಗಳ ಫೆಡರೇಷನ್ ಹಾಗೆ ಕೈಗೆತ್ತಿಕೊಳ್ಳುವುದನ್ನು ಬಯಸುತ್ತದೆ. ಎಲ್ಲಿ ಖಾಸಗಿ ಉದ್ಯಮ ಸಾಧ್ಯವೊ, ಆದರೆ ರಾಷ್ಟ್ರ ಕೈಗೆತ್ತಿಕೊಳ್ಳುವುದು ಅನಾವಶ್ಯಕವೊ ಅಂತಹ ಸಂದರ್ಭದಲ್ಲಿ ಖಾಸಗಿ ಕ್ಷೇತ್ರಕ್ಕೆ ಅದನ್ನು ಬಿಡುತ್ತದೆ" ಎಂದು ಸಂಹಿತೆ ಹೇಳುತ್ತದೆ.

ಡಾ.ಅಂಬೇಡ್ಕರ್ ಅವರು ಬಹಳ ತೀವ್ರವಾಗಿ ಮಾರ್ಕ್ಸ್‌ವಾದವನ್ನು ವಿರೋಧಿಸಿದರು. ಅವರು ಸಂಹಿತೆ ಬರೆಯುವ ವೇಳೆಗೆ ರಾಷ್ಟ್ರೀಯ ಸಮಾಜವಾದ ತನ್ನ ಹೊಳುಪನ್ನು ಕಳೆದುಕೊಂಡಿತ್ತು. ಹಾಗಾದರೆ ಅಂಬೇಡ್ಕರ್ ಬಂಡವಾಳಶಾಹಿ ಸಾಮಾಜಿಕ ವ್ಯವಸ್ಥೆಯ ಪರ ಇದ್ದರೆ? ಅವರು ಎಲ್ಲಿಯೂ ಬಂಡವಾಳಶಾಹಿ ವ್ಯವಸ್ಥೆಯನ್ನು ಹೊಗಳಿಲ್ಲ. ಅವರ ಜೀವಮಾನ ಕಾಲದಲ್ಲಿ ಕಮ್ಯುನಿಸಂನ ದುಷ್ಟ ಫಲಿತಾಂಶಗಳು ಇನ್ನೂ ಹೊರಬಿದ್ದಿರಲಿಲ್ಲ. ಮೂರನೇ ಜಗತ್ತಿಗೆ ಸೇರಿದ ಅನೇಕ ತಿಳುವಳಿಕೆವುಳ್ಳ ವಿದ್ವಾಂಸರುಗಳಿಗೆ ಬಂಡವಾಳಶಾಹಿಯನ್ನು ಬೆಂಬಲಿಸುವುದು ದೇವನಿಂದನೆ ಮಾಡಿದಂತೆ.

ಆದರೂ ಡಾ.ಅಂಬೇಡ್ಕರ್‌ರ ಸಂಹಿತೆ ಸ್ವಲ್ಪ ಭಿನ್ನವಾಗಿಯಾದರೂ ಬಂಡವಾಳಶಾಹಿಯನ್ನು ಬೆಂಬಲಿಸುತ್ತದೆ. ಬಂಡವಾಳಶಾಹಿ ಅನೇಕ ಛಾಯೆಗಳಲ್ಲಿ ಇರಬಹುದು ಎಂದು ಇಂದು ನಮಗೆ ಗೊತ್ತಿದೆ. ಡೆನ್‌ಮಾರ್ಕ್, ನಾರ್ವೆ, ಮತ್ತು ಸ್ವೀಡನ್‌ನಂತಹ ಸ್ಕ್ಯಾಂಡಿನೋವಿಯಾದ ದೇಶಗಳಲ್ಲಿ ಬಂಡವಾಳಶಾಹಿ ಯು.ಕೆ. ಮತ್ತು ಯು.ಎಸ್.ನಂತೆ ಇಲ್ಲ.

ಬೇರೆ ಮಾತುಗಳಲ್ಲಿ ಹೇಳುವುದಾದರೆ ಡಾ. ಅಂಬೇಡ್ಕರ್‌ರ ಸಿದ್ಧಾಂತ ಅಂಬೇಡ್ಕರ್‌ವಾದ ಮಾತ್ರ– ಅಂದರೆ ಭಾರತಕ್ಕೆ ಚೆನ್ನಾಗಿ ಹೊಂದುವಂತಹ ಬಂಡವಾಳಶಾಹಿ.

* * * * * * * *

ಅಂಬೇಡ್ಕರ್ ವಾದಕ್ಕೊಂದು ಕಿಟಕಿ

ಡಾ|| ಅಂಬೇಡ್ಕರ್‌ರವರು 1952ರ ಪಾರ್ಲಿಮೆಂಟ್ ಚುನಾವಣೆಗೆ ತಯಾರಿಸಿದ ಚುನಾವಣಾ ಸಂಹಿತೆ ಭಾರತ ಸಮಾಜದ ಕೆಲವು ಮೂಲಭೂತ ಅಂಶಗಳ ಮೇಲೆ ಬೆಳಕು ಚೆಲ್ಲುತ್ತದೆ. ಅಂತಹ ಅಂಶಗಳ ಮೇಲೆ ಅಂಬೇಡ್ಕರ್‌ವಾದ ತನ್ನನ್ನು ರೂಪಿಸಿಕೊಳ್ಳುತ್ತದೆ.

ಅತಿ ಮುಖ್ಯವಾಗಿ ಸಂಹಿತೆ ಬಡತನದ ಸವಾಲನ್ನು ಎದುರಿಸಲು ಉತ್ಪನ್ನ ಹೆಚ್ಚಿಸುವುದು ಅತಿ ಮುಖ್ಯ ಎನ್ನುವುದನ್ನು ಒತ್ತಿ ಹೇಳುತ್ತದೆ.

ಈ ದಿನಗಳಲ್ಲಿ ಉತ್ಪಾದನೆಯನ್ನು GDP (Gross Domestic Product)ನಲ್ಲಿ ಅಳೆಯಲಾಗುತ್ತದೆ. GDP ಯ ಹೆಚ್ಚಳ ಎಂದರೆ ಉತ್ಪನ್ನದ ಹೆಚ್ಚಳ ಎಂದರ್ಥ. ಆ ಅರ್ಥದಲ್ಲಿ ಡಾ|| ಅಂಬೇಡ್ಕರ್ ಈವತ್ತಿನ ಆರ್ಥಿಕ ಸುಧಾರಣೆಯ ಸೈದ್ಧಾಂತಿಕ ವಾಸ್ತುಶಿಲ್ಪಿಗಳಿಗಿಂತ ಬಹಳ ಮುಂದಿದ್ದರು.

ಡಾ|| ಅಂಬೇಡ್ಕರರು ಕೃಷಿ ಕ್ಷೇತ್ರದ ಸುಧಾರಣೆಗೆ ಹೆಚ್ಚು ಒತ್ತು ನೀಡುವ ಆರ್ಥಿಕ ಸುಧಾರಣೆಗೆ ಮೇಲೆ ಬಹಳಷ್ಟು ಮಹತ್ವ ನೀಡಿದ್ದರು. ಅವರು ಕೃಷಿಯ ಯಾಂತ್ರಿಕರಣ ಮತ್ತು ದೊಡ್ಡ ಫಾರಂಗಳ ಪರವಾಗಿ ವಾದ ಮಾಡಿದ್ದರು. ಅವರು ಈ ಸಂಹಿತೆ ಬರೆದು 60 ವರ್ಷಗಳಾಗಿದ್ದರೂ ಇಂದಿನ ಸುಧಾರಕರು ಅವರ ಚಿಂತನೆಯ ಮಟ್ಟವನ್ನು ಇನ್ನೂ ತಲುಪಲಾಗಿಲ್ಲ.

ಅವರು 1952ರಲ್ಲಿ ಪ್ರಕಟಿಸಿದಂತೆ ಉತ್ಪನ್ನವನ್ನು ಹೆಚ್ಚಿಸುವ ಪ್ರಯತ್ನಕ್ಕೆ ಯಾವುದೇ ಸಿದ್ಧಾಂತ ಅಥವಾ ವ್ಯವಸ್ಥೆ ಒಡ್ಡುವ ಅಡೆತಡೆಗಳನ್ನು ಸಂಹಿತೆ ಒಪ್ಪುವುದಿಲ್ಲ. ಇದು ಅಂಬೇಡ್ಕರ್‌ವಾದವೆಂದು ಕರೆಯಲ್ಪಡುವ ಡಾ|| ಅಂಬೇಡ್ಕರರ ಸಾಮಾಜಿಕ ಮತ್ತು ಆರ್ಥಿಕ ಸಿದ್ಧಾಂತದ ತಿರುಳು.

ದೇಶದ ರೂಪಾಂತರವನ್ನು ಗುರುತಿಸುವಾಗ ಜಾತಿಯನ್ನು ಪರಿಗಣಿಸದಿದ್ದುದು ಮಾರ್ಕ್ಸ್‌ವಾದಿಗಳು ಮಾಡಿದ ಒಂದು ದೊಡ್ಡ ತಪ್ಪು. ಕೃಷಿಯನ್ನು ಕಡೆಗಣಿಸಿ ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳಿಗೆ ಒತ್ತು ನೀಡಿ ಮೇಲಿಂದ ಕೆಳಕ್ಕೆ ಸುಧಾರಣೆ ಹೇರುತ್ತಾ ಇಂದಿನ ಆರ್ಥಿಕ ವ್ಯವಸ್ಥೆಯ ಸುಧಾರಕರು ದೊಡ್ಡ ತಪ್ಪನ್ನು ಮಾಡುತ್ತಿದ್ದಾರೆ.

ಭಾರತದ ಜನಸಂಖ್ಯೆಯ ಬಹುಪಾಲು ಕೃಷಿಯನ್ನೇ ಅವಲಂಬಿಸಿರುವುದರಿಂದ, ಅಂಬೇಡರ್‌ವಾದ ಮೊದಲು ಕೃಷಿಯಲ್ಲಿ ಸುಧಾರಣೆಗಳನ್ನು ತಂದು ಭಾರತದಲ್ಲಿ ಕೈಗಾರಿಕಾ ಕ್ರಾಂತಿಯನ್ನು ವಿಸ್ತರಿಸಲು ಅವಕಾಶ ಮಾಡಿಕೊಡುತ್ತದೆ. ಇದು ಭಾರತದ ನಗರೀಕರಣಕ್ಕೆ ಹಾದಿ ಮಾಡಿಕೊಡುತ್ತದೆ. ಮನುವಿನ ಜಾತಿ ಪದ್ಧತಿ ಕೃಷಿ ಅವಲಂಬಿತ ವ್ಯವಸ್ಥೆಗಾಗಿ ಹುಟ್ಟಿದ್ದು. ಆದುದರಿಂದ ಸಂಪೂರ್ಣ ನಗರೀಕರಣದಿಂದ ಭಾರತದಲ್ಲಿ ಮನು ತನ್ನ ಸ್ಥಾನವನ್ನು ಕಳೆದುಕೊಳ್ಳುತ್ತಾನೆ.

ಹಾಗೆಯೇ ಅಂಬೇಡ್ಕರ್‌ವಾದದಂತೆ ಕೃಷಿಯನ್ನು ಕೈಗಾರಿಕೆಯಾಗಿ ಮಾರ್ಪಾಡು ಮಾಡಲಾಗುತ್ತದೆ. ಇದಾಗುವುದು ಸಣ್ಣ ಹಿಡುವಳಿಗಳನ್ನು ದೊಡ್ಡ ಫಾರಂಗಳಿಂದ ಸ್ಥಾನಪಲ್ಲಟಗೊಳಿಸುವುದರಿಂದ.

ಬೇರೆ ಮಾತುಗಳಲ್ಲಿ ಹೇಳುವುದಾದರೆ ಕೃಷಿ ಕೂಡ ಕೈಗಾರಿಕೆಯ ಮೂಲ ತತ್ವಗಳನ್ನು ಅಂದರೆ ಲಾಭ ಮತ್ತು ನಷ್ಟದ ತಳಹದಿಯನ್ನು ಅನುಸರಿಸುತ್ತದೆ. ಭಾರತದ ಬಹುಪಾಲು ಜನಸಂಖ್ಯೆ ಹೊಟ್ಟೆಪಾಡಿಗಾಗಿ ಕೃಷಿಯನ್ನು ಅವಲಂಬಿಸಿದ್ದು ಸತತವಾಗಿ ನರಳುತ್ತಿದ್ದಾರೆ. ಆದರೆ ಅವರು ಕೃಷಿಯನ್ನು ಬಿಡಲು ಸಿದ್ಧರಿಲ್ಲ.

400 ವರ್ಷಗಳ ಹಿಂದೆ ಭಾರತದಂತೆಯೇ ಹೆಚ್ಚು ಬ್ರಿಟನ್ನರು ಕೃಷಿಯನ್ನು ಅವಲಂಬಿಸಿದ್ದರು. ಮತ್ತು ಹಸಿವು ಮತ್ತು ಮೇಲು–ಕೀಳು ತಾರತಮ್ಯಗಳಿಂದ ನರಳುತ್ತಿದ್ದರು. 300 ವರ್ಷಗಳ ಹಿಂದೆ ಈಸ್ಟ್ ಇಂಡಿಯಾ ಕಂಪನಿ ಸ್ಥಾಪಿತವಾದಾಗ ಹೆಚ್ಚು ಬ್ರಿಟನ್ನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದರು. ವೇಗವಾದ ಕೃಷಿಯ ಯಾಂತ್ರಿಕರಣ ದೇಶದ ಕೈಗಾರೀಕರಣಕ್ಕೆ ಎಡೆಮಾಡಿಕೊಟ್ಟಿತು. ಯಂತ್ರಗಳು ಮೊದಲು ಬಂದಿದ್ದು ಕೈಗಾರಿಕಾ ಕ್ಷೇತ್ರಕ್ಕೆ ಎನ್ನುವುದೂ ಸತ್ಯ. ಆದರೆ ಹೆಚ್ಚು ಜನಸಂಖ್ಯೆ ಕೃಷಿಯ ಮೇಲೆ ಜೀವನ ನಡೆಸುತ್ತಿದ್ದು ಅದನ್ನು ಯಾಂತ್ರೀಕರಣಗೊಳಿಸದಿದ್ದಲ್ಲಿ ಕೈಗಾರಿಕೆಗಳ ವಿಸ್ತರಣೆ ಸಾಧ್ಯವಾಗುತ್ತಿರಲಿಲ್ಲ.

ಸಣ್ಣ ಹಿಡುವಳುಗಳು ದೊಡ್ಡ ಫಾರಂಗಳಾಗಿ ಪರಿವರ್ತನೆಗೊಂಡದ್ದು ಕೃಷಿಯ ಯಾಂತ್ರಿಕರಣದ ಜೊತೆ ಜೊತೆಯಲ್ಲಿಯೆ ನಡೆಯಿತು. ಬ್ರಿಟನ್ ಅಷ್ಟೇ ಏಕೆ ಯೂರೋಪ್ ನಂತರ ಉತ್ತರ ಅಮೆರಿಕ ಕೂಡ ಕೈಗಾರೀಕರಣ ಮತ್ತು ನಗರೀಕರಣಗೊಂಡ ಆಧುನಿಕ ಸಮಾಜಗಳಾಗಿ ಪರಿವರ್ತನೆಗೊಂಡಿದ್ದು, ಜನರನ್ನು ವ್ಯವಸಾಯ ಮತ್ತು ಹಳ್ಳಿಗಳಿಂದ ಬಿಡುಗಡೆಗೊಳಿಸಿದುದರ ಮೇಲೆ ಅವಲಂಬಿತವಾಗಿದೆ.

ಟ್ರ್ಯಾಕ್ಟರ್‌ಗಳು, ಹಾರ್ವೆಸ್ಟರ್‌ಗಳು, ಟಿಲ್ಲರ್‌ಗಳು, ಹೈಬ್ರಿಡ್ ಬೀಜಗಳು, ನೀರಾವರಿ ಮತ್ತು ಕೀಟನಾಶಕಗಳು ಇಂತವುಗಳ ಉಪಯೋಗ ಹೆಚ್ಚಿದಾಗ ಕೃಷಿ ಕೈಗಾರಿಕೆಯಾಗಿ ಮಾರ್ಪಟ್ಟಿತು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಕೃಷಿ ಒಂದು ನಷ್ಟ ಭರಿತ ಉದ್ಯಮವಾದರೆ, ಭೂಮಾಲೀಕರು ಮತ್ತು ಅವರ ಕೆಲಸಗಾರರು ತಮ್ಮ ದೃಷ್ಟಿಯನ್ನು ಬೇರೆ ಅವಕಾಶಗಳ ಕಡೆಗೆ ತಿರುಗಿಸುತ್ತಾರೆ. ಅದು ಪಟ್ಟಣಗಳಿಗೆ ವಲಸೆ ಬರುವವರ ಸಂಖ್ಯೆಯನ್ನು ಹೆಚ್ಚಿಸಿದ್ದರಿಂದ ಕೈಗಾರಿಕಾ ಕ್ರಾಂತಿ ಮತ್ತೂ ವೇಗ ಪಡೆದುಕೊಂಡಿತು.

ಯು.ಎಸ್ ಮತ್ತು ಯು.ಕೆಗಳಲ್ಲಿ ಶಿಕ್ಷಣ ಪಡೆದಿದ್ದ ಕನಸುಗಾರ ಡಾ|| ಅಂಬೇಡ್ಕರ್ ಕೃಷಿಯನ್ನು ಸುಧಾರಿಸದ ಹೊರತು, ಭಾರತೀಯ ಸಮಾಜವನ್ನು ಸುಧಾರಿಸಲು ಸಾಧ್ಯವಿಲ್ಲವೆಂಬುದನ್ನು ಅರಿತುಕೊಂಡರು. ಭಾರತದ ಕೃಷಿಯನ್ನು ಸುಧಾರಿಸದ ಹೊರತು ಭಾರತವನ್ನು ಆರ್ಥಿಕ ದೈತ್ಯಶಕ್ತಿಯಾಗಿ ಮಾರ್ಪಡಿಸಲು ಸಾಧ್ಯವಿಲ್ಲ.

ಯಾವ ಅಂಶಗಳು ಡಾ|| ಅಂಬೇಡ್ಕರ್‌ರನ್ನು ಮತ್ತು ಇಂದಿನ ಸುಧಾರಕರನ್ನು ಒಟ್ಟಿಗೆ ತರುತ್ತವೆ ಮತ್ತು ಯಾವ ಅಂಶಗಳು ಭಿನ್ನವಾಗಿವೆ ಎಂಬುದನ್ನು ಕೆಳಗೆ ನೀಡಲಾಗಿದೆ.

(ಅ) ಡಾ|| ಅಂಬೇಡ್ಕರ್‌ರವರು ಬಡತನವನ್ನು ನಿರ್ಮೂಲನೆ ಮಾಡಲು ಉತ್ಪನ್ನ ಹೆಚ್ಚಿಸುವುದನ್ನು ಮೂಲ ಮಂತ್ರವಾಗಿ ಕಂಡರು. ಇಂದಿನ ಸುಧಾರಕರು ಕೂಡ GDP ಹೆಚ್ಚಳವನ್ನು ಬಡತನ ನಿರ್ಮೂಲನದ ಬೀಗದ ಕೈ ಎಂದು ಪರಿಗಣಿಸುತ್ತಾರೆ. ನನಗೆ ಉತ್ಪನ್ನದ ಹೆಚ್ಚಳ ಮತ್ತು GDPಯ ಏರಿಕೆ ಎರಡು ಒಂದೇ. ಯಾಕೆಂದರೆ ಇಂದು ಉತ್ಪನ್ನದ ಹೆಚ್ಚಳವನ್ನು GDPಯಲ್ಲಿ ಅಳೆಯಲಾಗುತ್ತಿದೆ.

(ಆ) ಅಂಬೇಡ್ಕರರಂತೆ ಇಂದಿನ ಸುಧಾರಕರೂ ಸಹ ಎಲ್ಲ ಭಾರತೀಯರನ್ನು ಬಿಡುಗಡೆಗೊಳಿಸಲು ನಗರೀಕರ

ಕೃಷಿ ಕ್ಷೇತ್ರದಲ್ಲಿನ ಸುಧಾರಣೆ
ಭಾರತದ ನಗರೀಕರಣಕ್ಕೆ ಎಡೆಮಾಡಿಕೊಡುತ್ತದೆ

ದಲಿತ ನಾಯಕತ್ವ ತನ್ನ ಚಿಂತಾನಕ್ರಮವನ್ನು ಬದಲಿಸಬೇಕಿದೆ

(ಇ) ಅಂಬೇಡ್ಕರರಂತೆ ಇವತ್ತಿನ ಸುಧಾರಕರಿಗೂ ವಲಸೆ ಒಂದು ರೀತಿಯ ಕ್ರಾಂತಿ. ಅಂಬೇಡ್ಕರ್ ಹಳ್ಳಿಗಳಿಂದ ಪಟ್ಟಣಕ್ಕೆ ವಲಸೆಯನ್ನು ಅಸ್ಪೃಶ್ಯರ ಹೊಸ ಜೀವನಾಡಿ ಎಂದು ವರ್ಣಿಸಿದ್ದರು.

ಅಂಬೇಡ್ಕರ್‌ರವರು ಇವತ್ತಿನ ಸುಧಾರಕರಿಂದ ಭಿನ್ನವಾಗಿರುವ ಅಂಶಗಳು ಈ ಕೆಳಗಿನಂತಿವೆ;

(ಅ) ಅಂಬೇಡ್ಕರರು ಯು.ಎಸ್ ಮತ್ತು ಯುರೋಪಿಯನ್ ಅನುಭವದಿಂದ ಪ್ರೇರೇಪಿತರಾಗಿ ಕೃಷಿಯ ಸುಧಾರಣೆ ಇಲ್ಲದೆ ಭಾರತ ಕೈಗಾರಿಕೀಕರಣ ಮತ್ತು ನಗರೀಕರಣಗೊಂಡ ಆಧುನಿಕ ಸಮಾಜವಾಗಿ ಎಂದೂ ಉದ್ಭವವಾಗುವುದಿಲ್ಲ ಎನ್ನುವುದನ್ನು ಮನಗಂಡಿದ್ದು ಇಂದಿನ ಸುಧಾರಕರು ಸಂಪೂರ್ಣವಾಗಿ ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳ ಮೇಲೆ ತಮ್ಮ ಗಮನವನ್ನು ನೆಟ್ಟಿದ್ದಾರೆ.

(ಆ) ಇಂದಿನ ಸುಧಾರಕರು ಅಂಬೇಡ್ಕರ್‌ವಾದವನ್ನು ಕಡೆಗಣಿಸಿರುವುದರಿಂದ ಭಾರತದ ವಿರುದ್ಧ ಇಂಡಿಯಾ ಎಂಬ ಹಾಡು ದಿನೇ ದಿನೇ ಗಟ್ಟಿಯಾಗುತ್ತಿದೆ. ಇಂದು ಜಾಟರು ಮತ್ತು ಗುಜ್ಜಾರರು ರೈಲುಗಳನ್ನು ತಡೆಯುತ್ತಿದ್ದಾರೆ. ನಾಳೆ ಅವರು ರೈಲುಗಳು, ಅಂಚೆ ಕಛೇರಿಗಳು ಮತ್ತು ಪೊಲೀಸ್ ಠಾಣೆಗಳಿಗೆ ಬೆಂಕಿ ಹಚ್ಚುತ್ತಾರೆ. ಕೃಷಿ ಅವಲಂಬಿತ ಎಲ್ಲಾ ಜಾತಿಗಳು ಮತ್ತು ಸಮಾಜಗಳು ಹಾಗೆಯೇ ಮಾಡುತ್ತಾರೆ. ಪ್ರಜಾಪ್ರಭುತ್ವ ಅವರ ನಂತರದ ಗುರಿಯಾಗುತ್ತದೆ.

(ಇ) ಅಂಬೇಡ್ಕರ್‌ವಾದ ಈ ರೀತಿಯಾಗಿ ಕೇವಲ ಆರ್ಥಿಕ ಬೆಳವಣಿಗೆಯ ಬಗ್ಗೆ ಮಾತ್ರವಲ್ಲ ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡುವ ಕಡೆಗೂ ಗಮನ ನೀಡುತ್ತದೆ. ಜಾತಿ ವ್ಯವಸ್ಥೆ ಹೇಗೆ ಕೈಗಾರೀಕರಣವನ್ನು ತಡೆಯುತ್ತದೆ ಎಂಬುದರ ಬಗ್ಗೆ ಇಂದಿನ ಸುಧಾರಕರಿಗೆ ಯಾವುದೇ 12ವಿಚಾರಗಳಿಲ್ಲ ಭಾರತ ಯು.ಎಸ್‌ನಂತೆ ಒಂದು ದೈತ್ಯ ಶಕ್ತಿಯಾಗಿ ಹೊರಹೊಮ್ಮಬೇಕಾದರೆ ಮುಂದುವರೆದ ರಾಷ್ಟ್ರಗಳು ತುಳಿದ ಹಾದಿಯನ್ನು ಅದು ತುಳಿಯಬೇಕು.

* * * * * * *

ಹೊಸ ಇತಿಹಾಸದ ಉಗಮ

ಅಮೆರಿಕದ ಕರಿಯರಿಗೆ ಫೆಬ್ರವರಿ ಮಾಸ ಹೇಗೋ ಹಾಗೆ ಏಪ್ರಿಲ್ ಮಾಸ ದಲಿತರಿಗೆ. ಪ್ರತಿ ವರ್ಷ ಯು.ಎಸ್ ಮತ್ತು ಕೆನಡಾದ ಕರಿಯರು ಫೆಬ್ರವರಿ ಮಾಸವನ್ನು 'ಕರಿಯರ ಇತಿಹಾಸದ ಮಾಸ' ಎಂದು ಆಚರಿಸುತ್ತಾರೆ. ಏಕೆಂದರೆ ಫ್ರೆಡರಿಕ್ ಡೌಗ್ಲಾಸ್ ಎಂಬ ಮಾಜಿ ಕರಿಯ ಗುಲಾಮ ಹುಟ್ಟಿದ್ದು ಆ ಮಾಸದಲ್ಲಿ. ಅವನು ನಂತರ ಒಬ್ಬ ದೊಡ್ಡ ಸುಧಾರಕ, ಉತ್ತಮ ಭಾಷಣಕಾರ, ಬರಹಗಾರ ಮತ್ತು ರಾಜತಾಂತ್ರಜ್ಞನಾಗಿ ಹೊರಹೊಮ್ಮಿದ. ಅಬ್ರಹಾಮ್ ಲಿಂಕನ್ ಹುಟ್ಟಿದ್ದೂ ಫೆಬ್ರವರಿ ಮಾಸದಲ್ಲಿಯೆ.

ಕರಿಯರ ಇತಿಹಾಸದ ಮಾಸದ ಉದಯ 1926ರಷ್ಟು ಹಿಂದಿನದು. ಆ ವರ್ಷ ಕಾರ್ಟರ್ ಜಿ. ವುಡ್ಸನ್ ಎಂಬ ಇತಿಹಾಸಕಾರ, ಪತ್ರಿಕೋದ್ಯಮಿ ಮತ್ತು ಬರಹಗಾರ 'ನೀಗ್ರೊ ಇತಿಹಾಸದ ವಾರ' ಪ್ರಾರಂಭಿಸಿದ. 1976ರಲ್ಲಿ ಆ ಹೆಸರನ್ನು 'ಕರಿಯರ ಇತಿಹಾಸದ ಮಾಸ' ಎಂದು ಬದಲಾಯಿಸಲಾಯಿತು. ಇದನ್ನು ಅಮೆರಿಕದ ಕರಿಯರ ಜೀವನದ ಘಟನೆಗಳನ್ನು ನೆನಪಿಸಿಕೊಳ್ಳಲು ಆಚರಿಸಲಾಗುತ್ತದೆ. ಪ್ರಾರಂಭದಿಂದಲೂ ಕರಿಯರ ಅನುಭವಗಳನ್ನು ಅಮೆರಿಕದ ಒಟ್ಟು ಇತಿಹಾಸದ ಮುಖ್ಯವಾಹಿನಿಗೆ ತರವತ್ತ ಒತ್ತು ನೀಡಲಾಗುತ್ತಿದೆ. ಅಮೆರಿಕದ ಇಂದಿನ ಇತಿಹಾಸ ಅಮೆರಿಕದ ಕರಿಯರ ಇತಿಹಾಸದಷ್ಟೆ ಹಳೆಯದಾಗಿದೆ.

ಕರಿಯ ಸುಧಾರಕರು, ಬುದ್ಧಿಜೀವಿಗಳು, ಮತ್ತು ಪತ್ರಿಕೋದ್ಯಮಿಗಳ ಪ್ರಯತ್ನದ ಫಲವಾಗಿ ಇಂದು ಅಮೆರಿಕದ ಇತಿಹಾಸದ ಪುಸ್ತಕಗಳು ಕರಿಯರ ಇತಿಹಾಸದ ಬಗ್ಗೆ ಸಹ ಮಾತನಾಡುತ್ತಿದ್ದರೆ ಆಶ್ಚರ್ಯವಿಲ್ಲ. ಕರಿಯರು ನಡೆದು ಬಂದ ಹಾದಿ ಮತ್ತು ಪಶ್ಚಿಮ ಆಫ್ರಿಕಾದಲ್ಲಿ ಆಗಲೆ ಅಸ್ತಿತ್ವದಲ್ಲಿದ್ದ ಗುಲಾಮಿ ಪದ್ಧತಿ, ಅಲ್ಲಿ ಅವರನ್ನು ಕೊಂಡದ್ದು ಮತ್ತು ಹೊಸ ಪ್ರಪಂಚಕ್ಕೆ ಪ್ರಯಾಣಿಸುವಂತೆ ಒತ್ತಾಯಿಸಿದ್ದು, ಅವರ ಕೊಡುಗೆ ಇವೆಲ್ಲವುಗಳನ್ನು ಶಾಲಾ ಮಟ್ಟದಲ್ಲಿ ಬೋಧಿಸಲಾಗುತ್ತಿದೆ.

ಈ ಮಾಸ ಕರಿಯರಿಗೆ ಆಗಿರುವ ಅನ್ಯಾಯ ಮತ್ತು ಅದನ್ನು ಸರಿಪಡಿಸಲು ಅಮೆರಿಕದ ಸಮಾಜ ಮತ್ತು ಸರ್ಕಾರ ಮಾಡಬಹುದಾದ ಕೆಲಸಗಳನ್ನು ಎಲ್ಲ ಅಮೆರಿಕನ್ನರ ಗಮನಕ್ಕೆ ತರುತ್ತದೆ. ಈಗ ಈ ಮಾಸ ಹಿಂದೆ ನಡೆದ ಘಟನೆಗಳನ್ನು ನೆನಪಿಸುವುದಕ್ಕೆ ಮಾತ್ರವಲ್ಲ, ಅಮೆರಿಕ ಸಮಾಜದ ಭವಿಷ್ಯ ಮತ್ತು ಅದರಲ್ಲಿ ಕರಿಯರ ಹೇಗೆ ಸಮ್ಮಿಳಿತಗೊಳ್ಳಬಹುದು ಎಂಬುದರ ಬಗ್ಗೆಯೂ ಚಿಂತಿಸಲು ಉಪಯೋಗವಾಗುತ್ತಿದೆ. ಆದುದರಿಂದ ಫೆಬ್ರವರಿ ಎಲ್ಲ ಅಮೆರಿಕನ್ನರಿಗೆ ಜನಾಂಗೀಯ ಸಂಬಂಧಗಳನ್ನು ಮತ್ತು ವಿಶಾಲ ಮಾನವ ಭವಿಷ್ಯವನ್ನು ಚರ್ಚಿಸಲು ಸಂದರ್ಭ ಒದಗಿಸಿಕೊಡುತ್ತದೆ.

ಈ ಸಂದರ್ಭದಲ್ಲಿ ಇನ್ನೂ ಅನೇಕ ವಿಚಾರಗಳನ್ನು ಚರ್ಚಿಸಲಾಗುತ್ತದೆ. ಕಾಲಾನುಕಾಲಕ್ಕೆ ಹೇಗೆ ಕರಿಯರು ಕಲೆ, ವಿಜ್ಞಾನ, ಸಂಗೀತ, ಕ್ರೀಡೆ, ಶಿಕ್ಷಣ, ವಸ್ತುವಿನ್ಯಾಸ ಮತ್ತು ಆರ್ಥಿಕ ಕ್ಷೇತ್ರಗಳಿಗೆ ಕೊಡುಗೆ ನೀಡಿದ್ದಾರೆ ಎಂಬುದನ್ನು ಚರ್ಚಿಸಲಾಗುತ್ತದೆ. ಈ ಮಾಸ ಜಗತ್ತಿನಲ್ಲಿ ಅವರ ಸ್ಥಾನಮಾನ ಏನು ಎಂಬುದರ ಮೇಲೆ ಬೆಳಕು ಚೆಲ್ಲುತ್ತದೆ. ಮಾರ್ಟಿನ್ ಲೂಥರ್ ಕಿಂಗ್ (ಜೂನಿಯರ್) ಅವರನ್ನು ಯುನೈಟೆಡ್ ಸ್ಟೇಟ್‌ನಲ್ಲಿ ನಾಗರಿಕ ಹಕ್ಕುಗಳನ್ನು ವಿಸ್ತರಿಸಿದ ದೊಡ್ಡ ಸಾಧಕರಾಗಿ ನೆನಪಿಸಿಕೊಳ್ಳಲಾಗುತ್ತದೆ.

ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದು ಕೇವಲ ಕರಿಯ ಸುಧಾರಕರನ್ನು ಮಾತ್ರವಲ್ಲ. ಅನೇಕ ಬಿಳಿಯ ಸುಧಾರಕರನ್ನು ಸಹ ಅವರು ಗುಲಾಮಿ ಪದ್ಧತಿಯನ್ನು ತೊಡೆದು ಹಾಕಿ ಗುಲಾಮರನ್ನು ಬಿಡುಗಡೆ ಮಾಡಲು ಕಟ್ಟಿದ ಹೋರಾಟದಲ್ಲಿ ಮಾಡಿದ ತ್ಯಾಗಕ್ಕಾಗಿ ನೆನಪಿಸಿಕೊಳ್ಳಲಾಗುತ್ತದೆ. ಕರಿಯ ನೇತಾರರು, ಬುದ್ಧಿಜೀವಿಗಳು, ಬಂಡವಾಳಶಾಹಿಗಳು, ಸುಧಾರಕರು, ತಜ್ಞರು ಯಾರೆ ಇರಲಿ ತಮ್ಮ ಹಿಂದಿನ ಸುಧಾರಕ ನಾಯಕರು ಮಾಡಿದ ಹೋರಾಟಗಳನ್ನು ನೆನಪಿಸಿಕೊಂಡು ಅವರಿಗೆ ತಮ್ಮ ನಮನಗಳನ್ನು ಸಲ್ಲಿಸುತ್ತಾ ತಾವು ಸಹ ಅವರ ದಾರಿಯಲ್ಲಿ ನಡೆಯುವುದಾಗಿ ಮತ್ತು ಕರಿಯರು ಅಮೆರಿಕದ ಬಿಳಿಯರಿಗೆ ಸಮನಾಗಿ ನಿಲ್ಲಲು ಸತತ ಪ್ರಯತ್ನ ಮಾಡುವುದಾಗಿ ಪ್ರತಿಜ್ಞೆ ಕೈಗೊಳ್ಳುತ್ತಾರೆ.

ಭಾರತದಲ್ಲಿ ಸಹ ದಲಿತರು ಏಪ್ರಿಲ್ ಮಾಸವನ್ನು ಅಮೆರಿಕದ ಕರಿಯರು ಫೆಬ್ರವರಿ ಮಾಸವನ್ನು ನೋಡುವ ಭಾವನೆಯಿಂದಲೇ ನೋಡುತ್ತಾರೆ. ಡಾ॥ ಬಿ.ಆರ್. ಅಂಬೇಡ್ಕರ್ ಏಪ್ರಿಲ್‌ನಲ್ಲಿ ಹುಟ್ಟಿದರು. ಫ್ರೆಡರಿಕ್ ಡೌಗ್ಲಾಸ್, ಅಬ್ರಹಾಮ್ ಲಿಂಕನ್ ಮತ್ತು ಮಾರ್ಟಿನ್ ಲೂಥರ್‌ಕಿಂಗ್ ಜೂನಿಯರ್ ಅಮೆರಿಕದ ಕರಿಯರಿಗೆ ಹೇಗೊ ಹಾಗೆ ಭಾರತದ ದಲಿತರಿಗೆ ಅಂಬೇಡ್ಕರ್. ನಿಜವಾಗಿ ಅಂಬೇಡ್ಕರ್ ಅವರ ಸರಿಯಾದ ವರ್ಣನೆ ಎಂದರೆ ಅವರನ್ನು ಅಮೆರಿಕ ಸ್ವಾತಂತ್ರ್ಯದ ಉದ್ಘೋಷ ಬರೆದ ಥಾಮಸ್ ಜಫರ್‌ಸನ್ ಅವರ ಸಮನಾಗಿ ನಿಲ್ಲಿಸುವುದು. ಅಂಬೇಡ್ಕರ್‌ಗಿಂತ ಸುಮಾರು ಒಂದೂವರೆ ಶತಮಾನದ ಹಿಂದೆ ಹುಟ್ಟಿದವರು ಥಾಮಸ್ ಜಫರ್‌ಸನ್. ಭಾರತದ ರಾಜ್ಯಾಂಗ ಬರೆಯುವ ಸಂದರ್ಭದಲ್ಲಿ ಅಂಬೇಡ್ಕರ್ ಜಫರ್‌ಸನ್‌ನನ್ನು ಬಹಳ ಮೆಚ್ಚುಗೆಯಿಂದ ಉದಾಹರಿಸುತ್ತಾರೆ.

ಏಪ್ರಿಲ್ ಮಾಸವನ್ನು ದಲಿತ ಬುದ್ಧಿಜೀವಿಗಳು, ರಾಜಕಾರಣಿಗಳು, ಸುಧಾರಕರು, ವಿದ್ಯಾರ್ಥಿಗಳು ಮತ್ತು ತಜ್ಞರು ದಲಿತ ಚರಿತ್ರೆಯ ಮಾಸ ಎಂದು ಆಚರಿಸುತ್ತಾರಾದರೂ ಅನೇಕ ರೀತಿಯಲ್ಲಿ ಅವರು ಕರಿಯರಿಗಿಂತ ಹಿಂದಿದ್ದಾರೆ;

(ಅ) ದಲಿತರು ತಮ್ಮ ಆಚರಣೆಯನ್ನು ಅಂಬೇಡ್ಕರ್ ಅವರಿಗಷ್ಟೇ ಸೀಮಿತಗೊಳಿಸುತ್ತಾರೆ. ಆದುದರಿಂದ ಭಾರತದ ಹೋರಾಟದ ಒಟ್ಟುಗ್ರಹಿಕೆ ಮತ್ತು ಅದರಲ್ಲಿ ಅಂಬೇಡ್ಕರ್ ವಹಿಸಿದ ಪಾತ್ರ ಅವರಿಂದ ಮರೆಯಾಗುತ್ತದೆ.

(ಆ) ಅವರು ಅಂಬೇಡ್ಕರ್ ಅವರನ್ನು ಕೃತಜ್ಞತಾ ಭಾವದಿಂದ ಮತ್ತು ಹೆಮ್ಮೆಯಿಂದ ಜ್ಞಾಪಿಸಿಕೊಳ್ಳುತ್ತಾರಾಗರೂ, ಅಂಬೇಡ್ಕರ್ ಅವರು ನಡೆಸಿದ ಹೋರಾಟ ಮತ್ತು ಅವರು ತೆಗೆದುಕೊಂಡ ನಿಲುವುಗಳನ್ನು ಮುಂದೆ ಕೊಂಡೊಯ್ಯುವಲ್ಲಿ ತಮ್ಮ ಜವಾಬ್ದಾರಿ ಏನು ಎಂಬುದರ ಮೇಲೆ ಗಮನ ನೀಡುವುದಿಲ್ಲ.

(ಇ) ಅಂಬೇಡ್ಕರ್‌ರು ತಮ್ಮದೇ ಆದ ಸಿದ್ಧಾಂತದ ಮೂಲಕ ಎಲ್ಲ ಭಾರತೀಯರಿಗೆ ಸುಖ ಸಂತೋಷಗಳ ಜೀವನದ ಕನಸನ್ನು ಕಟ್ಟಿದರು. ಆದರೆ ದಲಿತರು ರಾಷ್ಟ್ರ ಕಟ್ಟುವಲ್ಲಿನ ಅವರ ಪಾತ್ರವನ್ನು ತಗ್ಗಿಸುತ್ತಾರೆ.

ಇದೂ ಅಲ್ಲದೆ ಅಂಬೇಡ್ಕರರ ಸಿದ್ಧಾಂತದ ಬಗ್ಗೆ ಯಾವುದೇ ಒಟ್ಟು ಅಭಿಪ್ರಾಯವಿಲ್ಲ. ಅವರು ಸಮಾಜವಾದಿಗಳೆ? ಅವರು ಬಂಡವಾಳಶಾಹಿ ನಾಗರೀಕ ವ್ಯವಸ್ಥೆಯ ಪರ ನಿಂತ ಉದಾರವಾದಿಯೆ? ಅಂಬೇಡ್ಕರ್ ಅವರು ಮಾರ್ಕ್ಸ್‌ನ ದೃಷ್ಟಿಕೋನವನ್ನು ಎಂದೂ ಒಪ್ಪಲಿಲ್ಲ. ಆದರೂ ದಲಿತ ನಾಯಕರು ಅಂಬೇಡ್ಕರ್ ಅವರನ್ನು ಮಾರ್ಕ್ಸ್ ಸಿದ್ಧಾಂತದ ಜತೆ ಹೋಲಿಕೆ ಮಾಡುತ್ತಾರೆ.

ಆದುದರಿಂದ ಈಗ ಏಳುವ ಪ್ರಶ್ನೆ ಎಂದರೆ ದಲಿತ ನಾಯಕರುಗಳನ್ನು ಮುಕ್ತಿಗೊಳಿಸಿ ಅವರನ್ನು ಅಂಬೇಡ್ಕರ್ ವಾದಿಗಳಾಗಿ ಮಾಡುವುದು ಹೇಗೆ? □



ರಾಣಿಯ ಬಯಕೆಯನ್ನು ತೀರಿಸೋಣ!!

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಶ್ರಾವಸ್ಥಿಯ ಜೇತ ವನದಲ್ಲಿ ತನ್ನ ಅಪಾರ ಭಿಕ್ಷು ಸಹೋದರರೊಂದಿಗೆ ತಂಗಿದ್ದರು. ಅದಕ್ಕೂ ಪೂರ್ವದಲ್ಲಿ ವಾರಣಾಸಿ ರಾಜ್ಯವನ್ನು ಬ್ರಹ್ಮದತ್ತ ರಾಜನು ಆಳುತ್ತಿದ್ದನು. ಅಂತಹ ಸಂದರ್ಭದಲ್ಲಿ ಬೋಧಿಸತ್ವರು ಹಿಮಾಲಯದ ತಪ್ಪಲಿನ ದುರ್ಗಮ ಕಾಡಿನಲ್ಲಿ ಕಾಗೆಯಾಗಿ ಜನಿಸಿದರು. ಅದು ಬೆಳೆದು ದೊಡ್ಡದಾದ ಮೇಲೆ ತನ್ನ ನಾಯಕತ್ವದ ಗುಣದಿಂದಾಗಿ ಎಂಬತ್ತು ಸಾವಿರ ಕಾಗೆಗಳಿಗೆ ರಾಜನಾಯಿತು. ಅದನ್ನು "ಸುಪುತ್ತ" ಕಾಕರಾಜನೆಂದು ಕರೆಯಲಾಗುತ್ತಿತ್ತು. ಅದರ ಪಟ್ಟಮಹಿಷಿಯನ್ನು "ಸುಫಸ್ಸಾ" ಕಾಕರಾಣಿ ಎಂದು ಕರೆಯುತ್ತಿದ್ದರು.

ಸುಪುತ್ತ ಕಾಕರಾಜನಿಗೆ ಒಬ್ಬ ದಕ್ಷನು, ಪ್ರಾಮಾಣಿಕನು ಮತ್ತು ಕರ್ತವ್ಯನಿಷ್ಠನೂ ಆದ ಸೇನಾಧಿಪತಿ ಇದ್ದ. ಆತನನ್ನು "ಸುಮುಖ"ನೆಂದು ಕರೆಯಲಾಗುತ್ತಿತ್ತು. ಒಂದು ದಿನ ರಾಜರಾಣಿಯರು ಮೇಯಲೆಂದು ವಾರಣಾಸಿಯ ರಾಜನ ಭೋಜನಶಾಲೆಯ ಮೇಲೆ ಹಾರಿ ಹೋಗುತ್ತಿದ್ದವು. ಅದೇ ಸಮಯದಲ್ಲಿ ಅಡುಗೆ ಭಟ್ಟನು ರಾಜನಿಗಾಗಿ ರುಚಿಕರವಾದ ಮತ್ತು ಸ್ವಾದೀಷ್ಟ ಭೋಜನವನ್ನು ಮಾಡುತ್ತಿದ್ದನು. ಅದರ ಸ್ವಾದೀಷ್ಟ ಪರಿಮಳವು ರಾಣಿಯ ಮೂಗಿಗೆ ಬಡಿಯಿತು. ಆ ಪರಿಮಳವನ್ನು ಮನಸ್ಸಾರೆ ಸವಿಯಿತು. ತಕ್ಷಣವೇ ಅದರ ಮನದಾಳದಲ್ಲಿ ತಿಂದರೆ ರಾಜನ ಭೋಜನವನ್ನು ತಿನ್ನಬೇಕು ಇಲ್ಲವೆಂದರೆ ಉಪವಾಸ ಬಿದ್ದು ಸಾಯಬೇಕು ಎಂಬ ನಿರ್ಧಾರಕ್ಕೆ ಬಂದಿತು.

ಮರುದಿನ ರಾಜನು ಮೇಯಲು ರಾಣಿಯನ್ನು ಕರೆದ. ಆಕೆ ಮುನಿದು ಮುಖ ತಿರುಗಿಸಿಕೊಂಡು ಮಲಗಿದಳು. ರಾಜನು ಆಕೆಯನ್ನು ಪರಿಪರಿಯಾಗಿ ಒಲೈಸಲು ಪ್ರಯತ್ನಿಸಿ ಸೋತ. ಕೊನೆಗೆ ಆಕೆ ತನ್ನ ಮನದ ಬಯಕೆಯನ್ನು ಹೀಗೆ ವ್ಯಕ್ತ ಪಡಿಸಿದಳು;

"ದೇವಾ, ನೆನ್ನೆಯ ದಿನ ನಾನೂ ನೀನು ಮೇಯಲು ರಾಜನ ಅರಮನೆಯ ಮೇಲೆ ಹಾರಿ ಹೋಗುವಾಗ ನಾನು ರಾಜನ ಭೋಜನದ ಸುವಾಸನೆಯನ್ನು ಅಘ್ರಾಣಿಸಿದೆ. ಆ ಕ್ಷಣವೇ ನಾನು ಒಂದು ಭಾರಿಯಾದರೂ ಅಂಥಹ ಭಕ್ಷ್ಯ ಭೋಜನವನ್ನು ತಿನ್ನಬೇಕೆಂಬ ಬಯಕೆಯನ್ನು ಮಾಡಿಕೊಂಡೆ. ಆದ್ದುದರಿಂದ ನಾನು ಬದುಕುವುದಾದರೆ ಅಂಥಹ ಭೋಜನವನ್ನು ಒಮ್ಮೆ ಸವಿಯಬೇಕು. ಇಲ್ಲವೆಂದರೆ ನಾನು ಉಪವಾಸವಿದ್ದು ಅಸುನೀಗುವೆ" ಎಂದಳು. ರಾಜನಿಗೆ ಅದು ತನ್ನ ಪಾಲಿಗೆ ನಿಲುಕಲಾಗದ ಗಗನವೆಂಬ ಸತ್ಯವೆಂದು ಅರಿತ. ರಾಣಿಯ ಅವಿವೇಕವನ್ನು ತಿದ್ದುವ ಸಲುವಾಗಿ;

"ಮಹಾರಾಣಿ, ಇದು ತರವಲ್ಲದ ಬಯಕೆ. ನಮ್ಮ ಇತಿಮಿತಿ ಮತ್ತು ಶಕ್ತಿಗೆ ಮೀರಿದ ಇಚ್ಛೆಯನ್ನು ಅಥವಾ ಕನಸ್ಸನ್ನು ನಾವು ಹೊಂದಬಾರದು. ಇದರಿಂದ ಅಪಾಯ ತಪ್ಪಿದ್ದಲ್ಲ" ಎಂದು ಪರಿಪರಿಯಾಗಿ ಹೇಳಿ ನೋಡಿದ. ಆದರೂ ಅವಳು ತನ್ನ ಹಠವನ್ನು ಬಿಡಲಿಲ್ಲ.

ಇದರಿಂದ ರಾಜನು ಅಪಾರ ಚಿಂತಾಕ್ರಾಂತನಾದನು. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಸೇನಾಧಿಪತಿಯಾದ ಸುಮುಖನು ರಾಜನನ್ನು ಉದ್ದೇಶಿಸಿ; "ದೊರೆಯೇ, ತಮ್ಮ ದುಃಖಕ್ಕೆ ಕಾರಣ ವೇನು?" ಎನ್ನಲು, ಇರುವ ವಿಷಯವನ್ನು ಹೇಳಿದ. ಸೇನಾಧಿ ಪತಿಯು;

"ದೇವಾ, ಇಷ್ಟಕ್ಕೆಲ್ಲ ಏಕಿಷ್ಟು ಚಿಂತೆ? ನಿಮ್ಮ ಸೇವೆಯ ಭಾಗ್ಯ ನನಗಿರಲಿ" ಎಂದ ಅದು ತನ್ನ ಬಳಗದಲ್ಲಿ ಎಂಟು ಮಂದಿ ನಿಷ್ಠಾವಂತರನ್ನು ಆಯ್ಕೆ ಮಾಡಿಕೊಂಡು;

"ಮಿತ್ರರೇ, ನಮ್ಮ ರಾಣಿಗೆ ವಾರಣಾಸಿಯ ರಾಜನು ಭಕ್ಷಿಸುವ ಭೋಜನವನ್ನು ತಾನೂ ಭಕ್ಷಿಸಬೇಕೆಂಬ ಬಯಕೆಯಾಗಿದೆಯಂತೆ. ಆಕೆಯ ಬಯಕೆಯನ್ನು ಈಡೇರಿಸುವುದು ನಮ್ಮ ಕರ್ತವ್ಯವಾಗಿದೆ. ಆದ್ದುದರಿಂದ ನಾವು ಒಂಬತ್ತು ಮಂದಿ ರಾಜನ ಭೋಜನವು ಸಿದ್ಧವಾಗುವ ಸಮಯಕ್ಕೆ ಸರಿಯಾಗಿ ಅರಮನೆಯ ಪಾಕಶಾಲೆಯ ಬಳಿ ಹೋಗಬೇಕು. ಮೂರು ತಂಡವಾಗಿ ನಾವು ವಿಂಗಡನೆಗೊಳ್ಳಬೇಕು. ಪಾಕಶಾಲೆಯ ಮುಖ್ಯ ದ್ವಾರದ ಬಳಿ ನಾನು ಕುಳಿತಿರುತ್ತೇನೆ. ನೀವು ನಾಲ್ಕು ನಾಲ್ಕು ಮಂದಿ ಆ ಕಡೆ ಮತ್ತು ಈ ಕಡೆಯ ದ್ವಾರದ ಮಾಳಿಗೆಯ ಮೇಲೆ ಕುಳಿತಿರಬೇಕು. ಅಡುಗೆ ಭಟ್ಟನು ಅಡುಗೆಯನ್ನು ಮಾಡಿದ ಬಳಿಕ ರಾಜನಿಗೆ ಊಟ ಬಡಿಸುವ ಸಮಯಕ್ಕೆ ಸರಿಯಾಗಿ ತನ್ನ ಭಕ್ಷ್ಯಗಳೊಂದಿಗೆ ಹೊರ ಬರುತ್ತಾನೆ. ಆ ಸಮಯ ಸಾಧಿಸಿ ನಾನು ಅವನ ಬಲಗೈ ಮೇಲೆ ಹಾರಿ ನನ್ನ ಕಾಲಿನ ಹರಿತವಾದ ಉಗುರಿನಿಂದ ಆತನ ಕೈಯನ್ನು ಪರಚಿ ಗಾಯ ಮಾಡುತ್ತೇನೆ. ನಂತರ ಅವನ ಮೂಗನ್ನು ನನ್ನ ಕೊಕ್ಕಿನಿಂದ ಕಚ್ಚುತ್ತಾ ಎರಡೂ ರೆಕ್ಕೆಗಳಿಂದ ಅವನ ಕಣ್ಣಿಗೆ ಬಡಿಯುತ್ತೇನೆ. ಅಷ್ಟರಲ್ಲಿ ಅವನು ತನ್ನ ಕೈಯಿನ ಅಡುಗೆಯನ್ನು ನೆಲಕ್ಕೆ ಬೀಳಿಸುತ್ತಾನೆ. ಆಗ ಮೊದಲ ನಾಲ್ಕು ಮಂದಿ ಬಂದು ನಿಮಗೆ ಬೇಕಾಗುವಷ್ಟು ತಿಂದು ರಾಜ ಮತ್ತು ರಾಣಿಯರಿಗಾಗಿ ಬಾಯಿ ತುಂಬ ಅನ್ನವನ್ನು ತುಂಬಿಕೊಂಡು ಆಕಾಶಕ್ಕೆ ಹಾರಿರಿ. ನಂತರ ಮಿಕ್ಕ ನಾಲ್ಕು ಮಂದಿ ಹಾರಿ ಬಂದು ನೀವೂ ಕೂಡ ತಿನ್ನುವಷ್ಟು ತಿಂದು ಬಾಯಿ ತುಂಬ ಮಾಂಸದ ತುಂಡುಗಳನ್ನು ಕಚ್ಚಿಕೊಂಡು ಹಾರಿರಿ. ಅಷ್ಟರಲ್ಲಿ ಸೈನಿಕರು ಬಂದು ನನ್ನನ್ನು ಸೆರೆ ಹಿಡಿದು ಕತ್ತರಿಸಿ ಹಾಕುತ್ತಾರೆ. ನಾನು ಅದನ್ನು ದುಃಖವೆಂದು ಬಗೆಯುವ ಬದಲು ನನ್ನ ಕರ್ತವ್ಯವೆಂದು ಅಂಗೀಕರಿಸುತ್ತೇನೆ" ಎಂದಿತು.



ಮರುದಿನ ಮುಂಜಾನೆ ಸೇನಾಧಿಪತಿಯೊಂದಿಗೆ ಆ ಎಂಟು ಕಾಗೆಗಳು ಹಾರಿ ಬಂದು ರಾಜನ ಅರಮನೆಯ ಪಾಕಶಾಲೆಯ ಗೊತ್ತಾದ ಜಾಗದಲ್ಲಿ ಅಡಗಿ ಕುಳಿತವು. ರಾಜನಿಗಾಗಿ ಭಕ್ಷ್ಯಭೋಜನವು ಸಿದ್ಧವಾಯಿತು. ರಾಜನ ಊಟದ ಸಮಯಕ್ಕೆ ಸರಿಯಾಗಿ ಅಡುಗೆ ಭಟ್ಟನು ಭಕ್ಷ್ಯವನ್ನು ಹಿಡಿದು ಮಹಡಿಯ ಕಡೆ ನಡೆಯತೊಡಗಿದ. ಇದೇ ಸಮಯಕ್ಕಾಗಿ ಕಾದು ಕುಳಿತ ಸೇನಾಧಿಪತಿ ಕಾಗೆಯು ತಾನು ನಿರ್ಧರಿಸಿದಂತೆ ಅಡುಗೆ ಭಟ್ಟನ ಮೇಲೆ ಎರಗಿತು.

ರಾಜನ ಊಟದ ಸಮಯಕ್ಕೆ ಸರಿಯಾಗಿ ಅಡುಗೆ ಭಟ್ಟನು ಭಕ್ಷ್ಯವನ್ನು ಹಿಡಿದು ಮಹಡಿಯ ಕಡೆ ನಡೆಯತೊಡಗಿದ. ಇದೇ ಸಮಯಕ್ಕಾಗಿ ಕಾದು ಕುಳಿತ ಸೇನಾಧಿಪತಿ ಕಾಗೆಯು ತಾನು ನಿರ್ಧರಿಸಿದಂತೆ ಅಡುಗೆ ಭಟ್ಟನ ಮೇಲೆ ಎರಗಿತು. ಅವನು ವೇದನೆಯನ್ನು ತಾಳಲಾರದೆ ಚೀರತೊಡಗಿದ. ಅದನ್ನು ಕಂಡ ರಾಜನು ಮಹಡಿಯ ಮೇಲೆ ನಿಂತು; "ಎಲೈ ಭಟ್ಟನೇ, ಮೊದಲು ನಿನ್ನನ್ನು ನೀನು ರಕ್ಷಿಸಿಕೋ!" ಎಂದ. ಅದರಿಂದ ಧೈರ್ಯ ಬಂದ ಭಟ್ಟನು ಕೈಯಲ್ಲಿ ಇದ್ದ ಭಕ್ಷ್ಯವನ್ನು ನೆಲಕ್ಕೆ ಬೀಳಿಸಿದ. ಅದನ್ನೆ ಕಾಯುತ್ತಿದ್ದ ಮೊದಲ ನಾಲ್ಕು ಕಾಗೆಗಳು ಹಾರಿ ಬಂದು ತಮ್ಮ ಕರ್ತವ್ಯ ವನ್ನು ಮುಗಿಸಿ ತಪ್ಪಿಸಿ ಕೊಂಡವು.

ಸಿ. ಹೆಚ್. ರಾಜಶೇಖರ್

ಅವನು ವೇದನೆಯನ್ನು ತಾಳಲಾರದೆ ಚೀರತೊಡಗಿದ. ಅದನ್ನು ಕಂಡ ರಾಜನು ಮಹಡಿಯ ಮೇಲೆ ನಿಂತು;

"ಎಲೈ ಭಟ್ಟನೇ, ಮೊದಲು ನಿನ್ನನ್ನು ನೀನು ರಕ್ಷಿಸಿಕೋ!" ಎಂದ. ಅದರಿಂದ ಧೈರ್ಯ ಬಂದ ಭಟ್ಟನು ಕೈಯಲ್ಲಿ ಇದ್ದ ಭಕ್ಷ್ಯವನ್ನು ನೆಲಕ್ಕೆ ಬೀಳಿಸಿದ. ಅದನ್ನೆ ಕಾಯುತ್ತಿದ್ದ ಮೊದಲ ನಾಲ್ಕು ಕಾಗೆಗಳು ಹಾರಿ ಬಂದು ತಮ್ಮ ಕರ್ತವ್ಯವನ್ನು ಮುಗಿಸಿ ತಪ್ಪಿಸಿಕೊಂಡವು. ನಂತರ ಉಳಿದ ನಾಲ್ಕು ಕಾಗೆಗಳು ಕೂಡ ತಮ್ಮ ಆಜ್ಞೆ ಯನ್ನು ಪಾಲನೆ ಮಾಡಿ ತಪ್ಪಿಸಿಕೊಂಡು ಆಕಾಶಕ್ಕೆ ಹಾರಿದವು. ಅಷ್ಟರಲ್ಲಿ ರಾಜನು ತನ್ನ ಸೈನಾಧಿಪತಿಯನ್ನು ಕರೆದು ಆ ಕಾಗೆಯನ್ನು ಬಂಧಿಸಿ ತರಲು ಆಜ್ಞೆ ಮಾಡಿದ. ಅದರಂತೆ ಸುಮುಖನನ್ನು ಬಂಧಿಸಿ ರಾಜನ ಎದುರು ನಿಲ್ಲಿಸಲಾಯಿತು. ಆಕ್ರೋಶಗೊಂಡ ರಾಜನು;

"ಎಲೈ ನೀನು ಯಾರು? ನಿನ್ನ ಹೆಸರೇನು? ವ್ಯವಸ್ಥಿತವಾದ ನಿನ್ನ ಆಕ್ರಮಣವನ್ನು ಕಂಡರೆ ನೀನು ಸಾಮಾನ್ಯನಲ್ಲ. ನಿನಗೆ ನನ್ನ ಭಯವೂ ಇಲ್ಲ. ಊಟವನ್ನು ತರುವವನ ಮೂಗನ್ನು ಹರಿದು ಹಾಕಿದೆ. ಅಡುಗೆಯ ಪಾತ್ರೆಯನ್ನು ನೆಲಕ್ಕೆ ಬೀಳಿಸಿದೆ. ನಿನ್ನ ಪ್ರಾಣಕ್ಕೆ ಸಂಚಕಾರವನ್ನು ತಂದುಕೊಂಡೆ. ಈ ಆಕ್ರಮಣದ ಹಿಂದಿನ ಉದ್ದೇಶವೇನು? ಇದಕ್ಕೆಲ್ಲ ಸಮರ್ಪಕವಾಗಿ ಉತ್ತರಿಸದೇಹೋದರೆ ನಾನು ನಿನ್ನನ್ನು ಈ ಖಡ್ಗದಿಂದ ತುಂಡರಿಸುತ್ತೇನೆ" ಎಂದು ಗರ್ಜಿಸಿದ. ಆಗ ಸುಮುಖನಾದ ಸೇನಾಧಿಪತಿಯು ರಾಜನ ಸಕಲ ಪ್ರಶ್ನೆಗಳಿಗೂ ಸ್ಪಷ್ಟವಾಗಿ ಉತ್ತರಿಸಿದ. ಬಳಿಕ ತನ್ನ ರಾಣಿಯ ಬಯಕೆ ಮತ್ತು ತನ್ನ ರಾಜನ ವ್ಯಥೆಯನ್ನು ವಿವರಿಸಿ ಹೇಳುತ್ತಾ;

"ಮಹಾರಾಜ, ನನಗೆ ನನ್ನ ಪ್ರಾಣದ ಬಗ್ಗೆ ಭಯವಿಲ್ಲ. ನಾನು ಯಾವಾಗ ನನ್ನ ರಾಜನಿಗೆ ಮಾತು ಕೊಟ್ಟೆನೋ ಅದೇ ಸಮಯದಲ್ಲಿ ಕರ್ತವ್ಯಕ್ಕಾಗಿ ನನ್ನನ್ನು ನಾನು ಬಲಿ ಕೊಟ್ಟು ಇಲ್ಲಿಗೆ ಬಂದೆ. ಈಗ ನಾನು ನನ್ನ ರಾಣಿಯ ಬಯಕೆಯ ಊಟವನ್ನು ಕಳುಹಿಸಿಕೊಟ್ಟೆ. ನನ್ನ ರಾಜನಿಗೆ ನಾನು ಮಾಡಿದ ಆಜ್ಞೆಯನ್ನು ಪಾಲಿಸಿದೆ. ನನ್ನ ಮನೋರಥವು ಈಡೇರಿತು. ತಮಗೆ ಸರಿ ಕಂಡಂತೆ ತಾವು ಶಿಕ್ಷೆಯನ್ನು ವಿಧಿಸಬಹುದು" ಎನ್ನಲು ರಾಜನ ಕೋಪವು ಹಿಂಗಿತು. ಅವನು ಹೀಗೆ ಚಿಂತಿಸತೊಡಗಿದ:

"ನಾವು ಜೀವನದಲ್ಲಿ ಮನುಷ್ಯರು. ಇದು ಕೇವಲ ಒಂದು ಕಾಗೆ. ಪಕ್ಷಿ ಸಂಕುಲದಲ್ಲಿ ಇದೊಂದು ನಿಕೃಷ್ಟವಾದದ್ದು. ಆದರೆ ಇದರ ಚಿಂತನೆ ಮತ್ತು ತ್ಯಾಗವು ವಿಭಿನ್ನವಾಗಿದೆ. ನಾವು ಮನುಷ್ಯರಿಗೆ ಹೇರಳವಾಗಿ ಹಣವನ್ನು ಕೊಟ್ಟರೂ ಪ್ರಾಮಾಣಿಕರಾಗಿ ಇರಲಾರರು. ಸಮಯ ಬಂದಾಗ ನಮಗೆ ಹಾನಿ ಮಾಡಲು ಹಿಂಜರಿಯಲಾರರು. ಗ್ರಾಮಾಧಿ ಸಕಲ ಸೌಕರ್ಯವನ್ನೂ ಕೊಟ್ಟರೂ ಸಹಾ ನಮಗಾಗಿ ಜೀವವನ್ನು ಕೊಡಲಾರರು. ಆಗಿರಲು ಈ ಕಾಗೆಯು ನಿಜವಾಗಿಯು ಸತ್ಪುರುಷನೇ ಸರಿ. ಆದ್ದರಿಂದಲೇ ಇದು ಸತ್ಯವನ್ನು ನುಡಿಯುತ್ತಿದೆ. ಇದು ನಿಜಕ್ಕೂ ಧಾರ್ಮಿಕ ಮನೋಭಾವವನ್ನು ಉಳ್ಳದ್ದಾಗಿದೆ. ಆಗಿರುವಾಗ ನಾನು ಇದನ್ನು ಶಿಕ್ಷಿಸಿದ್ದೇ ಆದರೆ ಅಲ್ಪನಾಗುತ್ತೇನೆ. ಅಪರಾಧಿಯಾಗುತ್ತೇನೆ. ಇದರ ಸತ್ಯ ಮಾರ್ಗಕ್ಕೆ ನಾನು ಮನ್ನಣೆ ನೀಡಬೇಕಾದದ್ದು ಧರ್ಮವೆಂದು ತೀರ್ಮಾನಿಸಿದ. ಬಳಿಕ ಆ ಕಾಗೆಯನ್ನು ಉದ್ದೇಶಿಸಿ;

"ಹೌದು, ನೀನು ನಿಜಕ್ಕೂ ಸತ್ಪುರುಷನೇ ಸರಿ. ನಿನ್ನ ಕರ್ತವ್ಯ ಪಾಲನೆ ಆದರ್ಶನಿಯವೇ ಸರಿ. ನಿನ್ನ ಸದಾಚಾರವು ನಮ್ಮಗಳ ಪಾಲಿಗೆ ಅಳತೆಗೋಲಾಗಿರಲೀ. ನಿನಗೆ ವಂದನೆಯು ನೀನಿನ್ನು ಹೋಗಿ ಬಾ..!!" ಎಂದು ಕೈಮುಗಿದು ಬೀಳ್ಕೊಟ್ಟ. □

ದುರ್ಬಲರ ರಕ್ಷಿಸುವುದೇ ಪ್ರಭಲರ ಧರ್ಮ!!

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಶ್ರಾವಸ್ಥಿಯ ಜೇತವನದಲ್ಲಿ ತನ್ನ ಅಪಾರ ಭಿಕ್ಷು ಸಹೋದರರೊಂದಿಗೆ ತಂಗಿದ್ದರು. ಅದಕ್ಕೂ ಪೂರ್ವದಲ್ಲಿ ವಾರಣಾಸಿ ರಾಜ್ಯವನ್ನು ಬ್ರಹ್ಮದತ್ತ ರಾಜನು ಆಳುತ್ತಿದ್ದನು. ಅಂತಹ ಸಂದರ್ಭದಲ್ಲಿ ಬೋಧಿಸತ್ವರು ಹಿಮಾಲಯದ ದಟ್ಟ ಕಾಡಿನಲ್ಲಿ ಎಮ್ಮೆಯಾಗಿ ಜನ್ಮ ತಾಳಿದರು. ಬೆಳೆದು ದೊಡ್ಡವರಾದ ಮೇಲೆ ಮಹಾ ಬಲಶಾಲಿಯಾಗಿಯೂ ಮತ್ತು ಬೃಹದಾಕಾರದ ಶರೀರವನ್ನು ಹೊಂದಿದ್ದರು. ಅಂತಹ ಬೋಧಿಸತ್ವ ಸ್ವರೂಪಿಯಾದ ಎಮ್ಮೆಯು ಪರ್ವತ ಶ್ರೇಣಿಯ ದುರ್ಗಮ ದಟ್ಟ ಕಾಡುಗಳಲ್ಲಿ ಒಂಟಿಯಾಗಿ ಅಲೆಯುತ್ತಾ ನಿರ್ಭಯವಾಗಿ ಜೀವಿಸುತ್ತಿತ್ತು. ಅದರ ಜೀವಿತದ ಮುಖ್ಯ ಗುರಿಯು ಅಹಿಂಸೆಯೇ ಆಗಿತ್ತು. ಹೀಗಾಗಿ ಅದು ತಾನಾಯಿತು ತನ್ನ ಪಾಡಾಯಿತು ಎಂಬಂತೆ ಇರುತ್ತಿತ್ತು. ಅದು ಯಾರಿಗೂ ಎಂದಿಗೂ ತೊಂದರೆಯನ್ನು ಕೊಡುತ್ತಿರಲಿಲ್ಲ. ತೊಂದರೆ ಕೊಟ್ಟ ಇತರೆ ಪ್ರಾಣಿಗಳಿಗೆ ಕೂಡ ಮರು ತೊಂದರೆ ಕೊಡದಂತೆ ವರ್ತಿಸುತ್ತಿತ್ತು. ಈ ಕಾರಣಕ್ಕಾಗಿ ಇತರೆ ಪ್ರಾಣಿಗಳೂ ಕೂಡ ಆ ಎಮ್ಮೆಗೆ ಅಪಾರ ಗೌರವವನ್ನು ತೋರುತ್ತಿದ್ದವು .

ಹೀಗಿರಲು ಒಂದು ದಿನ ಆ ಎಮ್ಮೆಯು ಹೊಟ್ಟೆ ತುಂಬ ಮೇದು ನದಿಯಲ್ಲಿ ನೀರು ಕುಡಿದು ದಣಿವನ್ನು ಆರಿಸಿಕೊಳ್ಳುವ ಸಲುವಾಗಿ ಒಂದು ಮರದಕೆಳಗೆ ನಿಂತಿತ್ತು. ಅದೇ ಮರದ ಮೇಲೊಂದು ತುಂಟ ಕೋತಿಯು ವಾಸಿಸುತ್ತಿತ್ತು. ಅದು ಆ ಎಮ್ಮೆಯ ಮೈಮೇಲೆ ಮಲಮೂತ್ರವನ್ನು ವಿಸರ್ಜಿಸಿತು. ಶಾಂತಿ, ಮೈತ್ರಿ ಮತ್ತು ದಯೆಯನ್ನು ರೂಡಿಸಿಕೊಂಡಿದ್ದ ಆ ಎಮ್ಮಯು ಕೋತಿಯ ಚೇಷ್ಠೆಗೆ ಯಾವುದೇ ಪ್ರತಿಕ್ರೀಯೆ ತೋರದೆ ನಿರ್ಲಿಪ್ತವಾಗಿ ನಿಂತಿತು. ಅದನ್ನೇ ಎಮ್ಮೆಯ ದುರ್ಬಲತೆ ಎಂದು ಬಗೆದ ಆ ಕೋತಿಯು ನಿಧಾನವಾಗಿ ಕೆಳಗಿಳಿದು ಬಂದಿತು. ಒಮ್ಮೆ ಎಮ್ಮೆಯ ಮುಖವನ್ನು ವೀಕ್ಷಿಸಿತು. ಅದರ ಮುಖ



ದಲ್ಲಿ ಶಾಂತಿ ಮತ್ತು ಸ್ನೇಹವಲ್ಲದೆ ಮತ್ತ್ಯಾವ ಭಾವನೆಯು ಕಂಡು ಬರಲಿಲ್ಲ. ನಂತರ ಅದರ ವಿಶಾಲವಾದ ಕುತ್ತಿಗೆಯ ಮೇಲೆ ಜಿಗಿದು ಕುಳಿತುಕೊಂಡಿತು. ಬಳಿಕ ಅದರ ಕೊಂಬನ್ನು ಬಳಸಿ ನೇತಾಡತೊಡಗಿತು. ಮನ ಬಂದಂತೆ ಅದರ ಮೇಲೆ ಕುಣಿದು ಕುಪ್ಪಳಿಸತೊಡಗಿತು. ಈ ಬಗೆಯ ಅನಾಚಾರವನ್ನು ಕಂಡು ಕ್ರೋದಗೊಂಡ ವನದೇವತೆಯು ಎಮ್ಮೆಯ ಮುಂದೆ ಬಂದು ನಿಂತು;

"ಎಲೈ ಮಹಿಷ ರಾಜನೇ, ಈ ದುಷ್ಟ ಕೋತಿಯು ಕೊಡುತ್ತಿರುವ ವಿಚಿತ್ರ ವೇದನೆಯನ್ನು ನೀನೇಕೆ ಹೀಗೆ ಸಹಿಸುತ್ತಿರುವೆ? ಎಲ್ಲ ಬಗೆಯ ಕಾಮನೆಗಳನ್ನು ಪೂರ್ಣಗೊಳಿಸಿದವನಂತೆ ನೀನೇಕೆ ನಿಂತಿರುವೆ? ಆ ಕಪಿಯ ಚೇಷ್ಟೆಯನ್ನು ನೀನು ಪ್ರತಿಭಟಿಸಿ ದಮನ ಮಾಡದೇ ಹೋದರೆ ಪರರಿಗೆ ತೊಂದರೆಯನ್ನು ಕೊಡುವುದನ್ನೆ ತನ್ನ ವೃತ್ತಿಯನ್ನಾಗಿ ಮಾಡಿಕೊಂಡು ಬಿಡುತ್ತದೆ. ಇದರಿಂದ ಪ್ರಾಮಾಣಿಕರಿಗೆ, ಮುಗ್ಧರಿಗೆ ಮತ್ತು ಅಸಹಾಯಕರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಬಲಶಾಲಿಯಾದ ನಿನ್ನ ಮೈಯನ್ನೊಮ್ಮೆ ಕೊಡವಿಬಿಡು. ಅದು ನೆಲಕ್ಕೆ ಉರುಳುತ್ತದೆ. ಬಳಿಕ ನಿನ್ನ ಕಾಲುಗಳಿಂದ ಅದನ್ನು ತುಳಿದು ಅಪ್ಪಚ್ಚಿ ಮಾಡು"ಎನ್ನಲು. ಆ ಎಮ್ಮೆಯು;

"ಎಲೈ ವನದೇವತೆಯೇ, ನಿನ್ನ ಮಾತಿನಲ್ಲಿ ಸತ್ಯವಿದೆ. ಆದರೆ ಪ್ರಬಲರು ದುರ್ಬಲರ ಮೇಲೆ ದಾಳಿ ಮಾಡಬಾರದು. ಆ ಕೋತಿಯು ಅಜ್ಞಾನದಿಂದ ಕೂಡಿದೆ ಎಂಬುದನ್ನು ಮರೆಯಬೇಡ. ನನ್ನ ಮನಸ್ಸಿನಲ್ಲಿ ನನ್ನ ಬಗ್ಗೆ ಮೋಹವಾಗಲಿ ಅಥವಾ ಆ ಕೋತಿಯ ಬಗ್ಗೆ ದ್ವೇಷವಾಗಲಿ ಖಂಡಿತಾ ಇಲ್ಲ. ಏಕೆಂದರೆ, ನಾನು ಸತ್ಯಾನ್ವೇಷಿ. ನಾನು ಸತ್ಯವನ್ನು ಸಾಕ್ಷಾತ್ಕರಿಸಿಕೊಂಡು ಜ್ಞಾನೋದಯಗೊಂಡ ಬುದ್ಧನಾಗಬೇಕು ಎಂಬುದೇ ನನ್ನ ಅಂತಿಮ ಗುರಿಯಾಗಿದೆ. ಆದ್ದರಿಂದ ನಾನು ದಶ ಪರಾಮಿಗಳಲ್ಲಿ ಮೊದಲನೆಯದಾದ ಹಿಂಸೆಯನ್ನು ದಾಟಬೇಕಾಗಿದೆ. ಆದ್ದರಿಂದ ಆ ಕೋತಿಯು ಕೊಡುವ ಹಿಂಸೆಯನ್ನು ಪ್ರಜ್ಞಾಪೂರ್ವಕವಾಗಿ ಸಹಿಸಿಕೊಳ್ಳುತ್ತಿದ್ದೇನೆ. ಹಿಂಸೆಯನ್ನು ಅಹಿಂಸೆಯಿಂದ ದಾಟ ಬೇಕಾಗಿದೆ" ಎನ್ನಲು ವನದೇವತೆಯು ಆ ಎಮ್ಮೆಗೆ ವಂದಿಸಿ ಮುನ್ನಡೆಯಿತು.

ನಂತರದ ದಿನಗಳಲ್ಲಿ ಅದೇ ಮರದ ಬುಡದ ಬಳಿ ಮತ್ತೊಂದು ಬಲಶಾಲಿ ಎಮ್ಮೆಯು ವಿಶ್ರಾಂತಿಗಾಗಿ ಬಂದು ನಿಂತಿತು ಆ ಕೋತಿಯು ಅಂದು ಬಂದ ದಡ್ಡ ಎಮ್ಮೆಯೇ ಮತ್ತೆ ಬಂದು ನಿಂತಿದೆ ಎಂದು ಭ್ರಮಿಸಿ ಜಂಗನೆ ಅದರ ಮೈಮೇಲೆ ಜಿಗಿದು ನಿಂತಿತು. ಕೋಪವು ನೆತ್ತಿಗೇರಿದ ಆ ಎಮ್ಮೆಯು ಒಮ್ಮೆಯೆ ಬಲವಾಗಿ ಮೈ ಕೊಡವಿತು. ತರಗೆಲೆಯಂತೆ ಆ ಕೋತಿಯು ನೆಲಕ್ಕೆ ಉರುಳಿತು. ತಕ್ಷಣವೇ ಅದರ ಮೇಲೆ ಕಾಲಿಟ್ಟು ತುಳಿಯಿತು. ಅದು ಮರಣ ವೇದನೆಯನ್ನು ತಾಳಲಾರದೆ ಚೀರುತ್ತಾ ಅಸುನೀಗಿತು. ಇದನ್ನು ಕಂಡ ವನದೇವತೆಯು;

"ಹೌದು, ಪ್ರಬಲರು ದುರ್ಬಲರನ್ನು ರಕ್ಷಿಸುವುದೇ ಧರ್ಮವೆಂದಿತು!!" □

'SAMVADA' Kannada Monthly, June 2011 RNI-KAR KAN/2002/9246 CPMG/KA/BGW-706/2009-11
Office of Posting: Mail Business Center, Bangalore GPO, Date of Posting: 1st & 7th of Every Month

ಮಲೇರಿಯಾ ನಿಯಂತ್ರಣದಲ್ಲಿ ಸಮುದಾಯದ ಸಹಭಾಗಿತ್ವ

ಮಲೇರಿಯ ರೋಗವು ಹರಡದಂತೆ ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ

* ಯಾವುದೇ ಜ್ವರ ಮಲೇರಿಯ ಇರಬಹುದು, ಆದಷ್ಟು ಶೀಘ್ರವಾಗಿ ರಕ್ತ ಪರೀಕ್ಷೆ ಮಾಡಿಸಿ ಕ್ಲೋರೋಕ್ವಿನ್ ಗುಳಿಗೆಗಳನ್ನು ತೆಗೆದುಕೊಳ್ಳಿ.
* ಮಲೇರಿಯ ಎಂದು ರಕ್ತ ಪರೀಕ್ಷೆಯಲ್ಲಿ ಖಚಿತಪಟ್ಟಲ್ಲಿ ತಪ್ಪದೇ ತೀವ್ರ ಚಿಕಿತ್ಸೆ ಪಡೆಯಿರಿ. ಈ ಚಿಕಿತ್ಸೆಯ ವಿವರಗಳು ಹಾಗೂ ಗುಳಿಗೆಗಳು ಆರೋಗ್ಯ ಕಾರ್ಯಕರ್ತರಲ್ಲಿ ಹಾಗೂ ಎಲ್ಲಾ ಸರ್ಕಾರಿ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ದೊರಕುತ್ತದೆ.
* ಶಿಶುಗಳು ಮತ್ತು ಗರ್ಭಿಣಿಯರಿಗೆ ಮಲೇರಿಯ ರೋಗವು ಆತಂಕಕಾರಿಯಾಗಿದ್ದು, ಅಂತಹವರು ಯಾವುದೇ ಜ್ವರವಿರಲಿ, ತಡಮಾಡದೇ ವೈದ್ಯರ ಸಲಹೆ ಪಡೆಯುವುದು.
* ನೀರು ಶೇಖರಣಾ ತೊಟ್ಟಿಗಳನ್ನು ಭದ್ರವಾದ ಮುಚ್ಚಳದಿಂದ ಯಾವಾಗಲೂ ಮುಚ್ಚಿರಬೇಕು. ವಾರಕ್ಕೊಮ್ಮೆ ನೀರನ್ನು ಸಂಪೂರ್ಣವಾಗಿ ಖಾಲಿ ಮಾಡಿ, ಒಣಗಿಸಿ ಮತ್ತೆ ಭರ್ತಿ ಮಾಡಿಕೊಂಡಲ್ಲಿ ಇಂತಹ ನೀರು ಶೇಖರಣೆಗಳಲ್ಲಿ ರೋಗವಾಹಕ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಬಹುದು.
* ಆರೋಗ್ಯ ಇಲಾಖೆಯು ಕೈಗೊಳ್ಳುವ ಕೀಟನಾಶಕ ಸಿಂಪಡಣಾ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡಿ.
* ಸದಾ ನೀರಿರುವ ಕೆರೆ, ಕುಂಟೆ, ಬಾವಿ, ತೋಟದ ಕಾರಂಜಿಗಳು ಮುಂತಾದ ತಾಣಗಳಲ್ಲಿ ಸೊಳ್ಳೆಯ ಮರಿಗಳನ್ನು ತಿನ್ನುವ ಗ್ಯಾಂಬೂಸಿಯ ಮತ್ತು ಗಪ್ಪಿ ಎಂಬ ಸಣ್ಣ ಸಣ್ಣ ಮೀನುಗಳನ್ನು ಬಿಡುವುದು.
* ಮನೆಯ ಕಿಟಕಿ ಬಾಗಿಲುಗಳಿಗೆ ಕೀಟ ತಡೆಗಟ್ಟುವ ಜಾಲರಿಗಳನ್ನು ಅಳವಡಿಸಿಕೊಳ್ಳಿ.
* ಮಲಗುವಾಗ ತಪ್ಪದೇ ಸೊಳ್ಳೆ ಪರದೆಯನ್ನು ಉಪಯೋಗಿಸಿ.
* ಸಂಜೆವೇಳೆ ಬೇವಿನ ಹೊಗೆ ಹಾಕುವುದು, ಸಾಮ್ರಾಣಿ ಧೂಪ ಹಾಕುವುದು ಹಾಗೂ ರಾತ್ರಿವೇಳೆ ಇತರ ಸೊಳ್ಳೆ ನಿರೋಧಕ ವಿಧಾನಗಳನ್ನು ಬಳಸಿ ಸೊಳ್ಳೆ ಕಡಿತದಿಂದ ದೂರವಿರಿ.
* ಹರಿಯದೇ ನಿಂತ ನೀರು-ಸೊಳ್ಳೆ ಉತ್ಪತ್ತಿಯ ತವರು. ಮನೆಯ ಸುತ್ತ ಮುತ್ತ ನೀರು ನಿಲ್ಲದಂತೆ ಎಚ್ಚರ ವಹಿಸಿ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಿರಿ.

ಶೀಘ್ರ ಪತ್ತೆ – ತ್ವರಿತ ಚಿಕಿತ್ಸೆಯಿಂದ ಸಾವು ನೋವುಗಳನ್ನು ತಡೆಗಟ್ಟಲು ಖಂಡಿತ ಸಾಧ್ಯ.

ಕರ್ನಾಟಕ ವಾರ್ತೆ
Karnataka Information